
ಶಿಕ್ಷಣ ಮನಶ್ಶಾಸ್ತ್ರ

ಪ್ರೊ. ಸಿ. ಎಚ್. ಮರಿದೇವರು



ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦೦೧೮

ಬೀದರಿನಲ್ಲಿ ನಡೆದ ಅಖಿಲ ಭಾರತ ೭೨ನೇ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಕಟಣೆ

ಶಿಕ್ಷಣ ಮನಶ್ಶಾಸ್ತ್ರ

ಪ್ರೊ. ಸಿ. ಹೆಚ್. ಮರಿದೇವರು

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು- ೫೬೦೦೧೮

SHIKSHANA MANASSHATRA
by : **Prof. C.H. Maridevaru**
Published by : **Kannada Sahitya Parishat**
Pampa Mahakavi Road, Chamarajapet, Bangalore - 560018
Pages : viii+122 Price : Rs. **45=00** : **2006**

ಪ್ರಥಮ ಮುದ್ರಣ : ೨೦೦೬
ಪ್ರತಿಗಳು : ೧೫೦೦
ಬೆಲೆ : ನಲವತ್ತೈದು ರೂಪಾಯಿಗಳು

ಬೀದರಿನಲ್ಲಿ ನಡೆದ ಅಖಿಲ ಭಾರತ ೭೩ನೇ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಕಟಣೆ

ಪ್ರಕಟಣಾ ಸಮಿತಿ

ಅಧ್ಯಕ್ಷರು
ಪ್ರೊ. ಚಂದ್ರಶೇಖರ ಪಾಟೀಲ (ಚಂಪಾ)

ಸಂಚಾಲಕರು
ಶ್ರೀ ಜರಗನಹಳ್ಳಿ ಶಿವಶಂಕರ್

ಸದಸ್ಯರು
ಶ್ರೀ ಪುಂಡಲೀಕ ಹಾಲಂಬಿ
ಡಾ. ಎಚ್.ಜಯಮ್ಮ ಕರಿಯಣ್ಣ
ಡಾ. ಮಧು ವೆಂಕಾರೆಡ್ಡಿ
ಶ್ರೀ ಬಾಲಸುಬ್ರಹ್ಮಣ್ಯ ಕಂಜರ್ಪಣೆ
ಶ್ರೀ ವಿಷ್ಣು ನಾಯ್ಕ
ಡಾ. ಕಮಲಾ ಹಂಪನಾ

ಸಮ್ಮೇಳನಾಧ್ಯಕ್ಷರು
೭೧ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಮುದ್ರಣ : ಬಿ. ಎಂ. ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು,
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೧೮

ಅಖಿಲ ಭಾರತ ೭೨ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಬೀದರ
ಸ್ವಾಗತ ಸಮಿತಿ

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ, ಅಧ್ಯಕ್ಷರು
ಶ್ರೀ ಮೆರಾಜುದ್ದೀನ ಪಟೇಲ, ಹಿರಿಯ ಉಪಾಧ್ಯಕ್ಷರು.
ಶ್ರೀ ನರಸಿಂಗರಾವ ಸೂರ್ಯವಂಶಿ, ಲೋಕ ಸಭಾ ಸದಸ್ಯರು
ಶ್ರೀ ಬಂಡೆಪ್ಪ ಖಾಶೆಂಪೂರ, ಶಾಸಕರು
ಶ್ರೀ ಮುನೀಶ ಮೌದ್ಗಿಲ್, ಪ್ರಧಾನ ಸಂಚಾಲಕರು
ಶ್ರೀ ಕೆ.ಎಲ್. ಸುಧೀರ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು
ಶ್ರೀ ಆ್ಯಂಟನಿ ಮೆಂಡೋನ್ಸಾ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಶ್ರೀ ಚೆನ್ನಬಸಪ್ಪ ಹಾಲಹಳ್ಳಿ, ಕೋಶಾಧ್ಯಕ್ಷರು
ಶ್ರೀ ಡಾ. ಜಗನ್ನಾಥ ಹೆಬ್ಬಾಳೆ, ಪ್ರಧಾನ ಕಾರ್ಯದರ್ಶಿಗಳು

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸದಸ್ಯರು

ಪ್ರೊ. ಚಂದ್ರಶೇಖರ ಪಾಟೀಲ (ಚಂಪಾ), ಬೆಂಗಳೂರು
ಶ್ರೀ ಜರಗನಹಳ್ಳಿ ಶಿವಶಂಕರ್, ಬೆಂಗಳೂರು
ಡಾ. ಎಚ್. ಜಯಮ್ಮ ಕರಿಯಣ್ಣ, ಬೆಂಗಳೂರು
ಶ್ರೀ ಪುಂಡಲೀಕ ಹಾಲಂಬಿ, ಬೆಂಗಳೂರು
ಶ್ರೀ ಶ್ರ.ದೇ ಪಾರ್ಶ್ವನಾಥ, ಬೆಂಗಳೂರು-೫೦.
ಶ್ರೀ ಎಸ್. ರಾಮಲಿಂಗೇಶ್ವರ (ಸಿಸಿರಾ), ಬೆಂಗಳೂರು ಗ್ರಾಮಾಂತರ
ಶ್ರೀ ಎನ್.ಎಸ್. ರಾಮಪ್ರಸಾದ್, ಕೋಲಾರ
ಶ್ರೀ ಆರ್.ಎಸ್. ಸದಾನಂದ, ತುಮಕೂರು
ಶ್ರೀ ಕೆ.ಎಂ. ವೀರೇಶ್, ಚಿತ್ರದುರ್ಗ
ಶ್ರೀ ಎಸ್.ಎಚ್. ಹೂಗಾರ್, ದಾವಣಗೆರೆ
ಶ್ರೀ ಡಿ. ಮಂಜುನಾಥ, ಶಿವಮೊಗ್ಗ
ಶ್ರೀ ಮಾನಸ, ಮೈಸೂರು
ಶ್ರೀ ಮಲೆಯೂರು ಗುರುಸ್ವಾಮಿ, ಮೈಸೂರು
ಶ್ರೀ ಹೆಚ್.ವಿ. ಜಯರಾಂ, ಮಂಡ್ಯ
ಶ್ರೀ ಟಿ.ಪಿ. ರಮೇಶ್, ಕೊಡಗು
ಶ್ರೀ ಎಚ್.ಬಿ. ರಮೇಶ್, ಹಾಸನ

ಲೇಖಕರ ಮಾತು

ಅಖಿಲ ಭಾರತ ೭೨ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ೭೨ ಪುಸ್ತಕಗಳನ್ನು ಹೊರತರುವ ಯೋಜನೆ ಅತ್ಯಂತ ಸಂತಸವನ್ನುಂಟು ಮಾಡುವ ವಿಚಾರ.

ಶ್ರೀ ಚಂದ್ರಶೇಖರ ಪಾಟೀಲ್‌ರವರು ಸಾಹಿತ್ಯ ಪರಿಷತ್ ಅಧ್ಯಕ್ಷರಾದುದು ನಾಡಿನ ಭಾಗ್ಯೋದಯವೇ ಸರಿ. ಅವರಲ್ಲಿ ಸಾಹಿತ್ಯ ಪರಿಷತ್ತಿನ ಸರ್ವಾಂಗೀಣ ಪ್ರಗತಿಗೆ ಹಲವು ಹನ್ನೊಂದು ಯೋಜನೆಗಳಿವೆ. ಅವುಗಳಲ್ಲಿ ಪ್ರತಿ ಸಮ್ಮೇಳನಕ್ಕೂ ಆಯಾ ಸಮ್ಮೇಳನ ಸಂಖ್ಯೆಗನುಗುಣವಾಗಿ ಸೃಜನೇತರ ಸಾಹಿತ್ಯ ಕೃತಿಗಳನ್ನು ಹೊರತರಬೇಕೆಂಬ ಆಶಯ ಅವರ ದೂರದೃಷ್ಟಿಯ ಪ್ರತೀಕವೆನಿಸುತ್ತದೆ.

ಈ ನಿಟ್ಟಿನಲ್ಲಿ ಚಂಪಾ ಅವರು ಶಿಕ್ಷಣ ಮನಶ್ಶಾಸ್ತ್ರ ಎಂಬ ಗ್ರಂಥ ರಚಿಸಲು ಪ್ರೊ. ಮರಿದೇವರು ಆದ ನನಗೆ ಕೊಟ್ಟದ್ದು ನನ್ನ ಭಾಗ್ಯವೆಂದೇ ಭಾವಿಸುತ್ತೇನೆ.

ಶಿಕ್ಷಣ ಮನಶ್ಶಾಸ್ತ್ರಗ್ರಂಥದಲ್ಲಿ ೯ ಭಾಗಗಳಿವೆ. ಇವು ಬಿ.ಇಡಿ. ಮತ್ತು ಡಿ. ಇಡಿ. ಶಿಕ್ಷಣದ ಪಠ್ಯಕ್ರಮಕ್ಕೆ ಸ್ವಲ್ಪ ಹತ್ತಿರದವುಗಳಾಗಿವೆ. ಈಗಾಗಲೇ ಶಿಕ್ಷಣ ಮನಶ್ಶಾಸ್ತ್ರ ಕ್ಷೇತ್ರದಲ್ಲಿ ಹಲವು ಕೃತಿಗಳಿದ್ದಾಗ್ಯೂ ಮರಿದೇವರ ಕೃತಿ ತನ್ನದೇ ಆದ ವಿಶಿಷ್ಟಶೈಲಿಯಿಂದ ಕೂಡಿದುದಾಗಿದೆ. ಶಿಕ್ಷಣ ಮನಶ್ಶಾಸ್ತ್ರ ಓದುಗನನ್ನು ತೆಕ್ಕನೆ ಸೆರೆಹಿಡಿದು ಓದಿಸಿಕೊಂಡು ಹೋಗಲೆಂದು ಅಲ್ಲಲ್ಲೆ ಅಗತ್ಯವೆನಿಸಿದ ಕಾವ್ಯಭಾಗಗಳನ್ನು ಸೇರಿಸಲಾಗಿದೆ. ಆದರೆ ಎಲ್ಲಿಯೂ ವಿಷಯಾಂತರವಾಗದಂತೆ ಎಚ್ಚರಿಕೆವಹಿಸಲಾಗಿದೆ.

ಒಟ್ಟಿನಲ್ಲಿ ಈ ಕೃತಿ ವಿದ್ಯಾರ್ಥಿಗಳಿಗೆ, ಹೆಚ್ಚಿನದಾಗಿ ಶಿಕ್ಷಕರುಗಳಿಗೆ ಮತ್ತು ಶಿಕ್ಷಣ ಮನಶ್ಶಾಸ್ತ್ರದಲ್ಲಿ ಆಸಕ್ತಿ ಉಳ್ಳ ಎಲ್ಲ ಓದುಗರಿಗೂ ಉತ್ತಮ ಜ್ಞಾನದ ಸರಕನ್ನು ಒದಗಿಸಿ ಕೊಡುತ್ತದೆಂಬುದರಲ್ಲಿ ಯಾವ ಸಂಶಯವೂ ಇಲ್ಲ.

ಈ ಕೃತಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟಗೊಳ್ಳುತ್ತಿರುವುದಕ್ಕೆ ಅಧ್ಯಕ್ಷರಾದ ಚಂಪಾ ಅವರಿಗೂ ಮತ್ತು ಎಲ್ಲ ಸಿಬ್ಬಂದಿವರ್ಗದವರಿಗೂ ನನ್ನ ಕೃತಜ್ಞತೆಗಳು.

ಪ್ರೊ. ಸಿ. ಹೆಚ್. ಮರಿದೇವರು

ಡಾ. ಸಿದ್ಧಲಿಂಗಯ್ಯ, ಬೆಂಗಳೂರು

ಅಧ್ಯಕ್ಷರ ನುಡಿ

ಕಳೆದ ತೊಂಬತ್ತು ವರ್ಷಗಳಿಂದ ನಾಡು-ನುಡಿ-ಸಂಸ್ಕೃತಿಯ ರಕ್ಷಣೆ ಮತ್ತು ವಿಕಾಸಕ್ಕಾಗಿ ಬದ್ಧ ಕಂಕಣವಾಗಿರುವ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು. ಪಂಚಕೋಟಿ ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆಯಾಗಿರುವ ಪರಿಷತ್ತು ಕನ್ನಡ ಬದುಕಿನ ಬಹುಮುಖೀ ಆಯಾಮಗಳಿಗೆ ಆಲೋಚನೆ- ಅಕ್ಷರ- ಕ್ರಿಯೆಗಳ ಮೂಲಕ ಸ್ಪಂದಿಸುತ್ತಲೇ ಬಂದಿದೆ.

ಪುಸ್ತಕ ಪ್ರಕಟನೆ, ಪರಿಷತ್ತು ನಿರಂತರವಾಗಿ ನಡೆಸಿಕೊಂಡು ಬಂದಿರುವ ಮುಖ್ಯ ಚಟುವಟಿಕೆಗಳಲ್ಲೊಂದು. ಸೃಜನಶೀಲ ಕೃತಿಗಳಲ್ಲದೆ ಸೃಜನೇತರ ವಲಯದ- (ಅಂದರೆ, ವ್ಯಾಕರಣ, ನಿಘಂಟು, ಚರಿತ್ರೆ, ಸಮಾಜ ವಿಜ್ಞಾನ, ಮನೋವಿಜ್ಞಾನ, ಪರಿಶೋಧನೆ, ತತ್ವವಿಚಾರ, ಶಾಸನಶಾಸ್ತ್ರ, ಮಾಹಿತಿ ತಂತ್ರಜ್ಞಾನ, ವಿಮರ್ಶೆ, ಜಾನಪದ, ಸಂಶೋಧನ, ಪತ್ರಿಕೋದ್ಯಮ... ಹೀಗೆ) ಹಲವಾರು ಜ್ಞಾನಕ್ಷೇತ್ರಗಳು ಸಾವಿರಾರು ಕೃತಿಗಳ ರೂಪದಲ್ಲಿ ಕನ್ನಡ ಕುಲಕೋಟಿಯನ್ನು ತಲಪುತ್ತಲೇ ಇವೆ. ಎಲ್ಲ ಬಗೆಯ ಅಭಿವ್ಯಕ್ತಿಗಳಿಗೂ ಕನ್ನಡ ಭಾಷೆಯನ್ನು ಸಿದ್ಧಗೊಳಿಸುವುದು ನಮ್ಮ ಪ್ರಮುಖ ಉದ್ದೇಶ.

ಜನವರಿ ೨೦೦೬ರಲ್ಲಿ ಬೀದರಿನಲ್ಲಿ ನಡೆಯಲಿರುವ ೭೨ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ, ಸೃಜನೇತರ ಕ್ಷೇತ್ರಗಳಿಗೆ ಸಂಬಂಧಿಸಿದ ೭೨ ಪುಸ್ತಕಗಳನ್ನು ಮುದ್ರಿಸಿ ಪ್ರಕಟಿಸುವುದೆಂದು ನಮ್ಮ ಪ್ರಕಟನಾ ಸಮಿತಿ ತೀರ್ಮಾನಿಸಿತು. ಈ ಯೋಜನೆಯ ಅನುಷ್ಠಾನಕ್ಕೆ ವಿಶೇಷ ಆರ್ಥಿಕ ಅನುದಾನ ನೀಡಿದ ಕರ್ನಾಟಕ ಸರಕಾರಕ್ಕೆ ನಾವು ಕೃತಜ್ಞರು. ಈ ಕೃತಿಯ ಲೇಖಕರಿಗೆ ನಾವು ಆಭಾರಿ. ಅಚ್ಚುಕಟ್ಟಾಗಿ ಮುದ್ರಿಸಿದ ನಮ್ಮ ಬಿ.ಎಂ.ಶ್ರೀ. ಅಚ್ಚುಕೂಟದ ಸಿಬ್ಬಂದಿಗೆ, ಮುಖಪುಟ ವಿನ್ಯಾಸದ ಕಲಾವಿದರಿಗೆ ನಮ್ಮ ವಂದನೆಗಳು.

ಚಂದ್ರಶೇಖರ ಪಾಟೀಲ (ಚಂಪಾ)
ಅಧ್ಯಕ್ಷರು

ಪರಿವಿಡಿ



ಕೃತಿಕಾರರ ಪರಿಚಯ

ಪ್ರೊ. ಸಿ. ಹೆಚ್. ಮರಿದೇವರದು ಗಮನ ಸೆಳೆಯುವ ಸಂಕೀರ್ಣ ವ್ಯಕ್ತಿತ್ವ. ಶಿಕ್ಷಣತಜ್ಞರಾಗಿ, ಅಧ್ಯಾಪಕರಾಗಿ, ಕೃಷಿಕರಾಗಿ, ಕವಿಯಾಗಿ, ವಿಚಾರವಾದಿಯಾಗಿ, ಜನಪರ ಹೋರಾಟಗಾರರಾಗಿ, ಸಂಘಟನಾಕಾರರಾಗಿ ಚಿರಪರಿಚಿತರು. ಅಧ್ಯಯನ ಮತ್ತು ಬರವಣಿಗೆಯನ್ನು ಅಕ್ಕರೆಯಿಂದ ಜೀವನದುದ್ದಕ್ಕೂ ರೂಢಿಸಿಕೊಂಡಿದ್ದು, ಕನ್ನಡದಷ್ಟೆ ಇಂಗ್ಲಿಷ್‌ನಲ್ಲೂ ಪ್ರಭುತ್ವ ಸಾಧಿಸಿದ್ದಾರೆ.

ಯಾವುದೇ ವಿಷಯದಲ್ಲಿ ತಲೆಕೆಡಿಸಿಕೊಂಡರೂ ಅದನ್ನು ತಲಸ್ಪರ್ಶಿಯಾಗಿ ದರ್ಶಿಸುವ ಹಠದ ಸ್ವಭಾವ ಇವರದು. ಹಾಗಾಗಿ ಇವರ ಬರವಣಿಗೆಯಲ್ಲಿ ಖಚಿತತೆ ಇದೆ. ವಿಚಾರದ ಪ್ರಖರತೆ ಇದೆ. ಸಮಗ್ರ ನೋಟ ಇದೆ. ಜಟಿಲವಾದ ಸಂಗತಿಯನ್ನು ಲಾಲಿತ್ಯಮಯವಾಗಿ ವಿಶ್ಲೇಷಿಸುವ ಪ್ರೌಢಿಮೆ ಇದೆ. ಅವರು ಶಿಕ್ಷಣ ಕ್ಷೇತ್ರಕ್ಕೆ ಕೊಟ್ಟ 'ಶಿಕ್ಷಣ ತತ್ವಶಾಸ್ತ್ರ', 'ಮುನ್ನಡೆದ ಶಿಕ್ಷಣ ಮನಶಾಸ್ತ್ರ' ಕೃತಿಗಳು ಬಿ.ಇಡಿ;ಎಂ.ಇಡಿ; ವಿದ್ಯಾರ್ಥಿಗಳಿಗೆ ಶ್ರೇಷ್ಠ ಆಕರ ಗ್ರಂಥಗಳಾಗಿವೆ. ಅಲ್ಪಾವಧಿಯಲ್ಲೆ ಸಾವಿರಾರು ಕೃತಿಗಳ ಮಾರಾಟ ಕಂಡು ದಾಖಲೆ ಮಾಡಿವೆ. ಜೊತೆಗೆ ಶ್ರೀ ದೇವರಾಜ ಬಹದ್ದೂರ್ ಪ್ರಶಸ್ತಿ ಹಾಗೂ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದುಕೊಂಡು ಗೌರವ ಹೆಚ್ಚಿಸಿಕೊಂಡಿವೆ. ಇವರ ಸಾಹಿತ್ಯ ಕೃಷಿಗೆ ಗರಿ ಮೂಡಿದಂತೆ ೨೦೦೪ ರ ನವೆಂಬರ್ ಒಂದರ ರಾಜ್ಯೋತ್ಸವ ಪ್ರಶಸ್ತಿ ಲಭ್ಯವಾಗಿದೆ.

ಮರಿದೇವರು ಉತ್ತಮ ಲೇಖಕರು. ಭಾಷಾಂತರ ಕೃತಿಗಳೂ ಸೇರಿ ಹದಿನಾಲ್ಕು ಕೃತಿಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ಕೊಟ್ಟಿದ್ದಾರೆ. ಪ್ರವಾಸ ಕಥನ, ಜೀವನ ಚರಿತ್ರೆ, ವೈದ್ಯಕೀಯ, ಆಧ್ಯಾತ್ಮಿಕ, ಶಿಕ್ಷಣ ಹಾಗೂ ಕಾವ್ಯಕ್ಷೇತ್ರ ಹೀಗೆ ವೈವಿಧ್ಯಮಯ ವಿಷಯಗಳಿಂದ ಕೂಡಿದ್ದು ವಿದ್ವಾಂಸರ ಗಮನ ಸೆಳೆಯುವಂತಿದೆ. ಸ್ವತಃ ಬಿ.ಇಡಿ., ಕಾಲೇಜಿನ ಅಧ್ಯಾಪಕರಾಗಿ ಉಪಯುಕ್ತವಾದ ಕೃತಿಗಳನ್ನು ನೀಡಿದ್ದಾರೆ. ಸದಾ ಹೊಸದನ್ನು ಕಾಣುವ, ಸಾಧಿಸುವ ಉತ್ಸಾಹಿಗಳು, ಇಳಿವಯಸ್ಸಿನಲ್ಲೂ ಯುವಕರನ್ನು ನಾಚಿಸುವಂಥ ಕ್ರಿಯಾಶೀಲತೆ ಇವರದು.

ವಿಳಾಸ : ಪ್ರೊ. ಸಿ.ಎಚ್. ಮರಿದೇವರು
'ಕಲ್ಪಕೃಪ', ಯಲ್ಲಾಪುರ
ಅರಕೆರೆ ಅಂಚೆ, ತುಮಕೂರು ಜಿಲ್ಲೆ
ದೂರವಾಣಿ : ೦೮೧೬-೨೨೧೧೩೪೭

ಭಾಗ ೧

೧.೧ ಶಿಕ್ಷಣ ಮನಶ್ಶಾಸ್ತ್ರದ ಅರ್ಥ

''**ಶಿಕ್ಷಣ**'' - ನಾಲ್ಕು ಶಾಸ್ತ್ರಗಳ ಭದ್ರ ಬುನಾದಿಯ ಮೇಲೆ ನಿಂತಿದೆ. ಅವುಗಳೆಂದರೆ ೧. ಶಿಕ್ಷಣ ತತ್ತ್ವಶಾಸ್ತ್ರ ೨. ಶಿಕ್ಷಣ ಮನಶ್ಶಾಸ್ತ್ರ ೩. ಶಿಕ್ಷಣಕ್ಕೆ ಜೈವಿಕ ಬುನಾದಿ ೪. ಶೈಕ್ಷಣಿಕ ಸಮಾಜಶಾಸ್ತ್ರ - ಈ ನಾಲ್ಕು ಶಾಸ್ತ್ರಗಳೂ ಶಿಕ್ಷಣ ಕ್ಷೇತ್ರದಲ್ಲಿ ಚತುರ್ಮುಖ ಬ್ರಹ್ಮನಿದ್ದಂತೆ. ಇವು ಪರಸ್ಪರ ಪೂರಕ ಮತ್ತು ಪೋಷಕವಾದವುಗಳು. ಇವು ಒಂದರೊಡನೊಂದು ಹೊಂದಿಕೆಯಾಗಿ ಮೇಳೈಸಿಕೊಂಡವುಗಳಾಗಿವೆ. ಈ ನಾಲ್ಕು ಶಾಸ್ತ್ರಗಳ ಪರಿಪೂರ್ಣಜ್ಞಾನ ಶಿಕ್ಷಣಕ್ಷೇತ್ರದಲ್ಲಿರುವವರಿಗೆ ಅತ್ಯವಶ್ಯಕ.

ಪ್ರಸ್ತುತ ''ಶಿಕ್ಷಣ ಮನಶ್ಶಾಸ್ತ್ರ''ವನ್ನು ಕುರಿತು ಚರ್ಚಿಸೋಣ. ಶಿಕ್ಷಣ ಮನಶ್ಶಾಸ್ತ್ರ ವನ್ನು ಕುರಿತು ಚರ್ಚಿಸುವಾಗ ''ಶಿಕ್ಷಣ'' ಎಂಬ ಶಬ್ದ ಮತ್ತು ಅದರ ಉತ್ಪತ್ತಿ ಹಾಗೂ ಅದರ ಅರ್ಥ ; ''ಮನಶ್ಶಾಸ್ತ್ರ'' ಎಂಬ ಶಬ್ದ ಮತ್ತು ಅದರ ಉತ್ಪತ್ತಿ ಹಾಗೂ ಅದರ ಅರ್ಥ - ಇವುಗಳನ್ನು ಮೊದಲು ಚರ್ಚಿಸಿ ಅರ್ಥೈಸಿಕೊಳ್ಳಬೇಕು.

ಈಗ ''ಶಿಕ್ಷಣ'' ಎಂಬ ಶಬ್ದದ ಉತ್ಪತ್ತಿ ಮತ್ತು ಅದರ ಅರ್ಥವಿವರಣೆಯನ್ನು ತಿಳಿಯೋಣ.

''ಶಿಕ್ಷಣ'' ಎಂಬ ಶಬ್ದವು ಲ್ಯಾಟಿನ್ ಪದದ ''ಎಡುಕರೆ'' ಎಂಬ ಶಬ್ದದಿಂದ ಬಂದಿದೆ. ಇದರ ಅರ್ಥ 'ಮೇಲಕ್ಕೆ ಕೊಂಡೊಯ್ಯಿ' 'ಮೇಲಕ್ಕೆ ತಾ' ಎಂದಾಗುತ್ತದೆ. ಲ್ಯಾಟಿನ್‌ನಲ್ಲಿ ಇನ್ನೂ ಒಂದು ಪದವಿದೆ 'ಎಡುಕ್ರೀ' ಎಂಬುದು. 'ಎಡುಕ್ರೀ' ಎಂದರೆ 'ಮುಂದೆ ತಾ' 'ಹೊರಗೆ ಸೆಳೆ' ಎಂಬ ಅರ್ಥವಿದೆ. ಆದ್ದರಿಂದ ಶಿಕ್ಷಣ ಎಂದರೆ ಮೇಲಿನ ಎರಡೂ ಅರ್ಥಗಳನ್ನೊಳಗೊಂಡುದಾಗಿದೆ. ಅಂದರೆ ಶಿಕ್ಷಣವು ಮಾನವನ ಅಂತರಂಗದ ಭಾವನೆಗಳನ್ನು ಬುದ್ಧಿಶಕ್ತಿಯ ಮೂಲಕ ಹೊರಗೆ ಸೆಳೆದು ಅವನನ್ನು ಅತ್ಯುನ್ನತ ಸ್ಥಿತಿಗೆ ಕೊಂಡೊಯ್ಯತಕ್ಕುದೇ ಆಗಿದೆ.

ವ್ಯಾರೊ ಎಂಬ ಲ್ಯಾಟಿನ್ ಲೇಖಕ ಶಿಕ್ಷಣದ ಅರ್ಥವನ್ನು ಕುರಿತು ಹೀಗೆ ವ್ಯಾಖ್ಯಾನಿಸುತ್ತಾನೆ. ''**ಸೂಲಗಿತ್ತಿಯ ಹಾಗೆ ಹೊರತಂದು, ದಾದಿಯಂತೆ ಪೋಷಿಸಿ, ಖಾಸಗಿ ಉಪಾಧ್ಯಾಯನ ಹಾಗೆ ತರಬೇತಿ ಇತ್ತು, ಸದ್ಗುರುವಿನ ಹಾಗೆ ಜ್ಞಾನಾನ್ನವನ್ನು**

ಉಣಬಡಿಸುವುದೇ ಶಿಕ್ಷಣ ಆಗಿದೆ''. ಶಿಕ್ಷಣವೆಂದರೆ ಮಾನವನ ಸರ್ವಾಂಗೀಣ ಪ್ರಗತಿಗೆ ಎಂದರೆ ಭೌತಿಕ, ಬೌದ್ಧಿಕ ಮತ್ತು ಭಾವನಾತ್ಮಕವಾದ ಎಲ್ಲ ವಿಧವಾದ ಪ್ರಗತಿಗೆ ಭದ್ರ ಬುನಾದಿಯನ್ನು ಒದಗಿಸುವಂತಹುದಾಗಿದೆ.

ಇನ್ನು ಕೆಲವು ಶಿಕ್ಷಣ ತಜ್ಞರು 'ಎಜುಕೇಟ್' ಎಂಬ ಶಬ್ದಕ್ಕೆ ಬೇರೆ ಬೇರೆ ಅರ್ಥ ಕೊಟ್ಟಿದ್ದಾರೆ. ಅವರ ಪ್ರಕಾರ 'e' ಎಂದರೆ ಹೊರಗೆ ಎಂತಲೂ duco ಎಂದರೆ ಕೈ ಹಿಡಿದು ನಡೆಸು ಎಂಬರ್ಥ ಬರುತ್ತದೆ. 'To Educate' ಶಿಕ್ಷಣ ಕೊಡು ಎಂದರೆ ಮುನ್ನಡೆಸು to lead forth or extract out the best in man 'ಮನುಷ್ಯನಲ್ಲಿರುವ ಅತ್ಯುತ್ತಮವಾದುದನ್ನು ಹೊರಗೆಳೆದು ತಾ' ಎಂಬರ್ಥವಿದೆ. ಈ ವಿವರಣೆಯನ್ನು ನೋಡಿದರೆ ಮಗುವಿನಲ್ಲಿ ಎಲ್ಲ ವಿಧವಾದ ಜ್ಞಾನವೂ ಹುದುಗಿದೆ. ಈ ರೀತಿ ಮಗುವಿನಲ್ಲಿ ಸಹಜವಾಗಿಯೇ ಹುದುಗಿರುವ ಜ್ಞಾನಶಕ್ತಿಯನ್ನು ಹೊರತರಲು ಅಲ್ಲಿನ ಜ್ಞಾನವಾಹಿನೀ ನರಗಳನ್ನು ಮೆಲ್ಲಗೆ ಬಡಿದೆಬ್ಬಿಸುವ ಕಾರ್ಯವನ್ನಷ್ಟೇ ಶಿಕ್ಷಣ ಮಾಡುವ ಕೆಲಸ. ಅಷ್ಟು ಮಾಡಿದರೆ ಸಾಕು ಜ್ಞಾನವಾಹಿನಿ ತಾನಾಗಿಯೇ ಹರಿದುಬರುತ್ತದೆ. ಇದೇ ಅರ್ಥವನ್ನು ಗಾಂಧೀಜಿ ಬೆಂಬಲಿಸಿದ್ದಾರೆ. ನನ್ನ ಅರ್ಥದಲ್ಲಿ ''ಶಿಕ್ಷಣವೆಂದರೆ ಮಗು ಮತ್ತು ಮನುಷ್ಯನಲ್ಲಿನ ಶಾರೀರಿಕ, ಬೌದ್ಧಿಕ ಮತ್ತು ಸ್ಫೂರ್ತಿದಾಯಕ ಶಕ್ತಿಯಲ್ಲಿ ಅತ್ಯುತ್ತಮವಾದುದನ್ನು ಸರ್ವತೋಮುಖವಾಗಿ ಹೊರಗೆಳೆತರುವುದೇ ಶಿಕ್ಷಣ ಆಗಿದೆ-'' 'By Education I mean an all round drawing out of the best in the child and manbody mind and spirit'. ಟಿ.ಪಿ.ನನ್ ಹೇಳುವಂತೆ 'ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಶಕ್ತಿವಿಶೇಷಗಳನ್ನು, ಅಭಿರುಚಿಯನ್ನು ತನಗೆ ಉಚಿತವೆನಿಸುವಂತೆ ಬೆಳಸಿಕೊಂಡು ಆ ಮೂಲಕ ಮಾನವಬಾಂಧವ್ಯತೆಯ ಕ್ಷೇಮಚಿಂತನೆಯ ತಳಹದಿಯನ್ನು ಹಾಕಿಕೊಳ್ಳುವಂತೆ ಮಾಡುವುದೇ ಶಿಕ್ಷಣ'. ಜಾನ್ ಲಾಕ್ ಹೇಳುವಂತೆ ''ವ್ಯವಸಾಯದಿಂದ ಗಿಡಗಳು ಹುಲುಸಾಗಿ ಬೆಳೆಯುವಂತೆ ಮಾನವರು ಯಾವುದರಿಂದ ವಿಕಾಸಗೊಳ್ಳುವರೋ ಅದೇ ಶಿಕ್ಷಣ''. ಬರ್ಟ್‌ರ್ಯಾಂಡ್ ರಸಲ್ ಅಭಿಪ್ರಾಯದಂತೆ ''ವೀರರೂ, ಧೀರರೂ, ಸಚ್ಛೀಲರೂ, ಪ್ರತಿಭಾಸಂಪನ್ನರೂ ಆದ ವ್ಯಕ್ತಿಗಳನ್ನೊಳಗೊಂಡ ಸಮಾಜವನ್ನು ನಿರ್ಮಿಸುವುದೇ ಶಿಕ್ಷಣ''. ರವೀಂದ್ರನಾಥ ಟಾಗೂರ್‌ರವರ ಮೇರೆಗೆ ''ಆತ್ಮಪ್ರಕಾಶ, ಪ್ರೇಮಗಳೆಂಬ ಸ್ಥಿರಸಂಪತ್ತನ್ನು ತಂದುಕೊಟ್ಟು ಮಗುವನ್ನು ಸುಂದರ, ಯೋಗ್ಯ, ಸತ್ಯವಂತನಾದ ವ್ಯಕ್ತಿಯನ್ನಾಗಿ ಮಾಡುವುದೇ ಶಿಕ್ಷಣ''. ''ವ್ಯಕ್ತಿಗೆ ಸತ್ಯವನ್ನು ತಿಳಿಸಿ ಅದರಂತೆ ಅದನ್ನು ವ್ಯವಹಾರದಲ್ಲಿ ತರುವುದನ್ನು ಕಲಿಸುವುದೇ ಶಿಕ್ಷಣ'' ಎಂಬುದು ಸಾಕ್ರಟೀಸನ ಅಭಿಮತ. ''ವ್ಯಕ್ತಿತ್ವದ ವಿಕಾಸವಾಗಿ, ಮಗು ತತ್ತ್ವಜ್ಞಾನಿಯಾಗುವಂತೆ ಮಾಡುವುದೇ ಶಿಕ್ಷಣ'' ಎಂಬುದು ಪ್ಲೇಟೋವಿನ ಮತ. ಹರ್ಬಾರ್ಟನ ಪ್ರಕಾರ ''ಮಗುವಿನ ಶಿರ, ಹೃದಯ, ಕರಗಳ

ವಿಕಾಸ ಆಗಿ, ಮಕ್ಕಳಲ್ಲಿ ಶ್ರದ್ಧೆ, ಆಸ್ತ, ದಾನ, ನ್ಯಾಯ, ವಿವೇಕ, ನಿಗ್ರಹ, ಧೈರ್ಯ ಮೊದಲಾದ ಸದ್ಗುಣಗಳು ನೆಲಸುವಂತೆ ಮಾಡುವುದೇ ಶಿಕ್ಷಣ''. ಮಾಂಟೆಸೋರಿ ಹೇಳುವಂತೆ ''ಅನುಭವದಿಂದ ತಾನಾಗಿ ಕಲಿಯುವುದು ಅಥವಾ ಶಿಶುವಿನ ಜೀವನವು ಸ್ವಾಭಾವಿಕವಾಗಿ ಬೆಳೆಯುವಂತೆ ಮಾಡುವ ಕ್ರಿಯಾತ್ಮಕ ಸಹಾಯವೆ ಶಿಕ್ಷಣ''. ''ಮಕ್ಕಳು ಮಾನವರಾಗಿ, ನಾಗರಿಕರಾಗಿ ಇನ್ನೊಬ್ಬರೊಡನೆ ಮೈತ್ರಿ, ಗೌರವ ಘನತೆಗಳಿಂದ ವರ್ತಿಸುವಂತೆ ಮಾಡಿ, ಮಕ್ಕಳಲ್ಲಿ ಔದಾರ್ಯ, ಭ್ರಾತೃಭಾವ, ಸಹಾನುಭೂತಿಗಳು ಹೆಚ್ಚಾಗುವಂತೆ ಮಾಡುವುದೇ ಶಿಕ್ಷಣ'' ಎಂಬುದು ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಅಭಿಮತ. ಹೀಗೆ ಶಿಕ್ಷಣ ಎಂಬ ಪದದ ಅರ್ಥವ್ಯಾಖ್ಯಾನಕ್ಕೆ ಇನ್ನೂ ಅನೇಕ ತಜ್ಞರ ಹೇಳಿಕೆಗಳನ್ನು ಕೊಡುತ್ತಾ ಹೋಗಬಹುದು. ಸಧ್ಯಕ್ಕೆ ಇಷ್ಟು ಸಾಕು.

ಇಲ್ಲಿಯವರೆಗೆ 'ಶಿಕ್ಷಣ' ಶಬ್ದದ ಉತ್ಪತ್ತಿ ಮತ್ತು ಆದರ ಅರ್ಥ, ವ್ಯಾಖ್ಯಾನಗಳನ್ನು ಅರಿತದ್ದಾಯ್ತು.

ಇದೀಗ ''ಮನಶ್ಶಾಸ್ತ್ರ'' ಎಂಬ ಶಬ್ದದ ಉತ್ಪತ್ತಿ, ಅದರ ಅರ್ಥ ಮತ್ತು ವ್ಯಾಖ್ಯಾನಗಳನ್ನು ವಿಶ್ಲೇಷಿಸಿ ನೋಡೋಣ.

''ಮನಶ್ಶಾಸ್ತ್ರ'' ''Psychology'' ಎಂಬುದು ಗ್ರೀಕ್ ಶಬ್ದ ''ಸೈಖೆ'' (Psyche) ಮತ್ತು ''ಲೋಗೋಸ್'' (Logos) ಎಂಬೆರಡು ಶಬ್ದಗಳಿಂದ ಬಂದಿದೆ.

''ಸೈಖೆ'' (Psyche) ಎಂದರೆ ಆತ್ಮ ಎಂದೂ, ''ಲೋಗೋಸ್'' (Logos) ಎಂದರೆ ಆತ್ಮವನ್ನು ಕುರಿತ ವಿಜ್ಞಾನ ಎಂಬ ಅರ್ಥವಿದೆ. ಹಿಂದಿನ ಕಾಲದಲ್ಲಿನ ನಂಬಿಕೆ ಏನೆಂದರೆ ಮಾನವನ ಎಲ್ಲಾ ರೀತಿಯ ಬಾಹ್ಯಾಂತರಿಕ ಚಟುವಟಿಕೆಗಳಿಗೂ ಈ ಆತ್ಮನೇ ಕಾರಣವೆಂದು ನಂಬಲಾಗಿದ್ದಿತು. ಈ ರೀತಿಯ 'ಆತ್ಮ'ದ ಅಧ್ಯಯನವನ್ನೇ ''ಸೈಕಾಲಜಿ'' ಎಂದು ಕರೆಯಲಾಗಿದ್ದಿತು. ಕಾಲಕ್ರಮೇಣ ''ಸೈಖೆ'' (Psyche) ಎಂಬ ಶಬ್ದಕ್ಕೆ ''ಮೈಂಡ್'' (Mind) ಎಂಬ ಅರ್ಥ ಬಂತು. ಮನಶ್ಶಾಸ್ತ್ರಕ್ಕೆ ಸಂಬಂಧಿಸಿದ ಆಧುನಿಕ ಸಾಹಿತ್ಯದಲ್ಲಿ ''ಸೈಖೆ'' ಎಂಬ ಶಬ್ದಕ್ಕೆ ಶ್ರೀಸಾಮಾನ್ಯನೂ ಅರ್ಥೈಸುವುದೇನೆಂದರೆ 'ಮೈಂಡ್' (Mind) ಎಂಬ ಅರ್ಥ [1]

ಇಲ್ಲಿಯವರೆಗೆ ನಾವು ಮನಶ್ಶಾಸ್ತ್ರ ಎಂಬ ಪದದ ಉತ್ಪತ್ತಿ ಅರ್ಥವೇನೆಂಬುದನ್ನು ಅರಿತೆವು.

ಈಗ ಮನಶ್ಶಾಸ್ತ್ರದ ಸ್ವಭಾವವೇನೆಂಬುದನ್ನು ತಿಳಿಯೋಣ.

---

1. G. D. Boaz - Some Fundamentals of Psychology. Published - 1958, P. 7

ಮನಶ್ಶಾಸ್ತ್ರದ ಸ್ವಭಾವ :

ವುಡ್‌ವರ್ತನ ಪ್ರಕಾರ ''ಮನಶ್ಶಾಸ್ತ್ರವು ಮೊದಲು ಅದರ ಆತ್ಮವನ್ನು ಕಳೆದುಕೊಂಡಿತು. ನಂತರ ಅದು ತನ್ನ ಮನಸ್ಸನ್ನು ಕಳೆದುಕೊಂಡಿತು ; ಅನಂತರ ಅದು ತನ್ನ ಪ್ರಜ್ಞೆಯನ್ನೂ ಕಳೆದುಕೊಂಡಿತು ; ಆದಾಗ್ಯೂ ಅದು ವರ್ತನೆಯನ್ನು ಕುರಿತು ಅಧ್ಯಯನ ಮಾಡುವಂತಾಗಿದೆ.

First Psychology lost its soul, then it lost its mind, then it lost its consciousness, it still has behaviour of a kind - Wood Worth

ಮೇಲಿನ ವುಡ್‌ವರ್ತ್‌ನ ಅಭಿಪ್ರಾಯ ಶಿಕ್ಷಣ ಮನಶ್ಶಾಸ್ತ್ರದ ಸ್ವಭಾವವನ್ನು ತಿಳಿಸುತ್ತದಲ್ಲದೆ ಅದು ಶಿಕ್ಷಣ ಮನಶ್ಶಾಸ್ತ್ರವು ನಡೆದು ಬಂದ ದಾರಿಗೆ ಹಾಕಿದ ಮೊದಲ ಮೈಲಿಗಲ್ಲೆನ್ನಲು ಯಾವ ಅಡ್ಡಿಯೂ ಇಲ್ಲ.

ಜಗತ್ತಿನಲ್ಲಿ ಶಾಶ್ವತ ಸತ್ಯವೆಂಬುದು ಯಾವುದೂ ಇಲ್ಲ. ಎಲ್ಲವೂ ಬದಲಾವಣೆಯ ನಿಯಮಕ್ಕೆ ಒಳಪಡುವಂಥದಾಗಿದ್ದು ಕಾಲವಾಹಿನಿಯೊಂದಿಗೆ ಹೊಸ ಹೊಸ ಸ್ವರೂಪಗಳನ್ನು ಪಡೆಯುತ್ತಾ ಹೋಗುತ್ತದೆ ಎಂಬುದಕ್ಕೆ ಶಿಕ್ಷಣ ಮನಶ್ಶಾಸ್ತ್ರ ನಡೆದು ಬಂದ ದಾರಿಯೇ ಒಂದು ಜೀವಂತ ಜ್ವಲಂತ ಸಾಕ್ಷಿ. ಬಹುಶಃ ಈ ಮಾತು ಎಲ್ಲ ಶಾಸ್ತ್ರಗಳಿಗೂ ಅನ್ವಯಿಸುತ್ತದೆಯಾದ್ದರಿಂದ, ಮನಶ್ಶಾಸ್ತ್ರ ಇದಕ್ಕೆ ಹೊರತಾಗಿರಲು ಸಾಧ್ಯವಿಲ್ಲ.

ವುಡ್‌ವರ್ತನ ಹೇಳಿಕೆಯನ್ನು ವಿಶ್ಲೇಷಿಸಿ ನೋಡೋಣ. ಮೊದಲಿಗೆ ೧. ಮನಶ್ಶಾಸ್ತ್ರವು ಆತ್ಮವನ್ನು ಕುರಿತ ವಿಜ್ಞಾನ - ಎಂದು ಪರಿಗಣಿಸಲ್ಪಟ್ಟಿತ್ತು. ಇದಕ್ಕೆ ಕಾರಣ ಗ್ರೀಕ್ ಶಬ್ದಗಳಿಂದ 'ಸೈಖೆ' ಮತ್ತು 'ಲೋಗೋಸ್' ಎಂಬೆರಡು ಶಬ್ದಗಳು. ಸೈಖೆ ಎಂದರೆ ಆತ್ಮ, ಲೋಗೋಸ್ ಎಂದರೆ ಅದನ್ನು ಕುರಿತ ವಿಜ್ಞಾನ ಎಂದು ಅರ್ಥೈಸಿರುವುದು. ಆದರೆ ಆತ್ಮ ಇನ್ನೂ ವೈಜ್ಞಾನಿಕ ವಿಶ್ಲೇಷಣೆಗೆ ಸಿಲುಕದಿರುವ ವಸ್ತು. ಆತ್ಮ ಪರಮಾತ್ಮನಿಗೆ ಸಮಾನವಾದದ್ದು. ಪರಮಾತ್ಮನು ಇನ್ನೂ ವೈಜ್ಞಾನಿಕ ವಿಶ್ಲೇಷಣೆಗೆ ಸಿಲುಕದವನಾಗಿದ್ದಾನೆ. ವೈಜ್ಞಾನಿಕ ವಿಶ್ಲೇಷಣೆಗೆ ಸಿಲುಕದಿರುವ ದಿವ್ಯ ಚೈತನ್ಯವೇ ಆತ್ಮ! ಆದನ್ನು ಅವಿನಾಶಿ ಎಂದೂ ಸಹ ಕರೆದಿದ್ದಾರೆ. ಅದು ಏನೇ ಇರಲಿ ಆತ್ಮದ ಮೂಲ ಮತ್ತು ಸ್ವಭಾವವನ್ನು ತಿಳಿಯುವುದು ಸಾಧ್ಯವಿಲ್ಲದ ಕಾರಣ ಮನಶ್ಶಾಸ್ತ್ರವು ಆತ್ಮವನ್ನು ಕುರಿತ ವಿಜ್ಞಾನ ಎಂಬ ವಿವರಣೆಯನ್ನು ಕೈಬಿಡಲಾಯ್ತು. ಆದ್ದರಿಂದ Psychology first lost its soul - ಅಂದರೆ ಮನಶ್ಶಾಸ್ತ್ರವು ಮೊದಲು 'ಆತ್ಮ'ವನ್ನು ಕಳೆದುಕೊಂಡಿತು.

೨. ಮನಶ್ಶಾಸ್ತ್ರವು 'ಮೈಂಡ್'ನ್ನು ಕುರಿತ ವಿಜ್ಞಾನ :

ಮನಶ್ಶಾಸ್ತ್ರವು 'ಆತ್ಮ'ವನ್ನು ಕಳೆದುಕೊಂಡ ಮೇಲೆ ಅದು ''ಬುದ್ಧಿ ಅಥವಾ ಮನಸ್ಸಿನ'' (Mind) ಕಡೆ ತನ್ನ ಗಮನವನ್ನು ಹರಿಸಿತು. ಮನಶ್ಶಾಸ್ತ್ರ ಎಂದಿನಿಂದ ಮನಸ್ಸನ್ನು ಕುರಿತು ಅಧ್ಯಯನ ಮಾಡತೊಡಗಿತೊ ಅಂದಿನಿಂದ ಅದು ಮನಸ್ಸನ್ನು ಅಭ್ಯಾಸಿಸುವ ವಿಜ್ಞಾನ ಎನಿಸಿಕೊಂಡಿತು. ಆದರೆ ಈ ವಿವರಣೆಯೂ ಸರಿ ಎನಿಸದಾಯಿತು. ಕಾರಣವೇನೆಂದರೆ ಮಾನಸಿಕ ಚಟುವಟಿಕೆಗಳನ್ನು ಕುರಿತು ಅಧ್ಯಯನ ಮಾಡುವುದು, ಆತ್ಮವನ್ನು ಕುರಿತು ಅಧ್ಯಯನ ಮಾಡಿದಷ್ಟೇ ತೊಡಕಿನದು. ಏಕೆಂದರೆ ಮನಸ್ಸು ಚಂಚಲ ಸ್ವಭಾವವುಳ್ಳದ್ದು. ''ಮರವನೇರಿದ ಮರ್ಕಟನಂತಿಹುದಯ್ಯಾ ಎನ್ನ ಮನ''-ಎಂಬ ಶರಣರ ಮಾತಿನಿಂದ ಅಥವಾ ಬುದ್ಧಿಯ ಚಂಚಲತೆ ಏನೆಂಬುದನ್ನು ಗುರುತಿಸಬಹುದಾಗಿದೆ. ಅಲ್ಲದೆ ಅದು ಪ್ರತಿಯೊಬ್ಬ ವ್ಯಕ್ತಿವ್ಯಕ್ತಿಗೂ ಭಿನ್ನವಾದುದು. ಆದ್ದರಿಂದ ಇಂತಹ ಭಿನ್ನತೆಯಿಂದ ಕೂಡಿದ ಚಂಚಲ ಸ್ವಭಾವದ ಮನಸ್ಸಿನ ಅಥವಾ ಬುದ್ಧಿಯ ಚಟುವಟಿಕೆಗಳ ಸತ್ಯವನ್ನರಿಯಲು ಮನಶ್ಶಾಸ್ತ್ರ ವಿಫಲವಾಯಿತು. ಆದಕಾರಣ ಈ ಹೇಳಿಕೆಯೂ ಕೂಡ ಅಂದರೆ Psychology is the Science of mind ಎಂಬುದೂ ತನ್ನ ಅಸ್ತಿತ್ವವನ್ನು ಕಳೆದುಕೊಂಡಿತು. ಆದ್ದರಿಂದ ಮನಶ್ಶಾಸ್ತ್ರವು ಮನಸ್ಸನ್ನು ಕುರಿತು ಅಧ್ಯಯನ ಮಾಡಲಾರದೆ ಮನಸ್ಸನ್ನೂ ಕಳೆದುಕೊಂಡಿತು.

೩. ಮನಶ್ಶಾಸ್ತ್ರ ಪ್ರಜ್ಞೆಯನ್ನು ಕುರಿತ ವಿಜ್ಞಾನ

Psychology is the science of Consciousness ಮನಶ್ಶಾಸ್ತ್ರ

ಆತ್ಮ ಮತ್ತು ಮನಸ್ಸನ್ನು ಕುರಿತು ಅಧ್ಯಯನ ಮಾಡಲು ಸಾಧ್ಯವಾಗದೆ ಮೂರನೆಯದಾಗಿ ಪ್ರಜ್ಞೆಯನ್ನು ಕುರಿತು ಅಧ್ಯಯನ ಮಾಡುವ ವಿಜ್ಞಾನ ಎನಿಸಿಕೊಂಡಿತು. ಆದರೆ ಮನಶ್ಶಾಸ್ತ್ರವು ಈ ಪ್ರಜ್ಞೆ(Consciousness) ಎಂಬುದೇನು ? ಎಂಬುದನ್ನು ಖಚಿತವಾಗಿ ವಿವರಿಸಿ ಅದರ ಸ್ವರೂಪ ಇಂತಿಷ್ಟೆ ಸರಿ ಎಂದು ಅಧ್ಯಯನ ಮಾಡಲಾರದ್ದಾಯಿತು. ಅಷ್ಟೆ ಅಲ್ಲದೆ ಪ್ರಜ್ಞೆಯಲ್ಲಿ ಜಾಗೃತ ಪ್ರಜ್ಞೆ ಅಥವಾ ಎಚ್ಚೆತ್ತ ಪ್ರಜ್ಞೆ ಮತ್ತು ಅಜಾಗೃತ ಪ್ರಜ್ಞೆ ಅಥವಾ ವೈಮರೆತ ಪ್ರಜ್ಞೆಗಳೆಂಬುವುಗಳಿದ್ದು ಅವುಗಳ ವರ್ತನೆಯನ್ನು ಮನಶಾಸ್ತ್ರ ಗುರುತಿಸಲಾರದಾದ್ದರಿಂದ ಮನಶ್ಶಾಸ್ತ್ರವು ಕೇವಲ ಪ್ರಜ್ಞೆಯನ್ನಷ್ಟೇ ಅಧ್ಯಯನ ಮಾಡುವಂಥದ್ದಲ್ಲ ಎಂಬ ಅರಿವುಂಟಾಯಿತು. ಜಾಗೃತಾವಸ್ಥೆ ಮತ್ತು ಅಜಾಗೃತಾವಸ್ಥೆಯಲ್ಲಿಯೂ ಮಾನವನ ವರ್ತನೆಯನ್ನು ಪ್ರಜ್ಞೆಯ ಮೂಲಕ, ಮನಶ್ಶಾಸ್ತ್ರ ಅಧ್ಯಯನ ಮಾಡಲಾರದಾದ್ದರಿಂದ ಅದು

ಪ್ರಜ್ಞೆಯನ್ನು ಕುರಿತು ಅಧ್ಯಯನ ಮಾಡುವ ವಿಜ್ಞಾನವೆಂಬ ಮಾತೂ ಸಹ ತನ್ನ ಅಸ್ತಿತ್ವವನ್ನು ಕಳೆದುಕೊಂಡಿತು. ಆದ್ದರಿಂದ ಅದು ತನ್ನ ಪ್ರಜ್ಞೆಯನ್ನು ಕುರಿತ ಅಧ್ಯಯನ ಎಂಬುದನ್ನೂ ಕಳೆದುಕೊಂಡಿತು. So it lost its Consciousness also.

೪. ಮನಶ್ಶಾಸ್ತ್ರವು ವರ್ತನೆಯನ್ನು ಕುರಿತ ವಿಜ್ಞಾನ.

Psychology is the Science of Behaviour.

ಇತ್ತೀಚಿನ ಮನಶ್ಶಾಸ್ತ್ರದ ಕಲ್ಪನೆ ಏನೆಂದರೆ ಮನಶ್ಶಾಸ್ತ್ರವು ವರ್ತನೆಯನ್ನು ಕುರಿತು ಅಧ್ಯಯನ ಮಾಡುವ ಶಾಸ್ತ್ರವೆಂದು ಪರಿಗಣಿಸಲಾಗಿದೆ. ವರ್ತನೆ ಜಾಗೃತ ಪ್ರಜ್ಞೆಯಿಂದ ಕೂಡಿದ್ದಾಗಿರ ಬಹುದು ಅಥವಾ ಅಜಾಗೃತ ಪ್ರಜ್ಞೆಯಾಗಿರಬಹುದು. ಬೇರೆಬೇರೆ ಸನ್ನಿವೇಶಗಳಲ್ಲಿ ಜೀವಿಯ ಒಟ್ಟು ವರ್ತನೆಯ ಪ್ರತಿಕ್ರಿಯೆಯನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡುವುದೇ ಮನಶ್ಶಾಸ್ತ್ರವೆನಿಸುತ್ತದೆ. ಈ ಅರ್ಥದಲ್ಲಿ ಮನಶ್ಶಾಸ್ತ್ರವು ಬೌದ್ಧಿಕವಾಗಿ ಮತ್ತು ಭೌತಿಕವಾಗಿ ಸಾಮಾನ್ಯ ಮತ್ತು ಅಸಾಮಾನ್ಯ ಸ್ಥಿತಿಯಲ್ಲಿ ಮಗು ಮತ್ತು ಮನುಷ್ಯ ಇವರುಗಳ ವರ್ತನೆಯನ್ನು ಅಧ್ಯಯನ ಮಾಡುವಂತಹುದಾಗಿದೆ'' - ಇದು ಗ್ಯಾರೆಟ್ ಎಂಬ ಮನಶ್ಶಾಸ್ತ್ರಜ್ಞನ ಅಭಿಪ್ರಾಯ.

ಅಂದ ಮೇಲೆ ಮನಶ್ಶಾಸ್ತ್ರವು ''ಮಾನವನ ವರ್ತನ ಶಾಸ್ತ್ರದ ಅಧ್ಯಯನ'' ಎಂದಾಯ್ತು. ಮನುಷ್ಯನ ವರ್ತನೆಯೆ ಅದರ ಅಧ್ಯಯನದ ವಸ್ತು ವಿಷಯ ಎಂದಾಯ್ತು. ಜನರು ಏನು ಮಾಡುತ್ತಾರೆ ? ಹೇಗೆ ಮಾಡುತ್ತಾರೆ ? ಏಕೆ ಮಾಡುತ್ತಾರೆ ? ಎಂಬಿತ್ಯಾದಿ ವರ್ತನೆಗಳನ್ನು ಕುರಿತು ಅಧ್ಯಯನ ಮಾಡುವಂತಹುದೇ ಆಗಿದೆ. ಮ್ಯಾಕ್‌ಡ್ಯೂಗಲ್‌ನ ಪ್ರಕಾರ ''ಮನಶ್ಶಾಸ್ತ್ರವು ಖಚಿತವಾದ ವರ್ತನೆಯ ಅಥವಾ ನಿಶ್ಚಿತವಾದ ನಡವಳಿಕೆಯ ವಿಜ್ಞಾನ'' (Psychology is the positive science of behaviour.) ಇದು ಜೀವಿಯನ್ನು ಸಮಗ್ರವಾಗಿ ನೋಡಿ ಅದರ ವರ್ತನೆಯನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಮತ್ತು ಹತೋಟಿಗೊಳಪಡಿಸಲು ಸಹಾಯ ಮಾಡುವುದೇ ಈ ವಿಜ್ಞಾನದ ಗುರಿಯಾಗಿದೆ. ಈ ವಿವರಣೆಯು ಇತರೆ ತರ್ಕಬದ್ಧವಾದ ವಿವಾದಗಳಿಂದ ಮತ್ತು ಇತರೆ ವಿವರಗಳೆಲ್ಲವುಗಳಿಂದ ಮುಕ್ತವಾದುದಾಗಿದೆ. ಈ ರೀತಿ ಮನಶ್ಶಾಸ್ತ್ರದ ವಿವರಣೆಗಳಲ್ಲಾದ ಬದಲಾವಣೆಗಳನ್ನು ಈ ಮೊದಲೇ ತಿಳಿಸಿರುವ ವುಡ್‌ವರ್ತನ ಅಭಿಪ್ರಾಯವು ಚೆನ್ನಾಗಿ ನಿರ್ದೇಶಿಸಲ್ಪಟ್ಟಿದೆ.

ಮನಶ್ಶಾಸ್ತ್ರದ ವಿವಿಧ ಶಾಖೆಗಳು (Branches of Psychology).

ಮನಶ್ಶಾಸ್ತ್ರ ಇಂದು ತನ್ನದೇ ಆದ ಒಂದು ವಿಶಿಷ್ಟ ಶಾಖೆಯಾಗಿ ಬೆಳೆದು ನಿಂತು, ಇಂದು ಅದು ತನ್ನದೇ ಆದ ಅನೇಕ ಶಾಖೋಪಶಾಖೆಗಳನ್ನು

ಒಳಗೊಂಡುದಾಗಿದೆ. ಅವುಗಳೆಂದರೆ - ೧. ಜನರಲ್ ಅಂಡ್ ನಾರ್ಮಲ್ ಸೈಕಾಲಜಿ ೨. ಅಬ್ನಾರ್ಮಲ್ (ಉತ್ಕಟ ಅಥವಾ ಅತಿರೇಕ) ಸೈಕಾಲಜಿ ೩. ಮಕ್ಕಳ ಮನಶ್ಶಾಸ್ತ್ರ ೪. ಮಾನವೀಯತೆಯ ಮನಶ್ಶಾಸ್ತ್ರ ೫. ವಯಸ್ಕರ ಮನಶ್ಶಾಸ್ತ್ರ ೬. ವೈಯಕ್ತಿಕ ಮನಶ್ಶಾಸ್ತ್ರ ೭. ಸಾಮಾಜಿಕ ಮನಶ್ಶಾಸ್ತ್ರ ೮. ಕೈಗಾರಿಕಾ ಮನಶ್ಶಾಸ್ತ್ರ ೯. ಶಿಕ್ಷಣ ಮನಶ್ಶಾಸ್ತ್ರ ೧೦. ಪ್ಯಾರಾ ಸೈಕಾಲಜಿ ೧೧. ಪ್ರಾಯೋಗಿಕ ಮನಶ್ಶಾಸ್ತ್ರ ೧೨. ಭೌತಿಕ ಅಥವಾ ಶಾರೀರಿಕ ಮನಶ್ಶಾಸ್ತ್ರ ೧೩. ಅನುವಂಶೀಯ ಅಥವಾ ತಳಿಶಾಸ್ತ್ರ (Genetic) ಮನಶ್ಶಾಸ್ತ್ರ ೧೪. ಡೆವಲಪ್‌ಮೆಂಟಲ್ ಸೈಕಾಲಜಿ - ಈ ರೀತಿ ಮನಶ್ಶಾಸ್ತ್ರದ ಶಾಖೋಪಶಾಖೆಗಳನ್ನು ನೋಡಿದಾಗ ಮನಶ್ಶಾಸ್ತ್ರ ಇಂದು ಜೀವನದ ಪ್ರತಿಯೊಂದು ರಂಗದಲ್ಲೂ ತನ್ನ ಮಹತ್ತರ ಪಾತ್ರವನ್ನು ವಹಿಸುತ್ತಿರುವುದರ ಅರಿವಾಗದಿರದು. ಜೀವನದ ಉಳಿದ ರಂಗಗಳಂತೆಯೇ ಅಂತೆಯೇ ಇಂದು ಶಿಕ್ಷಣರಂಗದಲ್ಲೂ ಅದ್ವಿತೀಯ ಅಗಣಿತ ಪಾತ್ರವನ್ನು ನಿರ್ವಹಿಸುತ್ತಿರುವುದು ಆಶ್ಚರ್ಯವೇನಲ್ಲ. ಶಿಕ್ಷಣಕ್ಷೇತ್ರದಲ್ಲಿ ಎದ್ದಿರುವ ನೂರಾರು ಸಮಸ್ಯೆಗಳಿಗೆ ಶಿಕ್ಷಣ ಮನಶ್ಶಾಸ್ತ್ರವು ಸಂಪೂರ್ಣ ಪರಿಹಾರವನ್ನಲ್ಲದಿದ್ದರೂ ಅನೇಕ ರೀತಿಯ ಪರಿಹಾರಗಳನ್ನು ಒದಗಿಸಲು ಸಮರ್ಥಶಾಲಿಯಾಗಿರುವುದು ನಿರ್ವಿವಾದ. ಆದ್ದರಿಂದ ಶಿಕ್ಷಣ ಮನಶ್ಶಾಸ್ತ್ರದ ಅಧ್ಯಯನ ಉಳಿದ ಮನಶ್ಶಾಸ್ತ್ರಗಳ ಅಧ್ಯಯನಕ್ಕಿಂತಲೂ ಅತಿ ಮುಖ್ಯ. ಏಕೆಂದರೆ ಪ್ರತಿಯೊಬ್ಬ ವ್ಯಕ್ತಿಯೂ ಒಂದಲ್ಲ ಒಂದು ರೀತಿಯ ಶಿಕ್ಷಣವನ್ನು ಪಡೆಯುತ್ತಾನೆ. ಹೀಗೆ ವ್ಯಕ್ತಿ ತಾನು ಪಡೆಯುವ ಶಿಕ್ಷಣದ ಅವಧಿಯಲ್ಲಿ ಅವನ ವರ್ತನೆಗಳನ್ನು ಅಧ್ಯಯನ ಮಾಡಿ ಆ ಎಲ್ಲ ವರ್ತನೆಗಳಿಗೆ ಒಂದು ಮೂರ್ತ ಸ್ವರೂಪವನ್ನು ಕೊಡುವುದೇ ಶಿಕ್ಷಣ ಮನಶ್ಶಾಸ್ತ್ರದ ಕರ್ತವ್ಯ.

ಶಿಕ್ಷಣ ಮನಶ್ಶಾಸ್ತ್ರದ ವ್ಯಾಪ್ತಿ: (Scope of Educational Psychology)

ಮನಶ್ಶಾಸ್ತ್ರದ ಅತ್ಯಂತ ಪ್ರಮುಖ ಶಾಖೆಗಳಲ್ಲಿ ಶಿಕ್ಷಣ ಮನಶ್ಶಾಸ್ತ್ರವೂ ಒಂದು. ಶಿಕ್ಷಣಕ್ಷೇತ್ರ ಇಂದು ಬಹುರೂಪಿಯಾಗಿ ಬೆಳೆದಿದೆ. ಈ ರೀತಿ ವಿರಾಡ್ರೂಪಿಯಾಗಿ ಬೆಳೆದಿರುವ ಶಿಕ್ಷಣಕ್ಷೇತ್ರದಲ್ಲಿ ಎದ್ದಿರುವ ಪ್ರಶ್ನೆಗಳು ನೂರಾರು. ಅದರಲ್ಲಿ ಶಿಕ್ಷಣವನ್ನು ಯಾವ ರೀತಿ ಕೊಡಬೇಕು ? ಏಕೆ ಕೊಡಬೇಕು ? ಯಾರಿಂದ ಕೊಡಿಸಬೇಕು ? ಎಂಥಾ ಸನ್ನಿವೇಶದಲ್ಲಿ ಕೊಡಬೇಕು ? ಎಂಬಿತ್ಯಾದಿ ಪ್ರಶ್ನೆಗಳಿಗೆ ಮನೋವೈಜ್ಞಾನಿಕವಾಗಿ ಸೂಕ್ಷ್ಮಾತಿಸೂಕ್ಷ್ಮ ಅಂಶಗಳೆಲ್ಲವನ್ನೂ ಗಣನೆಗೆ ತೆಗೆದುಕೊಂಡು ಎದ್ದ ಸಮಸ್ಯೆಗಳನ್ನು ಬಿಡಿಸಬೇಕಾಗಿದೆ.

ಇಂದು ಶಿಕ್ಷಣತಜ್ಞರೆಲ್ಲರೂ ಶ್ರೇಷ್ಠ ಶಿಕ್ಷಣವೇತ್ತನಾದ ಪೆಸ್ಟಾಲಜಿಯ ಹೇಳಿಕೆಯನ್ನು ಮಾನ್ಯ ಮಾಡಿದ್ದಾರೆ. ಪೆಸ್ಟಾಲಜಿಯ ಹೇಳಿಕೆ ಎಂದರೆ "Psychologise the

whole education" - ಶಿಕ್ಷಣವೆಲ್ಲವನ್ನೂ ಮನಶ್ಶಾಸ್ತ್ರೀಯವನ್ನಾಗಿಸು ಎಂಬುದು. ಆದ್ದರಿಂದ ಇಂದು ಶಿಕ್ಷಣವನ್ನು ಮನಶ್ಶಾಸ್ತ್ರೀಯವನ್ನಾಗಿಸಲು ಅಥವಾ ಮನಶ್ಶಾಸ್ತ್ರೀಯವಾದ ಶಿಕ್ಷಣವನ್ನೀಯಲು ಜಗತ್ತಿನಾದ್ಯಂತ ಏನೆಲ್ಲ ಪ್ರಯತ್ನಗಳು ನಡೆಯುತ್ತಿವೆ. ಆದಕಾರಣ ಶಿಕ್ಷಣ ಮನಶ್ಶಾಸ್ತ್ರದ ಭದ್ರಬುನಾದಿಯನ್ನು ಪಡೆಯಲು ಜಗತ್ತಿನಾದ್ಯಂತ ಶಿಕ್ಷಣಕ್ಷೇತ್ರ ಉದ್ಯುಕ್ತವಾದುದಾಗಿದೆ. ಬದಲಾಗುತ್ತಿರುವ ಸನ್ನಿವೇಶದಲ್ಲಿ ವ್ಯಕ್ತಿಯ ಕಲಿಕೆಯ ವರ್ತನೆಯನ್ನು ವಿಶಿಷ್ಟವಾದ ಮತ್ತು ಪ್ರತ್ಯೇಕವಾದ ವೈಜ್ಞಾನಿಕ ವಿಶ್ಲೇಷಣೆಗೆ ಒಳಪಡಲು ಇಂದು ಶಿಕ್ಷಣಮನಶ್ಶಾಸ್ತ್ರಸಿದ್ಧವಾದುದಾಗಿದೆ. ನೂತನವಾದ ಶೈಕ್ಷಣಿಕ ಸನ್ನಿವೇಶದಲ್ಲಿ ನೂತನವಾದ ವರ್ತನ ವಿಧಾನಗಳನ್ನು ಮನಶ್ಶಾಸ್ತ್ರ ಕಂಡುಕೊಳ್ಳದೆ ಇರುವ ಒಂದು ದಿವಸವನ್ನು ಕಳೆಯುವಂತಿಲ್ಲ.

ಶಿಕ್ಷಣ ಮನಶ್ಶಾಸ್ತ್ರದ ವ್ಯಾಪ್ತಿ ಅಗಣಿತವಾದದ್ದು. ಶಿಕ್ಷಣ ಜೀವನ ರಂಗವನ್ನು ಹೇಗೆ ಪ್ರವೇಶಿಸಿದೆಯೋ ಹಾಗೆ ಮನಶ್ಶಾಸ್ತ್ರವೂ ಸಹ ಜೀವನದ ಎಲ್ಲ ರಂಗವನ್ನೂ ಪ್ರವೇಶಿಸಿದೆ. ಅವೆರಡೂ ಒಂದೇ ನಾಣ್ಯದ ಎರಡು ಮುಖಗಳು. ಅವು ಒಂದನ್ನು ಉಳಿದು ಇನ್ನೊಂದು ಇರುವಂತಿಲ್ಲ. 'ಶಿಕ್ಷಣ ಮನಶ್ಶಾಸ್ತ್ರ' - ಎಂಬುದರ ಅರ್ಥವನ್ನು ಸರಿಯಾಗಿ ಅರ್ಥೈಸಿಕೊಳ್ಳಬೇಕಾದರೆ ನಾವು ಮೊದಲು ''ಮನಶ್ಶಾಸ್ತ್ರ'' ಮತ್ತು ಶಿಕ್ಷಣ ಎಂಬ ಪದಗಳ ಅರ್ಥವನ್ನು ಸರಿಯಾಗಿ ಗ್ರಹಿಸಬೇಕು.

ನಮಗೀಗಾಗಲೇ ಗೊತ್ತಿರುವ ಹಾಗೆ ''ಮನಶ್ಶಾಸ್ತ್ರ''ವೆಂದರೆ, 'ವರ್ತನ ಶಾಸ್ತ್ರ' ಎಂದು. ಅಂದರೆ ಜೀವಿಯ ವರ್ತನೆಯನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡುವ ಒಂದು ಶಾಸ್ತ್ರಕ್ಕೆ 'ವರ್ತನ ಶಾಸ್ತ್ರ'ವೆನ್ನಬಹುದಾಗಿದೆ. ಒಟ್ಟಾರೆ ಜೀವಿಯ ವರ್ತನೆಯನ್ನು ಅರ್ಥಮಾಡಿಕೊಳ್ಳಲು ಮತ್ತು ನಿಯಂತ್ರಣಗೊಳಿಸಲು ಮನೋವಿಜ್ಞಾನ ಅಥವಾ ಮನಶ್ಶಾಸ್ತ್ರಸಹಾಯ ಮಾಡುವಂತಹುದಾಗಿದೆ. ಇಲ್ಲಿ ''ಶಾಸ್ತ್ರ'' ಎಂಬ ಪದದ ಅರ್ಥ ವಿಜ್ಞಾನ ಎಂದು. ಶಿಕ್ಷಣವೆಂದರೆ ಅದರ ಸಾಮಾನ್ಯ ಅರ್ಥದಲ್ಲಿ 'ವರ್ತನೆಯ ಪರಿವರ್ತನೆಯೇ' ಆಗಿದೆ. ಅಂದರೆ ಮೃಗೀಯವರ್ತನೆಯಿಂದ ಸದಾ ಸದ್‌ವರ್ತನೆಯ ಕಡೆಗೆ ಕೊಂಡೊಯ್ಯುವುದೇ ಆಗಿದೆ. ಹಿಂದೆ 'ಜ್ಞಾನ' ಎಂದರೆ 'ಶಿಕ್ಷಣ', 'ಶಿಕ್ಷಣ' ಎಂದರೆ 'ಜ್ಞಾನ' ಎನ್ನುವಂತಿತ್ತು. ಜ್ಞಾನಕ್ಕೂ ಶಿಕ್ಷಣಕ್ಕೂ ಸಾಮ್ಯವನ್ನು ಕಲ್ಪಿಸಲಾಗಿದ್ದಿತು. ತುಂಡುತುಂಡಾದ ಕೆಲವು ವಿಷಯಿಕ ಅಂಶಗಳನ್ನು ಮಗುವಿನ ತಲೆಯಲ್ಲಿ ತುಂಬುವುದೇ ಶಿಕ್ಷಣವೆಂದೂ ಅದೇ 'ಜ್ಞಾನ'ವೆಂದೂ ಪರಿಗಣಿಸಲಾಗಿದ್ದಿತು. ಆದರೆ ಇಂದು, ಶಿಕ್ಷಣವೆಂದರೆ ಅದಷ್ಟು ಮಾತ್ರವಲ್ಲ, ಅದು ಅದಕ್ಕಿಂತಲೂ ಹೆಚ್ಚಿನದು ಎಂಬುದೀಗ ಮನವರಿಕೆ ಆಗಿದೆ. ವ್ಯಕ್ತಿ ತಾನು ಗಳಿಸುವ ಜ್ಞಾನ, ಅದರಿಂದ ಅವನಲ್ಲುಂಟಾದ ಮಾರ್ಪಾಡು, ಸದ ಸದ್ವರ್ತನೆ ವ್ಯಕ್ತಿಯ ವ್ಯಕ್ತಿತ್ವದ ಸಮಗ್ರ ಬೆಳವಣಿಗೆಯ ವಿವೇಚನೆ - ಇತ್ಯಾದಿಗಳೆಲ್ಲವನ್ನೂ ಒಳಗೊಂಡುದಾಗಿದ್ದು ಅದರ

ಜತೆಗೆ ಇದರ ಇನ್ನೊಂದು ಮುಖವಾದ ''ಸಾಮಾಜಿಕ ವಿಧಾನ''ವನ್ನು ಒದಗಿಸಿಕೊಟ್ಟು ತನ್ಮೂಲಕ ವ್ಯಕ್ತಿಯನ್ನು ಸಮಾಜದ ಕಣ್ಣಿನಲ್ಲಿ ಸುಜ್ಞಾನಿಯಾದ ಮನುಷ್ಯನೆನಿಸಿ ಕೊಳ್ಳುವಂತೆ ಮಾಡತಕ್ಕದ್ದು ಶಿಕ್ಷಣ ಎನಿಸುವಂತಹುದಾಗಿದೆ. ಈ ರೀತಿ ವ್ಯಕ್ತಿಯನ್ನು ಸುಶಿಕ್ಷಿತನನ್ನಾಗಿ ಮಾಡಲು ಪ್ರತಿಯೊಂದು ಸನ್ನಿವೇಶದಲ್ಲೂ ಅವನ ವರ್ತನೆಯನ್ನು ಅಧ್ಯಯನ ಮಾಡಿ ಅದನ್ನು ಸದ್ವರ್ತನೆಯ ಕಡೆಗೆ ಕೊಂಡೊಯ್ಯುವಂತೆ ಮಾಡಲು ನೆರವಾಗುವುದೇ ಶಿಕ್ಷಣ ಮನಶ್ಶಾಸ್ತ್ರವೆನಿಸುತ್ತದೆ.

ಶಿಕ್ಷಣ ಮನಶ್ಶಾಸ್ತ್ರ ಎಂದರೇನು ?
(What is Educational Psychology ?)

ಶಿಕ್ಷಣ ಮನಶ್ಶಾಸ್ತ್ರದ ವ್ಯಾಪ್ತಿಯನ್ನು ಕುರಿತು ಚರ್ಚಿಸುತ್ತ ಅದು ಶಿಕ್ಷಣದ ಎಲ್ಲ ರಂಗವನ್ನು ಪ್ರವೇಶಿಸಿದೆ, ಮತ್ತು ಶಿಕ್ಷಣ ಜೀವನದ ಎಲ್ಲ ರಂಗವನ್ನು ಪ್ರವೇಶಿಸಿದ್ದು ತನ್ನೊಂದಿಗೆ ಮನಶ್ಶಾಸ್ತ್ರವೂ ಸಹ ಜೀವನದ ಎಲ್ಲ ರಂಗವನ್ನೂ ಪ್ರವೇಶಿಸುವಂತೆ ಮಾಡಿದೆ. ಅಂದಮೇಲೆ ಇಂತಹ ಶಿಕ್ಷಣ, ಮನಶ್ಶಾಸ್ತ್ರದ ಸ್ವರೂಪವನ್ನು ಚೆನ್ನಾಗಿ ಅರ್ಥೈಸಿಕೊಳ್ಳಬೇಕು. ಹಾಗೆ ಇದನ್ನು ಅರ್ಥೈಸಿಕೊಳ್ಳಬೇಕಾದರೆ 'ಶಿಕ್ಷಣ ಮನಶ್ಶಾಸ್ತ್ರ' ಎಂದರೇನು ? ಎಂಬುದನ್ನು ತಿಳಿಯಬೇಕು.

ಮನಶ್ಶಾಸ್ತ್ರ ಎಂದರೆ ಮನೋವಿಜ್ಞಾನ ಎಂದರ್ಥ. ಮನೋವೈಜ್ಞಾನಿಕ ತಳಹದಿಯ ಮೇಲೆ ಶಿಕ್ಷಣ ನೀಡಬೇಕೆಂಬ ಕಲ್ಪನೆ ಆಧುನಿಕ ಜಗತ್ತಿನ ಶಿಕ್ಷಣತಜ್ಞರೆಲ್ಲರ ಅಭೀಷ್ಟವಾಗಿದೆ. ಈ ಅಭೀಷ್ಟ ಮತ್ತು ಅಭೀಪ್ಸೆಗಳನ್ನು ಪೂರೈಸಿಕೊಳ್ಳಲಿಕ್ಕಾಗಿ ಮನೋವಿಜ್ಞಾನವನ್ನು ಶಿಕ್ಷಣ ರಂಗದಲ್ಲಿ ಅನ್ವಯಿಸಿಕೊಳ್ಳಲಾಗುತ್ತಿದೆ. ಎಂದಿನಿಂದ ಶಿಕ್ಷಣ ತನ್ನ ಕ್ಷೇತ್ರದಲ್ಲಿ ಮನಶ್ಶಾಸ್ತ್ರವನ್ನು ಬಳಸಿಕೊಳ್ಳಲು ಪ್ರಾರಂಭಿಸಿತೋ ಅಂದಿನಿಂದ ಅದಕ್ಕೆ ''**ಮನಶ್ಶಾಸ್ತ್ರಾನ್ವಯಿಕ ಶಿಕ್ಷಣ ಮತ್ತು ಶಿಕ್ಷಣಾನ್ವಯಿಕ ಮನಶ್ಶಾಸ್ತ್ರ**'' - ಎಂಬ ಹೆಸರು ಬಂತು. ಒಂದೇ ಮಾತಿನಲ್ಲಿ ಹೇಳುವುದಾದರೆ **ಶಿಕ್ಷಣಾನ್ವಯಿಕ ಮನಶ್ಶಾಸ್ತ್ರವೇ ಶಿಕ್ಷಣ ಮನಶ್ಶಾಸ್ತ್ರವೆನಿಸುತ್ತದೆ.**

''ಯಾವುದೇ ಒಬ್ಬ ಶಿಕ್ಷಣಶಾಸ್ತ್ರಜ್ಞನನ್ನು ತೆಗೆದುಕೊಂಡರೆ ಅವನು ಅನ್ವಯಿಕ ಮನಶ್ಶಾಸ್ತ್ರಜ್ಞನೇ ಆಗಿರುತ್ತಾನೆ. ಅವನಿಗೆ ಮಾನವ ವರ್ತನೆಯ ಮೂಲಭೂತ ನಿಯಮಗಳಾವುವು ಎಂಬುದರಲ್ಲಿ ಅಭಿರುಚಿ, ಆಸಕ್ತಿಗಳಿರುತ್ತವೆ. ಆದರೆ ಆ ನಿಯಮಗಳನ್ನು ಶಿಕ್ಷಣಕ್ಕೆ ಹೇಗೆ ಅನ್ವಯಿಸಿಕೊಳ್ಳಬೇಕು ಎನ್ನುವುದರ ಕಡೆ ಅವನ ಆಸಕ್ತಿ ಮತ್ತು ಅಭಿರುಚಿಗಳಿರುತ್ತವೆ.'' [1]

---

1. Charles E. Skinner - Educational Psychology - P. 7

''ಶಿಕ್ಷಣ ಮನಶ್ಶಾಸ್ತ್ರವೂ ಒಂದು ವಿಷಯವಾಗಿದ್ದು ಅದು ಅಭ್ಯಸಿಸಬೇಕಾಗಿರುವುದು ಜ್ಞಾನದ ಒಂದು ಕ್ಷೇತ್ರ. ಈ ಜ್ಞಾನಕ್ಷೇತ್ರದಿಂದ ಕೆಲವು ನಿಯಮಗಳನ್ನು ಮತ್ತು ತತ್ತ್ವಗಳನ್ನು ಸಾಮಾಜಿಕ ವಿಧಾನಗಳಿಗೆ ಅನ್ವಯಿಸಿಕೊಳ್ಳುವುದೂ ಕೆಲವು ಉಪಕರಣಗಳನ್ನು ಮತ್ತು ಯಂತ್ರಕೌಶಲ್ಯತೆಗಳನ್ನು ಅಭ್ಯಸಿಸುವುದೂ, ಹಾಗೂ ಸಂಶೋಧನ ಕ್ಷೇತ್ರದಲ್ಲಿ ಕಾರ್ಯವೆಸಗುವುದೂ ಆಗಿದೆ.''[1]

ಈ ಮೊದಲೆ ತಿಳಿಸಿದಂತೆ ಮನಶ್ಶಾಸ್ತ್ರದ ಅತ್ಯಂತ ಸರಳವಾದ ಅರ್ಥವೆಂದರೆ - ''ವರ್ತನ ಶಾಸ್ತ್ರ''. ಅಂದರೆ ವರ್ತನೆಯನ್ನು ಕುರಿತು ಅಭ್ಯಸಿಸುವುದೇ ಆಗಿದೆ. ಅಂತಿಮವಾಗಿ ಮನಶ್ಶಾಸ್ತ್ರಜ್ಞನು ಮಾನವನ ವರ್ತನೆಗೆ ಸಂಬಂಧಿಸಿದ ನಿಯಮಗಳನ್ನು ರಚಿಸುವುದರಲ್ಲಿ ಅಭಿರುಚಿ ಉಳ್ಳವನಾಗಿರುತ್ತಾನೆ. ಅವನ ನಂಬಿಕೆಯ ಮೇರೆಗೆ ಎಲ್ಲ ಜೀವಂತ ಪ್ರಾಣಿಗಳೂ ಕೆಲವು ನಿಯಮಗಳಿಗನುಸಾರವಾಗಿ ವರ್ತಿಸುತ್ತವೆ. ತತ್ಫಲವಾಗಿ ಅವನು ಕೆಲವು ಪ್ರಾಣಿಗಳ ವರ್ತನೆಯನ್ನು ಅಭ್ಯಸಿಸುತ್ತಾನೆ. ಕಾರಣವೇನೆಂದರೆ ಅವನು ಅವುಗಳ ವರ್ಣನೆಯನ್ನು ಸುಲಭವಾಗಿ ತನ್ನ ಹತೋಟಿಗೊಳಪಡಿಸಬಹುದಾಗಿರುವುದೇ ಆಗಿದೆ ಅಥವಾ ಕೊಟ್ಟ ಸನ್ನಿವೇಶದಲ್ಲಿ ಅವುಗಳ ವರ್ತನೆಯನ್ನು ಅಧ್ಯಯನ ಗೈಯ್ಯುವಂಥಾದ್ದಾಗಿದೆ. ಈ ರೀತಿ ಪ್ರಾಣಿಗಳ ವರ್ತನೆಯ ಬಗ್ಗೆ ಇವನು ತನ್ನ ಅಂಕಿ ಅಂಶಗಳನ್ನು ಸಂಗ್ರಹಿಸುತ್ತಾನೆ. ಈ ಅಂಕಿ ಅಂಶಗಳು ನಿಯಂತ್ರಿತ ಸನ್ನಿವೇಶಗಳಿಂದ ಆವಿರ್ಭೂತವಾದವುಗಳಾಗಿದ್ದು ತನ್ಮೂಲಕ ಒಂದು ಸಾಮಾನ್ಯ ಸಿದ್ಧಾಂತವನ್ನು ನಿರೂಪಿಸಲು ಸಹಾಯಕವಾಗುತ್ತದೆ.

'ಶಿಕ್ಷಣ ಮನಶ್ಶಾಸ್ತ್ರ' - (Educational Psychology) ಎಂಬ ಶಬ್ದ 'ಶಿಕ್ಷಣ' ಮತ್ತು 'ಮನಶ್ಶಾಸ್ತ್ರ' ಎಂಬೆರಡು ಶಬ್ದಗಳಿಂದ ಕೂಡಿದುದಾಗಿದೆ. ಆ ಕಾರಣಕ್ಕಾಗಿ ಅದು ಎರಡು ಶಾಸ್ತ್ರಗಳನ್ನು ನಿರ್ದೇಶಿಸುತ್ತದೆ. ಅಂದರೆ ೧. ಶಿಕ್ಷಣ ಶಾಸ್ತ್ರ ೨. ಮನಶ್ಶಾಸ್ತ್ರ ಅಂದ ಮೇಲೆ ಇದು ಎರಡು ವಿಚಾರಧಾರೆಗಳ ಸಂಮಿಲನದಿಂದಾದದ್ದು. ಶಿಕ್ಷಣದ ಗುರಿ ಏನೆಂದರೆ ವ್ಯಕ್ತಿಯನ್ನು ಪರಿಪೂರ್ಣತೆಯೆಡೆಗೆ ಕೊಂಡೊಯ್ಯುವಂತಹುದು ಮತ್ತು ಸುಸಂಸ್ಕೃತ ಸಮಾಜವನ್ನು ನಿರ್ಮಿಸುವುದು. ಶಿಕ್ಷಣವು ಕಲಿಯುವಿಕೆಯನ್ನು ಕುರಿತದ್ದು. ಕಲಿಯುವ ವ್ಯಕ್ತಿ, ಕಲಿಯುವ ವಿಧಾನ ಮತ್ತು ಕಲಿಯಲು ಸನ್ನಿವೇಶಗಳು, ಶಿಕ್ಷಣ ಶಾಸ್ತ್ರದ ಆಧಾರಸ್ತಂಭಗಳು - ಈ ಎಲ್ಲವುಗಳನ್ನು ಸಂಶೋಧಿಸಿ, ವಿಶ್ಲೇಷಿಸಿ ವಿವರಿಸುವ ಕೆಲಸ ಮನಶ್ಶಾಸ್ತ್ರದ್ದು. ಎಂದಿನಿಂದ ಶಿಕ್ಷಣಕ್ಷೇತ್ರದಲ್ಲಿ 'ಕಲಿಯುವಲ್ಲಿ' ಮತ್ತು 'ಕಲಿಸುವಲ್ಲಿ' ಮನೋವೈಜ್ಞಾನಿಕ ನಿಯಮಗಳು ಅನ್ವಯಿಸಲ್ಪಟ್ಟವೋ ಅಂದೇ ''ಶಿಕ್ಷಣ

---

2. G. L. Anderson - Educational Psychology and Teacher Education - P. 275 & 284.

ಮನಶ್ಶಾಸ್ತ್ರ'' ಉದಯವಾಯಿತು. ಫಲವಾಗಿಯೇ ಇವೆರಡಕ್ಕೂ ಬಿಡಿಸಲಾರದ ನಂಟು. ಮನಶ್ಶಾಸ್ತ್ರದ ಸೂತ್ರಗಳನ್ನು ವೈಜ್ಞಾನಿಕವಾಗಿ ಶಿಕ್ಷಣರಂಗಕ್ಕೆ ಅಳವಡಿಸಿಕೊಳ್ಳುವುದರ ಮೂಲಕ ಕಲಿಯುವ ವ್ಯಕ್ತಿಗೂ ಕಲಿಸುವ ಅಧ್ಯಾಪಕನಿಗೂ ತಮ್ಮ ತಮ್ಮ ಕಾರ್ಯನಿರ್ವಹಣೆಯಲ್ಲಿ ಸಹಾಯಕವಾಗುವುದೇ ಶೈಕ್ಷಣಿಕ ಮನಶ್ಶಾಸ್ತ್ರದ ಮೂಲ ಉದ್ದೇಶ. ಆದ್ದರಿಂದಲೇ ಶೈಕ್ಷಣಿಕ ಮನಶ್ಶಾಸ್ತ್ರವನ್ನು ಪ್ರಾಯೋಗಿಕ ವಿಜ್ಞಾನ ಅಥವಾ ಅನ್ವಯಿಕ ವಿಜ್ಞಾನ - (Applied Science) - ಎಂದು ಕರೆದಿರುವುದು.

ಶೈಕ್ಷಣಿಕ ಮನೋವಿಜ್ಞಾನ ಎರಡು ಧ್ರುವಗಳ ಮಧ್ಯೆ ನಿಲ್ಲುತ್ತದೆ. ಆ ಎರಡು ಧ್ರುವಗಳೆಂದರೆ ಒಂದು 'ಕಲಿಯುವಿಕೆ' ಇನ್ನೊಂದು 'ಕಲಿಸುವಿಕೆ' ಅಥವಾ 'ಬೋಧಿಸುವಿಕೆ'. ''ಕಲಿಯುವಿಕೆ ಪರಿಣಾಮಕಾರಿಯಾಗಿ ಸಾಗಬೇಕಾದರೆ ಬೋಧಿಸುವಿಕೆ ಮನೋವೈಜ್ಞಾನಿಕ ತತ್ವಗಳಿಗನುಗುಣವಾಗಿ ಸಾಗಬೇಕು''. ಮನಶ್ಶಾಸ್ತ್ರವನ್ನು ಅದರ ಸಾಮಾನ್ಯ ಅರ್ಥದಲ್ಲಿ 'ವರ್ತನ ಶಾಸ್ತ್ರ'ವೆಂದು ಕರೆದೆವು. ಅದು ಏನು ? ಏಕೆ ? ಮತ್ತು ಹೇಗೆ ? ಎಂಬ ಮೂರು ಮೂಲಪ್ರಶ್ನೆಗಳಿಗೆ ತೃಪ್ತಿಕರವಾದ ಉತ್ತರವನ್ನು ಕೊಡಲು ಶ್ರಮಿಸುತ್ತದೆ. ಕಲಿಯುವಿಕೆ ಮತ್ತು ಬೋಧಿಸುವಿಕೆಯಲ್ಲಿ ಈ ಮೇಲಿನ ಮೂರೂ ಪ್ರಶ್ನೆಗಳು ಪ್ರಮುಖಸ್ಥಾನ ಪಡೆಯುತ್ತವೆ. ಬೋಧಿಸುವವ - ಏನನ್ನು ಬೋಧಿಸಬೇಕು ? ಏಕೆ ಬೋಧಿಸಬೇಕು ? ಮತ್ತು ಹೇಗೆ ಬೋಧಿಸಬೇಕು ? ಎಂಬುದನ್ನು ವಿಶ್ಲೇಷಣೆಗೈದು ಶಿಕ್ಷಣ ನೀಡಬೇಕು. ಅಂತೆಯೇ ಕಲಿಯುವವನೂ ಸಹ ಏನು ಕಲಿಯಬೇಕು ? ಏಕೆ ಕಲಿಯಬೇಕು ? ಮತ್ತು ಹೇಗೆ ಕಲಿಯಬೇಕು ? ಎಂಬುದನ್ನು ಗಮನದಲ್ಲಿಟ್ಟು ಕಲಿಯಬೇಕು. ಈ ರೀತಿಯ ಕಲಿವು ತರಗತಿಗೆ ಮಾತ್ರ ಸೀಮಿತವಲ್ಲ, ಬಾಹ್ಯ ಪ್ರಪಂಚಕ್ಕೂ ಅನ್ವಯ. ವ್ಯಕ್ತಿಯ ಕಲಿಕೆ ವೈಜ್ಞಾನಿಕವಾಗಿರಬೇಕೆಂಬ ನಂಬಿಕೆಯೇ ಶೈಕ್ಷಣಿಕ ಮನೋವಿಜ್ಞಾನಕ್ಕೆ ಪ್ರೇರಕಶಕ್ತಿ. ಶಿಕ್ಷಣ ಮನಶ್ಶಾಸ್ತ್ರಕ್ಕೆ ಇಂಬು ದೊರೆತದ್ದು ಈ ಇಪ್ಪತ್ತನೆಯ ಶತಮಾನದಲ್ಲಿ. ಹಾಗೆಂದ ಮಾತ್ರಕ್ಕೆ ಹಿಂದೆ ಇರಲಿಲ್ಲವೆಂದಲ್ಲ, ಹಿಂದೆಯೂ ಇತ್ತು. ಅರಿಸ್ಟಾಟಲನ ಕಾಲಕ್ಕೆ ಕಲಿಕೆಯಲ್ಲಿ 'ಸಾದೃಶ್ಯ' - Similarity, 'ವೈದೃಶ್ಯ' - Contrast ಮತ್ತು 'ಸಾಮೀಪ್ಯ' - Contiguity ನಿಯಮವನ್ನು ತಿಳಿಸಿದ್ದ. ಇದು ಪೆಸ್ಟಾಲಜಿಯಿಂದ ಅನುಷ್ಠಾನಕ್ಕೆ ತರಲ್ಪಟ್ಟಿತು. ಮಕ್ಕಳ ಯೋಗ್ಯತೆಗೆ ಮತ್ತು ಶಕ್ತಿ ಸಾಮರ್ಥ್ಯಕ್ಕೆ ತಕ್ಕಂತಹ ಶಿಕ್ಷಣ ಪದ್ಧತಿಯನ್ನು ಅವನು ಅನುಷ್ಠಾನಕ್ಕೆ ತಂದ. ಇದರಿಂದ ಮಕ್ಕಳಲ್ಲಿ ಕಲಿಕೆಯು ಸಾಧಿತವಾಗಲು ಶಿಕ್ಷಕನು ಏನು ಕ್ರಮ ಕೈಗೊಳ್ಳಬೇಕೆಂಬುದು ಸ್ಪಷ್ಟವಾಯಿತು. ನಂತರ ಹರ್ಬಾರ್ಟನ ಪಂಚಸೋಪಾನಗಳು ಅಸ್ತಿತ್ವಕ್ಕೆ ಬಂದುವು. ಅವೂ ಸಹ ಮನಶ್ಶಾಸ್ತ್ರಾಧಾರಿತ ಕಲಿಯುವಿಕೆಯ ನಿಯಮಗಳನ್ನೇ ಪ್ರತಿಪಾದಿಸಿದವು. ಬೋಧನಾ ಕ್ರಮದ ನಿರೂಪಣೆಯಾಯಿತು. ನಂತರ ಶಿಕ್ಷಣಕ್ಷೇತ್ರದಲ್ಲಿ ಮನೋವೈಜ್ಞಾನಿಕ ಕ್ರಾಂತಿಯನ್ನೆಬ್ಬಿಸಿದ ಥಾರ್ನ್‌ಡೈಕ್‌ನ ಆಗಮನವಾಯಿತು. ಈ ವೇಳೆಗೆ

2

''ಶೈಕ್ಷಣಿಕ ಮನಶ್ಶಾಸ್ತ್ರ'' ಎಂಬ ಗ್ರಂಥ ಹೊರಬಿತ್ತು. ಈ ಕಾರಣದಿಂದ ಶಿಕ್ಷಣ ಮನಶ್ಶಾಸ್ತ್ರಕ್ಕೆ ಸ್ವತಂತ್ರವಾದ ಅಸ್ತಿತ್ವ ಬಂತು. ಶಿಕ್ಷಣಕ್ಷೇತ್ರದಲ್ಲಿ ರಸಋಷಿಯ ಸ್ಥಾನವನ್ನು ಜಾನ್‌ಡ್ಯೂಯಿ, ವಿಲಿಯಂ ಜೇಮ್ಸ್, ಪಾವ್ಲಾವ್ ಟಾಲ್‌ಮನ್, ಗೆಸ್ಟಾಲ್ಟ್ ಇತ್ಯಾದಿ ಮನಶ್ಶಾಸ್ತ್ರಜ್ಞರ ಆಗಮನದಿಂದ ಶಿಕ್ಷಣ ಮನಶ್ಶಾಸ್ತ್ರ ನವನವೋನ್ಮೇಷ ಶಾಲಿನಿಯಾಗಿ ಬೆಳೆಯತೊಡಗಿತು. ಕಲಿಸುವ ವಿಷಯಕ್ಕಿಂತ ಕಲಿಯುವ ವ್ಯಕ್ತಿಗೆ ಕೇಂದ್ರಸ್ಥಾನ ಲಭ್ಯವಾಯ್ತು.

ಶಿಕ್ಷಣಕ್ಕೂ - ಮನಶ್ಶಾಸ್ತ್ರಕ್ಕೂ ಇರುವ ಸಂಬಂಧ :
(Relationship between Education and Psychology)

ಶಿಕ್ಷಣ ಮನಶ್ಶಾಸ್ತ್ರ ಎಂದರೇನು ? - ಎಂಬುದನ್ನು ಅರ್ಥೈಸಿಕೊಂಡ ಮೇಲೆ ಶಿಕ್ಷಣಕ್ಕೂ ಮನಶ್ಶಾಸ್ತ್ರಕ್ಕೂ ಇರುವ ಸಂಬಂಧ ಏನೆಂಬುದರ ಅರಿವಾಗದಿರದು.

ಶಿಕ್ಷಣ ಮನಶ್ಶಾಸ್ತ್ರ ಮನಶ್ಶಾಸ್ತ್ರದ ಒಂದು ಭಾಗ. ಕಲಿಕೆ ಅದರ ಕಾರ್ಯ. ಕಲಿಕೆಯ ಸಿದ್ಧಾಂತಗಳನ್ನು, ತತ್ವಗಳನ್ನು ನಿರ್ಧರಿಸುವುದೇ ಶಿಕ್ಷಣಮನಶ್ಶಾಸ್ತ್ರದ ಬಹುಮುಖ್ಯ ಕರ್ತವ್ಯ. ಇದು ತರಗತಿಗೆ ಮಾತ್ರ ಸೀಮಿತವಲ್ಲ. ವಾತಾವರಣದ ಕಲಿಕೆಗೂ ಸಂಬಂಧಿಸಿದ್ದು. ಕಲಿಕೆ ಮಕ್ಕಳಿಗೆ ಮಾತ್ರ ಸೀಮಿತವಲ್ಲ. ಅದು ಪ್ರತಿಯೊಂದು ಅಧ್ಯಯನದ ಸನ್ನಿವೇಶವನ್ನು ಸಹ ಕುರಿತದ್ದು. ಇದು ಶುದ್ಧ ವಿಜ್ಞಾನವಲ್ಲ. ಇದು ವಿಜ್ಞಾನದ ಪದ್ಧತಿಗಳನ್ನೆಲ್ಲಾ ಅನುಸರಿಸುತ್ತದೆ. ಆದ ಕಾರಣ ಇದು ಶಾಸ್ತ್ರ ಎನಿಸಿಕೊಂಡಿದೆ.

ಶಿಕ್ಷಣ ಮನಶ್ಶಾಸ್ತ್ರ- ಬೇರೆ ಬೇರೆ ವಿಜ್ಞಾನಗಳಿಂದ ಸಹಾಯ ಪಡೆದುಕೊಂಡಿದೆ. ಜೀವಶಾಸ್ತ್ರ, ಶರೀರಶಾಸ್ತ್ರ, ಸಮಾಜಶಾಸ್ತ್ರ ಇತ್ಯಾದಿಗಳಿಂದಲೂ ತನ್ನ ಸಾಮಗ್ರಿಗಳನ್ನು ಗಳಿಸಿಕೊಂಡುದಾಗಿದೆ. ಇದಕ್ಕೆ ಸಂಖ್ಯಾಶಾಸ್ತ್ರದ ನೆರವೂ ಅಗತ್ಯ. ಆದ್ದರಿಂದ ಇದರ ಕ್ಷೇತ್ರ ಬಹಳ ವಿಶಾಲವಾದದ್ದು. ಮಕ್ಕಳ ಬೆಳವಣಿಗೆಯ ವಿವಿಧ ಹಂತಗಳ ನಿರ್ಧಾರ ಕಲಿಕೆಯ ಸಾಮಾನ್ಯ ವಿಧಾನ, ವ್ಯಕ್ತಿ ಸಮಾಜದೊಂದಿಗಿರುವ ಹೊಂದಾಣಿಕೆ ಹಾಗೂ ಸಮಗ್ರ ವ್ಯಕ್ತಿತ್ವದ ಅಧ್ಯಯನ ಇತ್ಯಾದಿ ಇದರ ಮೂಲವಸ್ತುಗಳೆನಿಸಿದೆ.

ಮನಶ್ಶಾಸ್ತ್ರಕ್ಕೆ ಶಿಕ್ಷಣದಲ್ಲಿ ಸ್ಥಾನವಿಲ್ಲದ ಕಾಲವೂ ಸಹ ಒಂದಿತ್ತು. ಉಪಾಧ್ಯಾಯನಿಗೆ ಮಕ್ಕಳಿಗೆ ಮನಶ್ಶಾಸ್ತ್ರವೆಂಬುದೊಂದಿದೆ ಎಂಬುದೇ ಗೊತ್ತಿರಲಿಲ್ಲ. ಪಠ್ಯಕ್ರಮ ಮನಶ್ಶಾಸ್ತ್ರೀಯವಾದುದಾಗಿರಲಿಲ್ಲ. ಉಪಾಧ್ಯಾಯನೇ ಕೇಂದ್ರ ವ್ಯಾಪ್ತಿಯಾಗಿದ್ದ. ಎಲ್ಲ ಮಕ್ಕಳೂ ಒಂದೇ ರೀತಿ ಕಲಿಯುತ್ತಾರೆಂಬ ಭಾವನೆ ಇತ್ತು. ಶಿಕ್ಷಣದ ಬಹುಮುಖ್ಯ ಗುರಿ ಪರೀಕ್ಷೆಯಾಗಿತ್ತು. ಇದೆಲ್ಲ ಶಿಕ್ಷಣದ ಹಳೆಯ ಕಥೆ. ಆದರೆ ಇಂದು ಈ ಹಳೆಯ ಕಥೆಯೆಲ್ಲ ಮಾಯವಾಗಿ ಹೊಸಕಥೆ ಆರಂಭವಾಗಿದೆ.

ಮನಶ್ಶಾಸ್ತ್ರವು ಶಿಕ್ಷಣಕ್ಷೇತ್ರಕ್ಕೆ ಆಗಮಿಸಿದಂದಿನಿಂದ ಶಿಕ್ಷಣಕ್ಷೇತ್ರದಲ್ಲಿ ಹೊಸ ಮನ್ವಂತರ ಆರಂಭವಾಯ್ತು. ಮನಶ್ಶಾಸ್ತ್ರದ ಆಗಮನದಿಂದ ಹಿಂದಿನ ಸ್ಥಿತಿ ಶಿಥಿಲವಾಗತೊಡಗಿತು. ನೂತನ ಪ್ರಯೋಗಗಳ ಆವಿಷ್ಕಾರದಿಂದ ನೂತನ ದೃಷ್ಟಿ ಬೆಳೆಯತೊಡಗಿತು.

''ಹಳೆಮತದ ಕೊಳೆಯೆಲ್ಲ, ಹೊಸ ಮತಿಯ

ಹೊಳೆಯಲ್ಲಿ ಕೊಚ್ಚಿಹೋಗಲಿ, ಒದರಲಿ

ವಿಜ್ಞಾನ ಬುದ್ಧಿ'' - ಎಂಬ ಮಹಾಕವಿ ಕುವೆಂಪು ಅವರ ಅಮರವಾಣಿಯಂತೆ ಶಿಕ್ಷಣ ಕ್ಷೇತ್ರವನ್ನಾವರಿಸಿದ್ದ ಹಳೆಯ ಅಭಿಪ್ರಾಯಗಳ ಕೊಳೆಯೆಲ್ಲವೂ ಮನೋವೈಜ್ಞಾನಿಕ ದೃಷ್ಟಿಯ ಹೊಸಮತಿಯ ಹೊಳೆಯಲ್ಲಿ ಕೊಚ್ಚಿ ಹೋಗಿ ವಿಜ್ಞಾನ ಬುದ್ಧಿಯಂಕುರಿಸಿ ಮನಶ್ಶಾಸ್ತ್ರಾಧಾರಿತ ಶಿಕ್ಷಣ ಅಸ್ತಿತ್ವಕ್ಕೆ ಬಂತು. ಶಿಕ್ಷಣಕ್ರಾಂತಿಗೆ ಮನಶ್ಶಾಸ್ತ್ರ ನಾಂದಿಯನ್ನು ಹಾಡಿದ ಮೇಲೆ ಮಗುವಿನ ವಾತಾವರಣದ ಅಧ್ಯಯನ, ಮಗುವನ್ನು ಸಾಮಾಜೀಕರಿಸುವ ಹೊಣೆಗಾರಿಕೆ, ವ್ಯಕ್ತಿ ಭಿನ್ನತೆಯನ್ನನುಸರಿಸಿ ಶಿಕ್ಷಣ ನೀಡುವ ಗುರುತರ ಜವಾಬ್ದಾರಿ, ವೈವಿಧ್ಯಮಯ ಸನ್ನಿವೇಶಕ್ಕನುಗುಣವಾದ ಶಿಕ್ಷಣ ನೀಡ ಬೇಕೆಂಬ ಕಲ್ಪನೆ - ಇವೆಲ್ಲವೂ ಶಿಕ್ಷಣಕ್ಷೇತ್ರಕ್ಕೆ ಮನಶ್ಶಾಸ್ತ್ರದ ಆಗಮನವಾದಂದಿನಿಂದ ಅದ್ದೂರಿಯಾಗಿ ಬೆಳೆಯತೊಡಗಿದವು.

ಶಿಕ್ಷಣ ಶಾಸ್ತ್ರಕ್ಕೆ ಮನಶ್ಶಾಸ್ತ್ರದ ಅಮರ ಕೊಡುಗೆ :

''ಹರಿದೋಡಿದೆ ನಿಶೆ ನಗೆ ಬೀರಿದ ಉಷೆ

ತೀಡುತಲಿದೆ ತಂಗಾಳಿಯ ಲೀಲೆ !'' - ಕುವೆಂಪು

ನಗೆ ಬೀರಿದ ಉಷೆಯ ಆವಿಷ್ಕಾರದೊಂದಿಗೆ ನಿಶೆ ಹರಿದೋಡಿದೆ - ಎಂಬ ಮಹಾಕವಿಯ ಅಮರವಾಣಿಯು ಶಿಕ್ಷಣಕ್ಷೇತ್ರಕ್ಕೂ ಅನ್ವಯ. ಸಂಪ್ರದಾಯಬದ್ಧವಾದ ಶಿಕ್ಷಣಕ್ಷೇತ್ರದಲ್ಲಿ ಅಧ್ಯಾಪಕನೇ ಕೇಂದ್ರವಾಗಿದ್ದ. ಅವನ ಸುತ್ತ ಕ್ಷೇತ್ರದಲ್ಲಿ ಅಧ್ಯಾಪಕನೇ ಕೇಂದ್ರವಾಗಿದ್ದ. ಅವನು ಸುತ್ತ ಶಿಕ್ಷಣದ ಉಳಿದೆಲ್ಲ ವ್ಯಕ್ತಿ ಮತ್ತು ಶಕ್ತಿಗಳು ಸುತ್ತುವರಿಯ ಬೇಕಿದ್ದಿತು. ನಂತರದಲ್ಲಿ 'ವಿಷಯ ಕೇಂದ್ರ' ಶಿಕ್ಷಣ ಅಸ್ತಿತ್ವಕ್ಕೆ ಬಂತು. ನೂತನ ವಿಚಾರಧಾರೆಯ ಆವಿಷ್ಕಾರದೊಂದಿಗೆ ಆ ಕಲ್ಪನೆಯೂ ಹಿಂದೆ ಸರಿದು ''ಮಗು ಕೇಂದ್ರ ಶಿಕ್ಷಣ'' ಅಸ್ತಿತ್ವಕ್ಕೆ ಬಂತು. ಇಷ್ಟೆಲ್ಲ ಆದದ್ದು ಏಂದಿನಿಂದ ಎಂದರೆ ಶಿಕ್ಷಣಕ್ಷೇತ್ರದಲ್ಲಿ ಮನಶ್ಶಾಸ್ತ್ರದ ಉಷೆ ನಗೆ ಬೀರಿದಂದಿನಿಂದ.

ಎಂದಿನಿಂದ 'ಶಿಕ್ಷಣ' ಮನೋವೈಜ್ಞಾನಿಕ ತಳಹದಿಯ ಮೇಲೆ ನಿರ್ಮಾಣವಾಗಬೇಕೆಂಬ ಕಲ್ಪನೆಯ ಮೆಲ್ಲೆಲರು ಜಗತ್ತಿನ ವಿದ್ವಜ್ಜನತೆಯ ಮೈಮುಟ್ಟಿ, ಮನತಟ್ಟಿ ಬೀಸತೊಡಗಿತೋ ಅಂದಿನಿಂದ ಮನಶ್ಶಾಸ್ತ್ರದ ಉಷಾದೇವಿಯ ಮುಗುಳ್ನಗೆ ಆವಿಷ್ಕಾರವಾಗಿ ಅದುವರೆಗೆ ಶಿಕ್ಷಣವನ್ನಾವರಿಸಿದ್ದ ನಿಶೆ ಹರಿದೋಡತೊಡಗಿತು. ಇದೇ ಶಿಕ್ಷಣಶಾಸ್ತ್ರಕ್ಕೆ ಮನಶ್ಶಾಸ್ತ್ರದ ಅಮರ ಕೊಡುಗೆ ಎನ್ನಬಹುದು.

★★★★

೧.೨ ಶಿಕ್ಷಣ ಮನಶ್ಶಾಸ್ತ್ರದ ವಿಧಾನಗಳು ಅಥವಾ ಪದ್ಧತಿಗಳು :

"ಅದೂ ಬೇಕು, ಇದೂ ಬೇಕು,
ದಾರಿ ನೂರಾರಿವೆ ಬೆಳಕಿನರಮನೆಗೆ" - ಡಾ. ಜಿ. ಎಸ್. ಶಿವರುದ್ರಪ್ಪ

ಯಾವುದೇ ಒಂದು ಶಾಸ್ತ್ರವನ್ನು ಅಧ್ಯಯನ ಮಾಡಬೇಕಾದರೂ ಕೆಲವು ಪದ್ಧತಿಗಳು, ವಿಧಾನಗಳು ಇರುತ್ತವೆ. ಏಕೆಂದರೆ ಪ್ರತಿಯೊಂದು ಶಾಸ್ತ್ರವೂ ಒಂದೊಂದು ಬೆಳಕಿನ ಅರಮನೆ ; ಆ ಬೆಳಕಿನ ಅರಮನೆಗೆ ಬಾಗಿಲುಗಳು ಅನೇಕ !! ಅಲ್ಲಿಗೆ ಹೋಗಲು ದಾರಿಯೂ ನೂರಾರು ! ಆದ ಕಾರಣ ಅಲ್ಲಿಗೆ ಹೋಗಲು ಆ ದಾರಿಯೂ ಬೇಕು, ಈ ದಾರಿಯೂ ಬೇಕು. ಆದ್ದರಿಂದ ಉಳಿದ ಶಾಸ್ತ್ರಗಳಂತೆ ಮನಶ್ಶಾಸ್ತ್ರವೂ ಸಹ ತನ್ನದೇ ಆದ ಪದ್ಧತಿಗಳನ್ನು ಹೊಂದಿರುವಂತಹುದಾಗಿದೆ. ಪದ್ಧತಿಗಳು ಯಾವಾಗಲೂ ಅವುಗಳ ಅವಶ್ಯಕತೆಗೆ ತಕ್ಕಂತೆ ಬೆಳೆಯುತ್ತವೆ. ಮನಶ್ಶಾಸ್ತ್ರವೂ ಸಹ ಒಂದು ವಿಜ್ಞಾನವಾಗಿ ಬೆಳೆಯತೊಡಗಿದಂದಿನಿಂದ ಅದರಲ್ಲಿ ಕೆಲವು ಪದ್ಧತಿಗಳು ಕಾಣಿಸಿಕೊಂಡವು. ಆದಾಗ್ಯೂ ಮನಶ್ಶಾಸ್ತ್ರ ಇನ್ನೂ ಶಾಸ್ತ್ರೀಯವಾದ ಮತ್ತು ಶುದ್ಧ ವಿಜ್ಞಾನದ ಹಂತಕ್ಕೇರಲು ಕೆಲವು ಪ್ರಯೋಗಗಳು ಮತ್ತು ಅಳತೆಪ್ರಮಾಣಗಳು ಬೆಳವಣಿಗೆಯನ್ನು ಹೊಂದಬೇಕಾಗಿದೆ. ವಿಜ್ಞಾನದ ಹಂತಕ್ಕೆ ಮನಶ್ಶಾಸ್ತ್ರವು ಏರತೊಡಗಿದಾಗ ಅದಕ್ಕೆ ಸಂಖ್ಯಾಶಾಸ್ತ್ರದ ಬೆಂಬಲ ಅಗತ್ಯವಾಯ್ತು. ಸಂಖ್ಯಾಶಾಸ್ತ್ರವೆಂದರೆ ಅಂಕಿಸಂಖೆಗಳ ಲೆಕ್ಕಾಚಾರ. ಯಾವುದೇ ಒಂದು ವಿಜ್ಞಾನಕ್ಕೆ ಅತ್ಯಗತ್ಯ. ಅಂದ ಮೇಲೆ ಮನಶ್ಶಾಸ್ತ್ರ ಆ ದಿಸೆಯಲ್ಲಿರುವಾಗ ಅದು ಅದರಿಂದ ಹೊರಗುಳಿಯಲು ಶಕ್ಯವಿಲ್ಲ - ವಿಶ್ಲೇಷಣೆಯ ಅಂಶಗಳು, ವರ್ಗೀಕರಣದ ಅಂಶಗಳು, ವ್ಯತ್ಯಸ್ತವಾಗುವ ಅಂಶಗಳು ಮತ್ತು ಪುನರಾವರ್ತಿತ ಅಂಶಗಳು - ಇವೆಲ್ಲವುಗಳ ದತ್ತಾಂಶಗಳನ್ನು ಅಂಕಿಸಂಖ್ಯೆಗಳೋಪಾದಿಯಲ್ಲಿ ಗಣನೆಗೆ ತೆಗೆದುಕೊಳ್ಳಬೇಕು. ಯಾವುದೇ ವಿಜ್ಞಾನಕ್ಕೂ ಅಂಶಗಳು ಅತ್ಯಗತ್ಯ. ಅಂತೆಯೇ ಮನಶ್ಶಾಸ್ತ್ರಕ್ಕೂ ಈ ದತ್ತಾಂಶಗಳ ಗಣನೆ ಅತ್ಯಗತ್ಯ. ಮನಶ್ಶಾಸ್ತ್ರದ ಸಂಶೋಧನೆಯಲ್ಲಿ ತೊಡಗಿದಾಗ ಅವು ಅತ್ಯಂತ ಅಗತ್ಯವೆಂಬುದು ನಿರ್ವಿವಾದ. ಆದ್ದರಿಂದ ಈಗ ಕೆಲವು ಪ್ರಮುಖ ಮನಶ್ಶಾಸ್ತ್ರ ಪದ್ಧತಿಗಳನ್ನು ಪರಿಶೀಲಿಸೋಣ.

೧. ಅಂತರಾವಲೋಕನ ಪದ್ಧತಿ - Interospection Method

೨. ಪ್ರಾಯೋಗಿಕ ಪದ್ಧತಿ - Experimental Method

೩. ಕ್ಷೇತ್ರ ಮತ್ತು ಪ್ರಯೋಗಾಲಯ ಪದ್ಧತಿ - Field & Laboratory Method

೪. ಚಿಕಿತ್ಸಕ ಪದ್ಧತಿ - Clinical Method

೫. ವ್ಯತ್ಯಸ್ತ ಪದ್ಧತಿ - Differential Method

೬. ಅವಲೋಕನ ಪದ್ಧತಿ - Observation Method

೧. ಅಂತರಾವಲೋಕನ ಪದ್ಧತಿ - Interospection Method

''ಅಂತರಾವಲೋಕನ'' ಎಂದರೆ ''ಒಳನೋಟ'' ಎಂದರ್ಥ. ಮನಶ್ಶಾಸ್ತ್ರವು ತತ್ತ್ವಶಾಸ್ತ್ರದ ಒಂದು ಭಾಗವಾಗಿದ್ದ ಕಾಲಕ್ಕೆ ತತ್ವಜ್ಞಾನಿಗಳು ಮನಶ್ಶಾಸ್ತ್ರಾಧ್ಯಯನಕ್ಕೆ ಬಳಸುತ್ತಿದ್ದ ಅಂದರೆ ಮನಸ್ಸಿನ ಸ್ಥಿತಿಯನ್ನರಿಯಲು ಬಳಸುತ್ತಿದ್ದ ಏಕಮಾತ್ರ ಪದ್ಧತಿ ಎಂದರೆ **''ತನ್ನನ್ನು ತಾನು ಅರಿಯುವ ಪ್ರಯತ್ನ''**. ತನ್ನನ್ನು ತಾನು ಅರಿಯುವುದೆಂದರೆ ತನ್ನ ಮನಸ್ಸಿನ ಸ್ಥಿತಿಯನ್ನು ತಾನು ಅರಿಯುವುದು. ಒಂದು ಪ್ರತ್ಯೇಕವಾದ ಸ್ಥಿತಿಯಲ್ಲಿ ಮನಸ್ಸಿನ ಇರವನ್ನು ವ್ಯವಸ್ಥಿತ ರೀತಿಯಲ್ಲಿ ಅಧ್ಯಯನಕ್ಕೊಳಪಡಿಸುವ ಪದ್ಧತಿಯೇ ಅಂತರಾವಲೋಕನ ಪದ್ಧತಿ ಎನಿಸುವಂತಹುದಾಗಿದೆ. ಟಿಚ್‌ನರ್‌ನು ಇದನ್ನು ಒಂದು ವೈಜ್ಞಾನಿಕ ಮಟ್ಟಕ್ಕೆ ಕೊಂಡೊಯ್ಯುವುದರಲ್ಲಿ ಬಹಳ ಮಟ್ಟಿನ ಸಾಧನೆಯನ್ನು ನಡೆಸಿದವನಾಗಿದ್ದಾನೆ. ಪ್ರಾಯೋಗಿಕ ಹಂತಕ್ಕೆ ಅಂತರಾವಲೋಕನ ಪದ್ಧತಿಯನ್ನು ಕೊಂಡೊಯ್ದ ಕೀರ್ತಿ ಟಿಚ್‌ನರ್‌ನದು.

ಈ ಅಂತರಾವಲೋಕನ ಪದ್ಧತಿಯಲ್ಲಿ ಯಾವುದೇ ಗುಣದೋಷಗಳಿದ್ದಾಗ್ಯೂ ಮನಶ್ಶಾಸ್ತ್ರದ ಇತಿಹಾಸದಲ್ಲಿ ಅದು ಮಾನವನ ಬೌದ್ಧಿಕ ಚಟುವಟಿಕೆಗಳ ಅಧ್ಯಯನದಲ್ಲಿ ಪ್ರಮುಖ ಪಾತ್ರವನ್ನು ವಹಿಸುವಂಥಾದ್ದಾಗಿದೆ. ಆಧುನಿಕ ಮನಶ್ಶಾಸ್ತ್ರವು ಒಬ್ಬ ವ್ಯಕ್ತಿಯ ವರ್ತನೆಗೆ ಅವನ ಬೌದ್ಧಿಕ ಸ್ಥಿತಿಯೇ ಕಾರಣವೆಂಬುದನ್ನು ಒತ್ತಿ ಹೇಳುವಂಥದ್ದಾಗಿದೆ. ಆದ್ದರಿಂದ ಮನಶ್ಶಾಸ್ತ್ರಕ್ಕೆ ಅಂತರಾವಲೋಕನ ಪದ್ಧತಿಯ ಕೊಡುಗೆಯನ್ನು ಕಡೆಗಣಿಸುವಂತಿಲ್ಲ.

ಇದರ ಗುಣದೋಷಗಳು :

ಗುಣಗಳು ಅಥವಾ ಮೆರಿಟ್ಸ್ :

೧. ಈ ಪದ್ಧತಿಗೆ ಯಾವೊಂದು ಉಪಕರಣವೂ ಬೇಕಾಗಿಲ್ಲ. ಆದ ಕಾರಣ ಯಾವ ಖರ್ಚೂ ಇಲ್ಲ.

೨. ಇದಕ್ಕೆ ಯಾವುದೇ ನಿಯಮಗಳ ಬಂಧನವಿಲ್ಲ.

೩. ಇದು ತನ್ನತನವನ್ನು ತಾನೇ ಅವಲೋಕನಗೈದುಕೊಳ್ಳುವುದರಿಂದ ಇದಕ್ಕೆ ಯಾರ ನೆರವೂ ಬೇಕಾಗಿಲ್ಲ.

೪. ಇದು ಎಲ್ಲ ಸ್ಥಳಗಳಲ್ಲಿ ಮತ್ತು ಎಲ್ಲ ಕಾಲಗಳಲ್ಲಿ ಎಲ್ಲರೂ ಅನುಷ್ಠಾನಕ್ಕೆ ತರುವಂಥದ್ದಾಗಿದೆ.

೫. ಈ ಪದ್ಧತಿಯು ನೇರವಾಗಿ ತಕ್ಷಣದಲ್ಲಿಯೇ ವರ್ತನೆಯೊಂದರ ಮೊದಲ ಅನುಭವವನ್ನು ತಿಳಿಸುವಂಥದು.

೬. ನಾವು ಇತರರಿಗೆ ಹೇಳಲಿಚ್ಛಿಸುವಂಥ ಅನೇಕ ರೀತಿಯ ಭಾವೋದ್ರೇಕಗಳನ್ನು ಅಧ್ಯಯನ ಮಾಡಿಕೊಳ್ಳಲು ಅನುಕೂಲ.

೭. ಇದು ವ್ಯಕ್ತಿ ತನ್ನನ್ನು ತಾನೇ ಸರಿಪಡಿಸಿಕೊಳ್ಳಲು, ಸುಧಾರಿಸಿಕೊಳ್ಳಲು ಸಹಾಯ ಮಾಡುತ್ತದೆ. ಉದಾ : ಉಪಾಧ್ಯಾಯನು ತನ್ನ ಹಿಂದಿನ ಪಾಠ ಚೆನ್ನಾಗಿ ಬಂದಿತೆ ? ಬಂದಿದ್ದರೆ ಅದನ್ನು ಇನ್ನೂ ಉತ್ತಮ ಪಡಿಸುವುದು ಹೇಗೆ ? ಚೆನ್ನಾಗಿ ಬಾರದಿದ್ದರೆ ಯಾವ ಕಾರಣದಿಂದ ಕೆಟ್ಟುಹೋಯಿತು ? ಯಾವ ಕೌಶಲ್ಯದಿಂದ ತನ್ನ ಬೋಧನೆಯನ್ನು ಸುಧಾರಿಸಿಕೊಳ್ಳಬಹುದು ? ತನ್ನ ವರ್ತನೆ ಮಕ್ಕಳಿಗೆ ಹಿಡಿಸುತ್ತಿಲ್ಲ ಏಕೆ ? ಹಿಡಿಸುವಂತೆ ಮಾಡಲು ನಾನು ಯಾವ ರೀತಿಯ ಕೌಶಲ್ಯವನ್ನು ಬೆಳೆಸಿಕೊಳ್ಳಬೇಕು? ಎಂಬಿತ್ಯಾದಿಗಳೆಲ್ಲಕ್ಕೂ ಅಂತರಾವಲೋಕನ ಪದ್ಧತಿ ಅತ್ಯಂತ ಸಹಾಯಕಾರಿ.

೮. ಈ ಪದ್ಧತಿ ಉಳಿದೆಲ್ಲ ಪದ್ಧತಿಗಳಿಗೆ ತಳಹದಿ ಮತ್ತು ಉಳಿದ ಪದ್ಧತಿಗಳನ್ನು ಸರಿಯಾದ ರೀತಿಯಲ್ಲಿ ಅಧ್ಯಯನ ಮಾಡಲು ಕೆಲವು ಅಂಶಗಳನ್ನು ಇದು ಸೂಚಿಸುತ್ತದೆ.

ಇದರ ಇತಿಮಿತಿಗಳು - Limitations

೧. ಈ ಪದ್ಧತಿಯಲ್ಲಿ ನೋಡುವ ವಸ್ತು ನೋಡುವವ ಒಬ್ಬನೇ ವ್ಯಕ್ತಿ. ಬುದ್ಧಿ ಅಥವಾ ಮನಸ್ಸು ಅವಲೋಕನದ ಒಂದು ಕ್ಷೇತ್ರವೂ ಹೌದು. ಈ ಬುದ್ಧಿ ಅಥವಾ ಮನಸ್ಸು ತನ್ನ ಕಾರ್ಯ ಹೇಗೆ ನಡೆಯುತ್ತಿದೆ ಎಂಬುದನ್ನು ಅಧ್ಯಯನ ಮಾಡಬೇಕಾಗುತ್ತದೆ. ಹೀಗೆ ಬುದ್ಧಿ ಅಥವಾ ಮನಸ್ಸು ತನ್ನ ಕಾರ್ಯವನ್ನು ತಾನೇ ವಿಮರ್ಶಿಸಿಕೊಳ್ಳುವಾಗ ಅಥವಾ ಅಧ್ಯಯನ ಮಾಡುವಾಗ ಯಾವ ಒಂದು ಮನಸ್ಸಿನ ಸ್ಥಿತಿಯನ್ನು ಅಧ್ಯಯನ ಮಾಡಲಿಚ್ಛಿಸುತ್ತೇವೋ ಆ ಸ್ಥಿತಿಯಲ್ಲಿ ಇರಬೇಕಾಗಿದ್ದ ಭಾವನೆಗಳು ಉದ್ವೇಗಗಳು ಮಾಯವಾಗುತ್ತವೆ.

೨. ಬುದ್ಧಿ ಅಥವಾ ಮನಸ್ಸು ಎಂಬುದು ಒಂದು ಇಡಿಯಾದ ವಸ್ತು. ಅದು ಒಂದು ಕಾಲಕ್ಕೆ ಒಂದು ಚಟುವಟಿಕೆಯನ್ನು ಮಾತ್ರ ದರ್ಶಿಸಬಲ್ಲುದು. ಅದು ಚಟುವಟಿಕೆಯೊಂದರ ಅನುಭವವನ್ನು ದರ್ಶಿಸುವ ವೇಳೆಗೆ ಆ ಚಟುವಟಿಕೆಯ

ವಾಸ್ತವ ಸ್ಥಿತಿ ಜಾರಿಹೋಗಿರುತ್ತದೆ. ಆದ್ದರಿಂದ ಅಂತರಾವಲೋಕನವೆನ್ನುವುದು ಕೇವಲ ಹಿಂದಿನ ನೆನಪುಗಳನ್ನು ತಂದುಕೊಡುವಂತಹುದಾಗಿದೆ.

೩. ಈ ಪದ್ಧತಿಯನ್ನು ಎಲ್ಲರೂ ಅನುಸರಿಸಲು ಬರುವಂತಹುದಲ್ಲ. ಮಕ್ಕಳು, ಹುಚ್ಚರು ಇದನ್ನು ಮಾಡಲು ಸಾಧ್ಯವಿಲ್ಲ.

೪. ಇದು ವೈಜ್ಞಾನಿಕವಾದುದಲ್ಲ. ಏಕೆಂದರೆ ಅದರ ಸ್ಥಿತಿ ಕ್ಷಣಕ್ಷಣಕ್ಕೂ ವ್ಯತ್ಯಾಸವಾಗುವಂತಹುದು.

೫. ಅದು ವೈಯ್ಯಕ್ತಿಕ ವಾಸನೆಯಿಂದ ಕೂಡಿದ್ದು, ನಿಷ್ಪಕ್ಷಪಾತಿಯಾದುದಲ್ಲ.

ತರಗತಿಯಲ್ಲಿ ಅಂತರಾವಲೋಕನ ಪದ್ಧತಿಯ ಉಪಯುಕ್ತತೆ :

ಅಂತರಾವಲೋಕನ ಪದ್ಧತಿಯು ಮೇಲಿನ ದೋಷಗಳಿಂದ ಕೂಡಿದ್ದಾಗ್ಯೂ ಅದು ಅಧ್ಯಾಪಕನಿಗೆ ಬಹಳ ಉಪಯುಕ್ತವಾದುದು. ಈ ಪದ್ಧತಿಯನ್ನು ಮಕ್ಕಳಿಗೂ ತಿಳಿಯಪಡಿಸಿ ಅದರ ಅಭ್ಯಾಸಕ್ಕೆ ಮಕ್ಕಳನ್ನು ಒಳಗುಮಾಡಿದ್ದೇ ಆದರೆ, ಮಕ್ಕಳು ಭಾವೋದ್ವೇಗಗಳಿಗೆ ಒಳಗಾಗುವುದನ್ನು ತಪ್ಪಿಸಬಹುದು. ಅವರ ತಪ್ಪುಗಳನ್ನು ಅವರೇ ಸರಿಪಡಿಸಿಕೊಳ್ಳುವಂತೆ ಮಾಡಬಹುದು. ಏಕೆಂದರೆ ಅದು ಬೌದ್ಧಿಕ ಸ್ಥಿತಿಯನ್ನು ಮತ್ತು ತನ್ಮೂಲಕ ಉಂಟಾಗುವ ವರ್ತನೆಯನ್ನು ಅಧ್ಯಯನ ಮಾಡುವಂಥಾದ್ದಾಗಿದೆ. ಅಂತೆಯೆ ಉಪಾಧ್ಯಾಯರೂ ಸಹ ತನ್ನ ಪಾಠದ ಜಯಾಪಜಯಗಳನ್ನು ಮತ್ತು ಅವುಗಳಿಗೆ ಕಾರಣಗಳನ್ನು ತನಗೆ ತಾನೆ ಗುರುತಿಸಿಕೊಳ್ಳಲು ಈ ಪದ್ಧತಿ ಅತ್ಯಂತ ಸಹಾಯಕಾರಿ. ಮಕ್ಕಳಲ್ಲಿ ಉಂಟಾಗಬಹುದಾದ ಅಶಿಸ್ತಿನ ಕಾರಣಗಳನ್ನು ಕಂಡುಕೊಳ್ಳಲು ಈ ಪದ್ಧತಿ ಸ್ವಲ್ಪಮಟ್ಟಿಗೆ ಸಹಾಯ ನೀಡುತ್ತದೆ. ಉಪಾಧ್ಯಾಯನು ತಾನು ಮಕ್ಕಳೊಂದಿಗೆ ಶಾಲೆಯಲ್ಲಿ ತನ್ನ ಸಹೋದ್ಯೋಗಿಗಳೊಂದಿಗೆ ಹೇಗೆ ವರ್ತಿಸಬೇಕೆಂಬುದಕ್ಕೆ ತನ್ನ ವರ್ತನೆಗಳನ್ನು ತಾನೇ ಅಂತರಾವಲೋಕನಗೈದುಕೊಳ್ಳುವ ಪದ್ಧತಿ ಅತ್ಯಂತ ಹೆಚ್ಚಿನ ಪರಿಣಾಮಕಾರಿ. ಅದರಂತೆಯೆ ಉಪಾಧ್ಯಾಯನು ಮಕ್ಕಳಿಗೆ ತಮ್ಮನ್ನು ತಾವೇ ಅಭ್ಯಾಸಗೈಯ್ಯುವ ವಿಧಾನದಲ್ಲಿ ತರಬೇತಿಯನ್ನು ಕೊಡಬಹುದು. ಈ ರೀತಿಯ ತರಬೇತಿಯಿಂದ ಪ್ರತಿಯೊಬ್ಬ ವ್ಯಕ್ತಿ ತನ್ನ ತಪ್ಪುಗಳನ್ನು ತಾನೇ ಕಂಡುಕೊಂಡು ತಿದ್ದಿಕೊಳ್ಳಲು ಪ್ರಯತ್ನಿಸುವಂತಾಗುತ್ತದೆ. ದೋಷಮುಕ್ತ ವ್ಯಕ್ತಿ ಎನ್ನಿಸಿಕೊಂಡು ಬಾಳಬೇಕೆಂಬ ಆಕಾಂಕ್ಷೆಯನ್ನು ಅದು ಮೂಡಿಸುತ್ತದೆ. ಹಿಂದಿನ ಕಹಿ ಅನುಭವಗಳು ಮುಂದಿನ ಸಿಹಿ ಅನುಭವಗಳಿಗೆ ಮೆಟ್ಟಿಲಾಗುತ್ತವೆ. ಆದ್ದರಿಂದ ಈ ಪದ್ಧತಿ ತರಗತಿಯಲ್ಲಿ ಉಪಾಧ್ಯಾಯರಿಗೆ ಮತ್ತು ವಿದ್ಯಾರ್ಥಿಗಳಿಗೆ ಅತ್ಯಂತ ಸಹಾಯಕಾರಿ. ಉಪಾಧ್ಯಾಯ ತನ್ನ ತರಗತಿಯ ಬೋಧನೆಯ ಹಿಂದಿನ ನೆನಪುಗಳನ್ನು ಮಾಡಿಕೊಳ್ಳುವುದರಿಂದ

ಮುಂದಿನ ಬೋಧನೆಗೆ ಅದು ಅತ್ಯಂತ ಸಹಾಯ ಮಾಡುತ್ತದೆ. ಅಂತರಾವಲೋಕನವು ಪೂರ್ವಾವಲೋಕನವೂ ಆಗಬಹುದು.

೨. ಪ್ರಾಯೋಗಿಕ ಪದ್ಧತಿ - Experimental Method

ನಮಗೆ ತಿಳಿದಂತೆ ಮನಶ್ಶಾಸ್ತ್ರದ ಮೊದಲದಿನಗಳಲ್ಲಿ ಮನಶ್ಶಾಸ್ತ್ರದಲ್ಲಿ ವೈಜ್ಞಾನಿಕ ಪ್ರಯೋಗಗಳು ಇರುವುದು ಕಂಡುಬರುವುದಿಲ್ಲ. ಕಾಲಕಳೆದಂತೆ ಮನಶ್ಶಾಸ್ತ್ರದಲ್ಲಿ ತನ್ನದೇ ಆದ ಒಂದು ಬೆಳವಣಿಗೆಗೆ ಪೋಷಕವಾಗಿ ಮನಶ್ಶಾಸ್ತ್ರದ ಅಂಕಿಅಂಶಗಳನ್ನು ಸಂಗ್ರಹಿಸುವ ಒಂದು ವಿಧಾನ ಅಸ್ತಿತ್ವಕ್ಕೆ ಬಂತು. ನಂಬಿಕೆಗೆ ಅರ್ಹರಾದ ಜನತೆಯಿಂದ ಘಟನೆಯೊಂದಕ್ಕೆ ಸಂಬಂಧಿಸಿದ ಅಂಕಿ ಅಂಶಗಳ ದಾಖಲೆಯನ್ನು ಸಂಗ್ರಹಿಸಲು ಮೊದಲಾಯ್ತು. ಈ ಒಂದು ಪ್ರತ್ಯೇಕವಾದ ಚರಿತ್ರಾಂಶಗಳನ್ನು ದಂತಕಥೆಗಳ ವಿಧಾನ ಎಂದು ಕರೆಯಲಾಗಿದೆ. ಈ ಚರಿತ್ರಾಂಶಗಳ ವಿಧಾನ ಅಷ್ಟಕ್ಕೆ ನಿಲ್ಲದೆ ಪ್ರಾಯೋಗಿಕ ತಂತ್ರಗಳವರೆಗೆ ಬೆಳವಣಿಗೆಯನ್ನು ಪಡೆಯಬೇಕು.

ವೂಂಟ್ (೧೮೩೨-೧೯೨೦) ಒಬ್ಬ ಜರ್ಮನ್ ಮನಶಾಸ್ತ್ರಜ್ಞ. ಈತನು ಪ್ರಥಮಬಾರಿಗೆ 'ಲೆಪ್‌ಸಿಗ್' ಎನ್ನುವ ಸ್ಥಳದಲ್ಲಿ ಮೊಟ್ಟಮೊದಲನೆಯದಾಗಿ ಮನಶ್ಶಾಸ್ತ್ರದ ಪ್ರಯೋಗಶಾಲೆಯನ್ನು ತೆರೆದನು. ೧೮೮೯ರಲ್ಲಿ ಮನಶ್ಶಾಸ್ತ್ರದ ಮೊದಲ ಪ್ರಯೋಗಗಳು ಮನೋವ್ಯಾಪಾರಗಳಿಗೆ ಸಂಬಂಧಿಸಿದ ಅಂದರೆ ನೆನಪು ಅಥವಾ ಸ್ಮರಣೆಯ ಪ್ರಮಾಣರೇಖಾ ಪ್ರತಿಕ್ರಿಯಾ ವೇಳೆ (Reaction time) ಮತ್ತು ಸಂವೇದನೆಯ ವಿನ್ಯಾಸ (Sensory phenomena)ಗಳನ್ನು ಕುರಿತವುಗಳಾಗಿರುತ್ತಿದ್ದವು. ವೂಂಟನ ಪ್ರಯತ್ನದಿಂದ ನೂತನವಾದ ಈ ಪ್ರಾಯೋಗಿಕ ಪದ್ಧತಿಯು ತ್ವರಿತಗತಿಯಲ್ಲಿ ಬೆಳೆಯತೊಡಗಿತು. ಮನಶ್ಶಾಸ್ತ್ರಕ್ಕೆ ಸಂಬಂಧಿಸಿದ ದತ್ತಾಂಶಗಳನ್ನು ಸಂಗ್ರಹಿಸಲು ಅದು ಅತ್ಯಂತ ಸಹಾಯಕವಾಯ್ತು. ಮನಶ್ಶಾಸ್ತ್ರಜ್ಞರು ಈ ಪ್ರಾಯೋಗಿಕ ಪದ್ಧತಿಗೆ ಶಾರೀರಿಕಶಾಸ್ತ್ರ ಮತ್ತು ಭೌತಶಾಸ್ತ್ರಗಳಿಂದಲೂ ತಾಂತ್ರಿಕ ಕೌಶಲ್ಯಗಳನ್ನುಳ್ಳವುಗಳಾಗಿವೆ.

ಪ್ರಾಯೋಗಿಕ ಪದ್ಧತಿಯು ಅನೇಕ ಅವಲಂಬಿತ ಪದ್ಧತಿಗಳನ್ನು ತನ್ನಲ್ಲಿ ಒಳಪಡಿಸಿಕೊಂಡುದಾಗಿದೆ.

೧. ಪ್ರಥಮತಹ ಪ್ರಯೋಗಕ್ಕೆ ಒಳಪಡಿಸುವ ವಸ್ತು ಅಥವಾ ವಿಷಯದ ಆಯ್ಕೆಯ ವಿಧಾನವನ್ನು ಅಧ್ಯಯನ ಮಾಡಬೇಕು. ಈ ರೀತಿ ಆಯ್ಕೆ ಮಾಡುವ ವಸ್ತು ಅಥವಾ ವಿಷಯದಲ್ಲಿಯೂ ಸಹ ಒಂದು ನಿರ್ದಿಷ್ಟವಾಗಿ ಗೊತ್ತುಪಡಿಸಿದ ಯೋಜನೆಯನ್ನು ತಯಾರಿಸಿಕೊಳ್ಳಬೇಕು. ಈ ರೀತಿಯ ಯೋಜನೆಯು ಆಯಾ

ಪ್ರಯೋಗದ ಸ್ವಭಾವ ಮತ್ತು ಉದ್ದೇಶಕ್ಕನುಗುಣವಾಗಿರಬೇಕು. ಉದಾಹರಣೆಗೆ ಒಂದು ಪ್ರತ್ಯೇಕವಾದ ಸಮಸ್ಯೆಯೊಂದಕ್ಕೆ ಸಮಾಜವೊಂದರ ವರ್ತನೆ ಅಥವಾ ಪ್ರತಿಕ್ರಿಯೆ ಏನೆಂಬುದನ್ನು ಅವಲೋಕಿಸಲು ತೊಡಗಿದ್ದೇ ಆದರೆ ಆ ರೀತಿಯ ಅವಲೋಕನ ಆ ಒಂದು ಸಮಾಜದ ಹೆಚ್ಚಿನ ಸಂಖ್ಯೆಯುಳ್ಳ ಒಂದು ಗುಂಪನ್ನು ತೆಗೆದುಕೊಂಡರೆ ಸಾಲದು. ಆ ಗುಂಪು ಎಷ್ಟೇ ದೊಡ್ಡದಾಗಿರಲಿ ಆ ರೀತಿ ಆಯ್ಕೆಯಾದ ಸ್ಯಾಂಪಲ್‌ಗೆ ಒಳಗಾದವರೆಲ್ಲರೂ ಸಾಮಾನ್ಯವಾದ ಒಂದೇ ಅಭಿಪ್ರಾಯ ತಳೆದವರಾಗಿರುತ್ತಾರೆ. ಇನ್ನೊಂದು ಮಾತಿನಲ್ಲಿ ಹೇಳುವುದಾದರೆ ನಾವು ಆಯ್ಕೆ ಮಾಡಿಕೊಂಡ ಸ್ಯಾಂಪಲ್ ಗುಂಪು - ನಾವು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಇಡೀ ಸಮಾಜದ ಸಮುದಾಯ ಎನಿಸುವುದಿಲ್ಲ. ಆದ್ದರಿಂದ ಈ ರೀತಿ ಪ್ರಯೋಗಕ್ಕೆ ಒಳಪಡುವ ವಸ್ತುವಿನ ಆಯ್ಕೆಯಲ್ಲಿ ಅಂಕಿಅಂಶಗಳ ವಿಧಾನ (Statistical method)ವನ್ನು ಅನುಸರಿಸಬೇಕು. ಈ ರೀತಿ ಮುನ್ನೆಚ್ಚರಿಕೆಯಿಂದ ಆಯ್ಕೆ ಮಾಡಿದ ವಸ್ತು ವಿಷಯವನ್ನು ಪ್ರಯೋಗಕ್ಕೆ ಒಳಪಡಿಸುವುದರಿಂದ ನಿಖರವಾದ ಫಲಿತಾಂಶಗಳನ್ನು ಪಡೆಯಲು ಸಹಾಯಕವಾಗುತ್ತದೆ. ಆದ್ದರಿಂದ ಮನಶ್ಶಾಸ್ತ್ರದಲ್ಲಿ ಪ್ರಾಯೋಗಿಕ ಪದ್ಧತಿಯನ್ನು ಮಾಡುವಲ್ಲಿ ಮೊಟ್ಟಮೊದಲನೆಯದಾಗಿ ವಹಿಸಬೇಕಾದ ಎಚ್ಚರಿಕೆ ಅದು. ಅಂದರೆ ವಸ್ತುವನ್ನು ಎಚ್ಚರಿಕೆಯಿಂದ ಆಯ್ಕೆ ಮಾಡಿಕೊಳ್ಳಬೇಕು.

೨. ಪ್ರಾಯೋಗಿಕ ಸಂಶೋಧನೆಗೆ ತೊಡಗಿದಾಗ ಪ್ರಯೋಗಕ್ಕೊಳಗಾದ ವಸ್ತುವಿಷಯ ಬಾಹ್ಯ ಪ್ರಚೋದನೆಗೆ ಒಳಗಾಗದಂತೆ ಹತೋಟಿಯಲ್ಲಿಡಬೇಕು. ಇದಕ್ಕಾಗಿ ಅನುಕೂಲಕರವಾದ ವಿಧಾನಗಳನ್ನು ಕಂಡುಕೊಳ್ಳಬೇಕು. ಈ ಮಾತು ಸಂವೇದನೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಅಧ್ಯಯನ ಮಾಡುವಲ್ಲಿಯೂ ಸತ್ಯ ಮತ್ತು ಅತ್ಯುನ್ನತ ಮನಶ್ಶಾಸ್ತ್ರೀಯ ಸಮಸ್ಯೆಗಳಿಗೆ ಸಂಬಂಧಿಸಿದಂತೆಯೂ ಸತ್ಯ. ಉದಾ: ಪ್ರತ್ಯೇಕವಾದ ಪ್ರಚೋದನೆಯ ಶಬ್ದವೊಂದಕ್ಕೆ ರಸಭಾವದ ಪ್ರತಿಕ್ರಿಯೆಯೊಂದನ್ನು ನಾವು ಅಧ್ಯಯನ ಮಾಡಬೇಕಾಗಿದ್ದಲ್ಲಿ ಮೊದಲು ನಾವು ಯಾವುದೇ ರೀತಿಯ ಆವೇಶಭರಿತವಾದ ಮತ್ತು ಬಾಹ್ಯ ಆಚರಣೆಗಳಿಲ್ಲದಂತಹ ವಾತಾವರಣವನ್ನು ನಿರ್ಮಿಸಿಕೊಳ್ಳಬೇಕು.

೩. ಅನುಕೂಲಕರವಾಗಿ ಹೊಂದಿಕೊಳ್ಳುವ ಟೆಸ್ಟ್ ಮತ್ತು ಉಪಕರಣಗಳನ್ನು ಪ್ರತಿಯೊಂದು ಪ್ರಯೋಗದಲ್ಲಿಯೂ ಉದ್ದೇಶಿತ ಗುರಿಯನ್ನು ಸಾಧಿಸಲು ಉಪಯೋಗಿಸಬೇಕು. ನಾವು ಬುದ್ಧಿವಂತಿಕೆಯ ಮಾಪನವನ್ನು ಮಾಡಬೇಕಾದರೆ ಬೆಲೆಯುಳ್ಳ ಮತ್ತು ನಂಬಲರ್ಹವಾದಂತಹ ಬುದ್ಧಿವಂತಿಕೆಯ ಪರೀಕ್ಷೆಗಳನ್ನು ನಡೆಸಬೇಕು. ನಾವು ವ್ಯಕ್ತಿಯ ಲಕ್ಷಣಗಳನ್ನು ಅಧ್ಯಯನ ಮಾಡಬೇಕಾಗಿದ್ದಲ್ಲಿ ಅದಕ್ಕನುಗುಣವಾದ ಉದ್ದೇಶಗಳನ್ನು ಕಂಡುಕೊಳ್ಳಬೇಕು.

೪. ಪ್ರಯೋಗಕ್ಕೊಳಗಾದ ವ್ಯಕ್ತಿಗಳನ್ನು ಅಥವಾ ವಸ್ತುವಿಷಯಗಳನ್ನು ಪ್ರಚೋದನ ಸ್ಥಿತಿಯಲ್ಲಿಡಲು ಉಪಾಯಗಳನ್ನು ಕಂಡುಕೊಳ್ಳಬೇಕು. ಏಕೆಂದರೆ ಇದು ಮನಶ್ಶಾಸ್ತ್ರದ ಪ್ರಯೋಗಗಳಲ್ಲಿ ಅತ್ಯಂತ ಪ್ರಮುಖವಾದ ಅಂಶ. ಒಂದು ಗುಂಡಿಯ ನ್ನೊತ್ತುವುದರ ಮೂಲಕ ನಾವು ವಿದ್ಯುತ್ತನ್ನು ಪಡೆಯುವ ರೀತಿಯಲ್ಲಿ ವ್ಯಕ್ತಿಯನ್ನು ಪ್ರಚೋದನೆಗೆ ಒಳಪಡಿಸುವುದು ಕಷ್ಟಸಾಧ್ಯವಾದ ಕೆಲಸ. ಮಾನವರ ಮೇಲೆ ಮಾಡುವ ಪ್ರಯೋಗಗಳಲ್ಲಿ ಅವರ ಸಂಪೂರ್ಣ ಸಹಕಾರವಿರಬೇಕು ಮತ್ತು ಅವರು ಪ್ರಚೋದನೆಗೊಳ್ಳುವಂತಹ ವಾತಾವರಣವನ್ನು ನಿರ್ಮಿಸಬೇಕು. ಈ ರೀತಿಯ ಪ್ರಚೋದಿತ ವಾತಾವರಣವಿಲ್ಲದೆಯೇ ಮಾಡುವ ಪ್ರಯೋಗಗಳಿಂದ ಸರಿಯಾದ ಫಲಿತಾಂಶಗಳನ್ನು ಪಡೆಯಲಾಗುವುದಿಲ್ಲ. ಆದ ಕಾರಣ ಈ ಅಂಶದತ್ತ ಪ್ರಯೋಗ ನಡೆಸುವ ವ್ಯಕ್ತಿ ತುಂಬಾ ಜಾಗ್ರತೆ ವಹಿಸಬೇಕು.

೫. ಪ್ರಯೋಗಕ್ಕೊಳಗಾದ ವ್ಯಕ್ತಿಯಲ್ಲಿ ಉಂಟಾಗಬಹುದಾದ ಬದಲಾವಣೆಗಳು ಚೆನ್ನಾಗಿ ಗೊತ್ತಿರಬೇಕು. ಬಹುತೇಕ ಪ್ರಯೋಗಗಳಿಗೆ ಇದು ಅತ್ಯವಶ್ಯಕ. ಆದ್ದರಿಂದ ಈ ರೀತಿ ಶಾರೀರಿಕವಾಗಿ ಉಂಟಾಗಬಹುದಾದ ಬದಲಾವಣೆಗಳನ್ನು ಗುರುತಿಸಲು ಉಪಾಯಗಳನ್ನು ಕಂಡುಕೊಳ್ಳಬೇಕು - ರಸಭಾವಗಳ ಅಧ್ಯಯನದಲ್ಲಿ, ಉದಾ : ನಾಡಿ ಬಡಿತ, ಉಸಿರಾಟ ಇತ್ಯಾದಿಗಳು ಪ್ರಮುಖವಾದ ಸೂಚನೆಗಳನ್ನು ಕೊಡುತ್ತವೆ.

೬. ವ್ಯಕ್ತಿ ಅಥವಾ ಸಬ್ಜೆಕ್ಟ್‌ನ ಬಾಹ್ಯವರ್ತನೆಯನ್ನು ಅವಲೋಕಿಸಲು ಮತ್ತು ಗುರುತಿಸಲು ವಿಧಾನಗಳನ್ನು ಕಂಡುಕೊಳ್ಳಬೇಕು. ಕೈಮೋಗ್ರಾಫ್ಸ್, ಎಲೆಕ್ಟ್ರಿಕಲ್ ಕೌಂಟರ್ಸ್, ಕ್ರೋನೋಸ್ಕೋಪ್ ಇತ್ಯಾದಿಗಳೆಲ್ಲವನ್ನು ಈ ಸಂದರ್ಭದಲ್ಲಿ ಸ್ವತಂತ್ರವಾಗಿ ಉಪಯೋಗಿಸಬೇಕು.

೭. ಬಹುತೇಕ ಪ್ರಯೋಗಗಳಲ್ಲಿ ಪ್ರಯೋಗಕ್ಕೊಳಗಾದ ವ್ಯಕ್ತಿಯ ಮಾತಿನ ವರದಿಯನ್ನು ಅಥವಾ ಅಂತರಾವಲೋಕಿತ ಅಂಕಿಅಂಶಗಳನ್ನು ಪಡೆದುಕೊಳ್ಳಬೇಕು.

೮. ಕೊನೆಯದಾಗಿ ಸಂಗ್ರಹಿಸಿದ ಅಂಕಿಅಂಶಗಳನ್ನು ವಿಶ್ಲೇಷಿಸುವ ಮತ್ತು ಪ್ರತಿಪಾದಿಸುವ ವಿಧಾನಗಳನ್ನು ಕಂಡುಕೊಳ್ಳಬೇಕು. ಇಂಥಲ್ಲಿ ಸಂಖ್ಯಾಶಾಸ್ತ್ರದ ಉಪಯುಕ್ತತೆ ಅತಿ ಹೆಚ್ಚಿನದಾಗಿದೆ.

ಪ್ರಾಯೋಗಿಕ ಪದ್ಧತಿಯನ್ನು ಅನುಸರಿಸುವಲ್ಲಿ ನೆನಪಿಸಬೇಕಾದ ಅಂಶಗಳು.

೧. ಸಮಸ್ಯೆಯನ್ನು ಚೊಕ್ಕಟವಾಗಿ ವಿವರಿಸಬೇಕು.

೨. ಸರಿಯಾದ ವಸ್ತುವನ್ನು ಆಯ್ದುಕೊಳ್ಳಬೇಕು.

೩. ಪರಿಸ್ಥಿತಿ ಅಥವಾ ಸನ್ನಿವೇಶವನ್ನು ಸರಿಯಾಗಿ ಅಳವಡಿಸಬೇಕು.

೪. ಅನವಶ್ಯಕ ಅಂಶಗಳನ್ನು ಹತೋಟಿಗೊಳಪಡಿಸಬೇಕು.

೫. ಕೊಡುವ ತಿಳುವಳಿಕೆಗಳು ಚೊಕ್ಕವಾಗಿ ಮತ್ತು ಚಿಕ್ಕದಾಗಿರಬೇಕು.

೬. ಅಂತರಾವಲೋಕನ ವರದಿಯನ್ನು ಗಣನೆಗೆ ತೆಗೆದುಕೊಳ್ಳಬೇಕು.

೭. ಪ್ರಯೋಗ ಮಾಡುವವನು ಯಾವುದೇ ವಿಧವಾದ ಪೂರ್ವಗ್ರಹ ಪೀಡೆಗೆ ಒಳಗಾಗದವನಾಗಿರಬೇಕು.

ಮೆರಿಟ್ಸ್ :

೧. ಅದು ತುಂಬ ವಾಸ್ತವಿಕವಾದ ಮತ್ತು ನಿಖರವಾದ ಪದ್ಧತಿ.

೨. ಅದು ನಂಬಲರ್ಹವಾದದ್ದು ಮತ್ತು ಬೆಲೆಯುಳ್ಳದ್ದು.

೩. ಮನಶ್ಶಾಸ್ತ್ರದ ಪದ್ಧತಿಗಳಲ್ಲೆಲ್ಲ ವೈಜ್ಞಾನಿಕವಾದ ಪದ್ಧತಿ ಇದೊಂದೆ.

೪. ಮನಶ್ಶಾಸ್ತ್ರವನ್ನು ವೈಜ್ಞಾನಿಕ ಸ್ಪಷ್ಟತೆಗೆ ಏರಿಸಿದ ಒಂದೇ ಒಂದು ಪದ್ಧತಿ.

೫. ಇದು ಮನಶ್ಶಾಸ್ತ್ರ ಕ್ಷೇತ್ರವನ್ನು ವಿಸ್ತಾರಗೊಳಿಸಿ ಹೆಚ್ಚಿನ ಜ್ಞಾನವನ್ನು ತುಂಬಿ ಹೊಸಹೊಸ ಅನ್ವೇಷಣೆಗೆ ಅವಕಾಶ ಮಾಡಿಕೊಟ್ಟಿರುವಂಥದ್ದಾಗಿದೆ.

೬. ಇದರ ತೀರ್ಮಾನಗಳನ್ನು ಪರೀಕ್ಷಿಸಲು ಸಾಧ್ಯ. ಮನಶ್ಶಾಸ್ತ್ರದಲ್ಲಿ ಇರುವ ಕೆಲವು ಅಳತೆಮಾನಗಳಿಗೂ ಇದು ಕಾರಣೀಭೂತವಾಗಿದೆ.

ಇತಿಮಿತಿಗಳು : (Limitations)

೧. ಇದಕ್ಕೆ ಖರ್ಚು ಹೆಚ್ಚು-ಬೆಲೆಬಾಳುವ ಉಪಕರಣಗಳಿಂದ ಕೂಡಿದ ಸುಸಜ್ಜಿತವಾದ ಪ್ರಯೋಗಾಲಯ ಅತ್ಯವಶ್ಯಕ.

೨. ಈ ಪ್ರಯೋಗವನ್ನು ನಡೆಸಲು ಅರಿತು ನುರಿತ, ತರಬೇತಿ ಹೊಂದಿದ ಮನಶ್ಶಾಸ್ತ್ರಜ್ಞರೇ ಬೇಕು.

೩. ಮನಶ್ಶಾಸ್ತ್ರದ ಎಲ್ಲ ವಿನ್ಯಾಸಗಳನ್ನು ಅಥವಾ ವರ್ತನೆಯ ಎಲ್ಲಾ ಅಂಶಗಳನ್ನು ಪ್ರಯೋಗಗಳ ಮೂಲಕ ಅಧ್ಯಯನ ಮಾಡಲು ಶಕ್ಯವಿಲ್ಲ.

೪. ಇದು ಕಾಲ ಮತ್ತು ಶಕ್ತಿಗಳನ್ನು ಹೆಚ್ಚುಹೆಚ್ಚಾಗಿ ವಿನಿಯೋಗಿಸಿಕೊಳ್ಳುವುದು.

೫. ಇದು ವಾಸ್ತವಿಕಾಂಶಗಳನ್ನು ಗಣನೆಗೆ ತೆಗೆದುಕೊಳ್ಳುವಂಥ ಪ್ರಯೋಗ

ವಾದರೂ ಅದರ ಫಲಿತಾಂಶಗಳು ಪ್ರಯೋಗ ಮಾಡುವವನ ವೈಯಕ್ತಿಕ ವಾಸನೆ ಮತ್ತು ಬಣ್ಣಗಳಿಂದ ಕೂಡಿರಲಿಕ್ಕೆ ಸಾಧ್ಯ.

ತರಗತಿಯಲ್ಲಿ ಪ್ರಾಯೋಗಿಕ ಪದ್ಧತಿಯ ಉಪಯುಕ್ತತೆ

ಪ್ರಾಯೋಗಿಕ ಪದ್ಧತಿಯು ಶಾಲಾಕಾಲೇಜುಗಳಲ್ಲಿ ಬಹುತೇಕವಾಗಿ ಉಪಯೋಗಿಸುವಂತಹುದಾಗಿದೆ. ವಿದ್ಯಾರ್ಥಿಗಳ ಆಯ್ಕೆಯಲ್ಲಿ ಮತ್ತು ಅವರ ಬುದ್ಧಿವಂತಿಕೆಯ ಮಟ್ಟವನ್ನು ನಿರ್ಧರಿಸುವಲ್ಲಿ ಅವರ ಸಹಜ ಪ್ರವೃತ್ತಿ ಅಥವಾ ಸಾಮರ್ಥ್ಯಗಳನ್ನು ತಿಳಿಯುವಲ್ಲಿ ಹಾಗೂ ವೈಯಕ್ತಿಕ ಭಿನ್ನತೆಗಳನ್ನು ಗುರುತಿಸುವಲ್ಲಿ ಈ ಪ್ರಾಯೋಗಿಕ ಪದ್ಧತಿ ಬಹಳ ಉಪಯುಕ್ತವಾದದ್ದು. ಪ್ರೇರಣೆಯನ್ನು ಕುರಿತ ಅಧ್ಯಯನ ಮತ್ತು ಕಲಿಯುವಿಕೆ, ಅಭಿರುಚಿ ಅವಧಾನ ಮತ್ತು ಜ್ಞಾಪಕ ಶಕ್ತಿ ಇವೆಲ್ಲವುಗಳಲ್ಲಿರುವ ಕಾರ್ಯತತ್ವ ಸಂಬಂಧವನ್ನು ಈ ಪದ್ಧತಿಯಿಂದ ತಿಳಿಯಲನುಕೂಲವಾಗುತ್ತದೆ. ತರಗತಿಯ ಬೋಧನೆಯಲ್ಲಿ ಯಾವ ಪದ್ಧತಿ ಉಪಯುಕ್ತವೆಂಬುದನ್ನು ಈ ಪ್ರಾಯೋಗಿಕ ಪದ್ಧತಿಯಿಂದ ತಿಳಿಯಲು ಸಾಧ್ಯ. ಉಪಾಧ್ಯಾಯರ ಬೋಧನೆ ಎಷ್ಟು ಪರಿಣಾಮಕಾರಿಯಾಗಿ ಸಾಗಿದೆ ಎಂಬುದರ ಮೌಲ್ಯವನ್ನೂ ಸಹ ಇದರಿಂದ ಮಾಪನಗೈಯಬಹುದು. ಕಲಿಕೆಯ ವರ್ಗಾವಣೆಯ ಪ್ರಮಾಣವೆಷ್ಟೆಂಬುದನ್ನು ಸಹ ಈ ಪದ್ಧತಿಯಿಂದ ತಿಳಿಯಲು ಸಾಧ್ಯವಿದೆ. ಅಲ್ಲದೆ ರಸಭಾವಗಳನ್ನು ಚಿತ್ತವೃತ್ತಿ ಹಾಗೂ ಭಾವೋದ್ವೇಗಗಳನ್ನು ಈ ಪದ್ಧತಿಯ ಸಹಾಯದಿಂದ ಅರ್ಥೈಸಿಕೊಳ್ಳಬಹುದಾಗಿದೆ. ವಿದ್ಯಾರ್ಥಿಗಳ ಸಾಧನೆಯನ್ನು ಪರೀಕ್ಷಿಸಲು ಈ ಪದ್ಧತಿ ನೆರವಾಗಬಲ್ಲುದಾಗಿದೆ. ತನ್ಮೂಲಕ ಅದು ಮಾರ್ಗದರ್ಶನಕ್ಕೂ ಸಹಾಯ ನೀಡುವಂತಹುದಾಗಿದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಕೆಲವು ಸನ್ನಿವೇಶಗಳನ್ನುಳಿದು ತರಗತಿಗಳಲ್ಲಿ ಈ ಪ್ರಾಯೋಗಿಕ ಪದ್ಧತಿ ಅತ್ಯಂತ ಉಪಯುಕ್ತತೆಯನ್ನು ಪಡೆಯಲು ಅಧ್ಯಾಪಕನು ಪೂರ್ವಭಾವಿಯೋಜನೆಗಳನ್ನು ಸಿದ್ಧಮಾಡಿ ಪ್ರಯೋಗಗಳ ಮೂಲಕ ವಿದ್ಯಾರ್ಥಿಗಳ ಬುದ್ಧಿಯ ಮಟ್ಟವನ್ನು ಅಳೆದು ಅವರವರ ಪ್ರವೃತ್ತಿ ಮತ್ತು ಅಭಿರುಚಿಗಳನ್ನು ಕಂಡುಹಿಡಿದು ತದನುಗುಣವಾದ ಶಿಕ್ಷಣವನ್ನೀಯಲು ಸಾಧ್ಯವಾಗಿರುವಂತಹುದಾಗಿದೆ.

ಇವುಗಳ ಜತೆಗೆ ೩. ಕ್ಷೇತ್ರ ಸಂಶೋಧನಾಪದ್ಧತಿ, ೪. ವೈಲಕ್ಷಣ ಪದ್ಧತಿ, ೫. ಚಿಕಿತ್ಸಕ ಪದ್ಧತಿಗಳೂ ಮನಶಾಸ್ತ್ರದ ಅಧ್ಯಯನದಲ್ಲಿ ಪ್ರಮುಖವಾದವುಗಳಾಗಿವೆ.

****

ಭಾಗ ೨

ಕಲಿಕೆಯ ತತ್ತ್ವಗಳು

I keep six honest serving men
They taught me what all I know
their names are what and why and when
and how and where and who - Rudyard Kippling

ನಿಷ್ಠಾವಂತರಾರು ಜನ ಸೇವಕರನಿಟ್ಟುಕೊಂಡಿಹೆ ನಾನು
ನಾ ತಿಳಿದಿರುವುದೆಲ್ಲವನು ಕಲಿಸಿದವರಿವರು ;
ಅವರ ಹೆಸರುಗಳು - ಏನು, ಏಕೆ ಮತ್ತು ಯಾವಾಗ,
ಹೇಗೆ, ಎಲ್ಲಿ ಮತ್ತು ಯಾರು - ಎಂದು.
ಅನುವಾದ - ಪ್ರೊ. ಸಿ. ಹೆಚ್. ಮರಿದೇವರು

ಪ್ರತಿಯೊಬ್ಬ ಮಾನವನಿಗೂ ಮೇಲಿನ ರುಡ್‌ಯಾರ್ಡ್ ಕಿಪ್ಲಿಂಗ್‌ನು ಇಟ್ಟುಕೊಂಡಿರುವ ಆರು ಜನ ಸೇವಕರ ಸೇವೆ ಅತ್ಯಗತ್ಯ. ಅವರ ಸೇವೆಯ ಸಹಾಯ ಸಹಕಾರಗಳಿಲ್ಲದೆ ನಾವು ಏನನ್ನೂ ಕಲಿಯಲು ಶಕ್ಯವಿಲ್ಲ. ವಿಜ್ಞಾನಿಗಳಿಗೆ ವಿಜ್ಞಾನಿಗಳೆಂಬ ಬಿರುದು ಕೊಡಿಸಿದವರು ಈ ನಿಷ್ಠಾವಂತ ಸೇವಕರು. ನ್ಯೂಟನ್ ಮಹಾಶಯನು ಸೇಬಿನ ಮರದಿಂದ ಹಣ್ಣು ಬಿದ್ದಾಗ ಆ ಹಣ್ಣನ್ನು ತೆಗೆದು ಜೇಬಿನಲ್ಲಿಟ್ಟುಕೊಂಡ. ನಂತರ ಆ ಹಣ್ಣು ಹಾಗೆ 'ಏಕೆ' ಬಿತ್ತು ಎಂದು ಗಾಢವಾಗಿ ಆಲೋಚಿಸಲು ಪ್ರಾರಂಭಿಸಿದ. ಪ್ರಯೋಗಗಳನ್ನು ಮಾಡಿದ. ಏಕೆ ಎಂಬ ಸೇವಕ ನ್ಯೂಟನ್‌ನ ಬುದ್ಧಿಭಾವಗಳಿಗೆ ಕಸರತ್ತು ನೀಡಿದ. ನ್ಯೂಟನ್ ಆಲೋಚಿಸಿದ, ಪ್ರಯೋಗ ನಡೆಸಿದ, ವಿಷಯವನ್ನು ವಿಶ್ಲೇಷಿಸಿದ, ವಿಮರ್ಶಿಸಿದ. ಇವೆಲ್ಲವುಗಳ ಫಲಿತಾಂಶವಾಗಿ ಭೂಮಿಗೆ ಆಕರ್ಷಣ ಶಕ್ತಿ ಇದೆ ಎಂಬುದನ್ನು ಪ್ರತಿಪಾದಿಸಿದ. ಹೀಗಾಗಿ ನ್ಯೂಟನ್ ಒಬ್ಬ ದೊಡ್ಡ ವಿಜ್ಞಾನಿಯಾದ. ಆದ್ದರಿಂದ why ಎಂಬ ಸೇವಕ ನ್ಯೂಟನ್ನನಿಗೆ ವಿಜ್ಞಾನಿ ಎಂಬ ಕಿರೀಟ ಕೊಡಿಸಲು ಕಾರಣನಾದ. ಜಗತ್ತಿನ ಎಲ್ಲ ಮಾನವ ಜೀವಿಗಳಿಗೆ ಏನು, ಏಕೆ, ಮತ್ತು ಯಾವಾಗ,

ಹೇಗೆ, ಎಲ್ಲಿ ಮತ್ತು ಯಾರು - ಎಂಬ ಆರು ಜನ ಸೇವಕರ ಸಹಾಯ ಕಲಿಕೆಗೆ ಅತ್ಯಗತ್ಯ. ನಾವು ಪಡೆದಿರುವ ಎಲ್ಲ ಜ್ಞಾನ ಸಂಪತ್ತೂ ಸಹ ಕಲಿವಿನ ಫಲ ಎನಿಸುತ್ತದೆ.

ಅನುವಂಶಿಕ ತತ್ವದೃಷ್ಟಿಯಿಂದ ನೋಡಿದರೆ ಪ್ರತಿಯೊಂದು ಶಿಶುವೂ ಸಹ ಜನನ ಪೂರ್ವದಲ್ಲಿಯೆ ಭೌತಿಕ, ಬೌದ್ಧಿಕ ಮತ್ತು ಭಾವನಾತ್ಮಕವಾಗಿ ಏನಾದರೂ ಒಂದಿಷ್ಟು ಜ್ಞಾನವನ್ನು ಪಡೆದುಕೊಂಡು ಬಂದಿರುತ್ತದೆ. ಅಂದ ಮೇಲೆ ಅದು ಪಡೆದಿರುವ ಜ್ಞಾನವೆನಿಸುತ್ತದೆ. ಜನನಾನಂತರದ ಸನ್ನಿವೇಶದಲ್ಲಿ ಶಿಶು ತನ್ನ ಬಾಹ್ಯ ಪರಿಸರದಲ್ಲಿ ಅನೇಕಾನೇಕ ವಿಷಯಗಳನ್ನು ಪಡೆಯುತ್ತಿರುತ್ತದೆ. ಆಗ ಅದು ಪಡೆಯಲಿರುವ ಜ್ಞಾನವೆನ್ನಿಸುತ್ತದೆ. ವರ್ತಮಾನದಲ್ಲಿ ನಿಂತ ಶಿಶು ಮುಂಬರುವ ವರ್ಷಗಳಲ್ಲಿ ಜ್ಞಾನವನ್ನು ಪಡೆಯಲಿರುವಂಥದ್ದಾಗಿದೆ. ಆಗ ಅದು ಮುಂದೆ ಪಡೆಯಲಿರುವ ಜ್ಞಾನವೆನಿಸುತ್ತದೆ. ಹೀಗೆ ಮಗು ಮತ್ತು ಮನುಷ್ಯ ತನ್ನ ಜನನಪೂರ್ವ ಸನ್ನಿವೇಶದಿಂದ ಹಿಡಿದು, ಜನನಾನಂತರದಲ್ಲಿ ಮತ್ತು ತಾನು ಇಹಲೋಕದ ವ್ಯಾಪಾರವನ್ನು ಮುಗಿಸುವ ಕಾಲದವರೆಗೆ ಗಳಿಸುವ ಎಲ್ಲಾ ಜ್ಞಾನಸಂಪತ್ತನ್ನು ಕಲಿವಿನ ಫಲ ಎನ್ನುತ್ತೇವೆ.

ಮನುಷ್ಯ ತನ್ನೊಂದು ವಾತಾವರಣದೊಂದಿಗೆ ಹೇಗೆ ಹೊಂದಿಕೊಳ್ಳುತ್ತಾನೋ ಮತ್ತು ಆ ರೀತಿಯ ವಾತಾವರಣದಲ್ಲಿ ಯಾವ ಅನುಭವವನ್ನು ಸಂಪಾದಿಸುತ್ತಾನೋ ಅವೆಲ್ಲವೂ ಕಲಿಕೆ ಎನಿಸುತ್ತದೆ. ಪೂರ್ವಾನುಫಲದಿಂದ ಪಡೆಯುವ ಲಾಭವೂ ಕಲಿಕೆಯೆ. ಬೆಂಕಿ ಮುಟ್ಟಿ ಸುಟ್ಟುಕೊಂಡ ಮಗುವು ಅದರ ಅನುಭವದೊಂದಿಗೆ ಬೆಂಕಿ ಸುಡುತ್ತದೆ ಎಂಬ ಜ್ಞಾನವನ್ನು ಪಡೆಯುತ್ತದೆ. ವ್ಯಕ್ತಿ ತನ್ನ ಅವಶ್ಯಕತೆಗಳನ್ನು ಸಂತೃಪ್ತಿಪಡಿಸಿಕೊಳ್ಳಲು ತೋರ್ಪಡಿಸುವ ಸೂಕ್ತವಾದ ಪ್ರತಿಕ್ರಿಯೆಗಳೆ ಕಲಿಯುವ ವಿಧಾನಗಳೆನಿಸುತ್ತವೆ.

ಮಗು ಕಲಿಯಬೇಕು. ಏಕೆಂದರೆ ಅದು ಜೀವನವನ್ನು ಸುಖಮಯವಾದುದನ್ನಾಗಿ, ಸಂಪದ್ಭರಿತವಾದುದನ್ನಾಗಿ ಮಾಡಿಕೊಳ್ಳಲೋಸುಗ ಕಲಿಯಬೇಕು.

ಜಯಪ್ರದ ಜೀವನಕ್ಕೆ ಕಲಿಕೆಂಬುದೇ ದಿವ್ಯಸೋಪಾನ. ಪ್ರತಿಯೊಂದು ಜೀವಿಯೂ ತನ್ನೊಂದು ಬೆಳವಣಿಗೆಯ ಪ್ರತಿಹಂತದಲ್ಲೂ ಕಲಿವನ್ನು ಸಾಧಿಸುತ್ತದೆ. ಕೆಳದರ್ಜೆಯ ಪ್ರಾಣಿಗಳಲ್ಲಿ ಈ ರೀತಿಯ ಕಲಿವು ಸಾಧಿಸಲು ಸಾಧ್ಯವಿಲ್ಲ. ಕಲಿವಿನ ಶಕ್ತಿ ಕೀಟಗಳಿಗಿಂತ ಪಕ್ಷಿಗಳಲ್ಲಿ ಜಾಸ್ತಿ. ಮನುಷ್ಯನಲ್ಲಿ ಉಳಿದೆಲ್ಲ ಪ್ರಾಣಿಗಳಿಗಿಂತ ಹೆಚ್ಚಿನ ಮಟ್ಟದಲ್ಲಿರುತ್ತದೆ.

ಮಾನವ ಸೃಷ್ಟಿಯ ಕಿರೀಟ. ಅವನ ಕಲಿಯುವಿಕೆಯ ಸಾಮರ್ಥ್ಯವೇ ಅವನನ್ನು ಚಂದ್ರಲೋಕಕ್ಕೆ ಹೋಗಿಬರಲು ಶಕ್ತಿಯನ್ನು ನೀಡಿದ್ದು. ಆದ್ದರಿಂದ ಕಲಿಕೆಯ ಸ್ವರೂಪ ಇಂತಿಷ್ಟೇ ಸರಿ ಎಂದು ನಿಗದಿಪಡಿಸಲು ಶಕ್ಯವಿಲ್ಲ. ಆದರೂ ಮನಶ್ಶಾಸ್ತ್ರಜ್ಞರು ಕಲಿಕೆಯ

ಸ್ವರೂಪ ಮತ್ತು ವಿಧಾನಗಳನ್ನು ಅನೇಕ ಪ್ರಯೋಗಗಳ ಮೂಲಕ ಸಿದ್ಧಪಡಿಸಿ ತೋರಿಸಿದ್ದಾರೆ.

ಮನಶ್ಶಾಸ್ತ್ರದ ದೃಷ್ಟಿಯಲ್ಲಿ ಕಲಿಕೆ ಎಂದರೆ ಅನುಭವಕ್ಕೆ ಅನುಭವವನ್ನು ಸೇರಿಸುತ್ತಾ ಹೋಗುವುದು.

ಕಲಿಕೆ ನಿರಂತರವಾದುದು. ನೀರಿನ ಒಂದೊಂದೇ ಹನಿಯಿಂದ ಗಡಿಗೆ ತುಂಬುತ್ತದೆ. ಒಂದೊಂದೇ ಇಟ್ಟಿಗೆಯನ್ನು ಸೇರಿಸುವುದರಿಂದ ಕಟ್ಟಡ ನಿರ್ಮಾಣ ವಾಗುತ್ತದೆ. ಹಾಗೆಯೇ ಎಲ್ಲರೂ ಒಂದೊಂದೇ ಸಣ್ಣ ಸಣ್ಣ ಪಾಠವನ್ನು ಕಲಿಯುವುದರ ಮೂಲಕ ದೊಡ್ಡ ವಿದ್ವಾಂಸರುಗಳಾಗಿದ್ದಾರೆ.

ಕಲಿಕೆ ನೈಸರ್ಗಿಕವಾದದ್ದಾಗಿರಬಹುದು ಮತ್ತು ತರಗತಿಯಲ್ಲಿನ ಕಲಿಕೆ ಆಗಿರಬಹುದು. ಪ್ರಕೃತಿಯೇ ಗುರು ಎಂಬ ಒಂದು ಸಿದ್ಧಾಂತದ ಪ್ರಕಾರ ಮಾನವನು ಪ್ರಕೃತಿಯಿಂದಲೂ ಅನೇಕಾನೇಕ ವಿಷಯಗಳನ್ನು ಕಲಿತಿದ್ದಾನೆ. ಪ್ರಸ್ತುತ ನಮ್ಮ ಚರ್ಚೆಗೆ ಅಗತ್ಯವಾದದ್ದು ತರಗತಿಯಲ್ಲಿನ ಕಲಿಕೆ. ಆದ್ದರಿಂದ ಅದು ಬೋಧನಾಕ್ಷೇತ್ರಕ್ಕೆ ಸಂಬಂಧಿಸಿದ್ದು. ಒಂದು ಕಡೆ ಅನುವಂಶೀಯತೆಯು ಕಲಿವಿನ ಮಟ್ಟವನ್ನು ನಿರ್ಧರಿಸು ವಂಥದ್ದಾದರೆ ಮತ್ತೊಂದು ಕಡೆ ಸನ್ನಿವೇಶವು ನಿಂತ ಕಲಿವಿನ ಮಟ್ಟವನ್ನು ವೃದ್ಧಿಪಡಿಸು ವಂಥಾದ್ದಾಗಿದೆ. ಕಲಿಕೆಯೂ ಸಹ ಈ ಎರಡೂ ಅಂಶಗಳಿಂದ ನಿರ್ಧರಿಸಲ್ಪಡುವಂಥ ದ್ದಾಗಿದೆ. ಅನುವಂಶೀಯತೆಯ ಶಕ್ತಿ ಇಲ್ಲದೆ ಸನ್ನಿವೇಶವೇ ಯಾವ ಕಲಿವನ್ನು ಸಾಧಿಸ ಲಾರದು. ಅಂತೆಯೆ ಉತ್ತಮ ಸನ್ನಿವೇಶವಿಲ್ಲದೆ ಅನುವಂಶೀಯತೆಯ ಶಕ್ತಿ ತನ್ನ ಬೆಳಕನ್ನು ತೋರಲಾರದು. ಬೋಧನಾಕ್ಷೇತ್ರದಲ್ಲೂ ಆ ಎರಡು ಅಂಶಗಳು ಅಂದರೆ ಅನುವಂಶೀಯತೆ ಮತ್ತು ಸನ್ನಿವೇಶಗಳು ಮಕ್ಕಳ ಕಲಿವಿನಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತವೆ ಎಂಬುದು ಸರ್ವವೇದ್ಯವಾದ ವಿಚಾರ. ಬೋಧನಾಕ್ಷೇತ್ರದಲ್ಲಿ ಕಲಿವು ಗಳೆಂದರೆ ಯೋಜನಾಪದ್ಧತಿ, ಸ್ವಯಂ ಚಟುವಟಿಕೆಗಳು, ಶಾಲೆಯ ಜೀವನ, ಅಲ್ಲಿನ ವಾತಾವರಣ, ಉಪನ್ಯಾಸ ಪದ್ಧತಿ ಮತ್ತು ಪುಸ್ತಕ ಕಲಿಕೆ - ಇತ್ಯಾದಿಗಳೆಲ್ಲವೂ ಒಂದು ಕಾಲಕ್ಕೆ ಕಲಿಕೆಯಲ್ಲಿ ಪ್ರಮುಖ ಸ್ಥಾನ ಪಡೆದಿದ್ದವು. ಆದರೆ ಇಂದು ಅದಕ್ಕಿಂತ ಹೆಚ್ಚಾಗಿ ಕಲಿಕೆಯ ವಿಧಾನವೆಂದರೆ ಒಬ್ಬನು ತನ್ನ ಒಳನೋಟ ಮತ್ತು ಬುದ್ಧಿವಂತಿಕೆಯನ್ನು ಉಪಯೋಗಿಸುವಿಕೆಯೇ ಆಗಿದೆ. ಅಂದರೆ ವಾತಾವರಣದೊಂದಿಗೆ ಉಂಟಾಗುವ ಪ್ರಚೋದನೆಗೆ ಅಭಿವ್ಯಕ್ತಿ ಪಡೆಯುವ ಪ್ರತಿಕ್ರಿಯೆಯೇ ಕಲಿಕೆ.

ಕಲಿಕೆಯ ಅರ್ಥ ಮತ್ತು ಅದರ ಪ್ರಾಮುಖ್ಯತೆ :

''ಜ್ಞಾನವೇ ಶಕ್ತಿ'' - ಎಂಬುದು ಸಾಕ್ರಟೀಸನ ಅಭಿಮತ. ಅಂದ ಮೇಲೆ ಇಂತಹ ಶಕ್ತಿಯುತವಾದ ಜ್ಞಾನದ ಗಳಿಕೆ ಹೇಗಾಗುತ್ತದೆ ಎಂದರೆ ''ಕಲಿಕೆ ಮತ್ತು ಗ್ರಹಿಕೆ'' ಗಳಿಂದ ಎನ್ನಲಡ್ಡಿಯಿಲ್ಲ.

ನನ್ನ ಅರ್ಥದಲ್ಲಿ ಹೇಳುವುದಾದರೆ ಅರ್ಥಗ್ರಾಹ್ಯವಾದ ಶಬ್ದ ಸಂಗ್ರಹಣೆಯೇ ಜ್ಞಾನ. ಯಾವಾತ ಈ ಶಬ್ದಸಂಪತ್ತನ್ನು ಅರ್ಥಪೂರ್ಣವಾಗಿ ಗ್ರಹಿಸುತ್ತಾನೆ ಮತ್ತವುಗಳನ್ನು ಜೀವನದಲ್ಲಿ ಏಳುವ ಸಮಸ್ಯೆಗಳನ್ನು ಬಿಡಿಸಲು ಕೌಶಲ್ಯಪೂರ್ಣವಾಗಿ ಉಪಯೋಗಿಸಿಕೊಳ್ಳುತ್ತಾನೆ ಅವನೆ ಜ್ಞಾನಿ. ಶಬ್ದಸಂಪತ್ತನ್ನು ತುಂಬಿಕೊಳ್ಳುವ ಕಾರ್ಯವೇ ಕಲಿಕೆ ಎಂದೆನಿಸುತ್ತದೆ. ಯಾರು ಕಲಿವಿನ ಸಹಾಯದಿಂದ ಹೆಚ್ಚು ಹೆಚ್ಚು ಶಬ್ದ ಮತ್ತು ಅವುಗಳ ಅರ್ಥವನ್ನು ಗ್ರಹಿಸುತ್ತಾ ಹೋಗುತ್ತಾರೆ ಅವರು ಶಬ್ದಜ್ಞರೆನಿಸುತ್ತಾರೆ.

ದೈನಂದಿನ ಬದುಕಿನಲ್ಲಿ ಯಾವುದೇ ವ್ಯಕ್ತಿ ಒಂದು ಹೊಸ ಚಾತುರ್ಯವನ್ನಾಗಲೀ, ಒಂದು ಹೊಸ ಶಬ್ದ ಮತ್ತು ಅದರ ಅರ್ಥವನ್ನು ಗ್ರಹಿಸಿದ್ದೇ ಆದರೆ ಅದು ಅವನ ಕಲಿವು ಎನಿಸುತ್ತದೆ. ಇದೇ ಕಲಿವಿನ ಅರ್ಥ.

ಇನ್ನು ಕಲಿವಿನ ಪ್ರಾಮುಖ್ಯತೆಯನ್ನು ಕುರಿತು ಚರ್ಚಿಸುವಾಗ ''ವಿದ್ಯಾವಿಹೀನ ಪಶುಹಿಃ'' - ಎಂಬ ಮಾತನ್ನು ನೆನಪಿನಲ್ಲಿಡಬೇಕಾಗುತ್ತದೆ. ವಿದ್ಯೆ ಇಲ್ಲದವನು ಪಶುವಿಗೆ ಸಮಾನನು. ಆದರೆ ಸುಮ್ಮನೆ ಕುಳಿತರೆ ಬರುವಂಥದಲ್ಲ. 'ಸಾಧಕ ವಿದ್ಯೆ ಬಾಧಕ ದ್ರವ್ಯ' ಎಂಬ ಉಕ್ತಿಯೊಂದುಂಟು. ಸರಿಯಾದ ಸಾಧನೆಯಿಂದ ಮಾತ್ರ ವಿದ್ಯೆ ಲಭ್ಯವಾಗುವಂಥದು. ವಿದ್ಯೆಗಾಗಿ ಮಾಡುವ ಎಲ್ಲ ಸಾಧನೆ ಕಲಿಕೆ.

ಕಲಿಕೆಯು ಸ್ವಯಂಪ್ರೇರಿತ ವಿಧಾನದಿಂದ ಕೂಡಿರುವಂಥದು. ಅದು ತನ್ನದೇ ದಾರಿಯಲ್ಲಿ ತನ್ನದೇ ಆದ ಗುರಿಯನ್ನುಳ್ಳುದಾಗಿದೆ ಮತ್ತು ತನ್ನದೇ ಆದ ಅಭಿರುಚಿಯಿಂದ ಸಾಗುವಂಥದು. ಕಲಿಕೆಗೆ ಶಿಕ್ಷಕ ಪ್ರಚೋದನೆಯನ್ನೀಯಬೇಕು. ಮೊದಲು ಅಧ್ಯಾಪಕ ಕಲಿಕೆಯ ಗುರಿಗಳನ್ನು ನಿರ್ಧರಿಸಬೇಕು. ಪಾಠ ಬೋಧಿಸುವ ವಿಧಾನವನ್ನು ನಿರ್ಧಾರ ಮಾಡುವುದು ಉಪಾಧ್ಯಾಯನ ಕೆಲಸ. ಅವನು ಆ ವಿಧಾನವನ್ನು ಕಂಡುಕೊಂಡು ಕಂಡೂಕಾಣದವನ ಹಾಗೆ ಇರಬೇಕು. ಕಲಿಯುವಿಕೆಯಲ್ಲಿ ಕಲಿಕೆ ಮುಖ್ಯವೇ ವಿನಃ ಬೋಧನೆಯಲ್ಲ. ಕಲಿಕೆಯ ಗತಿಯಲ್ಲಿ ಅಥವಾ ವಿಧಾನದಲ್ಲಿ ಮಕ್ಕಳ ಬುದ್ಧಿಯನ್ನು ಪ್ರಚೋದಿಸುವ, ಪ್ರಾರಂಭಿಸುವ ಮತ್ತು ಅವುಗಳಿಗೊಂದು ರೂಪ ಕೊಡುವ ಶಕ್ತಿಯಾಗಿ ಕಾಣಿಸಿಕೊಳ್ಳಬೇಕು. ಬೋಧನೆಯಲ್ಲಿ ಮಕ್ಕಳು ಸರಿಯಾದುದನ್ನು ಕಲಿಯುತ್ತಾರೆ. ಅವರು ಸರಿಯಾದ ದಾರಿಯಲ್ಲಿ ಅಡಿ ಇಡುತ್ತಿದ್ದಾರೆಯೆ ಎಂಬದನ್ನು ನೋಡುವುದಷ್ಟೆ ಉಪಾಧ್ಯಾಯನ ಕೆಲಸ. ಆದ್ದರಿಂದ ಬೋಧನೆಗಿಂತ ಕಲಿಕೆ ಬಹಳ ಮುಖ್ಯವೆಂದಾಯ್ತು. ಉಪಾಧ್ಯಾಯನು ಮಕ್ಕಳನ್ನು ಕಲಿಯಲು ಪ್ರಚೋದನೆಗೊಳಿಸಬೇಕು ; ಮಾರ್ಗದರ್ಶನವೀಯಬೇಕು. ಕಲಿಕೆಗೆ ಅಗತ್ಯವಾದುದನ್ನೆಲ್ಲ ಒದಗಿಸಿಕೊಡಬೇಕು.

ಕಲಿಕೆಯ ಶಕ್ತಿ ಪ್ರಾಣಿಗಳಿಗಿಂತ ಮಾನವ ಜೀವಿಯಲ್ಲಿ ಹೆಚ್ಚು. ಮಗು ಹುಟ್ಟುವಾಗ ಒಂದು ಅಸಹಾಯಕ ಪ್ರಾಣಿ. ತಾಯಿ ಸಕಾಲದಲ್ಲಿ ದಾದಿಯಂತೆ ಪೋಷಿಸಬೇಕು. ಮಗುವಿನ ಕಲಿಕೆ ಹುಟ್ಟಿನಿಂದ ಹಿಡಿದು ಸಾಯುವತನಕ ಸಾಗುವಂತಹುದು. ಜೀವನವು ವಿಶಾಲವಾದ ಸಾಮಾನ್ಯ ಪ್ರತಿಕ್ರಿಯೆಗಳಿಂದ ಪ್ರಾರಂಭವಾಗುತ್ತದೆ. ಅಭಿರುಚಿ, ಆಸಕ್ತಿ ಚಾತುರ್ಯ, ಮೌಲ್ಯಗಳು - ಹುಟ್ಟಿನಿಂದಲೇ ಬಂದ ಗುಣಗಳು. ಇವೆಲ್ಲವೂ ಜೀವಿತಕಾಲದಲ್ಲಿ ಗಳಿಸುವಂಥವು. ಅದು 'ಬೆಳವಣಿಗೆಯ ವಿಕಾಸದಲ್ಲಿ ಒಂದು ಅಂತರ್ಗತ ಭಾಗ'. ಆದ್ದರಿಂದ ಅದು ಜೀವನಾವಶ್ಯಕವಾದ ಒಂದು ಅಂಶ ; ಜೀವನದೊಂದಿಗೆ ಪ್ರಮುಖವಾಗಿ ಸಂಬಂಧಿಸಿದ್ದು. ನಾಗರಿಕ ಜಗತ್ತಿನ ಎಲ್ಲ ನಿಯಮಗಳು, ಆಳ್ವಿಕೆಗಳು, ಉದ್ಯೋಗಗಳು ಇತ್ಯಾದಿ ಎಲ್ಲವೂ ಕಲಿವಿನ ಫಲಗಳು. ನಾಗರಿಕತೆ ಎನ್ನುವುದು ವಸ್ತುಸ್ಥಿತಿಯ ಒಂದು ಸಾಧನೆ. ಉತ್ತಮ ಮೌಲ್ಯ ಮತ್ತು ಭಾವನೆಗಳೇ ಸಂಸ್ಕೃತಿಯ ಪ್ರತೀಕ ಎಂಬುದು ಗಾಂಧೀಜಿಯ ಅಭಿಮತ. ಪ್ರತಿಯೊಂದು ಪ್ರಾಣಿಗೂ ಅದರದೇ ಆದ ನಾಗರಿಕತೆ ಇದೆ ; ಅದರದೇ ಆದ ಕಲಿವಿದೆ.

ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ಸಾಮಾಜಿಕ ನಡವಳಿಕೆಗಳಿವೆ. ಅವೆಲ್ಲವೂ ಕಲಿವಿನ ಫಲ. ಆಯಾ ಸಾಮಾಜಿಕ ಪರಿಸರಕ್ಕೆ ಹೊಂದಿಕೊಂಡು ಕಲಿಕೆ ಸಾಗುವಂಥದ್ದಾಗಿದೆ. ಕಲಿತ ಸಮುದಾಯ ತುಂಬು ಬಾಳನ್ನು ಬಾಳುತ್ತದೆ.ಇದು ಜೀವನದ ಪ್ರತಿಯೊಂದು ಹಂತದಲ್ಲೂ ಹಾದುಹೋಗುವಂಥಾದ್ದು. ಇದು ಅನುವಂಶೀಯತೆ ಮತ್ತು ಪರಿಸರಗಳ ಕಟ್ಟಿಗೂ ಒಳಪಟ್ಟದ್ದು. ಮೊದಲನೆಯ ಮಹಾಯುದ್ಧದ ಮೊದಲು ಬುದ್ಧಿಯ ಮೊತ್ತವೇ ಕಲಿಕೆಯ ಅಳತೆಯಾಗಿತ್ತು. ನಂತರ ಅದು ವ್ಯಕ್ತಿಯ ವರ್ತನೆಯನ್ನು ಕುರಿತದ್ದಾಯ್ತು. ಶಿಕ್ಷಣ ಮನಶ್ಶಾಸ್ತ್ರದಲ್ಲಿ ಕಲಿಕೆಯೇ ಪ್ರಮುಖ ಅಧ್ಯಾಯ. ಅದೆಲ್ಲವೂ ಮನುಷ್ಯವರ್ತನೆಗೆ ಸಂಬಂಧಿಸಿದ್ದು. ನಾವು ಮಾಡುವ ಪ್ರತಿಯೊಂದು ಕಾರ್ಯವು ಕಲಿಕೆಯ ಫಲ. ಗ್ರಹಣಶಕ್ತಿ, ಕಲ್ಪನಾಶಕ್ತಿ, ವಿವೇಚನೆ, ತೀರ್ಮಾನ, ಜ್ಞಾಪಕಶಕ್ತಿ - ಇತ್ಯಾದಿ ಎಲ್ಲವೂ ಕಲಿಕೆ ಎನಿಸಿಕೊಳ್ಳುತ್ತದೆ.

ಮನಶ್ಶಾಸ್ತ್ರದ ಸಮಗ್ರತೆಯೆ ಕಲಿಕೆಯ ಮೂಲ ಕಲ್ಪನೆ ಎಂಬುದು ಕೆಲವು ಮನಶ್ಶಾಸ್ತ್ರಜ್ಞರ ಅಭಿಪ್ರಾಯ. ಮನುಷ್ಯನ ಭಾವನೆಗಳು, ಆಲೋಚನೆಗಳು, ಕ್ರಿಯೆಗಳು ಕಲಿಕೆಯ ವಿಧಾನದಿಂದ ಮಾರ್ಪಾಟಾಗುತ್ತ ಹೋಗುತ್ತವೆ. ಪೂರ್ವಾನುಭವಗಳು ಗ್ರಹಣಶಕ್ತಿಯಿಂದ ಮಾರ್ಪಾಟಾಗುತ್ತ ಹೋಗುತ್ತವೆ. ಪೂರ್ವಾನುಭವಗಳು ಗ್ರಹಣಶಕ್ತಿಯಿಂದ ಕಲಿವಾಗುತ್ತವೆ. ಕೇಳುವುದು, ನೋಡುವುದು, ಘ್ರಾಣಿಸುವುದು ಇವೆಲ್ಲವೂ ಕಲಿಕೆಯ ಅಂಶಗಳು. ಕಲಿಕೆಯು ನಮ್ಮ ಅನೇಕ ವರ್ತನೆಗಳನ್ನು ಮಾರ್ಪಾಟುಗೊಳಿಸುತ್ತದೆ. ಕಲಿಕೆಯು ನರಮಂಡಲ ವ್ಯವಸ್ಥೆಯ ಕಾರ್ಯ.

ನರಮಂಡಲ ವ್ಯವಸ್ಥೆ ಸರಿಯಾಗಿಲ್ಲದಿದ್ದಲ್ಲಿ ಕಲಿಕೆಯು ಸರಿಯಾಗಿರುವುದಿಲ್ಲ. ಉದಾ : ಒಬ್ಬ ಮೂಕ ವ್ಯಕ್ತಿಯಲ್ಲಿ ಯಾವುದೋ ನರಮಂಡಲದ ವ್ಯವಸ್ಥೆ ಅಸ್ತವ್ಯಸ್ತಗೊಂಡು ಅವನನ್ನು ಮೂಕನನ್ನಾಗಿ ಮಾಡುತ್ತದೆ. ಆ ದೃಷ್ಟಿಯಲ್ಲಿ ಅವನ ಕಲಿವೂ ಅಪೂರ್ಣ. ನರಮಂಡಲದ ವ್ಯವಸ್ಥೆ ಸ್ಥಗಿತಗೊಂಡಲ್ಲಿ ಕಲಿಕೆಯೂ ಸ್ಥಗಿತಗೊಳ್ಳುತ್ತದೆ. ಉದಾ : ಸೈನಿಕನೊಬ್ಬನಿಗೆ ತಲೆಗೆ ಗುಂಡಿನ ಏಟು ಬಿದ್ದಾಗ ಅವನ ನರಮಂಡಲ ವ್ಯವಸ್ಥೆ ಅಸ್ತವ್ಯಸ್ತವಾಗಿ ಸ್ಥಗಿತಗೊಳ್ಳುತ್ತದೆ. ಮಾತು, ಸ್ಮೃತಿ ಎಲ್ಲವೂ ನಿಂತುಹೋಗುತ್ತವೆ. ಅವನು ಸಾವನ್ನಪ್ಪುತ್ತಾನೆ. ಅವನ ಸಾವಿನೊಂದಿಗೆ ಅವನ ಕಲಿಕೆಯೂ ಸಾವನ್ನಪ್ಪುತ್ತದೆ. ಮನುಷ್ಯನ ನರಮಂಡಲವ್ಯವಸ್ಥೆ, ಉಳಿದೆಲ್ಲ ಪ್ರಾಣಿಗಳಿಗಿಂತ ಅತ್ಯುನ್ನತವಾದದ್ದು. ಈ ನರಮಂಡಲದ ವ್ಯವಸ್ಥೆಗೆ ಜಖಂ ಆದಾಗ ಕಲಿಕೆಗೂ ಜಖಂ ಆಗುತ್ತದೆ. ಉದಾಹರಣೆಗೆ ಮದ್ಯಪಾನವನ್ನು ಅತಿಯಾಗಿ ಸೇವಿಸಿದಾಗ ಅದು ನರಮಂಡಲದ ವ್ಯವಸ್ಥೆಗೆ ಜಖಂ ಉಂಟು ಮಾಡುತ್ತದೆ. ಅದು ತನ್ನೊಂದಿಗೆ ಅವನ ಸ್ಮೃತಿ, ತೀರ್ಮಾನ ಮತ್ತು ವರ್ತನೆಗಳ ಮೇಲೂ ಜಖಂ ಉಂಟುಮಾಡುತ್ತದೆ. ಮಾನವನ ಕಾರ್ಯ ನಿರ್ವಹಣೆಯು ಅವನ ನರಮಂಡಲ ವ್ಯವಸ್ಥೆಯನ್ನೆ ಅವಲಂಬಿಸಿದುದಾಗಿದೆ. ಮನುಷ್ಯನ ಕಲಿಕೆಯು ಅತ್ಯುತ್ತಮವಾದುದಾಗಬೇಕಾದರೆ ಅವನಲ್ಲಿ ಚೆನ್ನಾಗಿ ಬೆಳೆದ - (Synaptic Nervous System) ಸಿನ್ಯಾಪ್ಟಿಕ್ ನರಮಂಡಲದ ವ್ಯವಸ್ಥೆ ಚೆನ್ನಾಗಿ ಅಭಿವೃದ್ಧಿ ಗೊಂಡಿರಬೇಕು. ರಚನೆ ಮಾರ್ಪಾಟುಗೊಂಡಾಗ ಕಲಿಕೆ ಸಾಗುತ್ತದೆ. ಉದಾಹರಣೆಗೆ ಯಂತ್ರಚಾಲನೆ ಕಲಿಕೆಯೂ ಯಾವಾಗಲೂ ವರ್ತನೆಯ ಕಾರ್ಯ ವನ್ನೇ ಅವಲಂಬಿಸಿದೆ. ಇದು ಎರಡು ವಿಧವಾದದ್ದು. ಒಂದು ಕ್ರಿಯೆ ಮತ್ತೊಂದು ಬದಲಾವಣೆ.

ಕ್ರಿಯೆ - ಇದರಲ್ಲಿ ೩ ವಿಧ. ೧. ಮೋಟಾರ್ ೨. ಸಂಜ್ಞಾನ ೩. ಪರಿಣಾಮಯುಕ್ತ ಪ್ರತಿಕ್ರಿಯೆ.

ಬದಲಾವಣೆ - ಇದರಲ್ಲೂ ೩ ವಿಧ. ೧. ಜ್ಞಾನ ೨. ಚಾತುರ್ಯ ೩. ಮನೋಪ್ರವೃತ್ತಿ ಎಂಬುದು.

ಕಲಿಯುವವನಲ್ಲಿ ಕಲಿಕೆ ಸಾಗುತ್ತದೆ. ಈ ಬದಲಾವಣೆಯಲ್ಲಿ ಮುಖ್ಯವಾಗಿ ೧. ಕ್ರಿಯಾತ್ಮಕ ಬದಲಾವಣೆ - ಇದು ಮನಸ್ಸಿನ ಜಾಗೃತ ಪ್ರಜ್ಞೆಯನ್ನವಲಂಬಿಸುತ್ತದೆ. ಉದಾ : ಈಜುವುದು, ಮರ ಕಡಿಯುವುದು, ಆಟವಾಡುವುದು ಇತ್ಯಾದಿ. ೨. ರಚನಾತ್ಮಕ ಬದಲಾವಣೆ - ಇದು ಮಾನವ ಶರೀರದ ರಚನೆಯನ್ನವಲಂಬಿಸಿದೆ. ಈ ರಚನಾತ್ಮಕ ಬದಲಾವಣೆಯನ್ನು ಪ್ರಮುಖವಾಗಿ ಎರಡು ಭಾಗ ಮಾಡಬಹುದು. ಈ ರಚನಾತ್ಮಕ ವರ್ತನೆಯು ಯಾವ ರೀತಿ ಕಾರ್ಯ ಮಾಡುತ್ತದೆಂಬುದು ನಮಗೆ ಗೊತ್ತಿಲ್ಲ. ಆದರೂ ಹೆಬ್ (Hebb) ಮನಶ್ಶಾಸ್ತ್ರದ ಪ್ರಕಾರ 'ಎಲ್ಲ ಕಲಿಕೆಯು

ಪಿತ್ರಾರ್ಜಿತವಾದ ಅಂಶಗಳನ್ನು ಅವಲಂಬಿಸಿದೆ. ಬಿಡಿಬಿಡಿಯಾದ ಅಂಶಗಳು ಬದಲಾವಣೆ ಹೊಂದಿ ಮೆದುಳನ್ನು ಸೇರಿ ಸಹಕಾರದಿಂದ ಕಲಿವನ್ನು ಸಾಧಿಸುತ್ತದೆ.' ಬೋಗಲಾಸ್ಕಿ ಹೇಳುವಂತೆ ''ಮೆದುಳಿನ ರಚನೆಯು ಬದಲಾವಣೆಯನ್ನು ಕುರಿತದ್ದು''. ಹಿಲ್‌ಗಾರ್ಡನ್ ಅಭಿಪ್ರಾಯದಲ್ಲಿ ''ಮೆದುಳಿನಲ್ಲಿ ಕಲಿಕೆ ಹೇಗೆ ಸಾಧಿತವಾಗುತ್ತದೆಂಬುದನ್ನು ಹೇಳುವುದು ಕಷ್ಟ. ಆದರೆ ಕಾರ್ಯನಿರ್ವಹಣೆಯ ಮೂಲಕ ಕಲಿವು ಸಾಧನೆಯಾಗಿರುವುದು ಗೋಚರವಾಗುತ್ತದೆ'' ಎಂದು. ಕಲಿಕೆ ಮತ್ತು ಕಾರ್ಯನಿರ್ವಹಣೆ ಎರಡೂ ಒಂದೇ ಅಲ್ಲ. ಹಾಗಾದರೆ ಈ ಕಲಿಕೆ ಎನ್ನುವುದೇನು ?

ಕಲಿಕೆ ಎನ್ನುವುದೇನು ಎಂಬುದಿನ್ನೂ ಸ್ಪಷ್ಟವಾಗಿ ಗೊತ್ತಿಲ್ಲ. ಕಲಿವು ಶರೀರದ ಯಾವ ಭಾಗದಲ್ಲಾಗುತ್ತದೆ ಎಂಬುದು ಸ್ಪಷ್ಟವಾಗಿ ಹೇಳಬರುವುದಿಲ್ಲ. ಅದು ಮೆದುಳಿನಲ್ಲಾಗಲೀ ಅಥವಾ ನರಮಂಡಲದಲ್ಲಾಗಲೀ ಆಗಿರುವುದು ಗೋಚರವಾಗುವುದಿಲ್ಲ. ಬುದ್ಧಿಯ ಮೊತ್ತ (I.Q.) ಜಾಸ್ತಿಯಾದಾಗ ಕಲಿಕೆಯನ್ನು ಗುರುತಿಸಬಹುದು. ಬುದ್ಧಿವಂತಿಕೆ ಎನ್ನುವುದೊಂದು ಲಕ್ಷಣ. ಶರೀರದಲ್ಲಿ ಈ ಬುದ್ಧಿವಂತಿಕೆಯ ಲಕ್ಷಣವನ್ನು ತೋರುವ ಯಾವ ಕಣ ಅಥವಾ ಅಂಗವೂ ಇಲ್ಲ. ಆದರೆ ಕಲಿಯುವ ತನ್ನ ಕಾರ್ಯವನ್ನು ಚೆನ್ನಾಗಿ ನಿರ್ವಹಿಸುವಲ್ಲಿ ಕಲಿಕೆಯನ್ನು ನಾವು ನಿರ್ಧರಿಸುತ್ತೇವೆ. ಆದ್ದರಿಂದ ನಿರ್ವಹಣೆ ಮತ್ತು ಕಲಿಕೆಗಳು ಒಂದೇ ಅಲ್ಲ. ನಿರ್ದಿಷ್ಟವಾದ ಕಲಿವೇನೆಂಬುದು ಗೊತ್ತಿಲ್ಲ. ಮನಶ್ಶಾಸ್ತ್ರಪಂಥದವರಲ್ಲಿ ಬಹುತೇಕ ಮಂದಿ ಈ ಕಲಿವಿನ ರಚನೆ ಏನೆಂಬುದನ್ನು ಕಾರ್ಯದಲ್ಲಿ ಗುರುತಿಸಿದ್ದಾರೆಯೇ ವಿನಃ ಶರೀರದ ಅಂಗದಲ್ಲಲ್ಲ. ಕಾರ್ಯನಿರ್ವಹಣೆಯಲ್ಲಿ ಕಲಿವಿನಲ್ಲಾಗುವ ಮಾರ್ಪಾಡನ್ನೇ ಕಲಿವು ಎಂದಿದ್ದಾರೆ.

(ಕಲಿವಿನ ಬಗ್ಗೆ ಅನೇಕ ಸಿದ್ಧಾಂತಗಳಿವೆ. ಸ್ಥಳಾಭಾವದಿಂದ ಇಲ್ಲಿ ಎಲ್ಲವನ್ನೂ ವಿವರಿಸಲಾಗಿಲ್ಲ. ವಿವರವಾದ ಅಭ್ಯಾಸಕ್ಕೆ .... ಕೃತಿಯನ್ನು ಪರಿಶೀಲಿಸಿ.)

★★★★

ಭಾಗ ೩

ವೈಯಕ್ತಿಕ ಭಿನ್ನತೆಗಳು (Indiv dual Differences)

ಚಾರಿತ್ರಿಕ ಹಿನ್ನೆಲೆ : (Historical B ckground)

ಪ್ರತಿಯೊಬ್ಬ ಮನುಷ್ಯನಿಗೂ ಗೊ ತ್ತಿದೆ - ವ್ಯಕ್ತಿ ವ್ಯಕ್ತಿಗೂ ಭಿನ್ನತೆ ಇದೆ ಎಂಬುದು. ಮಾನವ ಜನಾಂಗ ಎಂದು ಈ ಜಂಗಮ ಜಗತ್ತಿನಲ್ಲಿ ಆವಿರ್ಭವಿಸಿತೋ ಅಂದಿನಿಂದಲೂ ಯಾವ ಇಬ್ಬರು ವ್ಯ ್ತಗಳನ್ನು ತೆಗೆದುಕೊಂಡರೂ ಅವರು ಒಂದೇ ಆಗಿಲ್ಲ. ಪ್ರಾಣಿಗಳಲ್ಲಿಯೂ ಅದೇ ರೀ ಯ ಭಿನ್ನತೆ ಇರುವುದು ಸುಗೋಚರ. ಜನರು ಒಬ್ಬರಿಗಿಂತ ಇನ್ನೊಬ್ಬರು ಅನೇಕ ವಿ ಧದಲ್ಲಿ ವ್ಯತ್ಯಾಸ ಹೊಂದಿರುತ್ತಾರೆ. ಈ ರೀತಿ ಭಿನ್ನತೆಯ ಲಕ್ಷಣಗಳಿರುವುದು ಪ್ರಕೃತಿ ು ಒಂದು ಪವಾಡವೆ ಸರಿ.

ವ್ಯಕ್ತಿ ವ್ಯಕ್ತಿಗಳಲ್ಲಿರುವ ಈ ರೀ ಿಯ ಭಿನ್ನತೆಗಳನ್ನು ಗುರುತಿಸಿದವರೆಂದರೆ ಪ್ಲೇಟೋ ಮಹಾಶಯ. ಇವನು ತನ್ನ ರಿಪಬ್ಲಿಕ್ ಗ್ರಂಥದಲ್ಲಿ ಯಾವ ಯಾವ ಜನಕ್ಕೆ ಯಾವ ಯಾವ ಕೆಲಸ ಯೋಗ್ಯವೆಂದ ು ತೋರಿಬರುತ್ತದೋ ಅದನ್ನವರಿಗೆ ಕೊಡ ಬೇಕೆಂದು ಸಾರಿದ - ತನ್ನ ಕಾಲ್ಪನಿಕ ರ ಜ್ಯದ ವಿವರಣೆಯಲ್ಲಿ.

ವ್ಯಕ್ತಿಗಳಲ್ಲಿನ ವ್ಯತ್ಯಾಸವನ್ನು ಅ ಿಸ್ಟಾಟಲ್ ಸಹ ಗುರುತಿಸಲು ಮರೆಯಲಿಲ್ಲ. ಆದರೆ ವ್ಯಕ್ತಿ ವ್ಯಕ್ತಿಗಳ ನಡುವಿನ ವ್ಯ ್ಯಾಸವನ್ನು ವ್ಯವಸ್ಥಿತವಾಗಿ ಅಳತೆ ಮಾಡಲು ಪ್ರಾರಂಭಿಸಿದ್ದು ಮನಶ್ಶಾಸ್ತ್ರವಲ್ಲ. ಅದು ಮೊದಲು ಪ್ರಾರಂಭವಾದದ್ದು ೧೭೯೬ರಲ್ಲಿ, ಖಗೋಳಶಾಸ್ತ್ರಜ್ಞರು. ಮೊದಲ ಬಾ ಗೆ ಈ ಪ್ರಯತ್ನವನ್ನು ಮಾಡಿದರು. ಅದೇ ವರ್ಷದಲ್ಲಿ ಮಾಸ್ಕೆಲೈನ್ (Ma: ketyne) ಎಂಬುವನು ಗ್ರೀನ್‌ವಿಚ್ ಅಸ್ಟ್ರೋನಾಮಿಕಲ್ ಅಬ್ಸರ್‌ವೇಟರಿ (G ırnwich Astronomical Observatory) ಪ್ರಯೋಗಾಲಯದ ನಿರ್ದೇಶಕನಾಗಿ ದ್ದನು. ಇವನು ತನ್ನ ಸಹಾಯಕನಾಗಿದ್ದ ಕೆನ್ನೆ ಬ್ರೂಕ್ (Kiune Brook) ಎಂಬುವ ನನ್ನು ಕೆಲಸದಿಂದ ತೆಗೆದುಹಾಕಿದ. ಏಕೆಂದರೆ ಕೆನ್ನೆ ಬ್ರೂಕನು ತನ್ನ ನಕ್ಷತ್ರಗಳ ಚಲನೆ ು ವೀಕ್ಷಣೆಯಲ್ಲಿ (Stellar transits) ಒಂದು ಪೂರ್ಣ ಸೆಕೆಂಡನ್ನು ಕಳೆದಿದ್ದರಿಂದ ಅ ನಿಗೆ ಆ ಶಿಕ್ಷೆ ವಿಧಿಸಲಾಯಿತು. ಈ ರೀತಿ ಒಂದು ಪೂರ್ಣ ಸೆಕೆಂಡನ್ನು ಕಳೆದುದಕ್ಕೆ ಕಾ ರಣವೇನೆಂದರೆ ಅದು ಅವನ ಉದಾಸೀನ

ದಿಂದಾದುದು ಎಂಬ ತೀರ್ಮಾನಕ್ಕೆ ಮಸ್ಕಟೈನ್ ಬಂದುದು. ೧೮೨೨ರಲ್ಲಿ ಜರ್ಮನಿಯ ಕಿನ್ಸ್‌ಬರ್ಗ್ ಅಸ್ಟ್ರೋನಾಮಿಕಲ್ ಅಬ್ಸರ್ವೇಟರಿಯಲ್ಲಿ ಬೆಸೆಲ್ ಎಂಬ ನಿರ್ದೇಶಕನು ಕೆನ್ನೆ ಬ್ರೂಕನು ವಜಾ ಮಾಡಲ್ಪಟ್ಟ ವರದಿಯನ್ನೋದಿ ಆಶ್ಚರ್ಯಚಕಿತ ನಾದನು ಮತ್ತು ಆ ವಿಷಯದಲ್ಲಿ ಬಹಳ ಕುತೂಹಲ ತಳೆದು ಅವನ ವೀಕ್ಷಕ ದಾಖಲಾತಿಗಳನ್ನು ಅತ್ಯಂತ ಆಸಕ್ತಿಯಿಂದ ನೋಡತೊಡಗಿದ. ಏಕಕಾಲದಲ್ಲಿ ಇಬ್ಬರು ವೀಕ್ಷಕರ ಸೆಕೆಂಡ್‌ಗಳಲ್ಲಿ ಅದೇ ವ್ಯತ್ಯಾಸವನ್ನು ಗುರುತಿಸಿ ಅದನ್ನು 'Personal Error' ಮತ್ತು 'Personal Equation' ಎಂದು ಕರೆದನು. ಬೆಸೆಲ್ಸ್ ಒಂದು ರೆಕಾರ್ಡ್ ಪುಸ್ತಕವನ್ನು ಪ್ರಕಟಿಸಿದ. ಅದರಲ್ಲಿ 'personal equation' ಅಥವಾ errorನ ಇರುವಿಕೆಯೊಂದನ್ನು ಗುರುತಿಸಿದ. ಅದರ ಜೊತೆಯಲ್ಲಿಯೇ ಇಬ್ಬರು ವೀಕ್ಷಕರನ್ನು ಹೋಲಿಸಿ ನೋಡಿದ. ಈ equation ಕಾಲದಿಂದ ಕಾಲಕ್ಕೆ ಇಬ್ಬರಲ್ಲೂ ವ್ಯತ್ಯಾಸವಿರು ವುದು ಕಂಡು ಬಂತು. ಇವನ ಈ ಪ್ರಕಟಣೆಯು ಪ್ರಪ್ರಥಮವಾದ ವೈಯಕ್ತಿಕ ಭಿನ್ನತೆಗಳ Quantative data ವನ್ನು ಒದಗಿಸಿಕೊಡುವಂತಹುದಾಗಿದ್ದಿತು.

೧೮೭೯ರಲ್ಲಿ ವಿಲಿಯಂ ವೂಂಟ್ ಲೆಪ್‌ಸಿಗ್ ಎನ್ನುವ ಸ್ಥಳದಲ್ಲಿ ಮನಶ್ಶಾಸ್ತ್ರದ ಪ್ರಯೋಗಾಲಯವೊಂದನ್ನು ಪ್ರಪಂಚದಲ್ಲಿಯೇ ಮೊಟ್ಟಮೊದಲು ಪ್ರಾರಂಭಿಸಿದನು. ಅಮೆರಿಕದ ಕೆಟಲ್ ಇವನ ಕೈಕೆಳಗೆ ಮಾನವನ ವರ್ತನೆಯನ್ನು ಕುರಿತು ಅಧ್ಯಯನ ಮಾಡಿದನು. ಸಂಯುಕ್ತ ಸಂಸ್ಥಾನಗಳಲ್ಲಿ ''ಕಾಲದ'' ಈ ಅಧ್ಯಯನದ ಬಗ್ಗೆ ಬಹಳ ಆಸಕ್ತಿ, ಪ್ರತಿಕ್ರಿಯೆ ತೋರಿ ಬಂತು. ಸಂವೇದನೆಗಳ ಮೇಲೆ ಹೆಚ್ಚಿನ ಸಂಶೋಧನೆ ನಡೆಯಿತು. ದೃಷ್ಟಿ, ಶ್ರವಣ ಮತ್ತು ಸ್ಪರ್ಶ ಇವುಗಳ ನಾನಾಮುಖಗಳನ್ನು ಸರಿಯಾಗಿ ಅಳತೆ ಮಾಡುವ ಕ್ರಮ ತೋರಿ ಬಂತು. ಇನ್ನು ಕೆಲವರು ಬೇರೆ ಬೇರೆ ವ್ಯತ್ಯಾಸಗಳ ಅಳತೆಯನ್ನು ಸರಿಯಾಗಿ ಅಳೆದು ತೀರ್ಮಾನಕ್ಕೆ ಬರಲು ಅನುಕೂಲವಾಯಿತು.

ವೆಬರ್ ಫೆಚನರ್ ನಿಯಮ (Weber Fechner Law)

''ಪ್ರಯೋಗಕ್ಕೊಳಗಾದ ವ್ಯಕ್ತಿಯು ಪ್ರಚೋದನೆಯ ವ್ಯತ್ಯಾಸವನ್ನು ಪರಿಭಾವಿಸಲು ಮತ್ತಷ್ಟು ಪ್ರಚೋದನೆಯ ತೀವ್ರತೆಯನ್ನು ಹೆಚ್ಚಿಸಬೇಕು'' ಎಂಬುದು. ಅನೇಕ ಜನ ಮನಶ್ಶಾಸ್ತ್ರಜ್ಞರು ಮಾನವ ಸ್ವಭಾವದ ಬಗ್ಗೆ ಸಾಮಾನ್ಯ ನಿಯಮಗಳನ್ನು ಕಂಡುಹಿಡಿಯುವುದರಲ್ಲಿ ಅಭಿರುಚಿಯನ್ನು ತಳೆದಿದ್ದರು. ಇವರೆಲ್ಲರೂ ವ್ಯಕ್ತಿವ್ಯಕ್ತಿಗಳ ನಡುವೆ ಇರುವ ವ್ಯತ್ಯಾಸವನ್ನು ಕಂಡುಹಿಡಿಯಲು ಶ್ರಮಿಸಿದರು. ಈ ರೀತಿ ಮಾನವರಲ್ಲಿರುವ ವ್ಯತ್ಯಾಸವು ಮನಶ್ಶಾಸ್ತ್ರಜ್ಞರ ಅಭಿರುಚಿಯನ್ನು ಸೆಳೆಯಿತು. ಈ ರೀತಿಯ ವ್ಯತ್ಯಾಸಗಳನ್ನು ಪತ್ತೆ ಹಚ್ಚಲು ೧೮೯೦ರಲ್ಲಿ 'ಕೆಟಲ್' ಬುದ್ಧಿಪರೀಕ್ಷೆಯ ಚಳುವಳಿಯನ್ನು ಪ್ರಾರಂಭಿಸಿದ. ಉಳಿದ ಮನಶ್ಶಾಸ್ತ್ರಜ್ಞರು ಅದೇ ಸಮಯಕ್ಕೆ ಸರಿಯಾಗಿ

ಅದೇ ರೀತಿಯ ಯೋಜನೆಯನ್ನು ಕಂಡುಹಿಡಿದರು. ಈ ಮೊದಲಿನ ಬುದ್ಧಿ ಪರೀಕ್ಷಕರಲ್ಲಿ ಅತ್ಯಂತ ಹೆಸರಾದವರೆಂದರೆ ''ಆಲ್‌ಫ್ರೆಡ್ ಬೀನೆ'' ಎಂಬಾತ. ಈತನು ಬುದ್ಧಿಯ ವಯಸ್ಸು (Mental age) ಎನ್ನುವ ಕಲ್ಪನೆಯನ್ನು ಮಂಡಿಸಿದ. ಇದು ಮುಂದೆ ಮನಶ್ಶಾಸ್ತ್ರಜ್ಞನಾದ ಟಾಲ್‌ಮನ್ನನ ಬುದ್ಧಿಶಕ್ತಿಯ ಭಾಗಲಬ್ಧವನ್ನು (Intelligent Quotient) ಕಂಡುಹಿಡಿಯಲು ಸಹಾಯಕವಾಯ್ತು.

ಹತ್ತೊಂಭತ್ತನೆಯ ಶತಮಾನದ ಕೊನೆಯಲ್ಲಿ ಭೌತಶಾಸ್ತ್ರಜ್ಞರು, ಮನಶ್ಶಾಸ್ತ್ರಜ್ಞರೀರ್ವರೂ ಒಂದಂಶವನ್ನು ಒಪ್ಪಿಕೊಂಡರು. ಅದೆಂದರೆ ಯಾರೇ ಇಬ್ಬರು ವ್ಯಕ್ತಿಗಳು ಒಂದೇ ಆಗಿರಲು ಸಾಧ್ಯವಿಲ್ಲ. ಪ್ರತಿಯೊಬ್ಬ ವ್ಯಕ್ತಿಯೂ ಇನ್ನೊಬ್ಬ ವ್ಯಕ್ತಿಗಿಂತ ಭಿನ್ನನಾಗಿದ್ದಾನೆ. ವ್ಯಕ್ತಿವ್ಯಕ್ತಿಗೂ ತನ್ನದೇ ಆದ ವ್ಯಕ್ತಿತ್ವವಿದೆ ಎಂಬುದನ್ನು ಒಪ್ಪಿಕೊಂಡರು. ಅಲ್ಲಿಯವರೆಗೆ ಎಲ್ಲ ಶಿಕ್ಷಣತಜ್ಞರೂ ತರಗತಿಯ ಮಕ್ಕಳೆಲ್ಲರೂ ಒಂದೇ ಎಂದು ಭಾವಿಸಿದ್ದರು. ಮೂವತ್ತನೆ ಶತಮಾನದ ಆದಿಭಾಗದಲ್ಲಿ ಉಪಾಧ್ಯಾಯರೆಲ್ಲರಿಗೂ ತರಗತಿಯಲ್ಲಿನ ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನದೇ ಆದ ಸಾಮರ್ಥ್ಯ ಮತ್ತು ತನ್ನದೇ ಆದ ವ್ಯಕ್ತಿತ್ವವನ್ನು ಹೊಂದಿದ್ದಾನೆಂಬುದು ಅರಿವಾಯಿತು. ವ್ಯಕ್ತಿವ್ಯಕ್ತಿಗಳಲ್ಲಿರುವ ಭಿನ್ನತೆಗಳನ್ನು ಅವರವರ ಲಕ್ಷಣಗಳಿಂದ ಅಳೆಯಲಾಯಿತು. ಈ ಲಕ್ಷಣಗಳೆಂದರೆ ಎತ್ತರ, ಗಾತ್ರ, ಬುದ್ಧಿಶಕ್ತಿಯ ಸಾಮರ್ಥ್ಯ, ಬಣ್ಣ ಇತ್ಯಾದಿ ಲಕ್ಷಣಗಳೆಲ್ಲವೂ ಹುಟ್ಟಿನಿಂದ ಬಂದವುಗಳು. ಅವು ಜೀವಿತಕಾಲದಲ್ಲಿ ಗಳಿಸಿದವುಗಳಲ್ಲ. ವ್ಯಕ್ತಿಗಳಲ್ಲಿರುವ ಭಿನ್ನತೆಯಂತೆಯೇ ಗುಂಪಿನ ವ್ಯತ್ಯಾಸಗಳಿರುತ್ತವೆ. ಅಂದರೆ ಕುಟುಂಬ, ಜನಾಂಗ, ಲಿಂಗ, ಸಂಸ್ಕೃತಿ, ನಾಗರಿಕತೆ ಇತ್ಯಾದಿ ಎಲ್ಲದರಲ್ಲೂ ಭಿನ್ನತೆ ಇರುವುದರ ಅರಿವಾಯಿತು.

ವೈಯಕ್ತಿಕ ಭಿನ್ನತೆಗಳ ಸ್ವಭಾವ ಮತ್ತು ಅದರ ಮೂಲ : (Source and Nature of Individual Difference)

ಸಾಂಪ್ರದಾಯಿಕವಾಗಿ ವೈಯಕ್ತಿಕ ಭಿನ್ನತೆಗೆ ಎರಡು ಮೂಲಗಳಿವೆ. ಅವುಗಳೆಂದರೆ ೧. ಅನುವಂಶೀಯತೆ ೨. ಸನ್ನಿವೇಶ.

ಸನ್ನಿವೇಶವು ಅನುವಂಶೀಯ ಲಕ್ಷಣಗಳ ಮೇಲೆ ತನ್ನ ಪ್ರಭಾವ ಬೀರುತ್ತದೆ ಎಂಬುದು ನಿಜ. ಮಾನವನ ಲಕ್ಷಣಗಳ ಮೇಲೆ ಸನ್ನಿವೇಶದ ಪ್ರಭಾವವೂ ಬೀಳುವಂತಹುದೆ. ಒಟ್ಟಿನಲ್ಲಿ ಈ ಭಿನ್ನತೆಯ ಲಕ್ಷಣಗಳನ್ನು ಅನುವಂಶೀಯತೆ ಮತ್ತು ಪರಿಸರಗಳಿಂದ ಸಂಪೂರ್ಣವಾಗಿ ಬೇರ್ಪಡಿಸಲು ಸಾಧ್ಯವಿಲ್ಲ. ಅವೆರಡೂ ಒಂದಕ್ಕೊಂದಕ್ಕೆ ಪೂರಕಗಳು. ಮಾನವನ ಲಕ್ಷಣಗಳೆಲ್ಲವೂ ಮಾನವನಿಂದಲೇ ಬಂದವುಗಳಾದರೂ ಅವು ಜೈವಿಕ (genetic) ಮತ್ತು ಪರಿಸರಗಳ ಕ್ರಿಯೆ ಮತ್ತು

ಪ್ರಕ್ರಿಯೆಗಳಿಂದ ಆವಿರ್ಭೂತವಾದ ವಸ್ತುಗಳಾಗಿವೆ ಎಂಬುದು ಸ್ವಲ್ಪಮಟ್ಟಿಗೆ ನಿಜ. ಜೀವಾಣುವಿನ ಪ್ರಭಾರ ಗರ್ಭಧಾರಣೆಯ ಕಾಲದಲ್ಲಿ ಹೇಗೆ ಸೇರಲ್ಪಡುತ್ತದೆಯೋ ಅದು ಜೀವಾಣುವಿನ ಲಕ್ಷಣವನ್ನವಲಂಬಿಸಿರುವಂತಹುದಾಗಿದೆ. ಮೊದಲು ಅನುವಂಶೀಯತೆಯನ್ನು ಮನಶ್ಶಾಸ್ತ್ರದ ಅಥವಾ ಊಹನಾತ್ಮಕ ಕಲ್ಪನೆಯ ಆಲೋಚನೆ ಎಂದು ಪರಿಗಣಿಸಲಾಗಿತ್ತು. ೧೯೦೭ರಲ್ಲಿ ಮಾರ್ಗನ್ ಎಂಬಾತನು ಜೀವಾಣುಗಳನ್ನು ಕಂಡುಹಿಡಿದ. ಅಂದಿನಿಂದ ಅದು ಮನಶ್ಶಾಸ್ತ್ರದ ಅಸ್ತಿತ್ವವಾಯಿತು. ಮಾರ್ಗನ್‌ನ್ನನು ಸಂಪ್ರದಾಯಬದ್ಧವಾಗಿದ್ದ ಅನುವಂಶೀಯತೆಯು ಮನಶ್ಶಾಸ್ತ್ರದ ಕಲ್ಪನೆ ಎಂಬ ಅಂಶವನ್ನು ಕಡೆಗಣಿಸಿ ಅದು ಮನಶ್ಶಾಸ್ತ್ರದ ಅಸ್ತಿತ್ವ ಪಡೆಯುವಂತೆ ಮಾಡಿದನು. ಅನುವಂಶೀಯತೆ ಎಷ್ಟು ಪ್ರಾಮುಖ್ಯವೋ ಸನ್ನಿವೇಶವೂ ಅಷ್ಟೇ ಪ್ರಾಮುಖ್ಯ ಎಂದು ಒತ್ತಿ ಹೇಳಲಾಯ್ತು. ಪರಿಸರವೇ ಭೂಮಿ, ಅನುವಂಶೀಯತೆಯೇ ಬೀಜ. ಇವು ಒಂದಕ್ಕೊಂದು ಪೂರಕಗಳು. ಬೀಜವಿಲ್ಲದ ಭೂಮಿ ಬರಡು, ಭೂಮಿ ಇಲ್ಲದ ಬೀಜ ಅಂತೆಯೇ ನಿರುಪಯುಕ್ತ. ಪರಿಸರದ ಪ್ರಭಾವ ಎರಡು ವಿಧವಾದದ್ದು. ೧. ಪ್ರೀನೇಟಲ್ (prenatal) ಅಂದರೆ ಮಗು ತಾಯಿಯ ಗರ್ಭದಲ್ಲಿರುವಾಗ ಮತ್ತು ೨. ಪೋಸ್ಟ್‌ನೇಟಲ್ (postnatal) ಮಗು ತಾಯಿಯ ಗರ್ಭದಿಂದ ಹೊರಬಿದ್ದಾಗ, ಗರ್ಭಧಾರಣಕಾಲದಲ್ಲಿಯೇ ಗರ್ಭಪೂರ್ವ ಸನ್ನಿವೇಶವು ತನ್ನ ಪ್ರಭಾವವನ್ನು ಬೀರಲು ಪ್ರಾರಂಭಿಸುತ್ತದೆ. ಭ್ರೂಣವು ಗರ್ಭದಲ್ಲಿ ಬೆಳೆಯುವಾಗ ತನ್ನ ತಾಯ ರಕ್ತಪ್ರವಾಹದಿಂದ ತನಗೆ ಬೇಕಾದ ಪೋಷಕಾಂಶಗಳನ್ನು ಪಡೆಯುತ್ತದೆ. ಈ ರೀತಿ ತಾಯಿಯ ರಕ್ತದಿಂದಾಗುವ ಒಂದು ರಾಸಾಯನಿಕ ಸಂಯೋಜನೆಯು ಭ್ರೂಣದ ಬೆಳವಣಿಗೆಯ ಮೇಲೆ ಕೆಲವು ಪರಿಣಾಮಗಳನ್ನು ಬೀರುತ್ತದೆ.

ಶಿಶುವಿನ ಜನನಾನಂತರದ ವಾತಾವರಣವು ಮಗುವಿನ ಮೇಲೆ ತನ್ನದೇ ಆದ ಪ್ರಭಾವ ಬೀರುತ್ತದೆ ಮತ್ತು ಹೊರಗಿನ ವಾತಾವರಣವೆಂದರೆ ಅರ್ಥಾತ್ ಜನನಾನಂತರದ ವಾತಾವರಣವೆಂದರೆ ಕುಟುಂಬದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿ, ಕುಟುಂಬದ ಹಿರಿಯರೊಂದಿಗೆ ಪಡೆದ ಸಂಪರ್ಕದಿಂದ ಅದು ಪಡೆದುಕೊಳ್ಳುವ ಪ್ರವೃತ್ತಿಗಳು.

೧೮೬೦ರಿಂದ ಅನುವಂಶೀಯತೆ ಮತ್ತು ಪರಿಸರಗಳ ನಡುವೆ ಒಂದು ವಿವಾದ ಹುಟ್ಟಿಕೊಂಡಿರುವಂತಹುದಾಗಿದೆ.

ಬಹುತೇಕ ಮನಶ್ಶಾಸ್ತ್ರಜ್ಞರು ಈಗ ಮಾನ್ಯತೆ ಮಾಡಿಕೊಂಡಿರುವ ಅಂಶವೆಂದರೆ ಇವೆರಡು 'ಪ್ರಕ್ರಿಯೆ' (interaction). ಇದರ ಅರ್ಥವೆಂದರೆ ಯಾವುದೇ ವ್ಯಕ್ತಿಯ ಬೆಳವಣಿಗೆಯಲ್ಲಿ ಸನ್ನಿವೇಶ ಮತ್ತು ಪಾಲನೆ ಪೋಷಣೆಗಳು ಮುಖ್ಯವಾಗಿದ್ದು ಅವು ಕ್ರಿಯೆ ಮತ್ತು ಪ್ರತಿಕ್ರಿಯೆಗಳನ್ನು ಒಳಗೊಂಡಿರುವಂತಹವುಗಳಾಗಿವೆ. ಈ ಕ್ರಿಯೆ ಅಥವಾ

ಪ್ರತಿಕ್ರಿಯೆಯ ತತ್ವವು ವ್ಯಕ್ತಿಯ ಬೆಳವ ಗೆಗೆಯಲ್ಲಿ ಪ್ರಕೃತಿಯು ತನ್ನ ಹತೋಟಿಯನ್ನಿಟ್ಟು ಕೊಂಡಿದೆ ಎಂಬುದನ್ನು ತೋರಿಸುತ್ತವೆ. ಅಂದರೆ ನಾನಾ ವಿಧವಾದ ಮನಶ್ಶಾಸ್ತ್ರದ ಕಾರ್ಯಗಳ ಸಾಧ್ಯಾಸಾಧ್ಯತೆಗಳಿಗೆ ಸಂಬಂಧಿಸಿದಂತೆ ಈ ಮಾತನ್ನು ವಿವೇಚನೆಗೆ ಒಳಗು ಮಾಡಬೇಕಾಗಿದೆ. ಆದರೆ ಪಾಲನೆ ಪೋಷಣೆಯೂ ಸಹ ಅವನ ಸಾಧ್ಯಾಸಾಧ್ಯತೆಗಳನ್ನು ಪೂರೈಸಲು ಶಿಷ್ಟೇ ಪ್ರಮುಖವಾದ ಪಾತ್ರವನ್ನು ವಹಿಸಿರು ವಂತಹುದಾಗಿದೆ ಮತ್ತು ಒಂದು ನಿರ್ದಿಷ್ಟವಾದ ಸ್ವರೂಪದಲ್ಲಿ ಬೆಳವಣಿಗೆ ಹೊಂದಲು ಮತ್ತು ಯಾವ ದಿಕ್ಕಿನಲ್ಲಿ ಅವುಗಳನ್ನು ಉಪಯುಕ್ತವಾದವುಗಳಾಗಿ ಮಾಡಿಕೊಳ್ಳಬಹು ದೆಂಬುದನ್ನು ಪಾಲನೆ ಪೋಷಣೆಯು ನಿರ್ಧರಿಸುವಂತಹುದಾಗಿದೆ.

ಶಿಕ್ಷಕರಿಗೆ ಈ ಕ್ರಿಯೆ ಮತ್ತು ಪ್ರತಿಕ್ರಿಯೆ ತತ್ವ ಬಹಳ ಮುಖ್ಯವಾದದ್ದು. ಅದು ಪ್ರತಿಯೊಂದು ಮಗುವಿಗೂ ಒಂದ ನಿರ್ದಿಷ್ಟವಾದ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಅವಕಾಶಗಳನ್ನು ಮತ್ತು ಸಾಮರ್ಥ್ಯಗಳನ್ನು ಹಾಗೂ ಸಹಜ ಶಕ್ತಿಗಳನ್ನು ಪೂರ್ತಿಯಾಗಿ ಬೆಳೆಸಿಕೊಳ್ಳಲು ಅವಕಾಶ ಮಾಡಿಕೊಡುತ್ತದೆಂಬುದನ್ನು ತೋರಿಸಿಕೊಟ್ಟಿತು. ಇನ್ನೊಂದು ಮಾತಿನಲ್ಲಿ ಹೇಳುವುದಾದರೆ ಕಲಿಯಲು ಸಾಧ್ಯತೆಗಳಿರುವ ಮತ್ತು ಉನ್ನತವಾದ ಮಟ್ಟವನ್ನು ಸಾಧಿಸಬೇಕೆಂಬ ಅಪೇಕ್ಷೆ ಇರುವ ಮಕ್ಕಳಿಗೆ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಅವಕಾಶಗಳನ್ನು ಒದಗಿಸಿಕೊಟ್ಟು ಅವರ ಬೆಳವಣಿಗೆಗೆ ಅದನ್ನು ಪೂರೈಸಿ ಕೊಳ್ಳಲು ಸಹಾಯ ಮಾಡಬೇಕು. ಮೊದಲು ಅತ್ಯಂತ ಅನುಕೂಲಕರವಾದ ಪರಿಸ್ಥಿತಿಯನ್ನು ಒದಗಿಸಿದರೆ, ಪ್ರಕೃತಿಯು ಬಹುದೊಡ್ಡದಾದ ಅಡೆತಡೆಗಳನ್ನು ನಿವಾರಣೆಗೊಳಿಸಬಹುದು.

ವೈಯಕ್ತಿಕ ಭಿನ್ನತೆಗಳ ಕ್ಷೇತ್ರಗಳು : (Areas of Individual Differences)

ವೈಯಕ್ತಿಕ ಭಿನ್ನತೆಗಳ ಕ್ಷೇತ್ರಗಳಲ್ಲಿ ಪ್ರಮುಖವಾದವುಗಳು ಮೂರು.

೧. ಬುದ್ಧಿವಂತಿಕೆ, ಶುದ್ಧ ಬೌದ್ಧಿಕ ಸಾಮರ್ಥ್ಯ

೨. ಸಾಮರ್ಥ್ಯ, ಶಕ್ತಿ

೩. ವ್ಯಕ್ತಿತ್ವ.

ವೈಯಕ್ತಿಕ ಭಿನ್ನತೆಗಳ ವ್ಯಾಪ್ತಿ:

ಮಾನವನ ಶಕ್ತಿಸಾಮರ್ಥ್ಯಗಳ ಮತ್ತು ಭಿನ್ನತೆಗಳನ್ನು ಕುರಿತ ವೈಜ್ಞಾನಿಕ ತತ್ವಗಳು ಅನೇಕವಿವೆ. ಇವು ಸರ್ವೇಸಾಮಾನ್ಯವಾದ ಮತ್ತು ಹೆಸರುವಾಸಿಯಾದ ಅಭಿಪ್ರಾಯಗಳಾಗಿವೆ. ಹಿಂದಿನ ಅಭಿಪ್ರಾಯದಂತೆ ಎಲ್ಲರನ್ನೂ ಅವರವರ ಬೌದ್ಧಿಕ

ಮತ್ತು ವೈಯಕ್ತಿಕ ಭಿನ್ನತೆಗಳನ್ನು ಗುರುತಿಸಲಾಗುತ್ತಿತ್ತು. ಮಾನವರನ್ನು ಅವರ ಆನುವಂಶೀಯತೆ ಲಕ್ಷಣಗಳಿಗನುಗುಣವಾಗಿ ವರ್ಗಾವಣೆ ಮಾಡಿದ ಕಲ್ಪನೆ ಸರಿಯಾಗಿದ್ದ ಪಕ್ಷದಲ್ಲಿ ಅಂಕಿ ಅಂಶಗಳ ಹಂಚಿಕೆಯು ಮತ್ತು ಗ್ರಾಫ್‌ಗಳು ಬಹುಮಾದರಿಯ ವಕ್ರರೇಖೆಗಳನ್ನು ತೋರಿಸುತ್ತವೆ. ಬಹುಮಾದರಿಯ ವಕ್ರರೇಖೆ ಎಂದರೆ ವಕ್ರಬಿಂದುವು ಒಂದು ಅಥವಾ ಹೆಚ್ಚಿನ ಬಿಂದುಗಳಲ್ಲಿ ಕೇಂದ್ರೀಕರಿಸಲ್ಪಡು ವಂತಹುದು. ಉದಾ : ಯಾವುದೇ ಒಂದು ಬೌದ್ಧಿಕ ಲಕ್ಷಣಕ್ಕೆ ಕಾಮ(Sex)ವೇ ಮೂಲಭೂತವಾದ ಅಂಶವಾದರೆ ವಕ್ರರೇಖೆಯಲ್ಲಿ ಎರಡು ರೀತಿಯ ವಕ್ರರೇಖೆ ಗಳಿರುತ್ತವೆ. ಎರಡೂ ಲಿಂಗಗಳು (ಸ್ತ್ರೀ ಮತ್ತು ಪುರುಷ) ಸಂಧಿಸಿದಾಗ ವಂಶವು ಯಾವ ರೀತಿ ಇರಬೇಕು ಎಂಬುದು ನಿರ್ಧಾರವಾಗುತ್ತದೆ. ಇದು ವೈಯಕ್ತಿಕ ಭಿನ್ನತೆಗಳಿಗೆ ಕಾರಣವಾದುದೂ ಆಗುತ್ತದೆ. ಇದನ್ನು ವೈಯಕ್ತಿಕ ಭಿನ್ನತೆಗಳನ್ನು ಅಧ್ಯಯನ ಮಾಡಲು ಗುಣಾತ್ಮಕಮಾರ್ಗ ಎಂದು ಕರೆಯಲಾಗಿದೆ.

ಗುಣಾತ್ಮಕ ಮಾರ್ಗದಲ್ಲಿ (ಗುಂಪಿನ ವ್ಯತ್ಯಾಸ ತೋರಿಬರುವುದರಿಂದ) ಅನೇಕ ವ್ಯಕ್ತಿಗಳು ಪ್ರತ್ಯೇಕವಾದ ಒಂದು ಗುಂಪಿನಲ್ಲಿ ಸೇರುವರು. ಪ್ರತಿಯೊಬ್ಬ ವ್ಯಕ್ತಿಯೂ ತನ್ನದೇ ಆದ ವಿಶಿಷ್ಟ ವ್ಯಕ್ತಿತ್ವವನ್ನು ಹೊಂದಿದ್ದಾನೆ. ಆದ ಕಾರಣ ವ್ಯಕ್ತಿಯ ನಡುವೆ ಭಿನ್ನತೆ ತೋರಿಬರುತ್ತದೆ. ವ್ಯಕ್ತಿತ್ವವು ಒಬ ವ್ಯಕ್ತಿಯ ಎಲ್ಲ ವಿಶಿಷ್ಟ ಗುಣಲಕ್ಷಣಗಳಿಂದ ಕೂಡಿದ್ದು, ಸಮಗ್ರತೆಯು ವಾಸ್ತವತೆಗಿಂತ ಭಿನ್ನವಾದುದು. ವ್ಯಕ್ತಿ ಯಾವ ಗುಂಪಿನಲ್ಲಿದ್ದಾನೋ ಆ ಗುಂಪಿನಿಂದ ಅವನನ್ನು ಸಾಮಾನ್ಯವಾಗಿ ಅಳೆಯುವ ಬದಲು ಅವನನ್ನು ವೈಯಕ್ತಿಕ ವಾಗಿ ಅಧ್ಯಯನ ಮಾಡುವುದು ಒಳ್ಳೆಯದು. ಮನಶ್ಶಾಸ್ತ್ರಜ್ಞರು ವ್ಯಕ್ತಿನಿಷ್ಠ ವಿಧಾನ ಅಥವಾ ರೀತಿ ಮತ್ತು ವಸ್ತುನಿಷ್ಠರೀತಿ, ತಾತ್ವಿಕ ಮತ್ತು ಪ್ರಾಯೋಗಿಕ ರೀತಿ, ಸಂಗ್ರಹಿತ ರೀತಿ, ಅಸಂಗ್ರಹಿತ ರೀತಿ, ವಿಶ್ಲೇಷಣಾತ್ಮಕ ಮತ್ತು ಸಂಯೋಜನಾತ್ಮಕ ವಿಧಾನ ಇತ್ಯಾದಿಗಳೆಲ್ಲವನ್ನೂ ಅನುಸರಿಸಿದ್ದಾರೆ. ಇತ್ತೀಚೆಗೆ ಜುಂಗ್‌ನು ಅಂತರ್‌ಮುಖಿ ಮತ್ತು ಬಹಿರ್‌ಮುಖಿ, ಆರೋಹಣ ಮತ್ತು ವಿಧೇಯ ಗುಣಗಳನ್ನು ಗುರುತಿಸಿದ್ದಾನೆ. ಇತ್ತೀಚೆಗೆ ಅನೇಕ ವಿಧವಾದ ಸಂಮಿಶ್ರ ರೀತಿಯ ಅಥವಾ ಮಧ್ಯವರ್ತಿ ರೀತಿಯಲ್ಲಿ ವ್ಯಕ್ತಿಯನ್ನು ಅಳೆಯಲು ಪ್ರಯತ್ನಿಸಿ ಮಾನವರು ಎರಡು ವಿಧವಾದ ವರ್ಗಕ್ಕೆ ಸೇರುವುದಿಲ್ಲವೆಂಬುದನ್ನು ಅರ್ಥೈಸಿಕೊಂಡಿದ್ದೇವೆ. ಇತ್ತೀಚೆಗೆ ವ್ಯಕ್ತಿಗಳ ವಿಂಗಡಣೆ ಗಾಗಿ ಮಾಡಿದ ಪ್ರಯತ್ನದಲ್ಲಿ ಶಾರೀರಿಕ ರಚನೆಯ ಲಕ್ಷಣಗಳನ್ನು ಬೌದ್ಧಿಕ ಅತಿರೇಕ (Mental Abnormality) ಗಳೊಂದಿಗೆ ಅಧ್ಯಯನ ಮಾಡಲಾಗಿದೆ. ವ್ಯಕ್ತಿಗಳನ್ನು ಒಂದು ಗುಂಪಿನಲ್ಲಿಟ್ಟು ನೋಡುವುದರಿಂದ ಅಧ್ಯಯನ ಮಾಡಲು ಸಾಧ್ಯವಿಲ್ಲ. ಪ್ರತಿ ವ್ಯಕ್ತಿಯನ್ನು ವೈಯ್ಯಕ್ತಿಕವಾಗಿಯೇ ಅಧ್ಯಯನ ಮಾಡಬೇಕು. ಸತ್ಯವು ಗೋಚರಿಸ್ತು ವುದು ಅಥವಾ ಕಾಣುವುದು ಗುಣಾತ್ಮಕ ಅಂಕಿಅಂಶಗಳ ವಿಧಾನದಿಂದ ಮಾತ್ರ.

ವೈಯಕ್ತಿಕ ಭಿನ್ನತೆಗಳನ್ನು ಅಧ್ಯಯನ ಮಾಡುವ ವಿಧಾನಗಳು :

೧. ಗುಂಪಿನ ವಿಧಾನ ೨. ವೈಯ್ಯಕ್ತಿಕ ವಿಧಾನ.

1. ಗುಂಪಿನ ವಿಧಾನ

ಇದು ಗುಂಪನ್ನು ಅಧ್ಯಯನ ಮಾಡುವಂತಹುದು, ವ್ಯಕ್ತಿಗಳನ್ನಲ್ಲ. ಇದು ವ್ಯಕ್ತಿ ಭಿನ್ನತೆಗಳನ್ನು ಅಭ್ಯಸಿಸುವಲ್ಲಿ ಯಾವುದಾದರೂ ಒಂದು ವರ್ತನೆಯ ಲಕ್ಷಣವನ್ನು ಅಥವಾ ವ್ಯಕ್ತಿಯ ಒಂದು ವಿನ್ಯಾಸವನ್ನು ಅಧ್ಯಯನಕ್ಕಾಗಿ ತೆಗೆದುಕೊಳ್ಳಲಾಗುತ್ತದೆ. ಉದಾ : ಬುದ್ಧಿವಂತಿಕೆ, ಎತ್ತರ, ಇ.ಅ. ನಾವು ಬುದ್ಧಿವಂತಿಕೆಯ ಒಂದಂಶವನ್ನು ತೆಗೆದುಕೊಳ್ಳೋಣ. ಒಂದು ಪ್ರಶ್ನಾವಳಿಯನ್ನು ಸಿದ್ಧಪಡಿಸಿ ಒಂದು ಗುಂಪನ್ನು ಎಲ್ಲಾ ವಿದ್ಯಾರ್ಥಿಗಳ ಮೇಲೂ ಪ್ರಯೋಗ ಮಾಡಿದಾಗ ಈ ಗುಂಪು ಅಂದರೆ ಪ್ರಯೋಗಕ್ಕೊಳಗಾದ ಗುಂಪನ್ನು ವಯಸ್ಸು, ತರಗತಿ ಅಥವಾ ಇನ್ನಾವುದಾದರೂ ಒಂದು ಸಾಮಾನ್ಯಗುಣವುಳ್ಳ ಸಾಧ್ಯವಾದಷ್ಟು ಒಂದೇ ಲಕ್ಷಣ ಇರುವಂತಹ ಗುಂಪಾಗಿರುತ್ತದೆ. ಈ ಆಯ್ಕೆಯಾದ ಗುಂಪಿನ ಮೇಲೆ ಒಂದೇ ಸಾರಿಗೆ, ಒಂದೇ ಕಾಲಕ್ಕೆ ಪ್ರಶ್ನಾವಳಿಯ ಪ್ರಯೋಗವನ್ನು ನಡೆಸಲಾಗುತ್ತದೆ. ಅನಂತರ ಸಂಗ್ರಹಿಸಿದ ಅಂಶಗಳನ್ನು ವ್ಯವಸ್ಥಿಗೊಳಿಸಿ, ವಿಶ್ಲೇಷಿಸಿ ಅವೆಲ್ಲವುಗಳ ಸಂಬಂಧಗಳೊಂದಿಗೆ ಹೊರಬಿದ್ದ ಅಂಶದಿಂದ ಗುಂಪಿನ ಒಬ್ಬೊಬ್ಬ ವ್ಯಕ್ತಿಯ ಸ್ಥಾನವೇನು ಎಂಬುದನ್ನು ನಿರ್ಧರಿಸಲಾಗುತ್ತದೆ.

ವ್ಯಕ್ತಿಯ ವೈಯಕ್ತಿಕ ಭಿನ್ನತೆಗಳ ಸ್ವಭಾವ ಮತ್ತು ವ್ಯಾಪ್ತಿಯನ್ನು ಇದುವರೆಗೆ ವ್ಯವಸ್ಥಿತವಾಗಿ ಅಧ್ಯಯನ ಮಾಡಲು ಗುಂಪಿನ ವಿಧಾನವನ್ನೇ ಅನುಸರಿಸಿ ಯಾವುದಾದರೊಂದು ಲಕ್ಷಣವನ್ನು ಒಂದು ಕಾಲಕ್ಕೆ ಕಂಡುಹಿಡಿಯಲಾಗುತ್ತದೆ. ಈ ವಿಧಾನದಿಂದ ಒಂದು ಪ್ರಾತಿನಿಧಿಕ ಗುಂಪಿನಲ್ಲಿ ಕೊಟ್ಟು ಲಕ್ಷಣ ಒಂದನ್ನು ಅಳೆಯಲಾಗುತ್ತಿತ್ತು.

ಈ ವಿಧಾನದ ಅನಾನುಕೂಲಗಳು :

ಈ ಪದ್ಧತಿಯು ವೈಯಕ್ತಿಕ ಭಿನ್ನತೆಗಳನ್ನು ಕಡೆಗಣಿಸುತ್ತದೆ ಮತ್ತು ಪ್ರತಿಯೊಂದು ಮಗುವಿನ ವೈಯಕ್ತಿಕ ವ್ಯಕ್ತಿತ್ವದ ವಿಶಿಷ್ಟತೆಯನ್ನು ಕಳೆದುಕೊಳ್ಳುವಂತಹುದಾಗಿದೆ. ಇದು ವ್ಯಕ್ತಿಯ ಅತ್ಯವಶ್ಯಕವಾದ ಚಿತ್ರವನ್ನು ಕೊಡುವುದಿಲ್ಲ. ಯಾವುದೇ ಒಬ್ಬ ವ್ಯಕ್ತಿಯಲ್ಲಿ ಯಾವುದೇ ಒಂದು ಲಕ್ಷಣ ಒಂಟಿಯಾಗಿರುವುದಿಲ್ಲ. ಪ್ರತಿಯೊಂದು ಲಕ್ಷಣವೂ ಬೃಹತ್ತಾದ ಘಟಕದ ಒಂದು ಭಾಗ. ಅದು 'ಇಡಿ'ಯನ್ನು ಅವಲಂಬಿಸಿದೆಯೇ ವಿನಃ 'ಬಿಡಿ'ಯನ್ನವಲಂಬಿಸಿಲ್ಲ. ಈ ಸಮಗ್ರತೆಯೇ ಪ್ರತಿಯೊಬ್ಬ ವ್ಯಕ್ತಿಗೂ ವಿಶಿಷ್ಟತೆಯನ್ನು

ತಂದುಕೊಟ್ಟಿರುವಂತಹುದಾಗಿದೆ. ವಿದ್ಯಾರ್ಥಿಗಳಲ್ಲಿ ಸಾಧಾರಣವಾಗಿ ೧೦೦ ಐ.ಕ್ಯೂ. (I.Q) ಇರುತ್ತದೆ. ಒಂದೇ ರೀತಿ I.Q. ಇದ್ದರೂ ಸಹ ಅವರು ಒಂದೇ ರೀತಿಯ ಬುದ್ಧಿವಂತಿಕೆಯನ್ನು ಹೊಂದಿರುವುದಿಲ್ಲ. ಆದ್ದರಿಂದ ಈ ವಿಧಾನವು ಗುಂಪಿಗೆ ಸಾಧ್ಯವೇ ಹೊರತು ವೈಯಕ್ತಿಕ ವ್ಯಕ್ತಿಗಳಿಗಲ್ಲ.

ಅನುಕೂಲತೆಗಳು :

ಈ ವಿಧಾನದಿಂದ ಕೆಲವು ವಿದ್ಯಾರ್ಥಿಗಳ ಒಲವನ್ನು ಕಂಡುಹಿಡಿಯಬಹುದು. ನಿಗದಿಯಾದ ಒಂದು ಗುಂಪಿನಲ್ಲಾಗುವ ವ್ಯತ್ಯಾಸದ ಒಲವನ್ನು ಇದು ಕೊಡುತ್ತದೆ ಮತ್ತು ವಿವಿಧ ಗುಂಪುಗಳನ್ನು ತುಲನೆ ಮಾಡಲು ಇದು ಸಹಕಾರಿಯಾಗಿದೆ. ಅತೀ ಕಡಿಮೆ ಅಂಕದಿಂದ ಅತೀ ಹೆಚ್ಚಿನ ಅಂಕಗಳವರೆಗೆ ಹೇಗೆ ನಿರ್ದಿಷ್ಟ ಲಕ್ಷಣಗಳು ಹಂಚಿ ಹೋಗಿದೆ ಎಂಬುದನ್ನು ಕಂಡುಹಿಡಿಯಲು ಈ ವಿಧಾನ ಸಹಕಾರಿಯಾಗಿದೆ.

2. ವೈಯಕ್ತಿಕ ವಿಧಾನ :

ವೈಯಕ್ತಿಕ ಭಿನ್ನತೆಗಳನ್ನರಿಯುವುದರಲ್ಲಿ ಈ ವಿಧಾನವು ಅತ್ಯಂತ ಪ್ರಮುಖ ವಿಧಾನವೆಂದು ಪರಿಗಣಿಸಲಾಗಿದೆ. ಇದು ವ್ಯಾಪ್ತಿಯ ವಿಧಾನವೆಂದು ಪರಿಗಣಿಸಲಾಗಿದೆ. ಇದು ವ್ಯಕ್ತಿಯ ವೈಯಕ್ತಿಕ ಅಭಿಪ್ರಾಯಗಳಿಗೆ ಹೆಚ್ಚಿನ ಒಳನೋಟವನ್ನು ಕೊಡುವಂತಹುದಾಗಿದೆ. ಇದು ವ್ಯಕ್ತಿಯ ಎಲ್ಲಾ ಲಕ್ಷಣಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡುತ್ತದೆ. ಇದು ವೈಯಕ್ತಿಕ ಭಿನ್ನತೆಗಳನ್ನು ಅಧ್ಯಯನ ಮಾಡುವುದರಲ್ಲಿ ಒಂದು ಸಮಗ್ರವಿಧಾನವೆನಿಸಿದೆ. ಈ ಪದ್ಧತಿಯಲ್ಲಿ ವ್ಯಕ್ತಿಯ ವಿವಿಧ ಲಕ್ಷಣಗಳನ್ನು ಕೆಲವು ವರ್ಷಗಳವರೆಗೆ ಅಧ್ಯಯನ ಮಾಡಲಾಗುತ್ತದೆ. ಆದ್ದರಿಂದ ಪ್ರತಿಯೊಬ್ಬ ವ್ಯಕ್ತಿಯ ಇಹಲೋಕದ ವೈಚಿತ್ರ್ಯಗಳ ಬೆಳವಣಿಗೆಗಳನ್ನು ಕಂಡುಹಿಡಿಯಬಹುದು. ನಂತರ ಈ ಎಲ್ಲಾ ಯುಕ್ತಅಂಶಗಳನ್ನು ವ್ಯವಸ್ಥೆಗೊಳಿಸಿ ಒಂದನ್ನಾಗಿ ಮಾಡಲಾಗುತ್ತದೆ. ಅವೆಲ್ಲವನ್ನೂ ಪೃಥಃಕರಣಗೊಳಿಸುವ ಪ್ರಯತ್ನ ಮಾಡಿ ಆ ವ್ಯಕ್ತಿ ಹೇಗೆ ಬಂದ, ಈಗ ಅವನು ಏನು ? ಎಂಬುದನ್ನು ತಿಳಿಯಲು ಅವಕಾಶವಾಗುತ್ತದೆ.

ಇದರ (ಮೆರಿಟ್ಸ್) ಗುಣಗಳು :

ಒಂದು ಕಾಲದಲ್ಲಿ ವಿವಿಧ ಲಕ್ಷಣಗಳು ಹೇಗೆ ಬೆಳೆಯುತ್ತವೆಂಬುದನ್ನು ತಿಳಿಸುತ್ತವೆ ಮತ್ತು ವ್ಯಕ್ತಿಯ ಬೆಳವಣಿಗೆಯಲ್ಲಿ ಒಂದು ವಿಶಿಷ್ಟ ಲಕ್ಷಣ ಏನೆಂಬುದೂ ಸಹ ಗೊತ್ತಾಗುತ್ತದೆ. ಅದು ಒಬ್ಬನೇ ವ್ಯಕ್ತಿಯಲ್ಲಿನ ವಿವಿಧ ಲಕ್ಷಣಗಳು ಹಾಗೂ ಗುಣಗಳು ಹೇಗೆ ವ್ಯವಸ್ಥೆಗೊಂಡಿವೆ ಮತ್ತು ಹೇಗೆ ಅವು ವ್ಯಕ್ತಿಗಳಲ್ಲಿ ಹೊಂದಿಕೊಂಡಿವೆ

ಎಂಬುದನ್ನು ತಿಳಿಸುತ್ತದೆ. ಅದು ಸಮಗ್ರ ವ್ಯಕ್ತಿತ್ವದ ಚಿತ್ರವನ್ನು ಕೊಡುತ್ತದೆ. ಅದು ಒಬ್ಬ ವ್ಯಕ್ತಿಯ ಅಭಿವೃದ್ಧಿ ಮತ್ತು ಲಕ್ಷಣದ ಕ್ಷೀಣತೆಯನ್ನು ತೋರಿಸುತ್ತದೆ. ಇದು ನಂಬಬಹುದಾದ ಸ್ವಭಾವವುಳ್ಳ ನವೀನ ವಿಧಾನವಾಗಿದೆ.

ವೈಯ್ಯಕ್ತಿಕ ವಿಧಾನದಿಂದ ಗೊತ್ತುಪಡಿಸಲ್ಪಟ್ಟಿರುವ ಅಂಶಗಳು :

೧. ಪ್ರತಿಯೊಬ್ಬ ವ್ಯಕ್ತಿಯೂ ತನ್ನದೇ ಆದ ವ್ಯಕ್ತಿತ್ವವನ್ನು ಹೊಂದಿದ್ದಾನೆ. ಯಾವುದೇ ಇಬ್ಬರು ವ್ಯಕ್ತಿಗಳು ಒಂದೇ ರೀತಿ ಇರುವುದಿಲ್ಲ.

೨. ಧನಾತ್ಮಕ ಮತ್ತು ಋಣಾತ್ಮಕವಾಗಿ ಹೋಲಿಸಬಹುದಾದ ವ್ಯಕ್ತಿಯ ಸಾಮರ್ಥ್ಯಗಳು ವಿಚಿತ್ರರೀತಿಯಲ್ಲಿ ವ್ಯವಸ್ಥೆಗೊಂಡಿರುವುದು ತೋರಿಬರುತ್ತದೆ.

★★★★

ಭಾಗ ೪

ಗುಂಪಿನ ವೈವಿಧ್ಯತೆಗಳು : (Group Dynamics)

ಗುಂಪಿನ ಅರ್ಥ :

ಹಲವು ವ್ಯಕ್ತಿಗಳು ಒಂದು ಅಥವಾ ಹಲವು ನಿರ್ದಿಷ್ಟ ಉದ್ದೇಶಗಳಿಗಾಗಿ ಒಂದು ಸಂಘಶಕ್ತಿಯಾಗಿ ಸೇರುವುದಕ್ಕೆ 'ಗುಂಪು' ಎನ್ನುತ್ತೇವೆ. ಮಾನವ ಸಮಾಜಜೀವಿ, ಸಂಘ ಜೀವಿ. ಒಬ್ಬನಿಂದ ಸಾಧಿಸಲಾಗದ ಕೆಲಸಗಳನ್ನು ಅನೇಕರು ಸೇರಿ ಒಗ್ಗಟ್ಟಿನಿಂದ ಈಡೇರಿಸಿಕೊಳ್ಳಲು ಪ್ರಯತ್ನಿಸುವ ಗುಂಪಿಗೆ ಗುಂಪು ಎನ್ನುತ್ತೇವೆ. ಇಂತಹ ಗುಂಪುಗಳಿಗೆ ಸಂಘ, ಸಂಸ್ಥೆಗಳು, ವಿಶ್ವಸ್ಥ ಮಂಡಳಿಗಳು ಎಂದು ಕರೆಯುತ್ತೇವೆ. ಇಲ್ಲಿ ವೈಯಕ್ತಿಕ ವಿಚಾರಗಳು ಹಲವರ ವಿಚಾರಗಳಾಗಿ ಮಾರ್ಪಟ್ಟು ಆ ಗುಂಪು ಅವುಗಳನ್ನು ಮಾನ್ಯತೆ ನೀಡಿದ್ದೇ ಆದರೆ ಅಥವಾ ಅಂಗೀಕೃತವಾದರೆ ಅವು ಗುಂಪಿನ ಕಾರ್ಯ ಸಾಧನೆಗೆ ನೆರವಾಗುತ್ತವೆ. ಹೀಗೆ ವೈವಿಧ್ಯಮಯ ವ್ಯಕ್ತಿತ್ವ ಉಳ್ಳ ಹಲವು ಜನರ ಗುಂಪು ಸೇರಿ ಒಂದು ಅಥವಾ ಹಲವು ಕಾರ್ಯಸಾಧನೆಗೆ ತೊಡಗುವ ಚಿಕ್ಕ ಗುಂಪುಗಳಿಗೆ 'ಗುಂಪು' ಎನ್ನುತ್ತೇವೆ.

ಎಂ. ಸ್ಮಿತ್ ಅಭಿಪ್ರಾಯ ಪಡುವಂತೆ ''ಸಾಮಾಜಿಕ ಗುಂಪು ಒಂದು ಘಟಕವಾಗಿ ಹಲವು ವ್ಯಕ್ತಿಗಳ ಪ್ರತ್ಯೇಕ ಸಂಘಟನೆಯಲ್ಲಿ ಸಾಮೂಹಿಕ ಸಂವೇದನೆ ಒಂದಾಗಿ ಕೆಲಸ ಮಾಡುವ ಶಕ್ತಿ ಮತ್ತು ಸಂಘಟನಾತ್ಮಕ ಕ್ರಮದಲ್ಲಿ ವರ್ತಿಸುವ ತಂಡಕ್ಕೆ ಗುಂಪು'' ಎಂದು ಕರೆಯಲಾಗುತ್ತದೆ.

ಸಮಾಜ ಸಂಕೀರ್ಣವಾದದ್ದು ವೈವಿಧ್ಯಮಯವಾದದ್ದು. ಇಂತಹ ವೈವಿಧ್ಯ ಮಯ ಸಂಕೀರ್ಣ ಸಮಾಜದಲ್ಲಿ ಅನೇಕ ವರ್ಗದ ಜನರಿದ್ದಾರೆ. ಒಂದೊಂದು ವರ್ಗವೂ ಒಂದೊಂದು ಗುಂಪಾಗಿ ಕೆಲಸ ಮಾಡುತ್ತದೆ. ಪ್ರತಿಯೊಂದು ಗುಂಪೂ ಸಹ ತನ್ನ ಅಭಿರುಚಿ ಆಸಕ್ತಿ, ಆಸೆ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಹೋರಾಡುತ್ತದೆ. ಹಾಗೆ ನಡೆಯುವ ಹೋರಾಟದಲ್ಲಿ ಘರ್ಷಣೆಗಳಾಗುತ್ತವೆ. ಹೀಗೆ ಉಂಟಾಗುವ ಘರ್ಷಣೆಗಳನ್ನು ತಪ್ಪಿಸಿ ಪರಸ್ಪರ ಸಹಾಯ ಸಹಕಾರಗಳಿಂದ ಗುರಿಸಾಧನೆಯ ಕಡೆಗೆ ಗಮನವನ್ನು ಕೇಂದ್ರೀಕರಿಸುವ ಗುಂಪಿಗೆ 'ಗುಂಪು' ಮತ್ತು ಸಮೂಹ ಎಂದು ಕರೆಯಲಾಗಿದೆ.

ಈ ನಿಟ್ಟಿನಲ್ಲಿ ಶಿಕ್ಷಣತಜ್ಞರು ಒಂದು ನಿರ್ಣಯಕ್ಕೆ ಬಂದಿದ್ದಾರೆ. ಅದೇಂದರೆ ಪ್ರತಿಯೊಂದು ಗುಂಪಿನ ಹಿಂದೆಯೂ ಕೆಲವು ಗುರಿಗಳಿವೆ ಮತ್ತು ಅಭಿರುಚಿ ಆಸಕ್ತಿಗಳಿವೆ. ಸಾಮಾನ್ಯವಾಗಿ ಈ ಎಲ್ಲ ಗುಂಪಿನ ಗುರಿ ಎಂದರೆ ಸಮಸ್ಯೆಯೊಂದಕ್ಕೆ ಪರಿಹಾರವೊಂದನ್ನು ಕಂಡುಹಿಡಿದು ಸಮಾಜದ ಸದಸ್ಯರ ಬಗ್ಗೆ ಸರಿಯಾದ ಜ್ಞಾನವನ್ನು ಪಡೆಯಬೇಕು.

ಶಾಲೆ ಮತ್ತು ಗುಂಪು :

ಶಿಕ್ಷಣವನ್ನು ಪ್ರೀತಿಸುವವರೆಲ್ಲರೂ ಶಿಕ್ಷಣ ಸಂಸ್ಥೆಗಳಲ್ಲಿ ಗುಂಪುಗಳನ್ನು ಸಹಕಾರತತ್ವಗಳ ಮೇಲೆ ರಚಿಸಿ ಆ ವಿದ್ಯಾರ್ಥಿಗಳಲ್ಲಿ ಆರೋಗ್ಯಕರವಾದ ಪ್ರವೃತ್ತಿ ಬೆಳೆಯುವಂತೆ ಮಾಡಬೇಕು. ಶಾಲೆಗಳಲ್ಲಿ ನಾನಾ ವಿಧವಾದ ವಿದ್ಯಾರ್ಥಿ ಸಂಘಗಳನ್ನು ಮಾಡಿ ಆ ಎಲ್ಲ ರೀತಿಯ ಸಂಘ ಸಂಘಟನೆಯಲ್ಲಿ ಬೇರೆಬೇರೆ ವಿದ್ಯಾರ್ಥಿಗಳು ಕೆಲಸ ಮಾಡುವಂತೆ ಮಾಡುತ್ತಾರೆ. ಅಲ್ಲಿ ಅವರಿಗೆ ಸಹಕಾರಯುಕ್ತ ಜೀವನ, ತಾಳ್ಮೆ, ಕಾರ್ಯಕೌಶಲ್ಯ, ದಕ್ಷತೆ ಇತ್ಯಾದಿ ಎಲ್ಲ ಗುಣಗಳೂ ಬೆಳೆಯಲಿಕ್ಕೆ ಅವಕಾಶವಾಗು ವಂತಹುದಾಗಿದೆ.

ಒಟ್ಟಾವೆ ತನ್ನ 'ಶಿಕ್ಷಣ ಮತ್ತು ಸಮಾಜ' ಎಂಬ ಗ್ರಂಥದಲ್ಲಿ ಹೀಗೆ ಪ್ರತಿಪಾದಿಸಿದ್ದಾನೆ : ''ಎಲ್ಲ ಗುಂಪುಗಳೂ ಸಾಮಾನ್ಯವಾದ ಕೆಲವು ಅಭಿರುಚಿಗಳನ್ನಿಟ್ಟುಕೊಂಡು ಅಸ್ತಿತ್ವಕ್ಕೆ ಬರತಕ್ಕವುಗಳಾಗಿವೆ. ಅದು ಎಲ್ಲ ಸದಸ್ಯರ ಒಂದು ವಿಧವಾದ ಸಹಕಾರದಿಂದ ಕೂಡಿರುವಂಥದ್ದಾಗಿದೆ. ಅದು ಕೇಳಿಕೆಗಾಗಿಯೇ ಆಗಿರಬಹುದು, ಒಬ್ಬರನ್ನೊಬ್ಬರು ಚೆನ್ನಾಗಿ ಅರಿತುಕೊಳ್ಳಲಿಕ್ಕಾಗಿ ಆಗಿರಬಹುದು ಅಥವಾ ತೆಗೆದುಕೊಳ್ಳಬೇಕಾಗಿರುವ ಕ್ರಮವೊಂದನ್ನು ತೀರ್ಮಾನಿಸಲಿಕ್ಕಾಗಿ ಆಗಿರಬಹುದು.''

ಗುಂಪು ಮತ್ತು ಪರಸ್ಪರ ಸಹಕಾರ

ಒಬ್ಬರಿಗೊಬ್ಬರಿಗೆ ಸಹಕಾರವಿರಬೇಕಾದರೆ ಆ ಗುಂಪಿನ ಎಲ್ಲ ಸದಸ್ಯರೂ ಕಾರ್ಯಕ್ರಮದಲ್ಲಿ ಚಟುವಟಿಕೆಯಿಂದ ಭಾಗವಹಿಸಬೇಕು. ಅಂದರೆ ಯಾವೊಬ್ಬ ಸದಸ್ಯನೂ ತನ್ನ ಕರ್ತವ್ಯದಿಂದ ದೂರವಿರಬಾರದು. ಗುಂಪಿನ ಕೆಲಸ ಮಾಡದೆ ಸುಮ್ಮನಿರಬಾರದು. ಇದರೊಂದಿಗೆ ಸಂಘದ ಎಲ್ಲ ಸದಸ್ಯರೂ ಸಹ ಕಾರ್ಯಕ್ರಮ ಗಳಲ್ಲಿ ತುಂಬಾ ಉತ್ಸಾಹ ಮತ್ತು ಅಭಿರುಚಿಗಳನ್ನುಳ್ಳವರಾಗಿರಬೇಕು.

ಎಲ್ಲ ಚಟುವಟಿಕೆಗಳೂ ಅಥವಾ ಕಾರ್ಯಕ್ರಮಗಳೂ ಎಲ್ಲ ಸದಸ್ಯರ ಸಾಮಾನ್ಯ ಅಭಿರುಚಿ, ಆಸಕ್ತಿಗಳನ್ನು ಪೂರ್ಣಗೊಳಿಸುವಂತಿರಬೇಕು. ಆದಕಾರಣ ವೈಯಕ್ತಿಕ

ಅಭಿರುಚಿಗಳನ್ನು ಕೆಲವು ವೇಳೆ ಕಡೆಗಾಣಿಸಬೇಕಾಗಿ ಬರಬಹುದು. ಈ ಎಲ್ಲ ಗುಂಪುಗಳೂ ಸಹ ಸಾಮಾನ್ಯವಾಗಿ ಪ್ರಜಾಸತ್ತಾತ್ಮಕವಾಗಿ ಕೆಲವು ಗುರಿಗಳನ್ನು ಸಾಧಿಸಲು ರೂಪಿಸಿರುವಂತಹವುಗಳಾಗಿವೆ.

ಗುಂಪಿನ ಕಾರ್ಯಕ್ರಮಗಳ ಗುರಿಗಳು :

ಗುಂಪಿನ ಕಾರ್ಯಕ್ರಮಗಳಲ್ಲಿ ಭಾಗವಹಿಸುವವರಿಗೆ ಮೂರು ಮುಖ್ಯ ಅಂಶಗಳು ಅವಶ್ಯಕ. ಅವುಗಳಂದರೆ

೧. ಅಭಿವ್ಯಕ್ತತೆ ೨. ಆಲೋಚನೆ ೩. ಭಾವನೆ

೧. ಅಭಿವ್ಯಕ್ತಿ : - ಗುಂಪಿನ ಸದಸ್ಯರಲ್ಲಿ ಬೇರೆಬೇರೆ ಅಭಿಪ್ರಾಯಗಳಿರುತ್ತವೆ. ಅಂತಹ ಒಂದು ಸಾಮಾನ್ಯ ನಿರ್ಧಾರವನ್ನು ಅವೆಲ್ಲವನ್ನೂ ಒಟ್ಟಾಗಿಸಿ ಮಾಡುವ ನಿರ್ಧಾರವನ್ನು ಅಭಿವ್ಯಕ್ತಿ ಎಂದು ಕರೆಯಲಾಗಿದೆ.

೨. ಆಲೋಚನೆ : ದ್ವಿತೀಯವಾಗಿ ಆಲೋಚನೆ ಎನ್ನುವುದು ಮಾನವನ ಸ್ವಭಾವಗಳಲ್ಲಿ ಒಂದು. ಸಂಘದಲ್ಲಿರುವ ಅಥವಾ ಗುಂಪಿನಲ್ಲಿರುವ ಜನರು ಎಲ್ಲರೂ ಒಂದು ವಿಧದಲ್ಲಿ ಆಲೋಚಿಸುವುದು ಒಂದು ಸಾಮಾನ್ಯ ಪ್ರವೃತ್ತಿ. ಅವರು ವೈಯಕ್ತಿಕ ಮಾರ್ಗದಲ್ಲಿ ಆಲೋಚಿಸಿದರೂ ಅವರೆಲ್ಲರೂ ಒಂದು ಸಾಮಾನ್ಯ ತೀರ್ಮಾನಕ್ಕೆ ಬರುತ್ತಾರೆ.

೩. ಭಾವನೆ : ಗುಂಪಿನಲ್ಲಿರುವ ಎಲ್ಲ ಸದಸ್ಯರೂ ಸಹ ಒಂದೇ ರೀತಿಯಲ್ಲಿ ಭಾವಿಸುತ್ತಾರೆ ಅಥವಾ ಗುಂಪಿನಲ್ಲಿರುವಾಗ ಅವರ ಭಾವನೆಗಳು ಒಂದೇ ಆಗಿರುತ್ತವೆ. ಆದ್ದರಿಂದ ಗುಂಪಿನ ಸದಸ್ಯರಲ್ಲಿ ಸದವಕಾಶವಾದ ವಾತಾವರಣ ಲಭ್ಯವಾದುದಾಗಿರುತ್ತದೆ. ಆದ್ದರಿಂದ ಅವರು ತಮ್ಮತಮ್ಮ ಭಾವನೆಗಳನ್ನು ಸ್ವತಂತ್ರವಾಗಿ, ಧೈರ್ಯವಾಗಿ, ನಿಸ್ಸಂಕೋಚವಾಗಿ ಅಭಿವ್ಯಕ್ತಪಡಿಸುತ್ತಾರೆ. ಈ ರೀತಿಯಲ್ಲಿ ಅವರು ಪ್ರತಿಯೊಂದು ಸಮಸ್ಯೆಗೂ ಒಂದು ಸಾಮಾನ್ಯ ಪರಿಹಾರವನ್ನು ಕಂಡುಹಿಡಿಯುತ್ತಾರೆ.

ಆದ್ದರಿಂದ ಸಮಾಜದಲ್ಲಿರುವ ಗುಂಪು ಮತ್ತು ಸಂಘಸಂಸ್ಥೆಗಳಿಗೆ ಒಂದಕ್ಕೊಂದಕ್ಕೆ ವಿವಿಧ ಅಭಿರುಚಿಗಳಿರುವುದು ಮತ್ತು ಆಸಕ್ತಿಗಳಿರುವುದು ಸುಗೋಚರ. ಅಲ್ಲದೆ ನಾನಾ ವಿಧದಲ್ಲಿ ಜನರ ಮೇಲೆ ಪರಿಣಾಮ ಬೀರುವಂಥ ಅಭಿರುಚಿಯ ವರ್ತುಲವನ್ನು ಕಾಣಬಹುದಾಗಿದೆ.

ಒಟ್ಟಾವೆಯು ಹೇಳುವಂತೆ ''ಅಭಿರುಚಿಯು ವರ್ತುಲದಲ್ಲಿ ಭಾಗವಹಿಸುವ ಮತ್ತು ಸಹಕರಿಸುವ ಕಾರ್ಯಕ್ಕೆ ತೆಗೆದುಕೊಳ್ಳುವ ಕಾಲಕ್ಕೆ ಕಾಯಬೇಕಾಗಿಲ್ಲ''.

ಅದು ಅನೇಕ ಸಲ ಗುಂಪಿನ ಒಂದು ಸಭೆಯಲ್ಲಿಯೇ ಪುನರಾವರ್ತಿತವಾಗಬಹುದು. ಅಥವಾ ಯಾವುದೇ ಸಹಕಾರವನ್ನು ಸಾಧಿಸುವ ಮುನ್ನ ಅನೇಕ ಸಭೆಗಳು ನಡೆಯಬಹುದು. ಪ್ರತಿ ಸಲವೂ ಜಯಪ್ರದವಾದ ಸಹಕಾರವನ್ನು ಸಾಧಿಸಿದ್ದೇ ಆದರೆ ಅಂತಹ ಗುಂಪು ಒಂದು ಹೊಸ ಅಭಿರುಚಿಯ ಮಟ್ಟವನ್ನು ಮುಟ್ಟಿರುವಂತಹುದಾಗಿದೆ ಮತ್ತು ಹೊಸ ಸನ್ನಿವೇಶದಲ್ಲಿ ಭಾಗವಹಿಸುವಿಕೆಯು ಮುಂದುವರಿಯುತ್ತದೆ.

ಸಾಮಾನ್ಯವಾದ ಅಭಿರುಚಿಯೊಂದರಿಂದ ಸ್ಫೂರ್ತಿಗೊಂಡು ಪ್ರತ್ಯೇಕವಾದ ಗುರಿಯೊಂದನ್ನು ಸಾಧಿಸಲು ಜನರು ಗುಂಪಿನಲ್ಲಿ ಸೇರುತ್ತಾರೆ. ಕೆಲವು ಸಂದರ್ಭಗಳಲ್ಲಿ ವೈಯಕ್ತಿಕ ಅಭಿರುಚಿಗಳು ಬಹಳ ಶಕ್ತಿಯುತವಾಗಿರುತ್ತವೆ. ಕಾರಣವೇನೆಂದರೆ ಆ ಸದಸ್ಯರಲ್ಲಿ ಒಂದು ವಿಧವಾದ ಒತ್ತಡವು ಸೃಷ್ಟಿಸಲ್ಪಡುವಂತಹುದಾಗಿದೆ. ಆದ ಕಾರಣ ಅವರಲ್ಲಿ ಒಂದು ವಿಧವಾದ ಬಿರುಕುಂಟಾಗುತ್ತದೆ. ಈ ರೀತಿಯ ಬಿರುಕಿಗೆ ಮೂರು ಕಾರಣಗಳಿರುತ್ತವೆ. ಅತಿಯಾದ ಉತ್ಸಾಹ, ತಾನೂ ಪಾತ್ರವಹಿಸಲು ಅವಕಾಶವನ್ನು ಹುಡುಕುವುದು ಮತ್ತು ಅಭಿಪ್ರಾಯಬೇಧವಿರುವುದು - ಇವೆ ಆ ಮೂರು ಕಾರಣಗಳಾಗಿವೆ.

ಉಪಾಧ್ಯಾಯನ ಪಾತ್ರ :

ಗುಂಪಿನ ವೈವಿಧ್ಯತೆಗಳೇನು, ಗುಂಪಿನ ಬಯಕೆ, ನಿರೀಕ್ಷೆಗಳೇನು ಎಂಬಿತ್ಯಾದಿಗಳೆಲ್ಲವನ್ನೂ ಯಾವುದೇ ಗುಂಪಿನ ಯಾವುದೇ ಸನ್ನಿವೇಶದಲ್ಲಿರುವ ವ್ಯಕ್ತಿ ಅರಿತುಕೊಳ್ಳಬೇಕಾಗುತ್ತದೆ.

ಅಂದ ಮೇಲೆ ತರಗತಿಯಲ್ಲಿ ಉಪಾಧ್ಯಾಯನ ಪಾತ್ರ ಅತ್ಯಂತ ಪ್ರಮುಖವಾದದ್ದು. ಅವನ ಪಾತ್ರವನ್ನು ಸಂಸ್ಥೆಯ ನಿಯಮಗಳು ನಿರ್ಧರಿಸಬಹುದು. ಈ ನಿಯಮಗಳು ಕರ್ತವ್ಯಗಳನ್ನು ಮತ್ತು ಆಬ್ಲಿಗೇಷನ್‌ಗಳನ್ನೂ ವಿಶಿಷ್ಟವಾಗಿ ತಿಳಿಸಬಹುದು. ಅವು ನಾನಾವಿಧ ಶಕ್ತಿಸಾಮರ್ಥ್ಯಗಳಿಂದ ಕೂಡಿರಬಹುದು. ಉಪಾಧ್ಯಾಯನು ನಾನಾ ವಿಧವಾದ ಕರ್ತವ್ಯಗಳನ್ನು ಮಾಡಬೇಕಾಗುತ್ತದೆ ಮತ್ತು ಅನೇಕ ವಿಧವಾದ ಉಪಕಾರಭಾರವನ್ನು ಸಹ ಪೂರೈಸಬೇಕಾಗುತ್ತದೆ. ಇವುಗಳೇ ಅವನ ಪಾತ್ರವೇನೆಂಬುದನ್ನು ನಿರ್ಧರಿಸುತ್ತದೆ.

ಬೋಧನಾ ಪಾತ್ರ :

ಉಪಾಧ್ಯಾಯನ ಪ್ರಮುಖ ಕರ್ತವ್ಯವೇನೆಂದರೆ ಅತ್ಯುತ್ತಮ ಬೋಧಕನಾಗಿ ಕಾರ್ಯವೆಸಗುವುದು. ಎಷ್ಟು ಪರಿಣಾಮಕಾರಿಯಾಗಿ ಬೋಧಿಸಲು ಶಕ್ಯವೋ ಅಷ್ಟು

ಚೆನ್ನಾಗಿ ಮಕ್ಕಳಿಗೆ ಬೋಧನೆಗೈಯಬೇಕು. ಅವನ ಬೋಧನಾಪಾತ್ರಗಳು ನಾನಾ ವಿಧವಾದವುಗಳಾಗಿವೆ. ಉಪಾಧ್ಯಾಯನು ಮಕ್ಕಳ ಕಲಿಕೆಯಲ್ಲಿಸಹಾಯ ಮಾಡುತ್ತಾನೆ. ಅವನು ಮಕ್ಕಳನ್ನು ಹುರಿದುಂಬಿಸಿ ಬೋಧಿಸಬೇಕು. ಈ ರೀತಿ ಹುರಿದುಂಬಿಸುವ ಕಾರ್ಯದಲ್ಲಿ ಬೋಧಕನು ಮಕ್ಕಳನ್ನು ಕಲಿಕೆಗೆ ಸಿದ್ಧಗೊಳಿಸುವವನಾಗಿದ್ದಾನೆ. ಇದು ಅತ್ಯಂತ ಪ್ರಮುಖವಾದ ಪಾತ್ರ. ಅನೇಕ ಉಪಾಧ್ಯಾಯರು ಅವರಲ್ಲಿ ಎಷ್ಟೇ ವಿಧವಾದ ಉತ್ಸಾಹವಿದ್ದಾಗ್ಯೂ ಅವರು ಪರಿಣಾಮಕಾರಿಯಾಗಿ ಬೋಧನೆಗೈಯಲಾರರು. ಕಾರಣ ಅವರು ಪ್ರಮುಖವಾದ ಪಾತ್ರದ ಕಡೆ ಹೆಚ್ಚು ಗಮನ ಕೊಡದಿರುವುದೇ ಆಗಿದೆ.

ಉಪಾಧ್ಯಾಯನು ಕಲಿಸುವಿಕೆಯ ಪ್ರತಿನಿಧಿಯಂತೆ ಕಾರ್ಯವೆಸಗಬೇಕು. ಈ ರೀತಿಯ ಪಾತ್ರದಲ್ಲಿಮಕ್ಕಳು ಏನನ್ನು ಕಲಿಯಬೇಕೆಂದು ಯೋಚಿಸಲಾಗಿರುತ್ತದೆಯೋ ಅದನ್ನು ಸರಿಯಾಗಿ ಕಲಿಯಲು ಮಕ್ಕಳನ್ನು ಪ್ರೇರಣೆಗೈಯಬೇಕು. ಈ ದಿಸೆಯಲ್ಲಿ ಉಪಾಧ್ಯಾಯನು ನಾಲ್ಕು ಪ್ರಮುಖ ಮಾರ್ಗಗಳಲ್ಲಿ ಕಲಿಕೆಯ ಪ್ರಾತಿನಿಧ್ಯವನ್ನು ವಹಿಸಬೇಕು. ಉಪಾಧ್ಯಾಯನು ಮಕ್ಕಳನ್ನು ಪ್ರಶ್ನಿಸಿ ಉತ್ತರವನ್ನಪೇಕ್ಷಿಸುತ್ತಾನೆ. ಮಕ್ಕಳು ಉತ್ತರಿಸಲಾಗದಿದ್ದಲ್ಲಿ ಇವನೇ ಉತ್ತರಿಸುತ್ತಾನೆ ಮತ್ತು ವಿವರಿಸುತ್ತಾನೆ. ಅವನು ಏನನ್ನು ವಿವರಿಸುತ್ತಿರುತ್ತಾನೋ ಅದನ್ನು ಪ್ರದರ್ಶಿಸುತ್ತಾನೆ ಮತ್ತು ಅವನು ಅವುಗಳನ್ನು ಎಷ್ಟರಮಟ್ಟಿಗೆ ಅನುಷ್ಠಾನಕ್ಕೆ ತರಬಹುದೆಂಬುದನ್ನು ವಿವರಿಸುತ್ತಾನೆ.

ಉಪಾಧ್ಯಾಯನಿಗೆ ಮೌಲ್ಯಮಾಪನಗೈಯ್ಯುವವನ ಪಾತ್ರವಿದೆ. ಬೋಧನಾ ಕಾರ್ಯಕ್ರಮವನ್ನು ನೋಡಿದ ನಂತರ ಅದನ್ನು ಎಷ್ಟರಮಟ್ಟಿಗೆ ಕಾರ್ಯರೂಪಕ್ಕೆ ಜಯಪ್ರದವಾಗಿ ತರಲು ಸಾಧ್ಯವೆಂಬುದನ್ನು ಕಂಡುಕೊಳ್ಳುತ್ತಾನೆ. ಇದನ್ನು ಅವನು ಮಕ್ಕಳನ್ನು ಪರೀಕ್ಷಿಸುವುದರ ಮೂಲಕ ಪ್ರಶ್ನೆಗಳನ್ನು ಕೇಳುವುದರ ಮೂಲಕ ಮತ್ತು ಅವನಿಗೆ ಸೂಕ್ತವಾಗಿ ತೋರಿಬರಬಹುದಾದ ಇತರೆ ಉಪಾಯಗಳಿಂದ ಪರಿಶೀಲಿಸುತ್ತಾನೆ.

ಬೋಧಕನ ಇತರ ಪಾತ್ರಗಳು :

ಉಪಾಧ್ಯಾಯನು ಕೇವಲ ಬೋಧನೆಯ ಪಾತ್ರದಲ್ಲಿ ಮಾತ್ರವೇ ನೆರವು ನೀಡಿದರೆ ಸಾಲದು. ಇನ್ನೂ ಅನೇಕಾನೇಕ ರೀತಿಯಲ್ಲಿನೆರವಾಗಬೇಕು. ಇನ್ನೂ ಅನೇಕ ಪಾತ್ರಗಳಲ್ಲಿನಾಯಕತ್ವದ ಅರಿವುಂಟು ಮಾಡಿಕೊಡಬೇಕು. ಉಪಾಧ್ಯಾಯನು ಗ್ರಂಥ ಪಾಲಕನಾಗಿ, ಆಟಪಾಠಗಳ ಮೇಲ್ವಿಚಾರಕನಾಗಿ, ಸಾಮಾಜಿಕ ಚಟುವಟಿಕೆಗಳ ಕನ್ವೀನರ್‌ಆಗಿ ಎನ್.ಸಿ.ಸಿ. ಅಧಿಕಾರಿಯಾಗಿದ್ದು ಮತ್ತು ಇನ್ನೂ ಇತ್ಯಾದಿ ಅನೇಕ ರೀತಿಯ ಕಾರ್ಯಕ್ರಮಗಳಲ್ಲಿ ನೆರವಾಗುತ್ತಾನೆ. ಇವೆಲ್ಲ ಬಹುಮುಖ್ಯ ಕಾರ್ಯಗಳು. ಆದ್ದರಿಂದ ಅವು ಉಪಾಧ್ಯಾಯನ ಗಮನವನ್ನು ಸೆಳೆಯುವುದು ಸೂಕ್ತ.

ಆಡಳಿತದ ಪಾತ್ರ :

ಉಪಾಧ್ಯಾಯನೂ ಸಹ ಒಬ್ಬ ದಕ್ಷ ಆಡಳಿತಗಾರನಾಗಿರಬೇಕು. ಅವನು ತರಗತಿಯಲ್ಲಿ ಶಿಸ್ತನ್ನು ಕಾಪಾಡಬೇಕು. ಮಕ್ಕಳು ಕೊಡುವ ಶುಲ್ಕದೊಂದಿಗೆ ವ್ಯವಹರಿಸಬೇಕು. ಸರಿಯಾಗಿ ರಿಜಿಸ್ಟರುಗಳನ್ನು ಇಡಬೇಕು. ಹಾಜರಾತಿಯನ್ನು ಗಮನಿಸಬೇಕು. ಇತ್ಯಾದಿ ಇನ್ನೂ ಅನೇಕ ರೀತಿಯಲ್ಲಿ ಆಡಳಿತ ಕರ್ತವ್ಯಗಳನ್ನು ಮಾಡಬೇಕು.

ಸದಸ್ಯತ್ವದ ಪಾತ್ರ :

ಉಪಾಧ್ಯಾಯನು ಶಾಲೆಯ ಸಮುದಾಯದ ಒಬ್ಬ ಸದಸ್ಯ. ಉಪಾಧ್ಯಾಯರ ಕೌನ್ಸಿಲ್ ಸಭೆಯ ಸದಸ್ಯ. ಈ ಪಾತ್ರದಲ್ಲಿ ಅವನು ಒಬ್ಬ ಸದಸ್ಯನ ಪಾತ್ರ ವಹಿಸುತ್ತಾನೆ. ಈ ಪಾತ್ರದಲ್ಲಿ ಅವನು ನೀತಿ ನಡವಳಿಕೆಗಳನ್ನು ಪ್ರತಿಷ್ಠಾಪಿಸಲು ಮತ್ತು ತನ್ನ ಶಾಲೆಯಲ್ಲಿನ ಅಧ್ಯಾಪಕ ವರ್ಗವು ದಕ್ಷ ಕೆಲಸವನ್ನು ನಡೆಸಲು ಸಹಾಯಕನಾಗುತ್ತಾನೆ.

ಲೈಸಾನ್ ಏಜಂಟ್‌ನ ಪಾತ್ರ :

ಉಪಾಧ್ಯಾಯನು ಶಾಲೆಗೂ ಮತ್ತು ಸಮುದಾಯಕ್ಕೂ ಸಂಬಂಧವನ್ನು ರೂಢಿಸುವುದರಲ್ಲಿ ಸಹಾಯ ಮಾಡಬೇಕು. ಶಾಲೆಯ ಕಾರ್ಯಕ್ರಮಗಳು ಉಪಾಧ್ಯಾಯನ ಮೂಲಕವೇ ಸಮಾಜ ಸಮುದಾಯಕ್ಕೆ ತಲುಪಬೇಕು. ಅವನು ಸಭೆಗಳನ್ನು ಕರೆಯಬೇಕಾಗುತ್ತದೆ. ಪೋಷಕ ಬೋಧಕರಿಗಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೇರ್ಪಡಿಸಿ ಶಾಲೆ ಮತ್ತು ಸಮುದಾಯಗಳ ಸಂಬಂಧವನ್ನು ಅಭಿವೃದ್ಧಿಗೊಳಿಸಬೇಕಾದುದು ಅವನ ಧರ್ಮ.

ಉಪಾಧ್ಯಾಯನು ಈ ರೀತಿಯಲ್ಲಿ ನಾನಾ ವಿಧವಾದ ಕಾರ್ಯಗಳನ್ನು ನಡೆಸಲು ಚೆನ್ನಾಗಿ ಸಿದ್ಧನಾಗಬೇಕು. ಇದಕ್ಕೆ ಬೇಕಾದ ಸಿದ್ಧತೆಯು ತರಬೇತಿ ಕಾಲೇಜುಗಳಲ್ಲಿ ಸಿಗುವಂಥದ್ದಾಗಿದೆ. ಉಪಾಧ್ಯಾಯನ ಮೇಲೆ ಯಾವ ಯಾವ ಸಂಘಗಳಲ್ಲಿ ಅವನು ಕೆಲಸ ಮಾಡಬೇಕೆಂಬುದನ್ನು ತೀರ್ಮಾನಿಸುವುದು ಮತ್ತು ಕಾರ್ಯಕ್ರಮಗಳನ್ನು ಹೇಗೆ ನಡೆಸಬೇಕೆಂಬುದನ್ನು ತೀರ್ಮಾನಿಸುವುದು ಇತ್ಯಾದಿಗಳನ್ನು ತರಬೇತಿ ಕಾಲೇಜಿನಲ್ಲಿ ಹೇಳಿಕೊಟ್ಟಿರುತ್ತಾರೆ. ಉಪಾಧ್ಯಾಯನಾಗಿ ಅವನ ಕರ್ತವ್ಯಗಳನ್ನು ನೆರವೇರಿಸಲು ಅವನಿಗೆ ಅಲ್ಲಿ ಭದ್ರ ಬುನಾದಿ ದೊರೆಕಿರುವಂತಹುದಾಗಿದೆ. ಆದರೆ ಅದು ಭವಿಷ್ಯದ ಸಿದ್ಧತೆಗೆ ಕೊಡುವ ಒಂದು ಪೂರ್ವ ತಯಾರಿ ಅಷ್ಟೆ. ಇಷ್ಟಲ್ಲದೆ ಉಪಾಧ್ಯಾಯನು ಶಾಲೆಯ ಕಾರ್ಯಕ್ರಮಗಳನ್ನು ಯೋಜಿಸುವುದರಲ್ಲಿ ಹೆಚ್ಚಿನ ಚಾತುರ್ಯವನ್ನು ಸಾಧಿಸಿಕೊಳ್ಳಬೇಕು. ಸುವ್ಯವಸ್ಥಿತವಾದ ಕಾರ್ಯಕ್ರಮ ಮತ್ತು ಅಧ್ಯಯನಗಳ

ಮೂಲಕವೇ ಅವನು ಹೆಚ್ಚಿನ ಜ್ಞಾನಸಂಪತ್ತನ್ನು ಗಳಿಸಬೇಕು. ಎಲ್ಲ ವಿಷಯಗಳಲ್ಲೂ ಸರಿಯಾದ ಮೌಲ್ಯಮಾಪನ ವಿಧಾನವನ್ನು ಅನುಸರಿಸಬೇಕು.

ಶಾಲೆಯ ಮುಖ್ಯಸ್ಥರು ಅವರ ಪಾತ್ರಗಳನ್ನು ಅಂಗೀಕರಿಸಿ ಅವರೊಂದಿಗೆ ಸಹಕರಿಸಬಹುದು.

ಗುರಿಯನ್ನು ನಿರ್ಧರಿಸುವಿಕೆ :

ತರಗತಿಯೂ ಸಹ ಒಂದು ಗುಂಪು. ಅದೂ ಸಹ ಅನೇಕ ಅಂಶಗಳಿಂದ ಕೂಡಿದುದಾಗಿದೆ. ಒಂದಂಶವೆಂದರೆ ಗುರಿಯನ್ನು ನಿರ್ಧರಿಸುವುದು. ಗಿಬ್ ಎಂಬುವನು ಗುಂಪಿನ ಗುರಿಯನ್ನು ವಿವರಿಸುವಂತೆ ''ಯಾವುದೇ ಒಂದನ್ನೊಂದ ವಲಂಬಿಸಿದ ವ್ಯವಸ್ಥಿತ ಅಪೇಕ್ಷೆಯು ಉದ್ದೀಪನಗೊಂಡು ತನ್ನ ವ್ಯವಸ್ಥೆಯನ್ನು ತಾನೇ ನೋಡಿಕೊಂಡು ಗುಂಪಿನ ವ್ಯವಸ್ಥೆಯನ್ನು ನಿರ್ದೇಶಿಸುವಂತಹುದಾಗಿದೆ. ಗುಂಪಿಗೆ ಸಾಧಿಸಬೇಕಾದ ಕಾರ್ಯವೊಂದಿರುತ್ತದೆ. ತರಗತಿಯ ಗುಂಪು ಕಲಿಯುವಿಕೆಯ ಉದ್ದೇಶಕ್ಕೋಸ್ಕರವಾಗಿಯೆ ರಚಿಸಿರುವಂಥದ್ದಾಗಿದೆ''. ಆದ್ದರಿಂದ ತರಗತಿಯು ನಿರ್ದಿಷ್ಟವಾದ ಹೊಣೆ ಹೊತ್ತಿರುವಂಥ ಒಂದು ಗುಂಪು.

ತರಗತಿಯಲ್ಲಿನ ಗುರಿಗಳು ಈಗಾಗಲೇ ಅವಶ್ಯಕತೆಗೆ ತಕ್ಕಂತೆ ನಿರ್ಧರಿಸಲ್ಪಟ್ಟಿರುತ್ತದೆ. ಅಥವಾ ವಿದ್ಯಾರ್ಥಿಗಳ ಸಲಹೆಯನ್ನು ಪಡೆದು ನಿಗದಿಗೊಳಿಸಲ್ಪಟ್ಟಿರುತ್ತದೆ. ಗುರಿಗಳು ವೈಯಕ್ತಿಕ ಮಟ್ಟದಲ್ಲೂ ಇರಬಹುದು ಅಥವಾ ಗುಂಪಿನ ಮಟ್ಟದಲ್ಲೂ ಇರಬಹುದು. ಆದ್ದರಿಂದ ಗುಂಪು ತನ್ನ ಗುರಿಗಳನ್ನು ನಿರ್ಧರಿಸುವಲ್ಲಿ ಸರಿಯಾದ ಕಾರ್ಯವೆಸಗಬೇಕು. ಇದು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವುದನ್ನು ಅವಲಂಬಿಸಿರುವಂತಹುದಾಗಿದೆ.

ಗುಂಪಿನ ವಾತಾವರಣ :

ಉಪಾಧ್ಯಾಯನು ಏನೆಲ್ಲ ಅವಕಾಶಗಳ ವಾತಾವರಣವನ್ನು ಕಲ್ಪಿಸಬಹುದೋ ಅದೆಲ್ಲವನ್ನೂ ಮಾಡಬೇಕು. ಇದನ್ನು ಮಾಡಲು ಉಪಾಧ್ಯಾಯನು, ಮಕ್ಕಳು ತಮ್ಮ ಅನಿಸಿಕೆಗಳನ್ನು ಸ್ವತಂತ್ರವಾಗಿ ಅಭಿವ್ಯಕ್ತಪಡಿಸಲು ಅವಕಾಶಮಾಡಿಕೊಡಬೇಕು. ಚರ್ಚೆಯಲ್ಲಿ ಭಾಗವಹಿಸಲು ಮಕ್ಕಳನ್ನು ಪ್ರೋತ್ಸಾಹಿಸಬೇಕು. ನಿರ್ಭಯವಾಗಿ ತಮ್ಮ ವಿಚಾರಧಾರೆಗಳನ್ನು ಹರಿಯಬಿಡುವ ಸನ್ನಿವೇಶಗಳನ್ನು ಸೃಷ್ಟಿಸಿಕೊಡಬೇಕು.

ತರಗತಿಯಲ್ಲಿ ಗುಂಪಿನ ಘರ್ಷಣೆ :

ಇನ್ನು ಯಾವುದೇ ಗುಂಪಿನಲ್ಲಿ ತಿಕ್ಕಾಟ ಅಥವಾ ಘರ್ಷಣೆಗಳು ಪ್ರಾರಂಭ

ವಾಗುವಂತೆ ತರಗತಿಯ ಗುಂಪುಗಳಲ್ಲಿಯೂ ಘರ್ಷಣೆ ಪ್ರಾರಂಭವಾಗಬಹುದು. ಘರ್ಷಣೆಯು ಆಯಾ ಗುಂಪಿನಲ್ಲಿಯೆ ಇರಬಹುದು ಅಥವಾ ಇನ್ನೊಂದು ತರಗತಿಯ ಗುಂಪಿನೊಂದಿಗಿರಬಹುದು. ತರಗತಿಯ ಗುಂಪಿನಲ್ಲಿ ಉಂಟಾಗಬಹುದಾದ ಯಾವುದೇ ಘರ್ಷಣೆಗೆ ಅವಕಾಶವಿಲ್ಲದಂತೆ ತಡೆಹಿಡಿಯಬೇಕು. ಅವುಗಳ ಮೂಲವನ್ನು ಹುಡುಕಿ ಉಪಾಧ್ಯಾಯರು ತಕ್ಕ ಪರಿಹಾರವನ್ನು ಕಂಡುಹಿಡಿಯಬೇಕು.

ಉಪಾಧ್ಯಾಯರು ತಕ್ಕ ಪರಿಹಾರವನ್ನು ಕಂಡುಹಿಡಿಯದೇ ಇದ್ದಲ್ಲಿ ಗುಂಪಿನಲ್ಲಿ ಘರ್ಷಣೆ ಪ್ರಾರಂಭವಾಗಬಹುದು. ಆದ್ದರಿಂದ ಮಕ್ಕಳ ಭಾವೋದ್ವೇಗಗಳ ಬಗ್ಗೆ ಉಪಾಧ್ಯಾಯರು ಹೆಚ್ಚಿನ ಗಮನ ಕೊಡಬೇಕು. ಉಪಾಧ್ಯಾಯರು ಯಾವುದಾದರೂ ವಿಷಯದ ಬಗ್ಗೆ ತೀರ್ಮಾನಗಳನ್ನು ಕೈಗೊಳ್ಳುವಾಗ ವಿದ್ಯಾರ್ಥಿಗಳನ್ನು ಅದರಲ್ಲಿ ಭಾಗಿಗಳಾಗುವಂತೆ ಮಾಡಬೇಕು. ಸಮಸ್ಯೆಯನ್ನು ಬಿಡಿಸುವಾಗಲೂ ಅದೇ ರೀತಿ ಮಾಡಬೇಕು. ಸ್ವತಂತ್ರವಾದ ಮತ್ತು ನಿರ್ಭೀತವಾದ ತೀರ್ಮಾನಗಳು ಹೆಚ್ಚು ಪರಿಣಾಮಕಾರಿ. ಕೆಲವು ಸಂದರ್ಭಗಳಲ್ಲಿ ತಿಕ್ಕಾಟಗಳು ತಿಕ್ಕಾಟಗಳಾಗಿಯೇ ಹುಟ್ಟಿಕೊಳ್ಳುವಂತಹವುಗಳಾಗಿವೆ. ಅಂತಹ ಸಂದರ್ಭಗಳಲ್ಲಿ ಸಹ ಉಪಾಧ್ಯಾಯರು ಮುಖ್ಯೋಪಾಧ್ಯಾಯರೊಡನೆ ಚರ್ಚೆ ಮಾಡಬೇಕು. ಹಾಗೆ ಮಾಡುವುದು ಸಹಾಯಕವಾಗುತ್ತದೆ. ಇದೇ ಶಾಲೆಯಲ್ಲಿ ಒಂದು ವಿಧವಾದ Permissive atmosphere ಇರಬೇಕು. ಉಪಾಧ್ಯಾಯರುಗಳು ಯಾವಾಗ ಬೇಕೆಂದರೆ ಆಗ ಮುಖ್ಯ ಅಧ್ಯಾಪಕರೊಂದಿಗೆ ಚರ್ಚಿಸಲು ಸಿದ್ಧವಿರಬೇಕು. ಇಡೀ ಶಾಲೆಯೆ ಸೌಹಾರ್ದ ಸಹಾಯ ಸಹಕಾರಗಳ ಕಣಜದಂತಿರಬೇಕು. ಆಗಿಂದಾಗ್ಯೆ ಮುಖ್ಯೋಪಾಧ್ಯಾಯರು ಮತ್ತು ಅಧ್ಯಾಪಕರ ಸಭೆ ಸೇರುತ್ತಿರಬೇಕು.

ಇಷ್ಟೆಲ್ಲ ಮಾಡಿದ ಮೇಲೆ ಎಲ್ಲ ಅಧ್ಯಾಪಕರೂ ತರಗತಿಯ ಜವಾಬ್ದಾರಿಯನ್ನು ಹೊರಲು ಬೇಕಾದ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಆಗ ಅಧ್ಯಾಪಕವೃಂದ ಕೇಂದ್ರೀಕರಿಸಿದ ಗುರಿಯನ್ನು ಪರಿಣಾಮಕಾರಿಯಾಗಿ ಕೆಲಸ ಮಾಡಲು ಸಹಕಾರಿ ಯಾಗುತ್ತದೆ. ಇದೆಲ್ಲವೂ ಸಹ ಉಪಾಧ್ಯಾಯರು ಎಷ್ಟರಮಟ್ಟಿಗೆ ನಾಯಕತ್ವ ವಹಿಸುತ್ತಾರೆಂಬುದನ್ನು ಅವಲಂಬಿಸಿದೆ.

ನಾಯಕನಾಗಿ ಅಧ್ಯಾಪಕ :

ತರಗತಿಯ ಗುಂಪು ತಲುಪಬೇಕಾದ ಗುರಿಯನ್ನು ಸರಿಯಾದ ದಿಕ್ಕಿನಲ್ಲಿ ತಲುಪುವಂತೆ ಮಾಡಲು ಅಧ್ಯಾಪಕನ ಮಾರ್ಗದರ್ಶನ ಅತ್ಯಗತ್ಯ. ಅಧ್ಯಾಪಕನು ಈ ದಿಸೆಯಲ್ಲಿ ನಾಯಕತ್ವವನ್ನು ವಹಿಸಬೇಕು. ಹೇಗಾದರೂ ಉಪಾಧ್ಯಾಯ ತಾನೇ

ನಾಯಕನಾಗಲು ಸಾಧ್ಯವಿಲ್ಲ. ಆದರೆ ನಾಯಕತ್ವದ ಕಾರ್ಯವನ್ನು ಚಲಾಯಿಸಬೇಕು. ಯಾವುದೇ ಕಾರ್ಯವೆಸಗಿದರೂ ನಾಯಕನ ಪಾತ್ರ ಬಹಳ ಮಹತ್ತರವಾದದ್ದು. ಆದ್ದರಿಂದ ಉಪಾಧ್ಯಾಯನು ತಾನು ಎಷ್ಟರ ಮಟ್ಟಿಗೆ ನಾಯಕನಾಗಬಹುದು ಮತ್ತು ಯಾವ ರೀತಿ ನಾಯಕತ್ವದ ಕಾರ್ಯಗಳನ್ನು ಪೂರೈಸಬಹುದೆಂಬುದನ್ನು ನಿರ್ಧರಿಸಬೇಕು.

ಅಧ್ಯಾಪಕನು ನಾಯಕನಾಗಿ ಗುಂಪಿನ ಗುರಿಗಳನ್ನು ನಿರ್ಧರಿಸಬೇಕು ಮತ್ತು ಇಡೀ ಗುಂಪು ಆ ರೀತಿ ನಿರ್ಧರಿಸಿದ ಗುರಿಯ ಕಡೆಗೇ ಸಾಗುವಂತೆ ಮಾಡಬೇಕು. ಇದನ್ನರಿಯಲು ಗುಂಪಿನ ಅವಶ್ಯಕತೆ ಅಥವಾ ಅಪೇಕ್ಷೆ ಏನೆಂಬುದನ್ನು ಮೊದಲು ಅರಿತು ಮತ್ತು ಅದನ್ನು ಪೂರೈಸಲು ಏನೆಲ್ಲ ಸಾಧ್ಯವಾದುದನ್ನು ಮಾಡಬೇಕು ಮತ್ತು ಅದನ್ನು ಮಾಡಲು ತೊಡಗಬೇಕು. ಅಧ್ಯಾಪಕರು ತನ್ನ ನಾಯಕತ್ವದ ಪಾತ್ರದಲ್ಲಿ ಗುರಿಯನ್ನು ತಲುಪುವುದೊಂದನ್ನೇ ಮುಖ್ಯವಾಗಿಟ್ಟುಕೊಂಡಿರದೆ ಗುಂಪಿನಲ್ಲಿ ವ್ಯಕ್ತಿಯ ನೀತಿಯು ಭಿನ್ನವಾಗದಂತೆ ನೋಡಿಕೊಂಡು ಅದರ ಅಭಿವೃದ್ಧಿಗಾಗಿ ಶ್ರಮಿಸಬೇಕು. ಪ್ರತಿಯೊಬ್ಬನೂ ಯೋಗ್ಯವಾದ ರೀತಿಯಲ್ಲಿ ಭಾಗವಹಿಸುವಂತೆ ಮಾಡಬೇಕು.

ಅಧ್ಯಾಪಕನು ನಾಯಕನಾಗಿ ಮಕ್ಕಳಲ್ಲಿ ಪ್ರೇರಣೆಯನ್ನು ತುಂಬಬೇಕು. ಅವಕಾಶಯುಕ್ತ ವಾತಾವರಣವನ್ನು ಸೃಷ್ಟಿ ಮಾಡಬೇಕು. ನಾನು ಈ ಶಾಲೆಗೆ, ಗುಂಪಿಗೆ ಸೇರಿದವನು ಎಂಬ ಪ್ರಜ್ಞೆಗೆ ಬೆಂಬಲವೀಯಬೇಕು. ಅವರು ಎಲ್ಲಾ ಚಟುವಟಿಕೆಗಳಲ್ಲೂ ಹೆಚ್ಚು ಹೆಚ್ಚಾಗಿ ಭಾಗವಹಿಸುವಂತೆ ಮಾಡಬೇಕು. ವಿದ್ಯಾರ್ಥಿಗಳು ತಮ್ಮ ಗುರಿಯನ್ನು ಉತ್ತಮ ರೀತಿಯಲ್ಲಿ ಸಾಧಿಸಲು ಅವರಲ್ಲಿ ರಚನಾತ್ಮಕ ಸ್ಪರ್ಧೆ ಹುಟ್ಟುವಂತೆ ಮಾಡಬೇಕು.

ತರಗತಿಯಲ್ಲಿ ವಿದ್ಯಾರ್ಥಿಗಳು ವಿವಿಧ ಸಂಘಸಂಸ್ಥೆಗಳಲ್ಲಿ ಭಾಗವಹಿಸುವಂತೆ ಮಾಡಲು ನಾಯಕತ್ವವಹಿಸುವಂತೆ ಮಾಡಲು ಸಹಾಯಮಾಡಬೇಕಾದ್ದು ಅಧ್ಯಾಪಕರ ಜವಾಬ್ದಾರಿ. ಮಕ್ಕಳು ಅಂತಹ ಚಾತುರ್ಯವನ್ನು ಬೆಳೆಸಿಕೊಳ್ಳಲು ಅಧ್ಯಾಪಕರು ಸಹಾಯ ನೀಡಬೇಕು. ವಿದ್ಯಾರ್ಥಿಗಳೇ ನಾಯಕತ್ವವನ್ನು ಬೆಳೆಸಿಕೊಳ್ಳಲು ಸಹಾಯ ನೀಡಬೇಕು. ಕೆಲವು ಸಂದರ್ಭಗಳಲ್ಲಿ ಉಪಾಧ್ಯಾಯನೇ ವಿದ್ಯಾರ್ಥಿಗಳಿಗೆ ನಾಯಕ ಪಟ್ಟವನ್ನು ಕಟ್ಟಿ ಅವನು ಹೇಗೆ ಅದನ್ನು ಬೆಳೆಸಿಕೊಳ್ಳುತ್ತಾನೆಂಬುದನ್ನು ನೋಡಬೇಕು. ಈ ಎಲ್ಲಾ ರೀತಿಯಲ್ಲಿ ಉಪಾಧ್ಯಾಯನು ವಿದ್ಯಾರ್ಥಿಗಳಲ್ಲಿ ನಾಯಕನ ಗುಣಗಳು ಬೆಳೆಯುವಂತೆ ಸಹಾಯ ಮಾಡಬೇಕು.

ತರಗತಿಯಲ್ಲಿನ ವಿಚಾರ ವಿನಿಮಯ :

ಫ್ಲಾಂಡರ್ಸ್‌ನು ಹೇಳುವಂತೆ : ''ಕ್ರಿಯೆ-ಪ್ರತಿಕ್ರಿಯೆಯು ಬೋಧನೆ-ಕಲಿಕೆಯ

ವಿಧಾನದ ಒಂದು ಅತ್ಯವಶ್ಯಕ ಅಂಗ'' ಎಂಬ ಹೇಳಿಕೆಯನ್ನು ಅವಲೋಕಿಸಿದರೆ ತರಗತಿಯಲ್ಲಿನ ವಿಚಾರವಿನಿಮಯದ ಚಿತ್ರ ಮೂಡಿಬರುತ್ತದೆ. ತರಗತಿ- ಬೋಧನೆ- ಕಲಿಕೆ ಎಂದೊಡನೆ ಅಲ್ಲಿ ಮಾತಿನ ಕ್ರಿಯೆ ಮತ್ತು ಪ್ರತಿಕ್ರಿಯೆ ಅಥವಾ ವಿಚಾರ ವಿನಿಮಯ ನಡೆಯುತ್ತದೆ ಎಂಬ ಅರಿವು ಮೂಡುತ್ತದೆ. ಅಲ್ಲಿ ಉಪಾಧ್ಯಾಯ ಮತ್ತು ವಿದ್ಯಾರ್ಥಿಯ ನಡುವೆ ಮಾತಿನ ಕ್ರಿಯೆ ಮತ್ತು ಪ್ರತಿಕ್ರಿಯೆ ನಡೆಯುತ್ತದೆ - ಇದನ್ನೇ ತರಗತಿಯ ಕಮ್ಯುನಿಕೇಷನ್ ಎಂದಿರುವುದು. ಉಪಾಧ್ಯಾಯ ತನ್ನ ಬೋಧನಾ ವಿಷಯವನ್ನು ಎಷ್ಟು ಪರಿಣಾಮಕಾರಿಯಾಗಿ ಕೊಟ್ಟ; ವಿದ್ಯಾರ್ಥಿಗಳಿಗೆ ಎಷ್ಟು ತಲುಪಿತು, ಅದು ತಲುಪಿದ್ದರ ಪ್ರತೀಕವೇನು ? ಅಭಿವೃದ್ಧಿಗೆ ಅಲ್ಲಿ ಅವಕಾಶ ದೊರೆಯಿತೆ ? ಪುರಸ್ಕಾರ ಸಿಕ್ಕಿತೆ ? ಎಂಬಿತ್ಯಾದಿಗಳ ಅಧ್ಯಯನವೇ ಕಮ್ಯುನಿಕೇಷನ್‌ನ ಅಧ್ಯಯನ.

ಉಪಾಧ್ಯಾಯನು ತಾನು ತಂದ ಜ್ಞಾನದ ಸರಕನ್ನು ಪರಿಣಾಮಕಾರಿಯಾಗಿ ಬಿಕರಿ ಮಾಡಿದನೆ ! ವಿದ್ಯಾರ್ಥಿಗಳು ನಗುನಗುತ್ತ ಅದನ್ನು ಕೊಂಡುಕೊಂಡರೆ, ಕಂಡು ಕೊಂಡರೆ ! ಎಂಬುದು ಇಲ್ಲಿ ಮುಖ್ಯ. ಆದ್ದರಿಂದ ಈ ರೀತಿಯ ವಿಚಾರ ವಿನಿಮಯ ಅಥವಾ ಕಮ್ಯುನಿಕೇಷನ್ ಎನ್ನುವುದು ವಿಷಯವನ್ನು ತಿಳಿಸುವುದು, ತಿಳಿಯುವುದು ಮತ್ತು ವರ್ಗಾವಣೆ ಮಾಡುವ ಒಂದು ವಿಧಾನವೆನ್ನಿಸಿದೆ. ಇವೆಲ್ಲವೂ ಉಪಾಧ್ಯಾಯ ನಿಂದ ಸರಿಯಾಗಿ ಕೊಡಲ್ಪಟ್ಟು ವಿದ್ಯಾರ್ಥಿಗಳಿಂದ ಸರಿಯಾಗಿ ಪಡೆದುದಾಗಿರಬೇಕು.

ಕಮ್ಯುನಿಕೇಷನ್ ವೇಳೆಯಲ್ಲಿ ಉಪಾಧ್ಯಾಯ ಎಷ್ಟು ವಿಚಾರ ಕೊಟ್ಟ; ವಿದ್ಯಾರ್ಥಿ ಗಳು ಎಷ್ಟು ಪಡೆದರು, ಎಂಬುದೇ ತರಗತಿಯಲ್ಲಿ ಅತಿ ಮುಖ್ಯವಾಗಿ ಗಮನಿಸಲೇ ಬೇಕಾಗಿರುವ ಒಂದು ಪ್ರಮುಖ ಅಂಶ. ಉಪಾಧ್ಯಾಯನು ಕೊಡುವ ವಿಚಾರದಿಂದ ಮಕ್ಕಳ ಜ್ಞಾನಭಂಡಾರ ಹೆಚ್ಚಬೇಕು ; ಚಾತುರ್ಯಗಳು ಕುಡಿಯೊಡೆಯಬೇಕು ಮತ್ತು ಸೃಜನಾತ್ಮಕಶಕ್ತಿ ವಿದ್ಯುನ್ಮಯವಾಗಿ ಮೂಡಬೇಕು.

ಉಪಾಧ್ಯಾಯನು ತಾನು ಮುಟ್ಟಿಸುವ ವಿಷಯವನ್ನು ಹೇಗೆ ತಲುಪಿಸಬೇಕೆಂಬು ದನ್ನು ಪೂರ್ವಭಾವಿಯಾಗಿಯೇ ಆಲೋಚಿಸಬೇಕು. ಅದಕ್ಕೆ ಬೇಕಾದ ಕೌಶಲ್ಯಗಳನ್ನು ರೂಢಿಸಿಕೊಳ್ಳಬೇಕು. ಚಾತುರ್ಯಗಳನ್ನು ಬೆಳಸಿಕೊಂಡಿರಬೇಕು. ಹೇಗೆ ವಿಚಾರಗಳನ್ನು ಮುಟ್ಟಿಸಬೇಕೆಂಬ ಜಾಗೃತ ಪ್ರಜ್ಞೆ ಉಪಾಧ್ಯಾಯನಿಗಿರಬೇಕು.

ಶಾಲೆ ಒಂದು ಜ್ಞಾನದಂಗಡಿ ! ಉಪಾಧ್ಯಾಯನೇ ಅಲ್ಲಿನ ಸರಕುಗಳ ಮಾರಾಟಗಾರ ! ವಿದ್ಯಾರ್ಥಿಗಳೇ ಗಿರಾಕಿಗಳು ! ! ಗಿರಾಕಿಗಳನ್ನು ಸಂತೃಪ್ತಿಪಡಿಸಲು ಮಾರ್ವಾಡಿ (ಉಪಾಧ್ಯಾಯ) ಎಷ್ಟು ಚೆನ್ನಾದ ಜ್ಞಾನ, ಕೌಶಲ್ಯ, ಚಾತುರ್ಯಗಳನ್ನು ಪಡೆದುಕೊಂಡವನಾಗಿದ್ದಾನೆ ಎಂಬುದೇ ಇಲ್ಲಿ ಮುಖ್ಯ. ಗಿರಾಕಿಗಳು (ವಿದ್ಯಾರ್ಥಿಗಳು) ಮಾರ್ವಾಡಿಯ ಬಳಿ ಪ್ರೀತಿವಾತ್ಸಲ್ಯಗಳಿಂದ ಪುನಃಪುನಃ ಮೇಲಿಂದ ಮೇಲೆ ಬರುವಂತಾಗಬೇಕು !

ವಿನಿಮಯದ ಉದ್ದೇಶವೂ ಕೂಡ ವಿದ್ಯಾರ್ಥಿಗಳು ಕೊಟ್ಟ ವಿಷಯವನ್ನು ಎಷ್ಟು ಚೆನ್ನಾಗಿ ಅರಿತುಕೊಂಡರು ಎಂಬುದನ್ನು ಪತ್ತೆ ಹಚ್ಚಲೂ ಸಹ ಸಹಾಯ ಮಾಡುವಂತಹುದಾಗಿದೆ. ವಿದ್ಯಾರ್ಥಿಗಳಿಗೆ ಏನಾದರೂ ಅನುಮಾನಗಳಿವೆಯೇ ? ಉಪಾಧ್ಯಾಯ ಕೊಡುವ ವಿಷಯದ ರೀತಿನೀತಿಗಳಲ್ಲಿ ಏನಾದರೂ ವಿದ್ಯಾರ್ಥಿಗಳಿಗೆ ಮುಜುಗರವಿದೆಯೆ ಎಂಬಿತ್ಯಾದಿ ಎಲ್ಲವನ್ನೂ ಅರಿಯುವುದೇ ಕಮ್ಯುನಿಕೇಷನ ಮುಖ್ಯ ಉದ್ದೇಶ. ಇದು ಒಂದು ವಿಧದಲ್ಲಿ ಉಪಾಧ್ಯಾಯನ ಆರೆಕೊರೆಗಳನ್ನು ತುಂಬಿ ಕೊಡುವಂಥದ್ದು. ತನ್ಮೂಲಕ ಉಪಾಧ್ಯಾಯನಿಗೆ ಅದು ಒಳನೋಟವನ್ನುಂಟು ಮಾಡಿ ತನ್ನ ವಿಚಾರ ವಿನಿಮಯ ಪ್ರವೃತ್ತಿಯಲ್ಲಿ ಸುಧಾರಣೆಯನ್ನು ತಂದುಕೊಳ್ಳಲು ಈ ಕಮ್ಯುನಿಕೇಷನ್ ನೆರವಾಗುತ್ತದೆ. ವಿಷಯಮಂಡನೆಯಲ್ಲಿ ತನ್ನದೇ ಆದ ಯೋಜನೆಯನ್ನು ರೂಪಿಸಿಕೊಳ್ಳಲು ಸಹಾಯ ಮಾಡುವಂಥದ್ದಾಗಿದೆ. ವಿನಿಮಯವು ಉಭಯ ಸಂಬಂಧವುಳ್ಳದ್ದು. ಅಂದರೆ ವಿಷಯ ಅಥವಾ ವರ್ತಮಾನ ಕೊಡುವವನು ಮತ್ತು ಅದನ್ನು ಪಡೆಯುವವನು - ಇವರಿಬ್ಬರಿಗೆ ಸಂಬಂಧ ಸೇತುವೆಯಾಗಿ ನಿಲ್ಲುವಂತಹುದೇ ಕಮ್ಯುನಿಕೇಷನ್ ಎನ್ನುವುದು. ವಿಷಯ ಮುಟ್ಟಿಸುವವನಿಗೆ ಎಷ್ಟು ಬೇಗ ಎಷ್ಟು ಪರಿಣಾಮಕಾರಿಯಾಗಿ ವಿಷಯ ಮುಟ್ಟಿಸಲು ಯಾವಯಾವ ಜಾಣ್ಮೆ ನೈಪುಣ್ಯಗಳನ್ನು ಬೆಳಸಿಕೊಳ್ಳಬೇಕೆಂಬುದನ್ನು ಅದು ಮನವರಿಕೆ ಮಾಡಿಕೊಡುವಂತಹುದಾಗಿದೆ. ಯಾವ ಮಾರ್ಗಗಳನ್ನು ಅವನು ಬಳಸಿಕೊಳ್ಳಬೇಕು ಮತ್ತು ಹೇಗೆ ವಿಷಯ ಮುಟ್ಟಿಸಬೇಕು ಎಂಬುದನ್ನು ಅವನು ಮನಗಾಣುತ್ತಾನೆ. ಒಬ್ಬನಿಗೆ ಹೇಗೆ ಮುಟ್ಟಿಸುವುದು, ಗುಂಪಿಗೆ ಹೇಗೆ ಮುಟ್ಟಿಸುವುದು ಎಂಬಿತ್ಯಾದಿಗಳೆಲ್ಲದರ ಚಾತುರ್ಯವಿರಬೇಕು.

ಕಮ್ಯುನಿಕೇಷನ್ನಿನ ಮಾದರಿಗಳು :

ತರಗತಿಯಲ್ಲಿನ ಕಮ್ಯೂನಿಕೇಷನ್ ಮೂರು ವಿಧದಲ್ಲಿತೆಗೆದುಕೊಳ್ಳುವಂಥದು.

ಉಪಾಧ್ಯಾಯನು ವಿದ್ಯಾರ್ಥಿಗಳಿಗೆ ಏನಾದರೊಂದನ್ನು ತಿಳಿಸುತ್ತಾನೆ ಮತ್ತು ವಿದ್ಯಾರ್ಥಿಗಳು ಅವಕಾಶ ಕೊಟ್ಟಾಗ ಪ್ರಶ್ನೆ ಕೇಳಲು ಸಿದ್ಧರಿರುತ್ತಾರೆ. ಈ ರೀತಿ ಪ್ರಶ್ನೆ ಕೇಳಲು ಅವಕಾಶ ಕಲ್ಪಿಸಿಕೊಡುವುದು ಕಮ್ಯುನಿಕೇಷನ್ನಿನ ಮೊದಲ ವಿಧವೆನಿಸುತ್ತದೆ. ವಿಷಯ ವಾರ್ತೆಯು ಉಪಾಧ್ಯಾಯನಿಂದ ವಿದ್ಯಾರ್ಥಿಗಳಿಗೆ ಮುಟ್ಟಿಸಲ್ಪಡುತ್ತದೆ ಮತ್ತು ಆಗೊಮ್ಮೆ ಈಗೊಮ್ಮೆ ಹಿಂತಿರುಗಿ ಬರುತ್ತದೆ. ಈ ಮಾದರಿಯಲ್ಲಿ ವಾರ್ತೆಯು ಹಿಂತಿರುಗಿ ಬರುತ್ತದೆಂಬುದು ಉಪಾಧ್ಯಾಯರಿಗೆ ಅರಿವಾಗುವುದಿಲ್ಲ. ವಿದ್ಯಾರ್ಥಿಗಳಿಗೆ ತಮ್ಮ ಅನುಭವಗಳನ್ನು ಬಗೆಹರಿಸಿಕೊಳ್ಳಲು ಅವಕಾಶ ಸಿಗುವುದಿಲ್ಲ ಮತ್ತು ತಿಳಿದ ವಿಷಯವನ್ನು ಅರಗಿಸಿಕೊಳ್ಳಲೂ ಸಹ ಅವನಿಗೆ ಅವಕಾಶ ಲಭ್ಯ- ಇದು ದ್ವಿತೀಯ

ಸಂದಿಗ್ಧಾತ್ಮಕ ಮಾದರಿ. ಇವರೆಡಕ್ಕಿಂತ ಉತ್ತಮವಾದ ಮೂರನೇ ವಿಧಾನವೆಂದರೆ ಉಪಾಧ್ಯಾಯನು ಮೊದಲು ವಿದ್ಯಾರ್ಥಿಗಳಿಗೆ ಈ ರೀತಿ ತಿಳಿಹೇಳಬೇಕು. ಯಾವ ವಿದ್ಯಾರ್ಥಿ ಯಾವಾಗ ಬೇಕಾದರೂ ತನ್ನ ಸಮಸ್ಯೆಗಳೇನಿದ್ದರೂ ಅವುಗಳಿಗೆ ಸೂಕ್ತ ಪರಿಹಾರವನ್ನು ಕಂಡುಕೊಳ್ಳಬಹುದು ; ಪ್ರಶ್ನೆ ಕೇಳಬಹುದು ; ಚರ್ಚಿಸಬಹುದು ; ವಿಚಾರ ವಿನಿಮಯ ಮಾಡಿಕೊಳ್ಳಬಹುದು - ಎಂಬುದಾಗಿ ತಿಳಿಸುವಂಥದು. ಮಕ್ಕಳಲ್ಲಿ ಭಯ ಭೀತಿಗಳಿಗೆ ಬದಲಾಗಿ ಪ್ರೀತಿ ಮಮತೆ ವಾತ್ಸಲ್ಯಗಳನ್ನು ತುಂಬಬೇಕು. ಇಲ್ಲಿ ಉಪಾಧ್ಯಾಯ ಪ್ರಶ್ನೆಗಳನ್ನು ಬರಮಾಡಿಕೊಂಡು ಅವುಗಳಿಗೆ ಉತ್ತರಿಸುತ್ತಾರೆ. ಇದು ದ್ವಿಮುಖಮಾರ್ಗ. ಉಪಾಧ್ಯಾಯನು ಕೊಟ್ಟ ವಿಷಯಕ್ಕೆ ಪ್ರತಿಕ್ರಿಯೆ ಬರುತ್ತದೆ. ಈ ರೀತಿಯಲ್ಲಿ ಉಪಾಧ್ಯಾಯ ಮತ್ತು ಗುಂಪುಗಳು ಕ್ರಿಯೆ ಮತ್ತು ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸುವಂತಹವುಗಳಾಗಿವೆ.

ಇದಕ್ಕಿಂತ ಉತ್ತಮವಾದ ಮಾದರಿ ಎಂದರೆ - ಸರ್ಕುಲರ್ ಕಮ್ಯುನಿಕೇಷನ್. ವಿಚಾರ ವಿನಿಮಯದ ಕಾರ್ಯವು ಪರಿಣಾಮಕಾರಿಯಾಗಿ ಆಗಬೇಕಾದರೆ ಪರಸ್ಪರ ನಿರಂತರವಾಗಿ ಸಾಗಬೇಕು. ಇದರಲ್ಲಿ ಗುಂಪಿನ ಎಲ್ಲರೂ ಸಮಾನವಾಗಿ ಭಾಗವಹಿಸಲು ಅವಕಾಶ ಲಭ್ಯ. ಇದರಲ್ಲಿ ವಿದ್ಯಾರ್ಥಿಗಳು ಪ್ರತಿಕ್ರಿಯೆ ವ್ಯಕ್ತಪಡಿಸಲು ಅವಕಾಶವಿದೆ.

ಉಪಾಧ್ಯಾಯರು ಏನು ಹೇಳಿದರೂ ಅದಕ್ಕೆ ವಿದ್ಯಾರ್ಥಿಗಳು ಪ್ರತಿಕ್ರಿಯೆ ವ್ಯಕ್ತಪಡಿಸುತ್ತಾರೆ. ಉಪಾಧ್ಯಾಯರ ಪ್ರತಿಯೊಂದು ಹೇಳಿಕೆಯ ಮೇಲೂ ವಿದ್ಯಾರ್ಥಿಗಳು ಕಾಮೆಂಟ್ ಮಾಡುತ್ತಾರೆ. ಆಗ ಕಮ್ಯುನಿಕೇಷನ್ ಎನ್ನುವುದು ಒಂದು ಸರ್ಕ್ಯುಲರ್ ಕಮ್ಯೂನಿಕೇಷನ್ ಎನಿಸುತ್ತದೆ. ಫೀಡ್‌ಬ್ಯಾಕ್ ಎಂಬ ಕಲ್ಪನೆ ಗುಂಪಿನ ಅಂತರ್ ವೈಯಕ್ತಿಕ ಕಮ್ಯೂನಿಕೇಷನ್ನನ್ನು ಅವಲಂಬಿಸಿರುವಂತಹುದಾಗಿದೆ. ಗುಂಪಿನ ಎಲ್ಲರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಸ್ವತಂತ್ರವಾಗಿ ಸ್ವಚ್ಛಂದವಾಗಿ ಅಭಿವ್ಯಕ್ತಪಡಿಸಲು ಪ್ರಾರಂಭಿಸಿದರೆ ಅದು ಫೀಡ್‌ಬ್ಯಾಕ್ ಮಾಡಿದಂತೆಯೇ ಆಗುತ್ತದೆ.

ಫೀಡ್‌ಬ್ಯಾಕ್ ಎನ್ನುವುದು ಅನೇಕ ವಿಧದಲ್ಲಿ ಸಹಾಯ ಮಾಡುತ್ತದೆ. ಅದು ಕೇವಲ ಅಭಿಪ್ರಾಯಗಳನ್ನು ಸರಿಪಡಿಸಿಕೊಳ್ಳುವುದಕ್ಕೆ ಮಾತ್ರ ಸಹಾಯ ಮಾಡುವುದಲ್ಲದೆ ಗುಂಪಿನ ನಾನಾವಿಧ ಸದಸ್ಯರಿಗೆ ಅಂದರೆ ಗುಂಪಿನಲ್ಲಿ ಚುರುಕಾದ ಪಾತ್ರವಹಿಸಿದವರೆಲ್ಲರಿಗೂ ಅದು ಸಹಾಯಕವಾಗುತ್ತದೆ. ಅದು ಚಾತುರ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು ಮತ್ತು ಸುಧಾರಣೆ ಎಷ್ಟಾಗಿದೆ ಎಂಬುದನ್ನು ಪತ್ತೆಹಚ್ಚಲು ಮತ್ತು ಗುಂಪಿನ ಕೆಲಸವನ್ನು ಸುಧಾರಿಸಲು ಸಹಾಯ ಮಾಡುತ್ತದೆ.

ವಿಚಾರವಿನಿಮಯವನ್ನು ಪ್ರಭಾವಿತಗೊಳಿಸುವ ಅಂಶಗಳು :

ಮೊದಲೇ ತಿಳಿಸಿದಂತೆ ಕಮ್ಯುನಿಕೇಷನ್ ಎನ್ನುವುದು ಕೊಡುವವನು ಮತ್ತು ತೆಗೆದುಕೊಳ್ಳುವವನು ಎಂಬೀ ಇಬ್ಬರನ್ನೂ ಅವಲಂಬಿಸಿರುವಂತಹುದಾಗಿದೆ. ವಿಚಾರವಿನಿಮಯವನ್ನು ಪ್ರಭಾವಿತಗೊಳಿಸುವ ಅಂಶಗಳೂ ಸಹ ಈ ಎರಡಕ್ಕೂ ಸೇರಿದವುಗಳಾಗಿವೆ ಅಥವಾ ಸಂಬಂಧಿಸಿದವುಗಳಾಗಿವೆ. ಈ ಅಂಶಗಳೆಂದರೆ ಒಬ್ಬನು ಏನು ಹೇಳುತ್ತಾನೆ - ಏನು ಕೇಳುತ್ತಾನೆ ಎಂಬುದನ್ನು ಅವಲಂಬಿಸಿರುವಂತಹುದಾಗಿದೆ.

ಈ ರೀತಿಯ ಅಂಶಗಳೆಂದರೆ ವ್ಯಕ್ತಿಯ ಮನೋವೈಜ್ಞಾನಿಕ 'ಮೇಕಪ್'ನಿಂದ ಕೂಡಿರುವಂತಹುದು. ಒಬ್ಬ ವ್ಯಕ್ತಿ ಏನು ಹೇಳುತ್ತಾನೆ ಅಥವಾ ಕೇಳುತ್ತಾನೆ ಅಥವಾ ಗ್ರಹಿಸುತ್ತಾನೆ ಎನ್ನುವುದು ಅವನಿಗೆ ಯಾವ ಪ್ರೇರಣೆಗಳಿವೆ ಎಂಬುದನ್ನು ಅವಲಂಬಿಸಿದೆ. ಇಲ್ಲಿ ಅನುಭವವೂ ಸಹ ತನ್ನದೇ ಆದ ಪ್ರಮುಖ ಪಾತ್ರವನ್ನು ವಹಿಸುತ್ತದೆ. ನಿರೀಕ್ಷೆಯು ಸಹ ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ. ನಿರೀಕ್ಷಿಸಿದ ವರ್ತಮಾನ ತಲುಪಿದ್ದೇ ಆದರೆ ಅದು ತೃಪ್ತಿತರುತ್ತದೆ. ಗುಂಪಿನಲ್ಲಿ ಗ್ರಹಿಸಿದ ನಡವಳಿಕೆಗಳೂ ಸಹ ಕಮ್ಯುನಿಕೇಷನ್‌ನಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತವೆ. ವರ್ತನೆಯ ಅಂತಸ್ತೂ ಸಹ ವ್ಯಕ್ತಿ ಏನನ್ನು ಹೇಳಬೇಕು ಮತ್ತು ಏನನ್ನು ಕೇಳಬೇಕು ಎಂಬುನ್ನು ನಿರ್ಧರಿಸುತ್ತದೆ.

ಕಮ್ಯುನಿಕೇಷನ್‌ಗೆ ಅನುಕೂಲಮಾಡಿಕೊಡುವಿಕೆ :

ತರಗತಿಯ ಬೋಧನೆಯಲ್ಲಿ ತರಗತಿಯ ಗುಂಪಿಗೆ ವಿಚಾರವಿನಿಮಯಕ್ಕೆ ಅನುಕೂಲವನ್ನೊದಗಿಸಿಕೊಡುವುದು ಮುಖ್ಯವಾದ ಸಮಸ್ಯೆ. ವಿಚಾರವಿನಿಮಯವನ್ನು 'ಸರ್ಕ್ಯುಲರ್' ಮೂಲಕ ಅನುಷ್ಠಾನಕ್ಕೆ ತಂದದ್ದೇ ಆದರೆ ಅದಕ್ಕೆ ಹೆಚ್ಚಿನ ಅನುಕೂಲ ಮಾಡಿಕೊಟ್ಟಂತೆ.

ಫೀಡ್‌ಬ್ಯಾಕ್ ಸಂಬಂಧಿಸಿದಂತೆ ಕೊಡುವುದು ಮತ್ತು ತೆಗೆದುಕೊಳ್ಳುವುದು - ಈ ರೀತಿಯ ಕಾರ್ಯಕ್ಕೆ ಗುಂಪಿನ ಸದಸ್ಯರಿಗೆ ತರಬೇತಿ ಕೊಡಬೇಕು. ಫೀಡ್‌ಬ್ಯಾಕ್ ಮಾಡುವಾಗ ಗುಂಪಿನ ಇನ್ನೊಬ್ಬ ಸದಸ್ಯರಿಗೆ ನೋವಾಗದಂತೆ ಕೊಡುವ ಏರ್ಪಾಡಾಗಬೇಕು. ಈ ಬಗ್ಗೆ ಮಾರ್ಗದರ್ಶನದ ಅನುಭವವಿರಬೇಕು. ಫೀಡ್‌ಬ್ಯಾಕ್ ತೆಗೆದುಕೊಳ್ಳಲು ಒಂದು ವಿಧವಾದ ಚಾತುರ್ಯ ಮತ್ತು ಅನುಭವವಿರಬೇಕು. ಕೆಲವು ಸಂದರ್ಭಗಳಲ್ಲಿ ಫೀಡ್‌ಬ್ಯಾಕ್ ಎನ್ನುವುದು ವಿಚಾರವಿನಿಮಯವನ್ನು ಸ್ಥಗಿತಗೊಳಿಸುತ್ತದೆ. ಆದ್ದರಿಂದ ಫೀಡ್‌ಬ್ಯಾಕ್ ಪಡೆಯಲು ಸದಸ್ಯರಿಗೆ ನಿಜಕ್ಕೂ ತರಬೇತಿ ಕೊಟ್ಟಿರಬೇಕು.

ಗುಂಪಿನಲ್ಲಿ ತಿಳಿಯಾದ ವಾತಾವರಣವನ್ನು ಸೃಷ್ಟಿಸುವುದರಿಂದ ವಿಚಾರ ವಿನಿಮಯಕ್ಕೆ ಹೆಚ್ಚಿನ ನೆರವನ್ನು ನೀಡುವಂಥದ್ದಾಗಿದೆ. ಗುಂಪಿನ ಸದಸ್ಯರಿಗೆ ತಮಗೆ ಸರಿತೋರಿದ್ದನ್ನು ಸ್ವತಂತ್ರವಾಗಿ ಅಭಿವ್ಯಕ್ತಪಡಿಸಲು ಅವಕಾಶ ನೀಡಬೇಕು. ಇದು ಉತ್ತಮ ಚರ್ಚೆ ಎನಿಸುತ್ತದೆ. ಅಭಿಪ್ರಾಯ ಮತ್ತು ಭಾವನೆಗಳ ಉಪಯುಕ್ತ ವಿನಿಮಯಕ್ಕೆ ಸಹಾಯ ಮಾಡುತ್ತದೆ.

ಉಪಾಧ್ಯಾಯನ ಪಾತ್ರವು ಈ ರೀತಿ ವಿಚಾರ ವಿನಿಮಯಕ್ಕೆ ಅವಕಾಶ ಮಾಡಿಕೊಡುವುದನ್ನು ಉತ್ಪ್ರೇಕ್ಷೆ ಮಾಡಿ ಹೇಳುವಂತಿಲ್ಲ. ಉಪಾಧ್ಯಾಯರು ವಿದ್ಯಾರ್ಥಿಗಳ ಅವಶ್ಯಕತೆಯನ್ನು ಪತ್ತೆ ಹಚ್ಚಿ ಅವರಿಗೆ ಅಗತ್ಯವಾದುದನ್ನು ನೀಡಬೇಕು.

★★★★

ಭಾಗ - ೫

ಕಾರ್ಯಕ್ರಮಾನ್ವಯ ಬೋಧನೆ

(Programmed Instructions)

ಪ್ರೋಗ್ರಾಮ್ಡ್ ಇನ್‌ಸ್ಟ್ರಕ್ಷನ್ ಅಂದರೆ ಕಾರ್ಯಕ್ರಮಾನ್ವಯಬೋಧನೆ. ಕಾರ್ಯಕ್ರಮಾನ್ವಯ ಬೋಧನೆಯು ಶಿಕ್ಷಣ ಕ್ಷೇತ್ರದಲ್ಲಾದ ಒಂದು ಕ್ರಾಂತಿ. ಬೋಧನಾ ವಸ್ತುವನ್ನು ಬೋಧನಾ ವಿಷಯಾನುಕ್ರಮಣಿಕೆಯಲ್ಲಿ ಹೇಗೆ ಅಳವಡಿಸಬೇಕು ಎನ್ನುವುದೇ ಪ್ರೋಗ್ರಾಮ್‌ಡ್ ಇನ್‌ಸ್ಟ್ರಕ್ಷನ್ ಎನಿಸಿಕೊಳ್ಳುವಂತಹುದು. ಈ ರೀತಿಯ ಬೋಧನಾ ವ್ಯವಸ್ಥೆಯಿಂದ ಹೊರಬೀಳುವ ಫಲಿತಾಂಶ ವಿವೇಚನಾಯುತವಾದುದು ಮತ್ತು ಲೆಕ್ಕಾಚಾರವುಳ್ಳದ್ದಾಗಿದೆ. ಇದನ್ನು ಒಬ್ಬ ವ್ಯಕ್ತಿಯ ಮೇಲಾಗಲೀ ಅಥವಾ ಒಂದು ವರ್ಗದ ವಿದ್ಯಾರ್ಥಿವೃಂದಕ್ಕಾಗಲಿ ಅನುಕೂಲವಾಗುವಂತೆ ಒದಗಿಸಬಹುದು. ಇದನ್ನು ತರಗತಿಯಲ್ಲಾಗಲೀ ತರಗತಿಯ ಹೊರಗಾಗಲೀ ಪ್ರಯೋಗಿಸಬಹುದಾಗಿದೆ.

ಪ್ರೋಗ್ರಾಮ್‌ಡ್ ಇನ್‌ಸ್ಟ್ರಕ್ಷನ್ ಒಂದು ನೂತನ ಬೋಧನಾ ವಿಧಾನ. ಈ ರೀತಿಯ ಬೋಧನಾವಿಧಾನ ತಾಂತ್ರಿಕಶಾಸ್ತ್ರ ಇನ್ನೂ ಬೆಳೆಯುವುದಾಗಿದೆ. ಈ ವಿಧಾನಗಳನ್ನು ಐದು ಹಂತಗಳಲ್ಲಿ ಅರಿಯಬಹುದು.

ಮೊದಲನೇ ಹಂತ

ಪ್ರೋಗ್ರಾಮ್‌ಡ್ ಇನ್‌ಸ್ಟ್ರಕ್ಷನ ಮೊದಲ ಹಂತವೆಂದರೆ ವಿದ್ಯಾರ್ಥಿ ತಲುಪಬೇಕಾದ ಗುರಿಗಳನ್ನು ನಿರ್ಧರಿಸುವುದು. ಈ ಹಂತ ಬಹಳ ಕಷ್ಟವಾದದ್ದು ಮತ್ತು ಕ್ಲಿಷ್ಟವಾದದ್ದು. ವಿದ್ಯಾರ್ಥಿಗಳಿಂದ ನಿರೀಕ್ಷಿಸಬಹುದಾದ ಮತ್ತು ತಲುಪಬೇಕಾದ ಗುರಿಗಳನ್ನು ನಿರ್ಧರಿಸುವ ಪ್ರೋಗ್ರಾಂ ತಯಾರು ಮಾಡುವ ವ್ಯಕ್ತಿಗೆ ಬದಲಾದ ಸನ್ನಿವೇಶದಿಂದ ಉದ್ಭವಿಸುವ ಜ್ಞಾನ, ಚಾತುರ್ಯ ಮತ್ತು ದೃಷ್ಟಿಕೋನಗಳ ಜಾಗೃತಪ್ರಜ್ಞೆ ಇರಬೇಕು. ಅಂತೆಯೇ ನಿಖರತೆಯೂ ಇರಬೇಕು. ಇದು ತಲುಪಬೇಕಾದ ನಿರ್ದಿಷ್ಟ ಗುರಿಗಳನ್ನು ತಲುಪಲು ಸರಿಯಾದ ಕಾರ್ಯಕ್ರಮವನ್ನು

ರೂಪಿಸಬೇಕು. ಮತ್ತು ಅವುಗಳನ್ನು ಸರಿಯಾದ ರೀತಿಯಲ್ಲಿ ಅಳತೆ ಮಾಡುವ ಸಾಧನೋಪಾಯಗಳನ್ನು ಸಿದ್ಧಪಡಿಸಿಕೊಳ್ಳಬೇಕು.

ವಿದ್ಯಾರ್ಥಿಗಳು ಮೊದಲು ತಲುಪಬೇಕಾದ ಗುರಿಗಳೆಂದರೆ ಬರೆಯುವುದು, ಓದುವುದು ಮತ್ತು ಮಾತನಾಡುವುದನ್ನು ಶಾಸ್ತ್ರೀಯ ರೀತಿಯಲ್ಲಿ ಅಂದರೆ ಚಾಚೂ ತಪ್ಪಿಲ್ಲದಂತೆ ಕರಾರುವಕ್ಕಾಗಿ ಬರೆಯುವುದನ್ನು, ತಪ್ಪಿಲ್ಲದಂತೆ ಬಿಕ್ಕಳಿಸದಂತೆ ಓದುವುದನ್ನು, ತೊದಲ್ನುಡಿಯದಂತೆ ಸ್ಪಷ್ಟೋಚ್ಚಾರಣೆಯನ್ನು ಮಕ್ಕಳಿಗೆ ಕಲಿಸಿಕೊಡಲು ಈ ಕಾರ್ಯಕ್ರಮಾನ್ವಯ ಬೋಧನೆ ಅತ್ಯಂತ ಸಹಾಯಕಾರಿ. ಆದರೆ ಕಾರ್ಯಕ್ರಮಾನ್ವಯ ಬೋಧನೆಯಲ್ಲಿ ಕೊಟ್ಟಿರುವ ವಿಷಯಗಳು ವ್ಯಾಪಕವಾಗಿದ್ದು ಅವುಗಳನ್ನು ಆಳವಾಗಿ ಅಧ್ಯಯನ ಮಾಡಲು ಕಷ್ಟವೆನಿಸುವಂತಹುದಾಗಿದೆ ಎಂದು ಬ್ಲೂಮ್ ಅಭಿಪ್ರಾಯವ್ಯಕ್ತಪಡಿಸಿದ್ದಾನೆ.

ಇಲ್ಲಿ ನಿರ್ದಿಷ್ಟವಾದ ಗುರಿಗಳೆಂದರೆ ವರ್ತನೆಗೆ ಸಂಬಂಧಿಸಿದ ಗುರಿಗಳು. ಇವುಗಳಿಗೆ ಮೂರು ರೀತಿಯ ಗುಣಲಕ್ಷಣಗಳಿವೆ (ಇವು ಸರ್ವರೂ ಮಾನ್ಯ ಮಾಡಬಹುದಾದಂತಹವು). ಮೊದಲನೆಯದಾಗಿ ಬೋಧನೆಯನ್ನು ಸ್ವೀಕರಿಸಿದ ವಿದ್ಯಾರ್ಥಿಯಲ್ಲಿ ಉಂಟಾಗಿರುವ ಗುರುತಿಸಬಹುದಾದ ಅಭಿನಯ ಕಲೆ ಅಥವಾ ಅಭಿವ್ಯಕ್ತಿಕಲೆ, ಅವನು ತಲುಪಿರಬಹುದಾದ ಗುರಿಯನ್ನು ನಿರ್ದೇಶಿಸುವಂತಹವುಗಳಾಗಿರುತ್ತವೆ. ಅವುಗಳೆಂದರೆ ವಾಸ್ತವಜ್ಞಾನ ಬಾಯಿಮಾತಿನ ಅಥವಾ ಲಿಖಿತ ಹೇಳಿಕೆಗಳು, ವಿಷಯಗಳ ನೈಜವಾದ ತಿಳಿವಳಿಕೆ, ತಾನು ಗಳಿಸಿದ ಜ್ಞಾನ ಮತ್ತು ತತ್ವಗಳನ್ನು ಹೊಸ ಸನ್ನಿವೇಶಗಳಿಗೆ ಅನ್ವಯಿಸುವಿಕೆ, ಇನ್ನೊಬ್ಬರ ದೃಷ್ಟಿಕೋನವನ್ನು ಮೆಚ್ಚಿಕೊಳ್ಳುವಿಕೆ. ಎರಡನೆಯ ಲಕ್ಷಣವೆಂದರೆ ವಿದ್ಯಾರ್ಥಿಯು ತಾನು ತಲುಪಿದ ಗುರಿಗಳನ್ನು ಸ್ಪಷ್ಟವಾಗಿ ಅರ್ಥೈಸಿಕೊಂಡು ಗಳಿಸಿದ ಪರಿಪೂರ್ಣ ಜ್ಞಾನದ ಅಭಿವ್ಯಕ್ತಿಗೆ ಸಹಾಯವಾಗುವಂತಹುದಾಗಿದೆ. ಮೂರನೆಯ ಲಕ್ಷಣವೆಂದರೆ ಇನ್ನೊಬ್ಬರು ಮೆಚ್ಚಿಕೊಳ್ಳಬಹುದಾದಂತಹ ಕಾರ್ಯಗಳನ್ನು ಮಾಡುವುದು.

ಈ ಮೂರೂ ಅಂಶಗಳು ಅಂದರೆ ಗುರುತಿಸಬಹುದಾದಂತಹ ವರ್ತನೆಗಳು, ಯಾವ ಸನ್ನಿವೇಶದಲ್ಲಿ ಅವುಗಳನ್ನು ಗುರುತಿಸಬೇಕೆಂಬುದರ ಅರಿವು, ತಲುಪಬಹುದಾದಂತಹ ವಿದ್ಯಾರ್ಥಿಗಳ ಮಟ್ಟ- ಇವುಗಳ ನಿರ್ದಿಷ್ಟವಾದ ಗುರಿಗಳನ್ನು ತಲುಪಲು ಸಹಾಯವಾಗುತ್ತದೆ.

ದ್ವಿತೀಯ ಹಂತ :

ಈ ಹಂತದಲ್ಲಿ ಗುರಿಗಳನ್ನು ತಲುಪುವಲ್ಲಿ ಬೋಧನಾಸಾಮಗ್ರಿಗಳನ್ನು ಸಿದ್ಧಗೊಳಿಸುವಂಥದು ಮತ್ತು ಪ್ರಮಾಣಾನುಗುಣವಾದ ಮತ್ತು ಸರಿಯಾದ

ಸ್ವರೂಪವನ್ನು ಕೊಡುವುದು. ಒಂದು ನಿರ್ದಿಷ್ಟವಾದ ಜ್ಞಾನಸಂಧಾನಕ್ಕಾಗಿ ಕಾರ್ಯಕ್ರಮವನ್ನು ನಿರೂಪಿಸುವವನು 'programmer' ಏನನ್ನು ಬೋಧಿಸಲಪೇಕ್ಷಿಸುತ್ತಾನೋ ಅದನ್ನು ಪ್ರತಿಯೊಬ್ಬ ವಿದ್ಯಾರ್ಥಿ ಎಷ್ಟೆಷ್ಟನ್ನು ಸ್ವೀಕರಿಸಿದನೆಂಬುದರ ಮೇಲೆ ಅವಲಂಬಿಸಿದುದಾಗಿದೆ. ಈ ಕಾರ್ಯಕ್ರಮಾನ್ವಯ ಬೋಧನೆಯನ್ನು ಇತರೆಯವರ ಮೇಲೆ ಪ್ರಯೋಗಿಸಿದಾಗಲೂ ಅದೇ ಫಲಿತಾಂಶವನ್ನು ನೀಡುವಂತಹುದಾಗಿರಬೇಕು. ಬೋಧನಾಕಾರ್ಯಕ್ರಮವನ್ನು ರೂಪಿಸುವವನು ವಿದ್ಯಾರ್ಥಿಯ ಕಲಿಕೆಗೆ ಎಷ್ಟನ್ನು ವ್ಯವಸ್ಥೆ ಮಾಡಿಕೊಳ್ಳಬೇಕೆಂಬುದನ್ನು ತಿಳಿದುಕೊಂಡಿರಬೇಕು. ಅದನ್ನು ಪ್ರತಿಯೊಬ್ಬ ವಿದ್ಯಾರ್ಥಿ ಎಷ್ಟು ಕಲಿತನೆಂಬುದನ್ನು ಸಹ ನೆನಪಿಟ್ಟುಕೊಂಡಿರಬೇಕು. ಅದರ ಫಲಿತಾಂಶ ಇತರೆಯವರ ಮೇಲೆ ಪ್ರಯೋಗಿಸಿದಾಗಲೂ ಅಷ್ಟೇ ಬರುವಂತಿರಬೇಕು ಎಂಬುದೇ ಆಗಿದೆ. ಇಂಥ ಪ್ರಯೋಗಗಳಲ್ಲಿ ನಿಶಿತಮತಿಗಳು ಜಯಶಾಲಿಗಳಾಗಬಲ್ಲರು. ಆದರೆ ಈ ಕಾರ್ಯಕ್ರಮಾನ್ವಯ ಬೋಧನೆ ಮಂದಬುದ್ಧಿಯವರಿಗೆ ಶೀಘ್ರದಲ್ಲಿ ವಿಷಯ ಮುಟ್ಟಿಸಲಾರದು.

ಮೂರನೆಯ ಹಂತ :

ಉದ್ದೇಶಗಳನ್ನು ನಿರ್ಧರಿಸಿದ ಮೇಲೆ ಅವುಗಳನ್ನು ಸಾಧಿಸಲು ಸೂಕ್ತ ಅಳತೆಗಳನ್ನು ನಿರ್ಮಿಸಿಕೊಂಡು ಕಾರ್ಯಕ್ರಮವನ್ನು ಯಾವ ಸಮುದಾಯಕ್ಕೆ ಇದನ್ನು ಅಳವಡಿಸಿರುವನೋ ಆ ಸಮುದಾಯದಿಂದ ನಿಖರವಾದ ಅಳತೆಗಳನ್ನು ಪಡೆಯಬೇಕು. ಈ ಕ್ರಮದಿಂದ ನಿರ್ದಿಷ್ಟ ಗುರಿಗಳನ್ನು ಮುಟ್ಟಲು ಸಾಧ್ಯ. ವಿದ್ಯಾರ್ಥಿಗಳ ಪೂರ್ವಜ್ಞಾನ ಮತ್ತು ಚಾತುರ್ಯಗಳ ತಳಹದಿಯ ಮೇಲೆಯೇ ಹೊಸಜ್ಞಾನ ಮತ್ತು ಚಾತುರ್ಯ ಹಾಗೂ ಕುಶಲತೆಗಳ ನಿರ್ಮಾಣ ಸಾಧ್ಯ. ಈ ರೀತಿಯ ಹೊಸ ಮಾದರಿಯ ಶಿಕ್ಷಣದಿಂದ ಯಾವ ಫಲವೂ ವಿದ್ಯಾರ್ಥಿಗಳಿಗೆ ದೊರೆಯಲಾರದೆಂಬ ಊಹೆ ಕೆಲವು ಶಿಕ್ಷಣತಜ್ಞರಲ್ಲಿತ್ತು. ಆದರೆ ಇದು ತಪ್ಪು ಕಲ್ಪನೆಯೆಂದು ಆ ಪದ್ಧತಿಯಿಂದಾದ ಪರಿಣಾಮವನ್ನು ಪರೀಕ್ಷಿಸಿದಾಗ ಮನವರಿಕೆ ಆಯ್ತು. ಮುಂದಿನ ಹಂತಗಳಲ್ಲಿ ಬರುವ ವಸ್ತು ಉತ್ಪಾದನಾ ವಿಧಾನವು ಗೊತ್ತಾದ ಸಮುದಾಯದಿಂದ ಗಮನವನ್ನು ಸೆಳೆದು ನಿರೀಕ್ಷೆಗಿಂತ ಹೆಚ್ಚು ಬೆಲೆಕಟ್ಟುವಂತೆ ಮಾಡುತ್ತಾರೆ. ಅತ್ಯಂತ ಕ್ಲಿಷ್ಟಕರವಾದ ಕೆಲಸವೆಂದರೆ ತಪ್ಪುಗಳನ್ನು ತಿದ್ದಲು ಅವಕಾಶ ಮಾಡಿಕೊಡುವುದು. ಏಕೆಂದರೆ ಅದು ಸುದೀರ್ಘ ಕಾಲಭಯವನ್ನು ತಪ್ಪಿಸುವ ಬೋಧನೆಯಾಗುತ್ತದೆ.

ನಾಲ್ಕನೆಯ ಹಂತ :

ನಾಲ್ಕನೆಯ ಹಂತವೆಂದರೆ ಡ್ರಾಯಿಂಗ್ ಬೋರ್ಡ್ ಸ್ಟೇಜ್. ಇದರಲ್ಲಿ ಬೋಧಿಸುವ ವಸ್ತುವಿನ ಮೊದಲ ಕರಡುಪ್ರತಿಯನ್ನು ಸಿದ್ಧಗೊಳಿಸಲಾಗುತ್ತದೆ. ಸಾಧಿಸಬೇಕಾಗಿರುವ ನಿರ್ದಿಷ್ಟವಾಗಿ ಮತ್ತು ಕರಾರುವಕ್ಕಾಗಿ ತಲುಪಲು ಅನುಕೂಲಿಸ ಲನುವಾಗುವಂತೆ ಈ ಕರಡುಪ್ರತಿ ಸಿದ್ಧವಾಗಬೇಕು. ಮಕ್ಕಳು ಈ ರೀತಿಯ ಬೋಧನೆ ಯಲ್ಲಿ ಯಾವ ರೀತಿ ತಮ್ಮ ಕಲಿಕೆಯನ್ನು ಶ್ರೀಮಂತಗೊಳಿಸಿಕೊಳ್ಳಬೇಕೆಂಬುದನ್ನು ಅಡಕಗೊಳಿಸಬೇಕು.

ಬರೆದ ವಸ್ತುಗಳನ್ನು ಪೂರ್ವಭಾವಿಯಾಗಿ ಕಾರ್ಯಕ್ರಮಕ್ಕೆ ಒಳಗು ಮಾಡುವಂತಹುದು. ಇದಕ್ಕೆ ಲಗತ್ತಾದ ಬೋಧನಾಯಂತ್ರವಿದ್ದು ಅದರಲ್ಲಿ ಒಂದು ಸಣ್ಣ ಕಿಟಕಿ ಅಥವಾ ದ್ವಾರದ ಮೂಲಕ ವಸ್ತುವನ್ನು ಸಿದ್ಧಪಡಿಸಿಕೊಡುವುದು. ಇನ್ನೊಂದರ ಮೂಲಕ ವಿದ್ಯಾರ್ಥಿ ಆ ವಸ್ತುವನ್ನು ಸ್ವೀಕರಿಸುವಂತೆ ಮಾಡುವುದು.

ಈ ನಾಲ್ಕನೆಯ ಹಂತದಲ್ಲಿಯೇ ಗುರಿಗಳ ಮಾಧ್ಯಮವನ್ನು, ನಿರ್ಧರಿಸು ವಂಥದು. ಟೇಪ್ ರೆಕಾರ್ಡರ್, ಫೋನೋಗ್ರಾಫ್, ಸೌಂಡ್ ಫಿಲಂ ಇವೆಲ್ಲವೂ ಬೋಧಿಸುವ ಯಂತ್ರಗಳಾಗಿದ್ದು ಅವು ಉತ್ತಮ ಶಿಕ್ಷಣ ಬೋಧನಾಮಾಧ್ಯಮವಾಗು ತ್ತವೆನ್ನುವುದರಲ್ಲಿ ಸಂಶಯವಿಲ್ಲ.

ಐದನೆಯ ಹಂತ :

ಐದನೆಯ ಹಂತವು ಕೈಗಾರಿಕೋದ್ಯಮಗಳಿಗೆ ಹೆಚ್ಚಿಗೆ ಪರಿಚಯವುಳ್ಳದ್ದು. ಆದರೆ ಇದು ಶೈಕ್ಷಣಿಕ ಸಂಶೋಧಕರಿಗೆ ಅಷ್ಟು ಪರಿಚಯವಾಗಿರುವುದಿಲ್ಲ. ಅಲ್ಲದೆ ಕೆಲವು ವೇಳೆ ಇದು ಅವರಿಗೆ ಅರ್ಥವೂ ಆಗುವುದಿಲ್ಲ. ಈ ಹಂತದ ಉದ್ದೇಶವು ವಿಷಯ ವಸ್ತುವನ್ನು ಪೂರ್ಣತೆಯೆಡೆಗೆ ಕೊಂಡೊಯ್ಯುವುದು ಮತ್ತು ಅದನ್ನು ಉದ್ದೇಶಿತಮಟ್ಟಕ್ಕೇರಿಸುವುದು.

ಈ ಹಂತದ ಬೆಳವಣಿಗೆಯಲ್ಲಿ ಕಾರ್ಯಕ್ರಮ ರೂಪಿಸುವ ಒಂದು ಕಾಲದಲ್ಲಿ ಒಬ್ಬ ವಿದ್ಯಾರ್ಥಿಯ ಸಂಗಡ ತೀವ್ರವಾಗಿ ಕೆಲಸ ಮಾಡಬೇಕಾಗುತ್ತದೆ. ಹೀಗೆ ಒಬ್ಬ ವಿದ್ಯಾರ್ಥಿಯ ಮೇಲೆ ಈ ಕ್ರಮವನ್ನು ಪ್ರಯೋಗಿಸಿದ ನಂತರ ಅದರಲ್ಲಾಗಬಹುದಾದ ಬದಲಾವಣೆಗಳನ್ನು ಕಂಡುಹಿಡಿದು ಅದನ್ನು ಸೂಕ್ತ ರೀತಿಯಲ್ಲಿ ಮಾರ್ಪಾಡು ಮಾಡಿಕೊಂಡು ಮತ್ತೊಬ್ಬ ವಿದ್ಯಾರ್ಥಿಯ ಮೇಲೆ ಪ್ರಯೋಗಿಸಲು ಸಿದ್ಧಪಡಿಸಬೇಕು. ಈ ಮಾರ್ಪಾಡುಗಳು ಕಾರ್ಯಕ್ರಮವನ್ನು ರೂಪಿಸುವವನ ದೃಷ್ಟಿಕೋನದಂತಿರದೆ ವಿದ್ಯಾರ್ಥಿಯ ದೃಷ್ಟಿಕೋನವನ್ನನುಸರಿಸಬೇಕು. ಈ ಪ್ರಕ್ರಿಯೆಯನ್ನು ಮುಂದುವರಿಸಿ

ಕಾರ್ಯಕ್ರಮಾನ್ವಯ ಬೋಧನೆಯ ವಸ್ತುವನ್ನು ಸುಧಾರಿಸಿ ಅನುಷ್ಠಾನಕ್ಕೆ ತರಲು ಯೋಗ್ಯವಾದುದನ್ನಾಗಿ ಮಾಡಬಹುದು.

ಬೋಧಿಸುವ ಯಂತ್ರಗಳು ಶಿಕ್ಷಣಕ್ಷೇತ್ರದಲ್ಲಾಗಿರುವ ಒಂದು ನವೋದಯ ಕ್ರಾಂತಿ ಎಂದು ಮೊದಲೇ ಹೇಳಿದೆ. ಅಂತೆಯೇ ಪ್ರೋಗ್ರಾಮ್ಡ್ ಇನ್‌ಸ್ಟ್ರಕ್ಷನ್ ಬೋಧನೆಯೂ ಅದಕ್ಕೆ ಪೂರಕವಾಗಿದ್ದು ಬೋಧಿಸುವ ಯಂತ್ರಗಳು ಕಾರ್ಯ ಕ್ರಮಾನ್ವಯ ಬೋಧನೆಗೆ ಸಾಧನಗಳಾಗಿ ಉಳಿಯುತ್ತವೆ.

ಇದರಿಂದಾಗುವ ಅನುಕೂಲಗಳು :

೧. ಕಾರ್ಯಸರಣಿಯ ಚಟುವಟಿಕೆಗಳು ತಾತ್ವಿಕವಾಗಿ ಜೋಡಣೆಯಾಗಿರು ವುದರಿಂದ ವಿದ್ಯಾರ್ಥಿಗಳು ಸ್ವಂತವಾಗಿ ಕಲಿಕೆ ಮತ್ತು ಅದರ ಸಂಬಂಧಗಳನ್ನು ಕಂಡುಹಿಡಿಯಬಹುದು. ಇದರಿಂದ ವಿದ್ಯಾರ್ಥಿಯ ಮನಸ್ಸಿನಲ್ಲಿ ಸೃಜನಾತ್ಮಕಶಕ್ತಿಯು ಆವಿರ್ಭವಿಸುತ್ತದೆ.

೨. ಸ್ವಂತ ಸಾಮರ್ಥ್ಯದಿಂದ ವಿದ್ಯಾರ್ಥಿಯು ಮುನ್ನಡೆಯಲು ಅವಕಾಶ ವೀಯುತ್ತದೆ. ತನ್ನದೇ ಆದ ರೀತಿಯಿಂದ ವಿಷಯ ವಸ್ತುವಿನ ಅರ್ಥವನ್ನು ಗ್ರಹಿಸಬಹುದು.

೩. ಇದನ್ನು ಚಿಕ್ಕತರಗತಿಗಳಲ್ಲಿ ಸರಿಯಾದ ರೀತಿ ಸಂಘಟಿಸಿದರೆ ಉತ್ತಮ ಫಲಿತಾಂಶವನ್ನು ನಿರೀಕ್ಷಿಸಬಹುದು.

೪. ಇದನ್ನು ಮಾಮೂಲು ಬೋಧನೆಯ ಜತೆಗೆ ಪೂರಕಗಳಾಗಿ ಉಪಯೋಗಿಸಿ ಬೋಧನೆಯನ್ನು ಪರಿಣಾಮಕಾರಿಯಾದುದನ್ನಾಗಿ ಮಾಡಬಹುದು.

ಇದರಲ್ಲಿನ ದೋಷಗಳು :

೧. ಇದು ಬಹಳ ಅನಮ್ಯ ('rigid'). ಹೊಸ ಕಾರ್ಯಕ್ರಮಾನ್ವಯ ಬೋಧನೆಯನ್ನು ರೂಪಿಸಿದರೆ ಅದರ ವಸ್ತುವಿನ್ಯಾಸದಲ್ಲಾಗಲೀ ಕಾರ್ಯಕ್ರಮ ದಲ್ಲಾಗಲೀ ಮಾರ್ಪಾಡು ಮಾಡಲು ಸಾಧ್ಯವಿಲ್ಲ.

೨. ಕೆಲವು ಕಾರ್ಯಕ್ರಮಾನ್ವಯ ಬೋಧನೆಗಳು ವಿಷಯ ಮತ್ತು ವ್ಯವಸ್ಥೆಯಲ್ಲಿ ಬಹಳ ಸಾಂಪ್ರದಾಯಿಕವಾಗಿದ್ದು ಶಿಕ್ಷಣ ತತ್ವ ಮತ್ತು ಆಲೋಚನೆಗೆ ಗಮನ ನೀಡುವುದಿಲ್ಲ.

೩. ಅರ್ಥಗ್ರಹಿಕೆಯ ಅಭಿಪ್ರಾಯವನ್ನು ವ್ಯಕ್ತ ಮಾಡಲು ಮತ್ತು ಪ್ರತಿಕ್ರಿಯೆ ವ್ಯಕ್ತಪಡಿಸಲು ಸೂಕ್ತವಾದ ಅವಕಾಶವನ್ನು ನೀಡುವುದಿಲ್ಲ.

ಬೋಧಿಸುವ ಯಂತ್ರಗಳು ತದನುಗುಣವಾದ ಕಾರ್ಯಕ್ರಮಾನ್ವಯ ಬೋಧನೆಗಳು ಶಿಕ್ಷಣಕ್ಷೇತ್ರದಲ್ಲಿ ನೂತನ ಅನ್ವೇಷಣೆಗಳೆನಿಸುತ್ತವೆ. ಮಕ್ಕಳ ಕಲಿಕೆಯು ಪರಿಣಾಮಕಾರಿಯಾಗಲು ಶಿಕ್ಷಣಕ್ಷೇತ್ರದಲ್ಲಾಗುತ್ತಿರುವ ಈ ನೂತನ ಅನ್ವೇಷಣೆಗಳು ನಿರಂತರವಾಗಿ ನಡೆಯುತ್ತಲೇ ಇರಬೇಕು. ಅದು ಪ್ರಗತಿಯ ಲಕ್ಷಣ ! ಮುನ್ನಡೆಯ ದಾರಿದೀಪ ! !

★★★★

ಭಾಗ ೬

ಮೌಲ್ಯಮಾಪನ ತತ್ವ

ಮರ್ಸೆಲನ ಯಶಸ್ವೀ ಬೋಧನೆಯ ತತ್ವಗಳಲ್ಲಿ ಮೌಲ್ಯಮಾಪನ ತತ್ವ ಆರನೆಯದು.

'ಮೌಲ್ಯ' ಎಂದರೆ 'ಬೆಲೆ'. 'ಮಾಪನ' ಎಂದರೆ ಅದನ್ನು ಅಳೆಯುವುದು. ಅಂದರೆ ಬೆಲೆ ಕಟ್ಟುವುದು ಅಥವಾ ಒಂದು ವಸ್ತುವಿನ ಅಥವಾ ವಿಷಯದ ಬೆಲೆಯನ್ನು ನಿರ್ಧರಿಸುವುದು. ಈ ಒಂದು ಸರಳವಾದ ಕಾರ್ಯಕ್ಕೆ 'ಮೌಲ್ಯಮಾಪನ' ಎಂದು ಹೆಸರು. ಜೀವನದುದ್ದಕ್ಕೂ ಈ ಒಂದು ಮೌಲ್ಯಮಾಪನ ಕಾರ್ಯ ನಿರಂತರವಾಗಿ ನಡೆಯುತ್ತಲೇ ಇರುತ್ತದೆ. ಶಿಕ್ಷಣಕ್ಷೇತ್ರದಲ್ಲಿ ಇದರ ಪಾತ್ರ ಅಗಣಿತ ಮತ್ತು ಅನಿವಾರ್ಯ.

ವೀಕ್ಷಕನೊಬ್ಬ ಶಾಲೆಯ ವರ್ಗತರಗತಿಯೊಂದಕ್ಕೆ ಪ್ರವೇಶಿಸುತ್ತಾನೆ. ಅಲ್ಲಿ ಆ ತರಗತಿಯ ಮಕ್ಕಳು ವ್ಯವಕಲನ ಅಂದರೆ ಕಳೆಯುವ ಲೆಕ್ಕವನ್ನು ಮಾಡುವುದರಲ್ಲಿ ತಮ್ಮ ನೋಟ್‌ಪುಸ್ತಕಗಳಲ್ಲಿ ತಲ್ಲೀನರಾಗಿರುತ್ತಾರೆ. ಮಕ್ಕಳು ವ್ಯವಕಲನ ಲೆಕ್ಕಗಳನ್ನು ಮಾಡುತ್ತಿರುವ ಸಂದರ್ಭದಲ್ಲಿ ಅಲ್ಲಿನ ಶಿಕ್ಷಕರು ವಿದ್ಯಾರ್ಥಿಗಳನ್ನು ಗಮನಿಸುತ್ತಾ ತರಗತಿಯನ್ನು ಸುತ್ತುಹಾಕುತ್ತಿರುತ್ತಾರೆ. ಆ ಶಿಕ್ಷಕಿ ಬಲು ಶಿಸ್ತಿನ ಮತ್ತು ತೀಕ್ಷ್ಣ ಸ್ವರೂಪದವರು. ತರಗತಿಯ ಪರಿವೀಕ್ಷಣೆಗೈಯುತ್ತ ಹೊರಟ ಈ ಶಿಕ್ಷಕಿ ಪ್ರತಿಯೊಬ್ಬ ವಿದ್ಯಾರ್ಥಿ ಏನು ಮಾಡುತ್ತಲಿದ್ದಾನೆಂಬುದನ್ನು, ಅವರು ಏನು ಚರ್ಚಿಸುತ್ತಲಿದ್ದಾರೆ, ಕಳೆಯುವ ಲೆಕ್ಕವನ್ನು ಯಾವ ರೀತಿ ಮಾಡುತ್ತಲಿದ್ದಾರೆ ಎಂಬಿತ್ಯಾದಿಗಳನ್ನು ಪರಿಶೀಲಿಸುತ್ತಾ ನಡೆದರು. ಹಾಗೆ ಪರಿವೀಕ್ಷಿಸುತ್ತಲಿರುವಾಗ ಅಲ್ಲಲ್ಲಿ ಅಗತ್ಯ ಕಂಡು ಬಂದ ಕಡೆಗಳಲ್ಲಿ ತಮ್ಮ ವ್ಯಾಖ್ಯಾನ-ಮಾರ್ಗದರ್ಶನ ನೀಡತೊಡಗಿದರು. ಕೊನೆಯದಾಗಿ ಒಬ್ಬ ಹುಡುಗನ ಬಳಿ ಸಾರಿದರು. ಆ ಹುಡುಗ ಬಹಳ ಚಿಹ್ನೆಗಳನ್ನು ಕೊಟ್ಟು ಏನೇನೋ ತೊಂದರೆಯಲ್ಲಿ ಸಿಕ್ಕಿಕೊಂಡವನಂತೆ ಕಂಡ ಅಥವಾ ಕಷ್ಟವನ್ನೆದುರಿಸುತ್ತಿರುವವನಂತೆ ತೋರಿದ. ಆ ಉಪಾಧ್ಯಾಯಿನಿ ಅವನ ಡೆಸ್ಕ್ ಮೇಲಿನ ಹಾಳೆ ಎಳೆದುಕೊಂಡಳು. ಹುಬ್ಬು ಗಂಟಿಕ್ಕಿಕೊಂಡಳು. ಅನುಕರಣೀಯವಲ್ಲದ

ಧ್ವನಿಯಲ್ಲಿ ಹೇಳಿದಳು, 'ಅದು ಹಾಗಲ್ಲ 'No' ಅದೆಲ್ಲವೂ ತಪ್ಪು' ಎಂದು. ಅಷ್ಟು ಹೇಳಿದ್ದಲ್ಲದೆ ಆಕೆಯ ಕೈಯಲ್ಲಿದ್ದ ಬೆತ್ತದಿಂದ ಚುರುಕಿನ ತೀಕ್ಷ್ಣವಾದ ಒಂದು ಪೆಟ್ಟನ್ನು ಸಹ ಕೊಟ್ಟಳು. ನಂತರ ಆಕೆ ತರಗತಿಯ ಮುಂಭಾಗಕ್ಕೆ ವೀಕ್ಷಕನು ನಿಂತ ಸ್ಥಳಕ್ಕೆ ಬಂದು ನಿಂತು ನಿಟ್ಟುಸಿರುಬಿಟ್ಟಳು ಮತ್ತು ನನ್ನಲ್ಲಿರುವವ 'ಅವನೊಬ್ಬನೆ ಅತಿ ದಡ್ಡ ಹುಡುಗ' ಎಂದು ಗೊಣಗಿದಳು.

ತರಗತಿಯನ್ನು ಬಿಟ್ಟ ನಂತರ ವೀಕ್ಷಕನು ಆ ಹುಡುಗನೊಂದಿಗೆ ಒಂದು ಚಿಕ್ಕ ಸಮಾಲೋಚನೆ ನಡೆಸಿದ. ಅವರಿಬ್ಬರೂ ಕೂಡಿ ಕೆಲವು ವ್ಯವಕಲನ ಲೆಕ್ಕ ಮಾಡಿದರು ಮತ್ತು ಅನಂತರ ಹುಡುಗನಿಗೆ ಕಳೆಯುವ ಲೆಕ್ಕ ಮಾಡುವುದು ಸುಲಭವೆನಿಸಿತು. ಅವನಿಗೆ ಈ ಮೊದಲು ವ್ಯವಕಲನ ವಿಧಾನ ಗೊತ್ತಿರಲಿಲ್ಲ. ಈಗ ಅವನು ಈ ನಿಗೂಢತೆಯನ್ನು ಭೇದಿಸಲು ಸಮರ್ಥನಾದ. ಅವನಿಗಿದ್ದ ತೊಂದರೆ ಎಂದರೆ ದಡ್ಡತನವಲ್ಲ ಅಥವಾ ಗಣಿತದ ಕ್ಲಿಷ್ಟತೆಯೂ ಅಲ್ಲ. ಆದರೆ ಅವನಿಗೆ ಸರಿಯಾದ ಮಾರ್ಗದರ್ಶನ, ನಿಶ್ಚಿತವಾದ ತಂತ್ರಜ್ಞತೆಯ ಅರಿವಿರಲಿಲ್ಲ. ವೀಕ್ಷಕನು ಅವನೊಂದಿಗೆ ಬೆರೆತು ಪ್ರೀತಿಯಿಂದ ಹೇಳಿಕೊಟ್ಟ ವಿವರಣೆ ಮತ್ತು ತೋರಿದ ಮಾರ್ಗದರ್ಶನದಿಂದ ವ್ಯವಕಲನಗಳ ಲೆಕ್ಕ ಮಾಡುವುದು ಅವನಿಂದ ಸಾಧ್ಯವಾಯ್ತು. ಒಂದು ವಿಷಯ ಅರ್ಥವಾಗುವವರೆಗೆ ಕಷ್ಟವೆನಿಸುತ್ತದೆ. ಅರ್ಥವಾದ ಕೂಡಲೇ ಅದು ಅತ್ಯಂತ ಸುಲಭವೆನಿಸುತ್ತದೆ.

ಒಂದು ದೃಷ್ಟಾಂತದಿಂದಾವಿರ್ಭಾವಿತವಾದ ಫಲಿತಾಂಶವನ್ನೇ ಆಧುನಿಕ ಶೈಕ್ಷಣಿಕ ಪ್ರಯೋಗದಲ್ಲಿ ''ಮೌಲ್ಯಮಾಪನ'' ಎಂದು ಕರೆದಿರುವುದು. ಮೌಲ್ಯಮಾಪನವು ಕಲಿವಿನ ಕೆಲಸದ ಪರಿಶೋಧನೆ. ಅದು ಸಂಶೋಧನೆಯ ಲಕ್ಷಣಗಳನ್ನು ಎತ್ತಿಕೊಳ್ಳಲಿಕ್ಕಾಗಿ ಅತ್ಯವಶ್ಯಕ. ಯಾವುದೇ ಒಂದು ಸಾಮಾನ್ಯ ಶಾಲೆಯೂ ಈ ಒಂದು ಪರೀಕ್ಷೆಯನ್ನು ನಡೆಸುತ್ತದೆ. ನಂತರ ಮೌಲ್ಯಮಾಪನಗೈಯುತ್ತದೆ. ಕಲಿಕೆಯನ್ನು ಪರೀಕ್ಷಿಸಲು ಈ ಒಂದು ಸೂಕ್ಷ್ಮ ಪರಿಶೀಲನೆಯ ಕೆಲಸ ನಡೆಯುತ್ತದೆ. ಅದು ಸಾಮಾನ್ಯವಾಗಿ ಕೆಲವು ನಿರ್ಣಾಯಕ ಫಲಿತಾಂಶಗಳನ್ನು ಒದಗಿಸಿಕೊಡುತ್ತದೆ. ಅದು ಆಯಾ ಸನ್ನಿವೇಶದ ಲಕ್ಷಣಗಳನ್ನು ತಿಳಿಸುತ್ತದೆ ಮತ್ತು ಅದು ಶ್ರೇಷ್ಠಮೌಲ್ಯ ಉಳ್ಳದ್ದಾಗಿರುತ್ತದೆ. ನಡೆಯುವ ಪರೀಕ್ಷೆಗಳು ಯಾವ ವಿಷಯವನ್ನು ಕಲಿಯಬೇಕಾಗಿರುತ್ತದೋ ಆ ವಿಷಯದ ಕಲಿಕೆ ಎಷ್ಟಾಗಿದೆ ಎಂಬುದನ್ನು ಪರೀಕ್ಷಿಸಿ ಮೌಲ್ಯಮಾಪನಗೈಯುವ ವಿಶಿಷ್ಟ ಸಾಧನೆಗಳಾಗಿರುತ್ತವೆ. ಅಂದ ಮೇಲೆ ಮೌಲ್ಯಮಾಪನವು ಎಲ್ಲ ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ಚೆನ್ನಾಗಿ ಮನವರಿಕೆ ಆಗಿರುವ ಒಂದು ನಿರಂತರ ಕಾರ್ಯಕ್ರಮ. ಅದೂ ಅಲ್ಲದೆ ಕಲಿಯುವ ಎಲ್ಲ ವಿದ್ಯಾರ್ಥಿಗಳಿಗೂ ಶಾಲೆಯ ಒಳಗೂ ಹೊರಗೂ ಕಾಲಕಾಲಕ್ಕೆ ನಡೆವ ಪರೀಕ್ಷೆಗಳು

ಆಯಾ ವಿದ್ಯಾರ್ಥಿ ಆಯಾ ವಿಷಯಗಳಲ್ಲಿ ಎಷ್ಟೆಷ್ಟು ಕಲಿತ ಎಂಬುದನ್ನು ದಾಖಲಿಸಲು ಈ ಮೌಲ್ಯಮಾಪನ ಕಾರ್ಯ ನಿರಂತರವಾಗಿ ನಡೆಯುತ್ತಿರುತ್ತದೆ.

ಆದ್ದರಿಂದ ಒಂದು ಸಾಮಾನ್ಯ ತಿಳುವಳಿಕೆ ಏನೆಂದರೆ ಮೌಲ್ಯಮಾಪನವು ಕಲಿಯುವಿಕೆಯ ಒಂದು ಅವಿಭಾಜ್ಯ ಅಂಗ ಎಂಬುದು. ಮೌಲ್ಯಮಾಪನ ಕಾರ್ಯ ಉತ್ತಮ ಮಟ್ಟದ್ದಿರಬಹುದು ಇಲ್ಲದಿರಬಹುದು ಅದು ನಡೆಯಲೇಬೇಕಾದ ಒಂದು ಕಾರ್ಯ. ಮೇಲ್ಕಂಡ ನಿದರ್ಶನದಲ್ಲಿ ಒಬ್ಬರ ಮೌಲ್ಯಮಾಪನ ಅತಿ ಕೆಟ್ಟದ್ದಾಗಿತ್ತು - ಅಂದರೆ ಆ ಹುಡುಗನಿಗೆ ಸರಿಯಾದ ರೀತಿ ಮಾರ್ಗದರ್ಶನ ನೀಡದೆ 'ದಡ್ಡ' 'ಅತಿ ದಡ್ಡ' ಎಂಬ ಹಣೆಪಟ್ಟಿ ಕಟ್ಟಿದ್ದು. ಇನ್ನೊಬ್ಬ ವೀಕ್ಷಕ ಹೋಗಿ ಅದೇ ಹುಡುಗನಿಗೆ ಸರಿಯಾದ ಮಾರ್ಗದರ್ಶನ ಮಾಡಿ ಅದೇ ದಡ್ಡ ಹುಡುಗನಿಗ ಬುದ್ಧಿವಂತನೆಂಬ ಹಣೆಪಟ್ಟಿ ಕಟ್ಟಿಕೊಳ್ಳುವಂತೆ ಮಾಡಿದ್ದು. ಇವೆರಡೂ ಮೌಲ್ಯಮಾಪನಗಳೇ. ಒಂದು ಕೆಟ್ಟದ್ದು ಒಂದು ಒಳ್ಳೆಯದು. ಮೌಲ್ಯಮಾಪಕನಿಗೆ ತನ್ನ ತಪ್ಪಿನ ಅರಿವುಂಟಾದರೆ ಅವನು ಸರಿಯಾದ ರೀತಿಯಲ್ಲಿ ಮೌಲ್ಯಮಾಪನಗೈಯುತ್ತಾನೆ. ಉದಾಹರಣೆಗೆ ಮರ್ಸೆಲನ ಜಯಪ್ರದ ಬೋಧನೆಗೆ ಸೂಚಿಸಿರುವ ಆರು ತತ್ವಗಳೇನಿವೆ, ಅವುಗಳನ್ನು ಶಿಕ್ಷಣತಜ್ಞರುಗಳು ಈಗಾಗಲೇ ಸಾಕುಬೇಕಾದಷ್ಟನ್ನು ಹೇಳಿ ಮುಗಿಸಿದ್ದಾರೆ. ಅವರೆಲ್ಲರು ಹೇಳಿರುವುದನ್ನೇ ಮರ್ಸೆಲನು ಬೇರೆಬೇರೆ ಶಬ್ದಗಳಲ್ಲಿ ಬೇರೆಬೇರೆ ರೀತಿಯಲ್ಲಿ ಒಂದು ಸುವ್ಯವಸ್ಥಿತ ರೀತಿಯಲ್ಲಿ ಹೇಳಿದ್ದಾನೆ. ಬಿ.ಇಡಿ. ತರಗತಿಯ ವಿದ್ಯಾರ್ಥಿಗಳು ಮರ್ಸೆಲನು ಹೇಳಿರುವ ಆರು ತತ್ವಗಳನ್ನು ಬರೆದರೆ ಅದಕ್ಕೆ ಅಂಕ ಕೊಡುವುದು ; ಅದೇ ವಿಷಯವನ್ನು ಬೇರೆಬೇರೆ ಶಿಕ್ಷಣತಜ್ಞರು ಹೇಳಿರುವುದನ್ನು ಬರೆದರೆ ತಪ್ಪೆಂದು ಭಾವಿಸಿ ಅಂಕಕೊಡದೆ ಸೊನ್ನೆ ಸುತ್ತುವುದು ಎಷ್ಟರಮಟ್ಟಿನ ಒಳ್ಳೆಯ ಮೌಲ್ಯಮಾಪನ ಎನಿಸೀತು ? ಇದನ್ನು ಬಿ. ಇಡಿ. ಪರೀಕ್ಷೆಯ ಎಲ್ಲ ಮೌಲ್ಯಮಾಪಕರೂ ಅನುಕ್ರಮವಾಗಿ ಆಲೋಚಿಸಿ ಮೌಲ್ಯಮಾಪನಗೈಯುವುದು ಸೂಕ್ತವಾದ ವಿಚಾರ ಎನಿಸುತ್ತದೆ. ಮರ್ಸೆಲ್ ಹೇಳಿರಲಿ, ಮರಿದೇವರು ಹೇಳಿರಲಿ, ಬೇರಾರೇ ಹೇಳಿರಲಿ ತಾತ್ವಿಕವಾಗಿ ವಿಷಯಗಳು ಸರಿ ಇದ್ದಲ್ಲಿ, ಅಂತಹುದನ್ನು ಮೌಲ್ಯಮಾಪಕರು ತಮ್ಮರಿವಿನ ಪರಿಗಣನೆಗೆ ತೆಗೆದುಕೊಂಡು ಮೌಲ್ಯಮಾಪನಗೈಯುವುದು ಉತ್ತಮ ಮೌಲ್ಯಮಾಪನವೆನಿಸಿಕೊಳ್ಳುತ್ತದೆ. ದಡ್ಡ ಹುಡುಗನ ದೃಷ್ಟಾಂತದಲ್ಲಿ ವೀಕ್ಷಕನು ಅನುಸರಿಸಿದ ಮಾರ್ಗ ಸಲಹಾ ರೂಪದ್ದು ಮತ್ತು ಬೋಧನಾತ್ಮಕವಾದದ್ದು. ಶಿಕ್ಷಕರೆಲ್ಲರೂ ಮೌಲ್ಯಮಾಪನಗೈಯುವಲ್ಲಿ ಮನದಲ್ಲಿಟ್ಟುಕೊಳ್ಳಬೇಕಾದ ಅಂಶವನ್ನು ಅದು ಚೆನ್ನಾಗಿ ಮನದಟ್ಟು ಮಾಡಿಕೊಡುತ್ತದೆ.

ಕಲಿವು ಉದ್ದೇಶಪೂರ್ವಕವಾಗಿ ಮತ್ತು ಜ್ಞಾನಪೂರ್ವಕವಾಗಿ ಕೈಗೊಳ್ಳುವ ಒಂದು ಕಾರ್ಯ. ಇದು ಕಲಿವವನು ತನ್ನಷ್ಟಕ್ಕೆ ತಾನೇ ತನಗೋಸ್ಕರವಾಗಿಯೇ

ಕೈಗೊಳ್ಳುವ ಒಂದು ಕಾರ್ಯವೇ ವಿನಃ ಕುಡಿದ ಅಮಲಿನಲ್ಲಿ ತನಗೆ ತಾನೇ ಉಂಟಾಗುವ ಪರಿಣಾಮದಂತಲ್ಲ. ಆದ್ದರಿಂದ ಕಲಿವವನು, ಕಲಿವವನಿಗೆ ಸಹಾಯ ಮಾಡುವವನು, ಅವನು ಏನು ? ಎಂಬುದನ್ನು ಅರ್ಥೈಸಿಕೊಳ್ಳಬೇಕು ಮತ್ತು ಅದರಲ್ಲಿನ ನಿರ್ಣಾಯಕಾಂಶಗಳೇನು ಎಂಬುದನ್ನರಿತು ಕಲಿವು ಸಾಗುವಂತಾಗಬೇಕು.

ಕಲಿವಿನ ಯಾವುದೇ ಕಾರ್ಯವನ್ನು ಪರಿಣಾಮಕಾರಿಯಾಗಿ ಮತ್ತು ಯಶಸ್ವಿಯಾದ ರೀತಿಯಲ್ಲಿ ಉನ್ನತೀಕರಿಸಿ ಅದರ ಎಲ್ಲ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ಬೆಲೆಕಟ್ಟುವ ಕಾರ್ಯ ವಿವೇಚನಾಯುಕ್ತವಾದದ್ದು ಮತ್ತು ಬೆಲೆಯುಳ್ಳ ಮೌಲ್ಯ ಉಳ್ಳದ್ದು. ಇದನ್ನೇ ಅದರ ಅತ್ಯಂತ ಸರಳವಾದ ಮತ್ತು ಸಾಮಾನ್ಯವಾದ ಸ್ವರೂಪದಲ್ಲಿ ''ಮೌಲ್ಯಮಾಪನ'' ಎಂದು ಕರೆದಿರುವುದು. ಅದರ ಉತ್ತಮ ಮೌಲ್ಯ ಸ್ವಯಂಸಾಕ್ಷಿ ಉಳ್ಳದ್ದು.

ಒಳ್ಳೆಯ ಮೌಲ್ಯಮಾಪನದ ಗುಣಲಕ್ಷಣಗಳು :

ಶಿಕ್ಷಕರೂ ಮೌಲ್ಯಮಾಪನ ಮಾಡುವವರು ಮತ್ತು ಮಾಡಬಲ್ಲವರು - ಒಳ್ಳೆಯದಾಗಿಯೂ - ಕೆಟ್ಟದಾಗಿಯೂ. ಹಾಗೆಯೇ ವಿದ್ಯಾರ್ಥಿಗಳೂ ಕೂಡ. ಅವರೀರ್ವರಿಗಿರುವ ವ್ಯತ್ಯಾಸ ಅವರವರ ವಿವೇಚನಾಶಕ್ತಿ ಸಾಮರ್ಥ್ಯಗಳಿಗೆ ಸಂಬಂಧಿಸಿದ್ದು. ಯಾವುದು ಮೌಲ್ಯಮಾಪನ ಕಾರ್ಯದಲ್ಲಿ ಮುಖ್ಯ ಯಾವುದು ಅಮುಖ್ಯ ಎಂಬುದರ ತಾರತಮ್ಯಜ್ಞಾನ ಮೌಲ್ಯಮಾಪನ ಮಾಡುವವರಿಗಿರಬೇಕು.

ಇದಕ್ಕೊಂದು ಸರಳ ನಿದರ್ಶನ ನೋಡೋಣ. ಅನ್ನ ಬೆಂದಿದೆಯೆ ಇಲ್ಲವೆ ಎಂಬುದನ್ನು ಪರೀಕ್ಷಿಸುವ ನಿರ್ಣಾಯಕವಾದ ಮೌಲ್ಯಮಾಪನ ಮಾಡಲಿಕ್ಕೆ ಪಾತ್ರೆ ಅಥವಾ ಮಡಕೆಯಲ್ಲಿರುವ ಎಲ್ಲ ಅನ್ನದ ಕಾಳುಗಳನ್ನು ಹಿಸುಕಿ ನೋಡುವುದಿಲ್ಲ. ಅನ್ನ ಬೆಂದು ಪಕ್ವತೆಗೆ ಬಂದಿದೆ ಅಥವಾ ಇನ್ನೂ ಅಪಕ್ವ ಎಂದು ಹೇಳಲಿಕ್ಕೆ ಒಂದೆರಡು ಅಗುಳು ಹಿಸುಕಿ ನೋಡುತ್ತಾರೆಯೇ ವಿನಃ ಎಲ್ಲ ಅಗುಳುಗಳನ್ನು ಹಿಸುಕಿ ನೋಡುವುದಿಲ್ಲ. ಅನ್ನವನ್ನು ಪಕ್ವಾನ್ನವಾಗಿ ಬೇಯಿಸುವುದೂ ಸಹ ಒಂದು ಕಲಿವು. ಇಲ್ಲಿ ಅಡುಗೆ ಮಾಡುವವರೂ ಅನ್ನದ ಪಕ್ವಾಪಕ್ವತೆ ಕುರಿತು ಮೌಲ್ಯಮಾಪನ ಗೈಯ್ಯುತ್ತಾರೆ. ಊಟ ಮಾಡುವವರೂ ಸಹ ಮೌಲ್ಯಮಾಪನಗೈಯುತ್ತಾರೆ. ಆದ್ದರಿಂದ ಒಳ್ಳೆಯ ಮೌಲ್ಯಮಾಪನ ಯಾವುದೆಂದುಬನ್ನು ಪತ್ತೆಹಚ್ಚಲು ಕಲಿವಿನ ಸನ್ನಿವೇಶವನ್ನು ಸಂಶೋಧನಾತ್ಮಕವಾಗಿ ನಿಷ್ಕರ್ಷಿಸಬೇಕು.

ಕಲಿವವನ ಉದ್ದೇಶವೇನೆಂಬುದು ಅವನ ಕಲಿವನ್ನು ನಿರ್ಧರಿಸುತ್ತದೆ. ಈ ಎಲ್ಲ ಚರ್ಚೆ, ವಿಮರ್ಶೆ, ವಿವರಣೆಗಳು ಅದಕ್ಕಾಗಿ ನಡೆದಿವೆ. ಕಲಿವು ಅತ್ಯವಶ್ಯಕ ಪ್ರಜ್ಞೆ

ಯಿಂದಲೇ ಪ್ರಾರಂಭವಾಗುತ್ತದೆ. ತನ್ಮೂಲಕ ಕಲಿವವನಿಗೆ ಕಲಿತದ್ದನ್ನು ಅರ್ಥೈಸಿಕೊಳ್ಳುವಿಕೆ, ಚಾತುರ್ಯ, ವಿವೇಚನಾಶಕ್ತಿ ಮತ್ತು ಮೆಚ್ಚುಗೆಗಳು ಉಂಟಾಗುತ್ತವೆ. ಇದು ಯಶಸ್ವಿಯಾದ ಹಾದಿಯಲ್ಲಿ ನಡೆದದ್ದೇ ಆದರೆ ಮುಂದೆ ಜೀವನದಲ್ಲಿ ಎದುರಾದ ಸಂಕಷ್ಟಗಳನ್ನು ಎದುರಿಸುವ ಶಕ್ತಿ ಅವನಿಗೆ ದತ್ತವಾಗುತ್ತದೆ. ಆದುದರಿಂದ ಯಾವುದೇ ಒಳ್ಳೆಯ ಮೌಲ್ಯಮಾಪನ ಯೋಜನೆಯು ಕಲಿವಿನ ಮುಖ್ಯ ಉದ್ದೇಶದ ಹೂರಣವನ್ನು ಗಮನದಲ್ಲಿಟ್ಟುಕೊಂಡು ಮಾಡತಕ್ಕದ್ದು. ಈ ಒಂದು ಪ್ರಮಾಣವನ್ನು ಮನಸ್ಸಿನಲ್ಲಿಟ್ಟುಕೊಂಡು ಮೌಲ್ಯಮಾಪನದ ಕೆಲವೊಂದು ಮಾರ್ಗಗಳನ್ನು ತೆಗೆದುಕೊಳ್ಳೋಣ.

೧. ಮೌಲ್ಯಮಾಪನ ಮತ್ತು ನೇರ ಫಲಿತಾಂಶ.

೨. ಮೌಲ್ಯಮಾಪನ ಮತ್ತು ವರ್ಗಾವಣೆ.

೩. ಕಲಿವಿನ ವಿಧಾನವನ್ನು ನೇರ ಮೌಲ್ಯಮಾಪನಕ್ಕೊಳಪಡಿಸುವಿಕೆ.

ಇದೀಗ ಮೇಲ್ಕಂಡ ಮೂರೂ ಮಾರ್ಗಗಳನ್ನು ಒಂದೊಂದನ್ನಾಗಿ ವಿಶ್ಲೇಷಿಸಿ ನೋಡೋಣ.

೧. ಮೌಲ್ಯಮಾಪನ ಮತ್ತು ನೇರ ಫಲಿತಾಂಶ :

ಕಲಿವಿಗೂ ಮತ್ತು ಮೌಲ್ಯಮಾಪನಕ್ಕೂ ಬಿಡಿಸಲಾರದ ನಂಟು ಇದೆ. ಕಲಿವಿನ ವಿಧಾನದ ಎಲ್ಲ ಲಕ್ಷಣಗಳೂ ಮೌಲ್ಯಮಾಪನದಲ್ಲಿ ಅಡಕಗೊಂಡವುಗಳಾಗಿದ್ದು ಅವು ಅವುಗಳ ನೇರ ಫಲಿತಾಂಶದಿಂದ ಅಭಿವ್ಯಕ್ತಗೊಳ್ಳತಕ್ಕವುಗಳಾಗಿವೆ. ಕೊಟ್ಟ ಕಾಲಾವಧಿಯಲ್ಲಿ ಒಬ್ಬ ವ್ಯಕ್ತಿ ಎಷ್ಟು ಇತಿಹಾಸವನ್ನು ಅಥವಾ ಬೀಜಗಣಿತವನ್ನು ಅಥವಾ ವಿಜ್ಞಾನವನ್ನು ತಿಳಿದುಕೊಂಡಿದ್ದಾನೆ ? ಫ್ರೆಂಚ್ ಅಥವಾ ಲ್ಯಾಟಿನ್‌ನಲ್ಲಿ ಗಳಿಸಿರುವ ನೈಪುಣ್ಯತೆ ಮತ್ತು ಪಾಂಡಿತ್ಯದ ಮೊತ್ತವೆಷ್ಟು ? ಉತ್ತಮ ಪರೀಕ್ಷೆ ಅಥವಾ ಟೆಸ್ಟ್ ಒಂದರಲ್ಲಿ ವಿದ್ಯಾರ್ಥಿಯೊಬ್ಬ ಓದುವುದರಲ್ಲಿ ಅಥವಾ ಗಣಿತದಲ್ಲಿ ತೋರಿಸಿದ ಸಾಧನೆ ಎಷ್ಟು ? ಈ ತರಹದ ಎಲ್ಲ ಪ್ರಶ್ನೆಗಳನ್ನು ಮೌಲ್ಯಮಾಪನ ಒಳಗೊಂಡುದಾಗಿದ್ದು ಅವುಗಳಿಗೆ ಕಂಡುಕೊಳ್ಳುವ ಉತ್ತರಗಳೇ ಅವುಗಳ ನೇರ ಫಲಿತಾಂಶವನ್ನು ಪ್ರತಿಬಿಂಬಿಸುತ್ತವೆ.

ಇದರ ಪ್ರಾಧಾನ್ಯತೆಯನ್ನು ಕ್ವಚಿತ್ತಾಗಿ ಅರ್ಥೈಸಿಕೊಳ್ಳಬಹುದು. ಪ್ರತಿಯೊಬ್ಬರೂ ಕಲಿಯುವುದು ತನ್ನ ಕಲಿವಿನ ಫಲಿತಾಂಶಕ್ಕಾಗಿ. ಹೇಳುವುದಾದರೆ ಇದರ ಬಹುಮುಖ್ಯವಾದ ಉದ್ದೇಶ ಇದರ ವಿಧಾನವನ್ನು ಪ್ರೋತ್ಸಾಹಿಸುವಂತಹುದು. ಕಲಿವು ಫಲಪ್ರದವಾಗಿದೆಯೇ ಮತ್ತು ಬೋಧನೆ ಯಶಸ್ವಿಯಾಗಿದೆಯೆ ಎಂಬೆಲ್ಲ

ಅಂಶಗಳನ್ನು ನಿರ್ಧರಿಸುವುದು ಕಲಿವಿನ ಫಲಿತಾಂಶಗಳಿಂದ. ಈ ರೀತಿ ಕಲಿವಿನ ಮತ್ತು ಬೋಧನೆಯ ಫಲಿತಾಂಶಗಳ ಮಾಪನವೇ ಅತ್ಯುತ್ತಮ ಮೌಲ್ಯಮಾಪನ. ಆದ್ದರಿಂದ ಮೌಲ್ಯಮಾಪನದಿಂದ ಹೊರಹೊಮ್ಮಿದ ನೇರ ಫಲಿತಾಂಶಗಳೂ ಬೋಧಕರಿಗೆ ಎಷ್ಟರಮಟ್ಟಿಗೆ ಸಹಾಯಕ ಮತ್ತು ತನ್ಮೂಲಕ ಕಲಿಯುವವರ ಭಾಗಕ್ಕೆ ಎಷ್ಟು ಸಹಾಯಕ ಎಂಬುದೇ ಪ್ರಶ್ನೆ. ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ಅನೇಕ ಪ್ರಯೋಗಗಳನ್ನು ನಡೆಸಲಾಗಿದೆ. ಆ ಎಲ್ಲ ಪ್ರಯೋಗಗಳಿಂದ ಬಂದ ಕೆಲವು ತೀರ್ಮಾನಗಳು ಕೆಳಕಂಡಂತಿವೆ :

೧. ಕಲಿವವನಿಗೆ ಅವನು ಯಾವ ಫಲಿತಾಂಶಗಳನ್ನು ಪಡೆಯಲಿದ್ದಾನೆ ಎಂಬುದನ್ನು ಎಷ್ಟೆಷ್ಟು ಸಾಧ್ಯವೋ ಅಷ್ಟನ್ನು ತಿಳಿಯುವ ರೀತಿಯಲ್ಲಿ ಕಲಿವಿನ ವ್ಯವಸ್ಥೆಯನ್ನು ಯಾವಾಗಲೂ ವ್ಯವಸ್ಥೆಗೊಳಿಸಬೇಕಾಗಿದೆ. ಇದನ್ನು ಟೆಸ್ಟ್‌ಪೇಪರ್ಸ್‌ಗಳನ್ನು ತಿರುಗಿಕೊಟ್ಟು ಅವರವರು ಬರೆದಿರುವ ಉತ್ತರಗಳನ್ನು ಕುರಿತು ಚರ್ಚಿಸುವುದರ ಮೂಲಕ ಮಾಡಬಹುದು. ವಿದ್ಯಾರ್ಥಿಗಳಿಗೆ ಒಡ್ಡಿದ ಪರೀಕ್ಷೆಗಳನ್ನು ಅವರೇ ಪರೀಕ್ಷಿಸಿಕೊಂಡು ಬೆಲೆಕಟ್ಟುವಂತೆ ಮಾಡುವುದರ ಮೂಲಕ ಸಾಧಿಸಬಹುದು. ಒಂದು ತಂಡದ ವಿದ್ಯಾರ್ಥಿಗಳು ಕುಳಿತು ಚರ್ಚಿಸಿ ತೀರ್ಮಾನಕ್ಕೆ ಬರುವಂತೆ ಮಾಡಬಹುದು ಅಥವಾ ಒಬ್ಬನ ಆಲೋಚನೆಯನ್ನು ಕುರಿತು ತೀರ್ಮಾನಕ್ಕೆ ಬರಬಹುದು. ಕೆಲವು ಚಾತುರ್ಯಗಳಲ್ಲಿ ಪರಿಣತ ಪಾಂಡಿತ್ಯವನ್ನು ಪಡೆಯಲು ವಿದ್ಯಾರ್ಥಿಗಳೇ ತಯಾರಿಸಿದ ಒಂದು ಯೋಜನೆಯ ರೀತ್ಯ ಅವರು ಸಾಧಿಸಿರುವ ಪ್ರಗತಿಯ ಬಗ್ಗೆ ನಕಾಶೆಯನ್ನು ತಯಾರು ಮಾಡಬಹುದು. ಒದಗಿಸಿಕೊಟ್ಟ ತರಗತಿಯ ಸನ್ನಿವೇಶದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯ ಕೊಡುಗೆ ಮತ್ತು ಸಾಹಸದ ಪ್ರಯತ್ನಗಳಿಗೆ ಬೆಲೆಕಟ್ಟುವುದು. ಕೈಗೊಳ್ಳಬೇಕಾಗಿರುವ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳಿಗೂ ಭಾಗಸ್ಥರಾಗಿರುವಂತೆ ಮತ್ತು ಅವರೇ ಆ ಪರೀಕ್ಷೆಗಳಿಗೆ ಬೆಲೆ ಕಟ್ಟುವಂತೆ ಮಾಡುವುದು ಪ್ರಕಟಗೊಳಿಸಿದ ಪರೀಕ್ಷೆಗಳಲ್ಲಿ ಗಳಿಸಿದ ಅಂತಸ್ತು ಎಷ್ಟು ಎಂಬುದನ್ನು ನಿರ್ಧರಿಸುವುದು ಮತ್ತು ಇತ್ಯಾದಿ ಇತ್ಯಾದಿ ಕ್ರಮಗಳನ್ನು ಅನುಸರಿಸುವುದರಿಂದ ಮೌಲ್ಯಮಾಪನ ವಿಧಾನಗಳನ್ನು ಕಂಡುಕೊಳ್ಳಬಹುದಾಗಿದೆ. ಅತ್ಯುತ್ತಮ ಕಾರ್ಯಪದ್ಧತಿ ಎಂದರೆ ವಿದ್ಯಾರ್ಥಿಗಳು ತಮ್ಮ ಫಲಿತಾಂಶದ ಬಗ್ಗೆ ತಾವೇ ಅರಿತುಕೊಳ್ಳುವ ರೀತಿಯಲ್ಲಿ ಸನ್ನಿವೇಶವನ್ನು ರೂಪಿಸುವುದು ಮತ್ತು ಹಾಗೆ ರೂಪಿತವಾದ ಸನ್ನಿವೇಶದಲ್ಲಿ ಅವರ ಕಲಿವನ್ನು ಬುದ್ಧಿವಂತಿಕೆಯ ಸಾಮರ್ಥ್ಯದಿಂದ ಸಂಶೋಧಿಸುವುದು.

೨. ಕಲಿವಿನ ವ್ಯವಸ್ಥೆ ಹೇಗಿರಬೇಕೆಂದರೆ ಕಲಿಯುವ ಕಾರ್ಯ ನಡೆಯುತ್ತಿರುವಾಗಲೇ ಕಲಿವವನಿಗೆ ತನ್ನ ಸಾಧನೆಯ ಫಲಿತಾಂಶದ ಅರಿವಾಗುವಂತಿರಬೇಕು.

ಆದರೆ ಕೊಟ್ಟ ಅಧ್ಯಯನ ವಿಷಯಗಳು ಮುಗಿಯುವವರೆಗೂ ಕಲಿವಿನ ಫಲಿತಾಂಶಗಳು ಏನೆಂಬುದರ ಅರಿವಾಗದಂತೆ ರಹಸ್ಯವಾಗಿಡುವುದು ಒಂದು ಪರಿಪಾಠ. ಆದರೆ ಇದು ಒಳ್ಳೆಯ ಮೌಲ್ಯಮಾಪನವೆನಿಸುವುದಿಲ್ಲ. ಅಲ್ಲದೆ, ಉಪಾಧ್ಯಾಯರು ತಮ್ಮೊಂದು ಉತ್ಸಾಹದಲ್ಲಿ ಮೇಲಿಂದ ಮೇಲೆ ಟೆಸ್ಟ್ ನಡೆಸುವುದು, ಫಲಿತಾಂಶ ಪ್ರಕಟಿಸುವುದು ಇದೂ ಸರಿಯಲ್ಲ. ವಿದ್ಯಾರ್ಥಿಗಳಿಗೆ ಆಯಾಸವಾಗುವ ರೀತಿಯಲ್ಲಿ, ಕಲಿಯುವ ಆಸಕ್ತಿ ಇರಲಿ ಇಲ್ಲದಿರಲಿ ಅವರನ್ನು ಸದಾ ಕಲಿವಿನ ಚಟುವಟಿಕೆಯಲ್ಲಿಟ್ಟಿರಬೇಕೆಂಬ ಆಕಾಂಕ್ಷೆಯಿಂದ ಮೇಲಿಂದ ಮೇಲೆ ವಿಷಯಗಳನ್ನು ತುರುಕುವುದು ಸರಿಯಲ್ಲ. ಕಲಿಯುವ ಇಚ್ಛೆ ಸೃಷ್ಟಿಯಾದಾಗ ಬೋಧಿಸಿದ್ದೂ ಅರ್ಥಪೂರ್ಣವಾದ, ಪರಿಣಾಮಕಾರಿಯಾದ ಕಲಿವನ್ನು ಸಾಧಿಸುತ್ತದೆ.

೩. ಕಲಿವವನ ಉದ್ದೇಶಕ್ಕೆ ಕಲಿತ ಜ್ಞಾನ ಉಪಯುಕ್ತವಾದ ಪರಿಣಾಮವನ್ನುಂಟು ಮಾಡುವಂತಿದ್ದಲ್ಲಿ ಅಂತಹ ಕಲಿವಿನ ಫಲಿತಾಂಶಗಳು ಅರ್ಥಪೂರ್ಣವಾದವುಗಳೆನಿಸುತ್ತವೆ. ಕಲಿವವನು ಯಾವ ಫಲಿತಾಂಶಗಳನ್ನು ತಲುಪಬೇಕೆಂದು ಅಪೇಕ್ಷಿಸುತ್ತಾನೋ ಅಂತಹ ಫಲಿತಾಂಶಗಳನ್ನು ಪಡೆಯಬೇಕೆಂಬ ಪರಿಜ್ಞಾನ ಅವನಿಗಿದ್ದರೆ ಸಾಕು.

೨. ಮೌಲ್ಯಮಾಪನ ಮತ್ತು ವರ್ಗಾವಣೆ :

ಎಲ್ಲ ಕಲಿವುಗಳ ಪರೀಕ್ಷೆಯ ನಿರ್ಣಾಯಕಾಂಶವೆಂದರೆ ವರ್ಗಾವಣೆ. ಅದರಲ್ಲೂ ಕಾರ್ಯಯೋಗ್ಯವಾದ ಸನ್ನಿವೇಶದಲ್ಲಿ ಕಲಿವಿನ ವರ್ಗಾವಣೆ ಅತಿ ಮುಖ್ಯ. ಇದು ಮನಶ್ಶಾಸ್ತ್ರೀಯವೂ ಹೌದು ಮತ್ತು ಸಾಮಾನ್ಯ ತಿಳುವಳಿಕೆಯ ಸತ್ಯವೂ ಹೌದು. ಕಲಿತ ವಿಷಯವೊಂದು ಜೀವನ ಸನ್ನಿವೇಶದಲ್ಲಿ ದುತ್ತನೆ ಎದುರಾಗುವ ಸಮಸ್ಯೆಗಳನ್ನು ಬಿಡಿಸಲು ನೆರವಾಗದಿದ್ದಲ್ಲಿ ಅಂತಹ ಕಲಿವು ಕೃತಕ. ಕೃತ್ರಿಮ ಕಲಿವೆನಿಸುತ್ತದೆ. ಯಾವುದು ಉಪಯುಕ್ತತೆಗೆ ಅಗತ್ಯವಾಗಿ ಬರುತ್ತದೋ ಅದು ಕರಾರುವಕ್ಕಾದ ಕಲಿವೆನಿಸುತ್ತದೆ.

ಆದ್ದರಿಂದ ಒಳ್ಳೆಯ ಮೌಲ್ಯಮಾಪನವು ಕರಾರುವಾಕ್ಕಾದ ಫಲಿತಾಂಶಗಳನ್ನು ಪಡೆಯುವಂತಾಗಬೇಕು. ಅದಕ್ಕೊಡ್ಡಬಹುದಾದ ಪರೀಕ್ಷೆ ಎಂದರೆ ಕಲಿವಿನ ವರ್ಗಾವಣೆ. ಮಕ್ಕಳು ಪುಸ್ತಕದಲ್ಲಿರುವ ಪದಗಳನ್ನು ಕಂಠಪಾಠಮಾಡಿ ಹೇಳುತ್ತಾರೆ. ಆದರೆ ಹೊಸದೊಂದು ಪದವನ್ನು ಹೇಳೆಂದಾಗ ಹೇಳಲು ಅವರಿಂದಾಗುವುದಿಲ್ಲ. ಅಂದರೆ ಪುಸ್ತಕದ ಮಕ್ಕಿಕಾಮಕ್ಕಿ ಕಲಿವು ಇನ್ನೊಂದಕ್ಕೆ ವರ್ಗಾವಣೆ ಹೊಂದಲು ಸಾಧ್ಯವಿಲ್ಲವಾದಲ್ಲಿ ಅಂತಹ ಕಲಿವು ಕೃತಕ, ಕೃತ್ರಿಮ ಕಲಿವೆನಿಸುತ್ತದೆ. ಶಾಲೆಯ ಗಿಳಿಪಾಠ

ಜೀವನಾನುಷ್ಠಾನ ಯೋಗ್ಯವಾಗದಿದ್ದರೆ ಅಂತಹ ಕಲಿವು ಕಲಿವೆನಿಸಲಾರದು. ಅದು ಕೃತಕ ಮತ್ತು ತಾತ್ಕಾಲಿಕ. ಅರೆಬೆಂದ ಅನ್ನದಂತೆ ಅಪಕ್ವ. ಈ ರೀತಿ ಅಪಕ್ವವಾದುದರ ಮೌಲ್ಯಮಾಪನವೂ ಸಹ ಕೃತಕ, ಕೃತ್ರಿಮ ಎನಿಸುತ್ತದೆ.

ಕಲಿವಿನ ವ್ಯವಸ್ಥೆ ಮೌಲ್ಯಮಾಪನದ ಸ್ವರೂಪ ಕೇವಲ ಪರೀಕ್ಷೆಗಳನ್ನು ನಡೆಸುವುದಷ್ಟಕ್ಕೇ ಸೀಮಿತವಾಗದೆ ಕಲಿವಿನ ವರ್ಗಾವಣೆಯನ್ನು ಗಮನದಲ್ಲಿಟ್ಟು ಕೊಳ್ಳಬೇಕು. ಕ್ಷೇತ್ರಪ್ರವಾಸ, ಸಭೆ, ಸಮ್ಮೇಳನಗಳನ್ನು ನಡೆಸುವ ಯೋಜನೆ, ಕಾಗದ ಗಳನ್ನು ಬರೆಯುವಿಕೆ, ಪ್ರಯೋಗಾರ್ಥ ಶಾಲಾತೋಟದ ನಿರ್ವಹಣೆ, ಸ್ಥಳೀಯ ಜನಸಮುದಾಯದ ಬಗ್ಗೆ ನಕ್ಷೆ ತಯಾರಿಸುವುದು ಮತ್ತು ಆ ಸಮುದಾಯದ ಇತಿಹಾಸ, ಆರ್ಥಿಕ ಸ್ಥಿತಿ - ಈ ರೀತಿ ಇವೆಲ್ಲವುಗಳ ಅಧ್ಯಯನದಿಂದ ಮಕ್ಕಳಿಗೆ ನಿಜವಾದ ವಿಜ್ಞಾನ, ಗಣಿತ, ಕಲೆ, ಸಂಗೀತ, ಇಂಗ್ಲಿಷ್ ಉಚ್ಚಾರಣೆ ಇತ್ಯಾದಿ ಇತ್ಯಾದಿಗಳ ನೈಜ ಗ್ರಹಿಕೆ ಉಂಟಾಗುತ್ತದೆ. ತರಗತಿಯಲ್ಲಿ ಕಾಗದ ಮತ್ತು ಪೆನ್ನುಗಳನ್ನು ಉಪಯೋಗಿಸಿ ಕಲಿಯುವುದಕ್ಕಿಂತಲೂ ಅತ್ಯಂತ ಪರಿಣಾಮಕಾರಿಯಾದ ಮತ್ತು ಅರ್ಥಪೂರ್ಣ ಕಲಿವು ಸಿದ್ಧಿಸುತ್ತದೆ. ಇಲ್ಲಿನ ಕಷ್ಟವೇನೆಂದರೆ ಕಾಗದ ಮತ್ತು ಬರವಣಿಗೆಯ ಪರೀಕ್ಷೆಯಲ್ಲಿ ಸುಲಭಸಾಧ್ಯವಾದಷ್ಟು ಮೌಲ್ಯಮಾಪನ ಕಾರ್ಯ ಇಲ್ಲಿ ಸುಲಭ ವಾಗುವುದಿಲ್ಲ. ಆಗ ಲಭ್ಯವಾಗುವ ಅಂಕಿ ಅಂಶಗಳಿಂದ ಪ್ರಮುಖವಾದ ತೀರ್ಮಾನ ಗಳನ್ನು ಕೈಗೊಳ್ಳಲಡ್ಡಿಯಿಲ್ಲ. ಮಕ್ಕಳ ಸಾಧನೆಯನ್ನು ಗುರುತಿಸಲು ಏನಾದರೊಂದು ರೀತಿಯ ದಾಖಲೆಗಳನ್ನು ಮಾಡಿಕೊಳ್ಳಬಹುದು. ಆ ರೀತಿಯ ದಾಖಲಾತಿ ಬಹಳ ಮುಖ್ಯವಾದುದು. ಅದು ಒರಟಾದ ಸ್ವಾಭಾವಿಕ ಸನ್ನಿವೇಶದಿಂದ ಬಂದುದಾದರೂ ಅದು ಹೆಚ್ಚಿನ ಬೆಲೆಯುಳ್ಳದ್ದು. ಅದು ಅಚ್ಚುಕಟ್ಟಾದ ನಯವಾದ ಪೇಪರ್ ಮತ್ತು ಪೆನ್ಸಿಲ್ ಪರೀಕ್ಷೆಗಿಂತ ರೋಚಕವಾದುದು.

ಮೌಲ್ಯಮಾಪನ ಕಾರ್ಯದಲ್ಲಿ ವರ್ಗಾವಣೆಗೊಳಗೊಂಡ ಕಲಿವಿನ ಫಲಿತಾಂಶ ಎರಡು ಕಾರಣಕ್ಕಾಗಿ ಪ್ರಮುಖವಾದುದು. ಮೊದಲನೆಯದಾಗಿ, ಅವು ಉಪಾಧ್ಯಾಯನಿಗೆ ಏನು ನಡೆಯುತ್ತಿದೆ ಅಥವಾ ಏನು ನಡೆಯುತ್ತಿಲ್ಲ ಮತ್ತು ವಿದ್ಯಾರ್ಥಿಗಳಿಗೆ ಕಲಿವಿನಲ್ಲಿ ನಿರ್ಣಾಯಕವಾಗಿ ಅರ್ಥವಾಗಿರುವುದೆಷ್ಟು ಎಂಬುದನ್ನು ತಿಳಿಸುತ್ತದೆ. ಕೆಲವು ಸಂದರ್ಭಗಳಲ್ಲಿ ಅವು ವಿಚಿತ್ರವಾಗಿರುವ ಅಥವಾ ವಿನಾಶಕಾರಿಯಾದ ಅಂಶಗಳೆನಿಸುತ್ತವೆ. ಎರಡನೆಯದಾಗಿ ಅವು ಕಲಿವವರ ಉದ್ದೇಶಗಳಿಗೆ ಹತ್ತಿರವಾದವುಗಳಾಗಿರುತ್ತವೆ. ಆದ್ದರಿಂದ ಅವು ಅವರಿಗೆ ಅರಿವನ್ನುಂಟುಮಾಡಿ ಅವನ ಕಲಿವಿನ ಸ್ವರೂಪದ ಮೇಲೆ ಶಕ್ತಿಯುತವಾದ ಪರಿಣಾಮವನ್ನುಂಟು ಮಾಡುತ್ತದೆ. ಪ್ರತಿಯೊಬ್ಬರ ಕಲಿವೂ ಸಹ ಫಲಿತಾಂಶಕ್ಕಾಗಿಯೇ ಇರುವಂತಹುದು. ಆದರೆ ನಾವು ಅನೇಕ ವಿಚಾರಗಳನ್ನು ತುಂಬಿಕೊಳ್ಳಲಿಕ್ಕಾಗಿಯೇ

ಕಲಿಯುತ್ತೇವೆನ್ನುವುದು ಸರಿಯಲ್ಲ. ಅಲ್ಲದೆ ಚಾತುರ್ಯವೊಂದನ್ನು ಕಲಿಸಿ ನಿಯಂತ್ರಿತ ಸನ್ನಿವೇಶದಲ್ಲಿ ಮಾತ್ರ ಕೆಲಸಕ್ಕೆ ಉಪಯುಕ್ತಗೊಳಿಸಲಿಕ್ಕಾಗಿ ಮಾತ್ರ ಬಳಸಬೇಕೆನ್ನುವುದೂ ಯುಕ್ತವಲ್ಲ. ನಾವು ಎಂತಹ ಫಲಿತಾಂಶಕ್ಕಾಗಿ ಕಲಿಯುತ್ತೇವೆಂದರೆ ಕಲಿತದ್ದು ಒಂದು ಇನ್ನೊಂದಕ್ಕೆ ವರ್ಗಾವಣೆಗೊಳ್ಳುವಂತಿರಬೇಕು. ಫಲಿತಾಂಶಗಳು ಸ್ವತಂತ್ರವಾಗಿದ್ದು ನಾನಾರೀತಿಯಲ್ಲಿ ಉಪಯೋಗಿಸಲಿಕ್ಕೆ ಬರುವಂತಹವುಗಳಾಗಿರಬೇಕು.

ಅರ್ಥಪೂರ್ಣವಾಗಿ ವ್ಯವಸ್ಥೆಗೊಳಿಸಿದ ಕಲಿವಿನ ಸಂದರ್ಭ ಉತ್ತಮ ಫಲಿತಾಂಶಗಳನ್ನು ತಂದುಕೊಡುತ್ತದೆ. ಒಂದು ವಿಷಯದ ಕಲಿವು ಇನ್ನೊಂದಕ್ಕೆ ಸುಲಭವಾಗಿ ವರ್ಗಾವಣೆಗೊಂಡು ಅವನ ಕಲಿವಿನ ಕ್ಷೇತ್ರವನ್ನು ವಿಸ್ತೃತಗೊಳಿಸುತ್ತಾ ಹೋಗಬೇಕು. ಆ ರೀತಿ ವರ್ಗಾವಣೆಗೊಳ್ಳಬಲ್ಲ ಕಲಿವು ನಿಖರವಾದ ಮತ್ತು ಸತ್ವಪೂರ್ಣವಾದ ಕಲಿವೆನಿಸುತ್ತದೆ.

೩. ಕಲಿವಿನ ವಿಧಾನವನ್ನು ನೇರ ಮೌಲ್ಯಮಾಪನಕ್ಕೊಳಪಡಿಸುವಿಕೆ :

ಮೌಲ್ಯಮಾಪನದಿಂದಾಗುವ ಪ್ರಯೋಜನಕರ ಪರಿಣಾಮ ಫಲಿತಾಂಶಗಳನ್ನು ಒತ್ತಿ ಹೇಳುವುದು. ಅವು ನೇರವಾದವುಗಳೆ ಅಥವಾ ವರ್ಗಾವಣೆಯಾದವುಗಳೆ ಅಥವಾ ಅವು ಕಲಿತ ಜ್ಞಾನದ ಪ್ರಭಾವದಿಂದಾಗುವ ಫಲಿತಾಂಶಗಳೆ ಎಂಬುದು ಕಲಿವಿನ ವಿಧಾನದ ಮೇಲೆ ನಿಂತಿರುವಂತಹುದಾಗಿದೆ.

ಕಲಿವಿನ ವಿಧಾನವು ಯಾವಾಗಲೂ ನಿಯಂತ್ರಣದಲ್ಲಿರಬೇಕು. ಒಳ್ಳೆಯ ಮೌಲ್ಯಮಾಪನ ನೇರವಾಗಿ ಕಲಿವಿನ ವಿಧಾನದೊಂದಿಗೆ ಪಾಲ್ಗೊಳ್ಳಬೇಕು. ಇದೀಗ ಒಂದು ನಿದರ್ಶನವನ್ನು ತೆಗೆದುಕೊಳ್ಳೋಣ. ಇಬ್ಬರು ವಿದ್ಯಾರ್ಥಿಗಳಿದ್ದಾರೆ. ಒಬ್ಬ ದಡ್ಡ, ಮಂದಮತಿ. ಇನ್ನೊಬ್ಬ ಜಾಣ, ಚತುರಮತಿ. ಇವರಿಬ್ಬರು ಯಾವ ರೀತಿ ಕೊಟ್ಟ ವಿಷಯವನ್ನು ಅಥವಾ ಒಡ್ಡಿದ ಸಮಸ್ಯೆಯನ್ನು ಬಿಡಿಸಿದ ರೀತಿಯನ್ನು ಇಲ್ಲಿ ಪರಿಶೀಲಿಸಬಹುದು.

ಪೌರನೀತಿ, ಚರಿತ್ರೆ, ಭೂಗೋಳ ಮತ್ತು ವಿಜ್ಞಾನಗಳಲ್ಲಿನ ಸಮಸ್ಯೆಗಳ ಅಧ್ಯಯನ

ದಡ್ಡ ವಿದ್ಯಾರ್ಥಿ	ಜಾ ವಿದ್ಯಾರ್ಥಿ
ಇವನು ಅಧ್ಯಯನದಲ್ಲಿ ಯಾವುದೇ ಪ್ರಶ್ನೆಗಳನ್ನು ಕಂಡಕೊಳ್ಳಲಾರದವನಾದ. ಇವನು ಹೇಳಿದ 'ಕೆಲವೊಂದು ಓದಿದೆ' ಎಂದು.	ಇವನು ಅಧ್ಯಯನದಲ್ಲಿ ಎರಡು ದೊಡ್ಡ ಸಮಸ್ಯೆಗಳನ್ನೊಡ್ಡಿದ ಮತ್ತು ಎರಡು ಪ್ರಶ್ನೆ ಗಳನ್ನು ತರಗತಿಯ ಮುಂದಿಟ್ಟ.

ಪುಸ್ತಕಗಳನ್ನು ಒಂದು ರೀತಿಯಲ್ಲಿ ವಿಂಗಡಿಸಿಕೊಂಡಿದ್ದ. ಅಲ್ಲೊಂದಿಷ್ಟು ಇಲ್ಲೊಂದಿಷ್ಟು ಓದಿದ್ದ. ಯಾವುದೇ ಆಧಾರ ವಿಷಯವನ್ನು ಮಂಡಿಸಲಿಲ್ಲ. ಯಾವುದೇ ಅಂಕಿಅಂಶಗಳ ವರದಿಯಿಲ್ಲ.

ಪ್ರಯೋಗಶಾಲೆಯಲ್ಲಿ ನೀರ ನಾಯಿಯ ಚರ್ಮದ ಬೋರ್ಡ್ ಒಂದನ್ನು ಹಾಳುಮಾಡಿದ. ಹಾಗೆ ಅವನು ಮಾಡಲು ಕಾರಣ ಅಳತೆಯೇ ಇಲ್ಲದೆ ಕತ್ತರಿಸಿದ್ದು. ಆದಕ್ಕಾಗಿ ಅವನು ಗಾಬರಿಗೊಂಡವನಂತಾಗಿ ದೂರಿತ್ತ.

ಮನೆಯಿಂದ ಪ್ರಬಂಧವೊಂದನ್ನು ತಂದಿದ್ದ. ಎನ್‌ಸೈಕ್ಲೋಪಿಡಿಯಾದಿಂದ ವರದಿಯೊಂದನ್ನು ತಂದು ತರಗತಿಯಲ್ಲಿ ಮಂಡಿಸಿದ್ದ. ಇನ್ನೂ ಎರಡು ಉಲ್ಲೇಖನೀಯ ದಾಖಲೆಗಳನ್ನು ತರಗತಿಯ ಮುಂದಿಟ್ಟ.

ತರಗತಿಯಲ್ಲಿನ ಪ್ರಯೋಗಶಾಲೆಯಲ್ಲಿ ಯಾವ ಪ್ರಶ್ನೆಯನ್ನು ಮುಂದಿಡಲಾಗಿತ್ತೋ ಆ ಪ್ರಶ್ನೆಯನ್ನು ಯಶಸ್ವಿಯಾಗಿ ಬಿಡಿಸಿ ಪ್ರಯೋಗ ನಡೆಸಿದ. ಅಪೇಕ್ಷಿಸಿದ ವಸ್ತುವನ್ನು ತಯಾರಿಸಿದ. ಅವನು ಮಾಡಿದ ರೀತಿಯಲ್ಲೇ ಇತರ ವಿದ್ಯಾರ್ಥಿಗಳೂ ಪ್ರಯೋಗ ಮಾಡುವುದರಲ್ಲಿ ಯಶಸ್ವಿಯಾಗುವಂತೆ ಮಾಡಿದ.

ತರಗತಿಯಿಂದ ಏರ್ಪಟ್ಟ ಪ್ರವಾಸದ ಲೆಕ್ಕ ಬರೆಯುವಿಕೆ

ಪ್ರವಾಸ ಹೊರಡುವ ಮುಂಚೆ ಕೊಟ್ಟ ಪ್ರಶ್ನೆಗಳನ್ನು ಕಳಕೊಂಡ. ಪ್ರವಾಸ ಕಾಲದಲ್ಲಿ ಯಾವುದೇ ಟಿಪ್ಪಣಿ ಮಾಡಿಕೊಳ್ಳಲಿಲ್ಲ. ಮುಂದಿನ ಕೆಲವು ಅಂಶಗಳ ಬಗ್ಗೆ ಉಪಾಧ್ಯಾಯರು ಒತ್ತಾಯಿಸಿದ ಭಾಗಗಳನ್ನು ಓದಿದ. ಒಂದು ಪ್ಯಾರಾಗ್ರಾಫ್‌ನಷ್ಟು ಬರೆದ.

ಕೆಲವು ಕಥೆಗಳನ್ನು ಮತ್ತು ಕೆಲವು ಮ್ಯಾಪುಗಳನ್ನು ತರಗತಿಯ ಪುಸ್ತಕಕ್ಕೆ ಪ್ರತಿ ಮಾಡಿಕೊಂಡಿರುವುದಾಗಿ ತಿಳಿಸಿದ.

ಪ್ರವಾಸಕ್ಕೆ ಹೊರಡುವ ಮುಂಚೆ ಕೊಟ್ಟ ಪ್ರಶ್ನೆಗಳನ್ನು ಜೋಪಾನವಾಗಿ ಇಟ್ಟುಕೊಂಡ. ಪ್ರವಾಸ ಕಾಲದಲ್ಲಿ ಅಗತ್ಯವಾದ ಟಿಪ್ಪಣಿ ಮಾಡಿಕೊಂಡ. ಕೆಲವು ಪ್ರಶ್ನೆಗಳಿಗೆ ಅಂಕಿ ಅಂಶಗಳ ಅಗತ್ಯ ಕಂಡು ಬಂದಲ್ಲಿ ಇತರರಿಂದ ಸಂಗ್ರಹಿಸಿದ.

ಕುತೂಹಲಕಾರಿಯಾದ ಸ್ವಾರಸ್ಯ ಪೂರ್ಣವಾದ ವಿಷಯವನ್ನು ಕಥಾವಸ್ತುವಾಗುಳ್ಳ ಕಥೆ ಬರೆಯುವ ಯೋಜನೆಯೊಂದನ್ನು ಮುಂದಿಟ್ಟ. ತಾನು ಬರೆದ ಕಥೆಯನ್ನು ಪರಿಷ್ಕರಿಸುವುದಾಗಿ ತಿಳಿಸಿದ.

ಒಂದು ಒಳ್ಳೆಯ ಸಲಹೆಯನ್ನು ಮುಂದಿಟ್ಟ ; ಕಥೆ ಉತ್ತಮ ಕಥೆಗಳನ್ನಾಯ್ದು ಒಳ್ಳೆಯ ಪುಸ್ತಕವೊಂದನ್ನು ಸಿದ್ಧಪಡಿಸಿಬಹುದೆಂದು ತಿಳಿಸಿದ.

ಗಣಿತದಲ್ಲಿ ಸಮಸ್ಯೆಗಳನ್ನು ಬಿಡಿಸುವುದು

ಉಪಾಧ್ಯಾಯರು ಅಗತ್ಯವಾದ ನೆರವು ನೀಡುವವರೆಗೆ ಪೇಪರ್ ಪೆನ್ಸಿಲ್‌ನೊಂದಿಗೆ ಆಟ ಆಡುತ್ತ ಕುಳಿತ.	ಕೊಟ್ಟ ಸಮಸ್ಯೆಯೊಂದರ ಭಾಗಗಳನ್ನು ಮತ್ತು ಸಮಸ್ಯೆಗೆ ಅಪೇಕ್ಷಿತವಾದ ಭಾಗಗಳನ್ನು ಬರೆಯಲು ಪ್ರಯತ್ನಿಸಿದ. ಪ್ರಯತ್ನದ ವಿಧಾನಗಳನ್ನು ಕಂಡುಕೊಂಡ.
ಬೀಜಗಣಿತದ ಸಮಸ್ಯೆಗಳನ್ನು ಮನೆಯ ಸನ್ನಿವೇಶದೊಂದಿಗೆ ಯೋಚಿಸಲಾರದವನಾದ - ಉಪಾಧ್ಯಾಯರೇ ಆ ಬಗ್ಗೆ ಅನೇಕ ಪ್ರಶ್ನೆಗಳು ಕೇಳುವ ತನಕ.	ಮನೆಯ ಸನ್ನಿವೇಶದಲ್ಲಿ ಉದ್ಭವಿಸುವ ಬೀಜಗಣಿತದ ಐದು ಸಮಸ್ಯೆಗಳನ್ನು ಬರೆದಿಟ್ಟ ಮತ್ತು ಬಿಡಿಸಿದ. ಡಯಾಗ್ರಾಂಗಳನ್ನು ಬಿಡಿಸಿ ನಿದರ್ಶನ ಕೊಟ್ಟ.
ತರಗತಿಯ ಚರ್ಚೆಗಳಲ್ಲಿ ಅನಾಸಕ್ತಿ ತೋರಿದ. ಬಿಡುವೆನಿಸಿದಾಗ ಕಂಠಪಾಠ ಮಾಡಿದುದರಲ್ಲಿನ ಉದಾಹರಣೆಗಳಿಂದ ಕಾರ್ಯವೆಸಗಿದ.	ವಿದ್ಯಾರ್ಥಿಗಳಿಗೆ ಗಣಿತದ ಅವಶ್ಯಕತೆ ಇದೆಯೆ ಎಂಬ ವಿಷಯದ ಮೇಲೆ ಚರ್ಚೆಯನ್ನಾರಂಭಿಸಿದ. ಇತ್ತೀಚಿನ ಪ್ರವಾಸದ ಖರ್ಚುವೆಚ್ಚಗಳನ್ನು ಚರ್ಚೆಗೆ ಎತ್ತಿಕೊಂಡ.
ತರಗತಿ, ಕಥಾ ಸಮಸ್ಯೆಯೊಂದನ್ನೆತ್ತಿಕೊಂಡು ಚರ್ಚಿಸುವಾಗ ಈತನಿಗೆ 'ಬೋರ್' ಎನಿಸತೊಡಗಿತು. ಕೊನೆಗೆ ಉಪಾಧ್ಯಾಯರೇ ಅವನಿಗೆ ಅವನ ಅಭಿಪ್ರಾಯ ಹೇಳಲು ಸಹಾಯ ಮಾಡಿದರು.	ಸಮಸ್ಯೆಯೊಂದನ್ನು ಹೇಗೆ ಅಧ್ಯಯನ ಮಾಡಬೇಕು ಎಂದು ಉಪಾಧ್ಯಾಯರು ಎತ್ತಿಕೊಂಡ ಚರ್ಚೆಯಲ್ಲಿ ಪಾಲ್ಗೊಂಡು ತನ್ನ ಸಲಹೆಯನ್ನು ಸೂಚಿಸಿದ. ನಂತರ ಪಠ್ಯದಲ್ಲಿನ ಕೆಲವು ಸಮಸ್ಯೆಗಳೊಂದಿಗೆ ಪ್ರಯತ್ನಿಸುವುದಾಗಿಯೂ ತಿಳಿಸಿದ.

ಮೇಲ್ಕಂಡ ದೃಷ್ಟಾಂತಗಳಿಂದ ಕಲಿವಿನ ವಿಧಾನದ ಬಗ್ಗೆ ನೇರವಾದ ಪರಿಶೀಲನೆ ಅಥವಾ ವಿಮರ್ಶೆ ಅನೇಕ ವಿಚಾರಗಳಲ್ಲಿ ಹೆಚ್ಚುಮೌಲ್ಯ ಉಳ್ಳದ್ದಾಗಿದೆ. ಅದೂ ಉಪಾಧ್ಯಾಯನಿಗೆ ಅನೇಕ ಸಂಶೋಧನಾತ್ಮಕ ಪ್ರಶ್ನೆಗಳನ್ನೊಡ್ಡುತ್ತದೆ. ಈ ವಿದ್ಯಾರ್ಥಿಗಳಲ್ಲಿ ಒಬ್ಬನಿಗೆ ಕಲಿವಿನ ವ್ಯವಸ್ಥೆ ಜಯಪ್ರದವಾಗುತ್ತದೆ. ಇನ್ನೊಬ್ಬನಿಗೆ ಜಯಪ್ರದವಾಗಿಲ್ಲ. ಅಷ್ಟಕೊಂದಕ್ಕೆ ಇದೊಂದು ನ್ಯೂನತೆಯಿಂದ ಕೂಡಿದ ಕಲಿವಿನ ವ್ಯವಸ್ಥೆ ಎನಿಸುತ್ತದೆ. ಉಪಾಧ್ಯಾಯ ತನ್ನ ಬೋಧನೆ ಒಬ್ಬನಿಗೆ ಹಿಡಿಸಿತು, ಇನ್ನೊಬ್ಬನಿಗೆ

ಹಿಡಿಸಲಿಲ್ಲ ಏಕೆ ಎಂದು ಚಿಂತಿಸಬೇಕು. ಏಕೆಂದರೆ ದಡ್ಡನನ್ನು ಕಲಿವಿನ ಹಾದಿಯಲ್ಲಿ ಕೊಂಡೊಯ್ಯಲೇಬೇಕು. ಆ ರೀತಿಯಲ್ಲಿ ಬೋಧನೆ ವ್ಯವಸ್ಥೆಗೊಳ್ಳಬೇಕು. ದಡ್ಡನನ್ನು ಬುದ್ಧಿವಂತನನ್ನಾಗಿ ಮಾಡಲು ಅಗತ್ಯವಾದ ಮಾರ್ಗೋಪಾಯಗಳನ್ನು ಕಂಡುಕೊಳ್ಳ ಬೇಕು. ಇದಕ್ಕೆ ನಮ್ಮ ಭಾರತೀಯ ಪುರಾಣದ ಒಂದು ಉದಾಹರಣೆ ಕೊಡುವುದಾ ದರೆ ಒಬ್ಬ ರಾಜನಿಗೆ ಮೂರು ಜನ ಗಂಡು ಮಕ್ಕಳು, ಮೂವರು ಶತ ದಡ್ಡರು, ಆಲಸಿಗರು, ಮಂದಮತಿಗಳು. ರಾಜ ತನ್ನ ಆಸ್ಥಾನದ ವಿದ್ವನ್ಮಣಿಗಳನ್ನೆಲ್ಲ ಆ ದಡ್ಡರನ್ನು ಹೇಗಾದರೂ ಮಾಡಿ ಬುದ್ಧಿವಂತರನ್ನಾಗಿ ಮಾಡುವಂತೆ ನಾನಾ ಪರಿಯಲ್ಲಿ ಬೇಡಿಕೊಂಡ. ಅನೇಕ ಜನ ವಿದ್ವಾಂಸರು ಪ್ರಯತ್ನಿಸಿ ಸೋತರು. ಕೊನೆಗೆ ರಾಜ ಡಂಗೂರ ಹಾಕಿಸಿ ತನ್ನ ಮೂವರು ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿದವರಿಗೆ ಅರ್ಧರಾಜ್ಯಕೊಡುವುದಾಗಿ ಸಾರಿಸಿದ. ಆಗ ಅದೇ ರಾಜ್ಯದಲ್ಲಿನ ವಿಷ್ಣುಶರ್ಮನೆಂಬ ಬ್ರಾಹ್ಮಣ ಆ ರಾಜನ ಬಳಿ ಬಂದು ತಾನು ಆ ಮೂವರು ದಡ್ಡ ಶಿಖಾಮಣಿಗಳನ್ನು ಬುದ್ಧಿವಂತರನ್ನಾಗಿ ಮಾಡುವುದಾಗಿ ಆಶ್ವಾಸನೆ ಕೊಟ್ಟ. ರಾಜ ಆ ಮೂವರನ್ನೂ ವಿಷ್ಣುಶರ್ಮನ ವಶಕ್ಕೊಪ್ಪಿಸಿದ. ವಿಷ್ಣುಶರ್ಮ ಆ ಮೂವರಿಗೂ ನಿತ್ಯ ಕಥೆಗಳನ್ನು ಹೇಳಲು ಪ್ರಾರಂಭಿಸಿದ. ಈ ರಾಜಕುಮಾರರಿಗೆ ವಿದ್ಯಾಭ್ಯಾಸದಲ್ಲಿ ಅಭಿರುಚಿ, ಆಸಕ್ತಿ, ಕುತೂಹಲಗಳು ಮೈದೋರಿ ಕಲಿಯಲು ಪ್ರಾರಂಭಿಸಿದರು. ವಿಷ್ಣುಶರ್ಮ ಬೆಳಗ್ಗೆ, ಮಧ್ಯಾಹ್ನ ಮತ್ತು ಸಾಯಂಕಾಲ ಮೂರು ಹೊತ್ತು ಪಾಠ ಹೇಳುತ್ತಾ ಬಂದ. ಅವನು ತನ್ನ ಪಠ್ಯಕ್ರಮದಲ್ಲಿ ಹಲವು ಪ್ರಾಣಿಗಳ ಕಥೆಯನ್ನು ಹೇಳತೊಡಗಿದ. ಪ್ರಾಣಿಗಳ ಕಥೆಗಳನ್ನು ಹೇಳುತ್ತಾ ಹೇಳುತ್ತಾ ರಾಜನೀತಿಯನ್ನು ಬೋಧಿಸುತ್ತಾ ಬಂದ. ಹೀಗೆ ಆ ಮೂವರು ದಡ್ಡರೆಂದು ತೀರ್ಮಾನಿಸಿದ್ದ ಹುಡುಗರನ್ನು ಸಕಲವಿದ್ಯಾಪಾರಂಗತರನ್ನಾಗಿ ಮಾಡಿಸಿದ ಕೀರ್ತಿ ವಿಷ್ಣುಶರ್ಮನದು. ಪಂಚತಂತ್ರದ ಕಥೆಗಳೆಂದು ಅವು ಪ್ರಸಿದ್ಧಿ ಪಡೆದು ಇಂದಿಗೂ ಅವು ಓದಲಿಕ್ಕೆ, ಕೇಳಲಿಕ್ಕೆ ಹೆಚ್ಚು ಉಪಯುಕ್ತವಾದವುಗಳಾಗಿವೆ.

ಆದ್ದರಿಂದ ಉಪಾಧ್ಯಾಯರುಗಳು ತರಗತಿಯ ಯಾವ ವಿದ್ಯಾರ್ಥಿಗೂ ದಡ್ಡ ಶಿಖಾಮಣಿ ಎಂಬ ಹಣೆಪಟ್ಟಿ ಕಟ್ಟದೆ ಕಥೆ ಹೇಳುತ್ತಾ ಹೇಳುತ್ತಾ ಬೋಧಿಸುವುದು, ಆಟ ಆಡುತ್ತಾ ಆಡುತ್ತಾ ಬೋಧಿಸುವುದು, ಪ್ರಯೋಗ ಮಾಡುತ್ತಾ ಮಾಡುತ್ತಾ ಬೋಧಿಸುವುದು, ಹೀಗೆ ನಾನಾ ವಿಧ ತಂತ್ರಗಳನ್ನು ಮಾರ್ಗೋಪಾಯಗಳನ್ನು ಕಂಡುಕೊಂಡು ಬೋಧನೆ ಸಾಗುತ್ತಾ ಹೋಗಿ ತರಗತಿಯ ಎಲ್ಲ ಮಕ್ಕಳೂ ಕಲಿವನ್ನು ಸಾಧಿಸುವಂತೆ ಮಾಡುವುದರಿಂದ ಯಶಸ್ವೀ ಶಿಕ್ಷಕನೆನಿಸಿಕೊಳ್ಳಲು ಸಾಧ್ಯ. ಈ ರೀತಿಯ ವಾಸ್ತವಿಕ ವಿಶ್ಲೇಷಣೆಯ ಸಾಮರ್ಥ್ಯದಿಂದ ಉಪಾಧ್ಯಾಯ ತನ್ನೆಲ್ಲ ಅನುಭವಗಳು, ಕಲಿವುಗಳು, ಚಾತುರ್ಯಗಳು, ತಂತ್ರಗಳನ್ನು ಆಯಾ ಸಂದರ್ಭ ಸನ್ನಿವೇಶ ಗಳಿಗನುಗುಣವಾಗಿ ಬಳಸಿ ನಿಧಾನವಾಗಿ ಕಲಿವವರನ್ನು ದಡ್ಡರೆನ್ನದೆ ಮಾಂಟೆಸೋರಿ

ಪದ್ಧತಿ ಆಗಬಹುದು, ಡಾಲ್ಟನ್‌ಪ್ಲಾನ್ ಆಗಬಹುದು, ವಿಷ್ಣುಶರ್ಮನ ಪದ್ಧತಿ ಇರಬಹುದು, ತಂಡ ಬೋಧನೆ ಇರಬಹುದು, ಮರ್ರೆಲನ ಜಯಪ್ರದ ಬೋಧನೆಯ ಆರು ಸೂತ್ರಗಳಿರಬಹುದು - ಹೀಗೆ ಇರುವ ಹಲವು ಹನ್ನೊಂದು ಮಾರ್ಗಗಳಲ್ಲಿ ಯಾವ ಯಾವ ವಿದ್ಯಾರ್ಥಿಯನ್ನು ಯಾವ ಯಾವ ಮಾರ್ಗದಲ್ಲಿ ಕೊಂಡೊಯ್ಯಬೇಕು ಎಂಬುದನ್ನರಿತು ಆ ಮಾರ್ಗದಲ್ಲಿ ಕೊಂಡೊಯ್ದರೆ ಆಯಾ ವಿದ್ಯಾರ್ಥಿಗಳಿಗೆ ದತ್ತವಾಗ ಬೇಕಾದ ಜ್ಞಾನ, ತಲುಪಬೇಕಾದ ಗುರಿ [illegible]ಕ್ಕೆ ತಕ್ಕಂತೆ ಲಭ್ಯವಾಗ ಬಲ್ಲದೆಂಬುದನ್ನು ಉಪಾಧ್ಯಾಯ ಕಂಡುಕೊಂಡು ಅದರಂತೆ ತನ್ನ ಬೋಧನಾಕಾರ್ಯ ಕೈಗೊಂಡು ಯಶಸ್ವಿ ಶಿಕ್ಷಕನೆನಿಸಿಕೊಳ್ಳಬೇಕು.

ಯಾವುದೇ ಯೋಜನೆಯನ್ನು ಕೈಗೊಳ್ಳಲಿ, ಯಾವುದೇ ನಿಯಂತ್ರಣ, ತಂತ್ರಜ್ಞತೆ ಯನ್ನಳವಡಿಸಿಕೊಳ್ಳಲಿ ಕಲಿವು ಪ್ರಮುಖವಾಗಿ ಉದ್ದೇಶವನ್ನೊಳಗೊಂಡುದು. ಅದು ಜಾಗೃತ ಪ್ರಜ್ಞೆಯ ಅವಶ್ಯಕತೆ ಅಥವಾ ಅಪೇಕ್ಷೆಯ ಬುಡದಿಂದ ಹುಟ್ಟಿದ್ದು. ಅದು ಒಂದು ಸನ್ನಿವೇಶವನ್ನು ಒಳನೋಟ ಅಥವಾ ಚಾತುರ್ಯ ಅಥವಾ ಮೆಚ್ಚುಗೆಯಿಂದ ನಿಯಂತ್ರಣಕ್ಕೊಳಪಡಿಸುವಂತಹುದಾಗಿದೆ. ಅದು ಈ ಒಂದು ಉದ್ದೇಶವನ್ನು ಈಡೇರಿಸಿಕೊಳ್ಳುವಂತಹುದು. ಅದು ಬುದ್ಧಿವಂತಿಕೆಯನ್ನು ಕೇಂದ್ರೀಕರಿಸಿ ಸನ್ನಿವೇಶ ವನ್ನು ಸಮಗ್ರಗೊಳಿಸುವಂತಹುದು. ಈ ಉದ್ದೇಶ ಅಥವಾ ಆಕಾಂಕ್ಷೆಯನ್ನು ಸರಿಯಾದ ಸಮಾಜೀಕರಣ ಮತ್ತು ಸರಿಯಾದ ವೈಯಕ್ತೀಕರಣ ತತ್ವಗಳ ಸುರಕ್ಷಿತ ರೀತಿಯ ಪುನರಾವರ್ತನೆಯಿಂದ ಸಾಧಿಸಿಕೊಳ್ಳಬಹುದು ಮತ್ತು ಬೆಳವಣಿಗೆಯಿಂದ ನಿಯಂತ್ರಿತಗೊಂಡ ಕ್ರಮಾನುಗತ ರೀತಿಯಲ್ಲಿ ಮುಂದ[illegible]ಯಬಹುದು. ಹೀಗೆ ಯಾವುದೇ ಕಲಿವಿನ ಕೆಲಸವನ್ನು ಅರ್ಥೈಸಿಕೊಳ್ಳಬಹುದು. ಇದು ಸರಿಯಾದ ಮತ್ತು ಸಮಂಜಸವಾದ ರೀತಿಯಲ್ಲಿ ಮೌಲ್ಯಮಾಪನ ಕಾರ್ಯಕ್ಕೂ ಅನುಕೂಲಕರವಾದುದು ಮತ್ತು ಸಮಂಜಸವಾದ ಮೌಲ್ಯಮಾಪನ ಸಂಬಂಧದಿಂದ ಅದಕ್ಕೆ ಒಂದು ಬೆಂಬಲ, ಒಂದು ನಿರ್ದೇಶನ ಮತ್ತು ಉದ್ದೇಶವನ್ನು ತೀವ್ರಗೊಳಿಸುವಿಕೆ - ಇವೆ ಅವುಗಳಲ್ಲುಳಿ ಯುವ ಜೀವಸತ್ವ- ಅಥವಾ ಪ್ರಾಣಸತ್ವ.

ಸಾರಾಂಶ - (Summary)

ಮೌಲ್ಯಮಾಪನ ತತ್ವ :

ಪ್ರತಿಯೊಂದು ಕಲಿಯುವಿಕೆಯೂ ಸಹ ಪೂರ್ವಾನ[illegible] ತಳಪದಿಯ ಮೇಲೆ ಮುಂದುವರಿಯಬೇಕು. ಪೂರ್ವಾನುಭವಗಳು ಸಾಕಷ್ಟು ಇವೆಯೆ ಎಂಬುದನ್ನು ಮೌಲ್ಯಮಾಪನದ ಮೂಲಕ ತಿಳಿಯಬೇಕು. ಬೋಧನಾಕಾರ್ಯವು

ಯಶಸ್ವಿಯಾಗಿ ಮುಂದುವರಿಯಬೇಕಾದರೆ ಈಗಾಗಲೇ ಬೋಧಿಸಿದ ವಿಷಯವು ಸ್ಪಷ್ಟವಾಗಿ ತಿಳಿದಿದೆಯೆ ಎನ್ನುವುದನ್ನು ಮೌಲ್ಯಮಾಪನ ಮಾಡಬೇಕು. ಮೌಲ್ಯಮಾಪನವು ಕಲಿಕೆಯ ಮತ್ತು ಬೋಧನೆಯ ಒಂದು ಅವಿಭಾಜ್ಯ ಅಂಗ. ಕಲಿಕೆಯ ಅನುಭವಗಳ ಎಲ್ಲಾ ಕ್ಷೇತ್ರಗಳ ಗುಣಮಟ್ಟವನ್ನು ವಿವೇಚನಾಪೂರ್ವಕವಾಗಿ ಮೌಲ್ಯಮಾಪನ ಮಾಡುವದರ ಮೂಲಕ ಕಲಿಕೆಯು ಹೆಚ್ಚು ಪರಿಣಾಮಕಾರಿಯಾಗುವಂತೆ ಮಾಡಬಹುದು.

ಕಲಿಕೆಯ ಚಟುವಟಿಕೆಗಳನ್ನು ವ್ಯವಸ್ಥೆ ಮಾಡುವಾಗ ಅದು ಮೌಲ್ಯಮಾಪನದ ವಿವಿಧ ಸಾಧನಗಳನ್ನು ಒಳಗೊಂಡಿರುವಂತೆ ನೋಡಿಕೊಳ್ಳಬೇಕು.

ಕಲಿಕೆಯನ್ನು ಪರೀಕ್ಷೆ ಮಾಡುವುದು, ಸಾಧನೆಯನ್ನು ಅಳತೆಮಾಡುವುದು, ಅಂಕಗಳನ್ನು ನಿಗದಿ ಪಡಿಸುವುದು, ಪಡೆದ ಅಂಕಗಳನ್ನು ದಾಖಲಿಸುವುದು ಮತ್ತು ಅದನ್ನು ವರದಿ ಮಾಡುವುದು ಇವಿಷ್ಟು ಮೌಲ್ಯಮಾಪನ ಕಾರ್ಯದ ಪ್ರಮುಖ ಹಂತಗಳು ಅಥವಾ ಸಾಧನಗಳು. ಸಾಧನೆಯ ಗುಣಮಟ್ಟವನ್ನು ನಿಗದಿಪಡಿಸುವುದಕ್ಕೆ ಅವುಗಳನ್ನು ಮಕ್ಕಳ ಗಮನಕ್ಕೆ ತರುವುದು. ಮಗುವಿನ ಕಲಿಕೆಯ ಯಶಸ್ಸನ್ನು ಪೋಷಕರಿಗೆ ತಿಳಿಸುವುದು. ಉದ್ಯೋಗಕ್ಕೆ ನೇಮಕ ಮಾಡುವವರಿಗೆ ಮತ್ತು ಇತರರಿಗೆ ವ್ಯಕ್ತಿಯ ವ್ಯಕ್ತಿತ್ವದ ಬಗ್ಗೆ ಸೂಕ್ತ ಮಾಹಿತಿ ಒದಗಿಸಲು ಅನುವಾಗುವುದೇ ಮೌಲ್ಯಮಾಪನದ ಪ್ರಮುಖ ಉದ್ದೇಶವಾಗಿದೆ. ಪರೀಕ್ಷೆಯ ಫಲಿತಾಂಶದ ಆಧಾರದ ಮೇಲೆ ಮಗುವು ಕಲಿಕೆಯ ಉದ್ದೇಶಗಳಿಗೆ ಹೊಂದಿಕೊಳ್ಳುವಂತೆ ಮಾಡಬಹುದು ಮತ್ತು ವಿದ್ಯಾರ್ಥಿಯ ಶೈಕ್ಷಣಿಕ ಸಾಧನೆಯ ಸಂಪೂರ್ಣ ಇತಿಹಾಸವನ್ನು ನಾವು ತಿಳಿದುಕೊಳ್ಳಬಹುದು. ಮೌಲ್ಯಮಾಪನವು ಬೋಧನಾಉದ್ದೇಶ, ಕಲಿಕೆಯ ಅನುಭವಗಳು ಮತ್ತು ಬೋಧನಾವಿಧಾನ ತಂತ್ರಗಳೊಂದಿಗೆ ಪ್ರತಿಕ್ರಿಯಿಸುತ್ತದೆ. ಮೌಲ್ಯಮಾಪನಕಾರ್ಯದಲ್ಲಿ ವಿದ್ಯಾರ್ಥಿಯು ಹೆಚ್ಚಿನ ರೀತಿಯಲ್ಲಿ ಭಾಗವಹಿಸಬೇಕು. ತನ್ನ ಸಾಧನೆಯ ಗುಣಮಟ್ಟವನ್ನು ಇತರರು ಮೌಲ್ಯಮಾಪನ ಮಾಡುವುದಕ್ಕಿಂತ ತಾನೇ ಅಂದರೆ ವಿದ್ಯಾರ್ಥಿಯು ಸ್ವಯಂ ಮೌಲ್ಯಮಾಪನ ಮಾಡುವುದು ಹೆಚ್ಚು ಪ್ರಾಮುಖ್ಯವಾದುದು. ತನ್ನ ಸಾಧನೆಯ ಗುಣಮಟ್ಟವನ್ನು ತಾನೇ ಅರಿತು ಆ ಮೂಲಕ ಅಪೇಕ್ಷಿತ ಪ್ರಗತಿಪರ ಬದಲಾವಣೆಗಳಿಗೆ ಮುಂದಾಗುವುದು ಉತ್ತಮ.

ಮೌಲ್ಯಮಾಪನ ಮತ್ತು ನೇರ ಫಲಿತಾಂಶ :

ಪ್ರತಿಯೊಬ್ಬನೂ ಸಹ ನಿರೀಕ್ಷಿತ ಬೋಧನಾ ಉದ್ದೇಶಗಳನ್ನು ಪ್ರತಿಫಲವಾಗಿ ಪಡೆಯುವ ಅಪೇಕ್ಷೆಯಿಂದ ಕಲಿಕೆಯ ಕಾರ್ಯದಲ್ಲಿ ತೊಡಗುತ್ತಾನೆ. ಇದು ಕಲಿಕಾ

ಪ್ರಕ್ರಿಯೆಗೆ ಜೀವದಾನ ಮಾಡುತ್ತದೆ ಮತ್ತು ಚಾಲನೆ ಕೊಡುತ್ತದೆ. ತನ್ನ ಸಾಧನೆಯ ಬಗೆಗೆ ಮಗುವು ನಿರ್ದಿಷ್ಟ ತಿಳುವಳಿಕೆಯನ್ನು ಹೊಂದಿದ್ದರೆ ಅದು ಕಲಿಕಾಕಾರ್ಯದಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳಲು ಪ್ರೋತ್ಸಾಹ ಕೊಡುತ್ತದೆ ಮತ್ತು ಪರಿಣಾಮಕಾರಿ ಕಲಿಕೆಗೆ ಸಹಾಯ ಮಾಡುತ್ತದೆ. ಹೀಗಾಗಿ ತರಗತಿಯಲ್ಲಿ ಬೋಧನಾಸಂದರ್ಭದಲ್ಲಿ ಮಗುವು ಜೀವಂತವಾಗಿ ಲವಲವಿಕೆಯಿಂದ ಭಾಗವಹಿಸುವಂತೆ ಮಾಡಬೇಕಾದರೆ ಬೋಧನಾ ಕಾರ್ಯವು ಮೌಲ್ಯಮಾಪನ ಸಾಧನ ಮತ್ತು ಪ್ರಕ್ರಿಯೆಯನ್ನು ಒಳಗೊಂಡಿರಬೇಕು. ಅಂದರೆ ಬೋಧನಾ ಸಂದರ್ಭದಲ್ಲಿ ಪ್ರತಿಯೊಂದು ಕಲಿಕೆಯ ಸಂದರ್ಭದಲ್ಲಿಯೂ ಸಹ ಸೂಕ್ತ ಮೌಲ್ಯಮಾಪನ ತಂತ್ರಗಳನ್ನು ಅಳವಡಿಸಿಕೊಂಡು ಮಗುವು ತನ್ನ ಸಾಧನೆಯ ಬಗ್ಗೆ ತಿಳುವಳಿಕೆಯನ್ನು ಹೊಂದಿ ಕಲಿಕೆಯನ್ನು ಮುಂದುವರಿಸುವಂತೆ ಮಾಡಬೇಕು. ತರಗತಿಯಲ್ಲಿ ಬೋಧನಾಸಂದರ್ಭದಲ್ಲಿ ಶಿಕ್ಷಕನು ಬಹಳ ಎಚ್ಚರಿಕೆಯಿಂದಿರಬೇಕು. ಪ್ರತಿಯೊಬ್ಬ ವಿದ್ಯಾರ್ಥಿಯ ಭಾಗವಹಿಸುವಿಕೆಯ ಕಡೆಗೆ ಗಮನವೀಯಬೇಕು. ಪ್ರಶ್ನೆಗಳನ್ನು ವಿವಿಧ ರೀತಿಯಲ್ಲಿ ಕೇಳಬೇಕು. ಎಲ್ಲ ವಿದ್ಯಾರ್ಥಿಗಳೂ ಭಾಗವಹಿಸಲು ಸಮಾನಾವಕಾಶ ನೀಡಬೇಕು.

ಮೌಲ್ಯಮಾಪನ ಮತ್ತು ಕಲಿಕೆಯ ವರ್ಗಾವಣೆ :

ತರಗತಿಯ ವಾತಾವರಣದಲ್ಲಿ ಸಂಪಾದಿಸಿದ ಕಲಿಕೆಯ ಅನುಭವಗಳನ್ನು ಜೀವನದ ಇತರೆ ಸನ್ನಿವೇಶಗಳಲ್ಲಿ ನೈಜ ಸಮಸ್ಯೆಗಳನ್ನು ಬಗೆಹರಿಸಲು ಅಳವಡಿಸಿಕೊಳ್ಳಲು ಅವಕಾಶ ಮಾಡಿಕೊಡುವುದು. ಕಲಿಕೆಯು ನೈಜವಾಗಿದೆಯೆ ? ಪರಿಣಾಮಕಾರಿಯಾಗಿದೆಯೆ ? ನಿಜವಾದ ಶಾಶ್ವತವಾದ ಬದಲಾವಣೆಗೆ ಸಹಕರಿಸಿದೆಯೆ ? ಎಂಬುದನ್ನು ನಿರ್ಣಾಯಕವಾಗಿ ಪರೀಕ್ಷಿಸಬೇಕಾದರೆ ವಿದ್ಯಾರ್ಥಿಗೆ ತನ್ನ ಕಲಿಕೆಯ ಅನುಭವಗಳನ್ನು ಅನ್ವಯಿಸಿಕೊಳ್ಳಲು ಅವಕಾಶವನ್ನು ಕಲ್ಪಿಸಿಕೊಡಬೇಕು. ಇದಕ್ಕಾಗಿ ವಿದ್ಯಾರ್ಥಿಗಳನ್ನು ಹೊರ ಸಂಚಾರಕ್ಕೆ ಕೊಂಡೊಯ್ಯಬಹುದು. ಬೇರೆಬೇರೆ ಸಾಮಾಜಿಕ ಕಾರ್ಯ ಚಟುವಟಿಕೆಗಳಲ್ಲಿ ನೇರವಾಗಿ ಭಾಗವಹಿಸಲು ಅವಕಾಶ ಕಲ್ಪಿಸಬಹುದು. ಬೇರೆಬೇರೆ ಸಂಘಸಂಸ್ಥೆಗಳೊಂದಿಗೆ ಪತ್ರವ್ಯವಹಾರ ಸಂಪರ್ಕ ಬೆಳೆಸಲು ಅವಕಾಶ ಒದಗಿಸುವುದು. ಕೈತೋಟ ಮತ್ತು ಇತರ ಕೆಲಸಗಳಲ್ಲಿ ದೈಹಿಕವಾಗಿ ಭಾಗವಹಿಸಲು ಹೇಳುವುದು. ಸಾಮಾಜಿಕ, ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸುವುದು ಇತ್ಯಾದಿ.

ಬೇರೆಬೇರೆ ಪಠ್ಯವಿಷಯಗಳ ಕಲಿಕೆಗೆ ಸಂಬಂಧಿಸಿದಂತೆ ವಿವಿಧ ಕಲಿಕೆಯ ಚಟುವಟಿಕೆಗಳಲ್ಲಿ ಭಾಗವಹಿಸಲು ಪ್ರೇರೇಪಿಸುವುದು - ಕಲಿಕೆಯ ಅನುಭವಗಳು

ಕೇವಲ ಪುಸ್ತಕಕ್ಕೇ ಮತ್ತು ತರಗತಿಯ ಕೊಠಡಿಗೆ ಮಾತ್ರ ಸೀಮಿತವಾಗಿರದೆ ಜೀವನದ ಇತರ ಕ್ಷೇತ್ರಗಳಿಗೂ ಸಹ ವರ್ಗಾಯಿಸಿ ಹೊಂದಿಕೊಳ್ಳುವಂತಿರಬೇಕು.

ಕಲಿಕೆ ಪ್ರತಿಕ್ರಿಯೆಯ ನೇರ ಮೌಲ್ಯಮಾಪನ :

ಕಲಿಕಾ ಪ್ರಕ್ರಿಯೆಯು ಯಾವಾಗಲೂ ಶಿಕ್ಷಕನ ಹತೋಟಿಯಲ್ಲಿರಬೇಕು. ಉತ್ತಮ ಮೌಲ್ಯಮಾಪನವು ಯಾವಾಗಲೂ ಬೋಧನಾಕಾರ್ಯವು ಏರ್ಪಡುವಾಗ ನೇರವಾಗಿ ಕಲಿಕಾ ಪ್ರಕ್ರಿಯೆಯೊಂದಿಗೆ ಸೇರಿಕೊಂಡು ಮುಂದುವರಿಯುತ್ತದೆ. ಇದು ಬಹು ಪ್ರಮುಖವಾದುದು. ಇದು ಶಿಕ್ಷಕನಿಗೆ ಅಮೂಲ್ಯವಾದ ಸಂಶೋಧನಾತ್ಮಕವಾದ ಬೋಧನಾನುಭವಗಳನ್ನು ಒದಗಿಸುತ್ತದೆ.

ಬೋಧನಾಕಾರ್ಯವು ಮುಂದುವರಿಯುವ ಕಾಲದಲ್ಲಿ ಅ ಡಿಸಿಕೊಳ್ಳುವ ಮೌಲ್ಯಮಾಪನ ಸಾಧನಗಳ ಸಹಾಯದಿಂದ ಶಿಕ್ಷಕನು ಹೆಚ್ಚೆಚ್ಚು ತಿಳುವಳಿಕೆಯನ್ನು ಪಡೆದು ನಿಷ್ಣಾತನಾಗುವನು ಮತ್ತು ಅನುಭವಶಾಲಿ ಶಿಕ್ಷಕನಾಗುವನು.

ಹೀಗಾಗಿ ನಾವು ಯಾವುದೇ ಒಂದು ಕಾರ್ಯದಲ್ಲಿ ಭಾಗವಹಿಸಿದರೆ ಆ ಕಾರ್ಯದಲ್ಲಿ ಎಷ್ಟರಮಟ್ಟಿಗೆ ನಮ್ಮನ್ನು ನಾವು ತೊಡಗಿಸಿಕೊಂಡಿದ್ದೇವೆ, ನಮ್ಮ ಸಾಧನೆಯು ಎಷ್ಟರಮಟ್ಟಿಗೆ ಯಶಸ್ವಿಯಾಗಿದೆ, ಪ್ರಯೋಜನಕಾರಿಯಾಗಿದೆ ಎಂಬುದರ ಮೌಲ್ಯ ಅಥವಾ ಬೆಲೆಯನ್ನು ಅಳತೆ ಮಾಡಬೇಕು. ತನ್ನ ಸಾಧನೆಯ ಯಶಸ್ಸಿನ ಮೌಲ್ಯವನ್ನು ತಾನೇ ಅಳತೆ ಮಾಡುವ Self Evaluation ಕಾರ್ಯಕ್ಕೆ 'ಸ್ವಯಂ ಮೌಲ್ಯಮಾಪನ' ಎನ್ನುತ್ತೇವೆ. ಅದೇ ರೀತಿ ತರಗತಿಯಲ್ಲಿ ವಿದ್ಯಾರ್ಥಿಗಳು ವಿವಿಧ ವಿಷಯಗಳ ಕಲಿಕೆಗೆ ಸಂಬಂಧಿಸಿದ ಸಾಧನೆಯನ್ನು ಒಂದಿಲ್ಲೊಂದು ರೀತಿಯಲ್ಲಿ ಶಿಕ್ಷಕನು ಮೌಲ್ಯಮಾಪನ ಮಾಡಬೇಕು. ಮೌಲ್ಯಮಾಪನ ಫಲಿತಾಂಶದ ಆಧಾರದ ಮೇಲೆ ಹೆಚ್ಚಿನ ಸಾಧನೆಗೆ ಪ್ರೋತ್ಸಾಹಿಸಲು ಸಾಧ್ಯವಾಗುತ್ತದೆ. ಮೌಲ್ಯಮಾಪನವು ಪ್ರಗತಿಯ ಮೂಲ. ಪ್ರತಿಯೊಂದು ಕಾರ್ಯದ ಯಶಸ್ಸನ್ನೂ ಮಾಪನ ಮಾಡುವುದು ಪ್ರತಿಯೊಬ್ಬ ಪ್ರಗತಿಪರ ವ್ಯಕ್ತಿಯ ಕರ್ತವ್ಯವಾಗಿದೆ.

ಮೌಲ್ಯಮಾಪನವು ಎರಡು ವಿಶಿಷ್ಟ ಕಾರ್ಯಗಳನ್ನು ನಿರ್ವಹಿಸುತ್ತದೆ.

೧. ವಿದ್ಯಾರ್ಥಿಗಳು ಬೋಧನಾಕೊಠಡಿಗಳಲ್ಲಿ ಬೋಧನಾಸಂದರ್ಭದಲ್ಲಿ ವಿಷಯದ ಪರಿಣಾಮಕಾರಿ ಕಲಿಕೆಗೆ ಸಂಬಂಧಿಸಿದ ಅನುಭವಗಳನ್ನು ಒದಗಿಸಿ ಕೊಡಲು ಆಯಾ ಸನ್ನಿವೇಶದಲ್ಲಿ ಸಿಗುವ ಸಲಕರಣೆಗಳನ್ನು ಬಳಸಿಕೊಂಡು ಅನೇಕ ಬೋಧನಾಚಟುವಟಿಕೆಗಳನ್ನು ಏರ್ಪಡಿಸುತ್ತಾರೆ. ಆ ಚಟುವಟಿಕೆಗಳಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯು ತನ್ನನ್ನು ತಾನೇ ತೊಡಗಿಸಿಕೊಳ್ಳಲು ಅನೇಕ ವಿಧವಾಗಿ ಪ್ರೋತ್ಸಾಹಿಸು

ತ್ತಾನೆ. ಕೊನೆಗೆ ವಿದ್ಯಾರ್ಥಿಯ ಸಾಧನೆಯನ್ನು ಅಳತೆ ಮಾಡುವ ಉದ್ದೇಶದಿಂದ ವಿವಿಧ ಪರೀಕ್ಷಣ ಕಾರ್ಯಗಳನ್ನು ಕೈಗೊಳ್ಳುತ್ತಾನೆ. ಆಮೇಲೆ ಮಕ್ಕಳ ಸಾಧನೆಯ ಪರಿಣಾಮ ಅಥವಾ ಫಲವನ್ನು ಅಳತೆ ಮಾಡುತ್ತಾನೆ. ಈ ಫಲಿತಾಂಶದ ಅಂಕಗಳ ಆಧಾರದ ಮೇಲೆ ಇಡೀ ತರಗತಿಯ ವಿದ್ಯಾರ್ಥಿಗಳ ಒಟ್ಟು ಕಲಿಕೆಯಲ್ಲಿ ಪ್ರತಿಯೊಂದು ಮಗುವಿನ ಸ್ಥಾನ ಯಾವುದು ಎಂಬುದನ್ನು ಮಕ್ಕಳಿಗೆ ತಿಳಿಯಪಡಿಸುತ್ತಾನೆ. ವಿದ್ಯಾರ್ಥಿಯು ತನ್ನ ಸಾಧನೆಯ ಫಲವನ್ನು ಅರಿತುಕೊಂಡು ಇತರರ ಸಾಧನೆಯೊಂದಿಗೆ ಹೋಲಿಸಿಕೊಂಡು ತನ್ನ ಕಲಿಕೆಯ ಗುಣಮಟ್ಟವನ್ನು ತಾನೇ ಅರಿತುಕೊಳ್ಳಲು ಪ್ರಯತ್ನಿಸುವನು. ಇದರ ಆಧಾರದ ಮೇಲೆ ತನ್ನ ಕಲಿಕೆಯ ಗುಣಮಟ್ಟವನ್ನು ಇನ್ನೂ ಉತ್ತಮ ಪಡಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ತನ್ನನ್ನು ತಾನೇ ತಿಳಿದುಕೊಳ್ಳುವುದರೊಂದಿಗೆ ಇತರರಿಗೂ ತನ್ನ ಪ್ರತಿಭೆಯ ಗುಣಮಟ್ಟವನ್ನು ತಿಳಿಯಪಡಿಸುತ್ತಾನೆ. ವಿದ್ಯಾರ್ಥಿಯ ಜೀವನದ ವಿವಿಧ ಸಂದರ್ಭಗಳಲ್ಲಿ ಕಲಿಕೆಯ ಮೌಲ್ಯಮಾಪನ ಫಲಿತಾಂಶವು ಅವನಿಗೆ ನೆರವಾಗುತ್ತದೆ.

೨. ಮೌಲ್ಯಮಾಪನವು ಶಿಕ್ಷಕನಿಗೂ ಬೋಧನಾಕಾರ್ಯದಲ್ಲಿ ಪೂರಕ ಬದಲಾವಣೆ ಮಾಡಿಕೊಳ್ಳಲು ಸಹಕರಿಸುತ್ತದೆ. ಶಿಕ್ಷಕನ ಬೋಧನಾಕಾರ್ಯದ ಯಶಸ್ಸನ್ನು ವಿದ್ಯಾರ್ಥಿಗಳ ಕಲಿಕೆಯ ಗುಣಮಟ್ಟವು ಸೂಚಿಸುತ್ತದೆ. ಪರೀಕ್ಷೆಯ ಫಲಿತಾಂಶವು ಶಿಕ್ಷಕರ ನಿರೀಕ್ಷೆಗೆ ಅನುಗುಣವಾಗಿರದಿದ್ದರೆ ತಾನು ತನ್ನ ಬೋಧನಾ ತಂತ್ರದಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳಲವಕಾಶವಾಗುತ್ತದೆ. ಪ್ರತಿಯೊಬ್ಬ ವಿದ್ಯಾರ್ಥಿಯ ಕಲಿಕೆಯ ಪ್ರಗತಿಯನ್ನು ತಿಳಿಯಬಹುದು. ಕಲಿಕೆಯಲ್ಲಿ ಹಿಂದುಳಿದ ವರಿಗೆ ಸೂಕ್ತ ಹಾಗೂ ಅಗತ್ಯ ಪ್ರೋತ್ಸಾಹಗಳನ್ನು ಕೊಡಬಹುದು.

ಕಲಿಕೆಯು ಒಂದು ನಿರ್ದಿಷ್ಟ ಉದ್ದೇಶಿತ ಪ್ರತಿಕ್ರಿಯೆಯಾಗಿದೆ. ಬೋಧನಾ ಸನ್ನಿವೇಶ, ವಿಷಯ ಕೇಂದ್ರೀಕರಣ, ಬೋಧನೆಯ ವೈಯಕ್ತೀಕರಣ, ಸಮಾಜೀಕರಣ, ವಿಷಯದ ಅನುಕ್ರಮ ಏರ್ಪಾಡು ಮತ್ತು ಸಾಧನೆಯ ಮೌಲ್ಯಮಾಪನಗಳು - ಇವೆಲ್ಲ ಯಶಸ್ವೀ ಬೋಧನೆ ಮತ್ತು ನೈಜಕಲಿಕೆಯ ಪ್ರಕ್ರಿಯೆಯ ಪ್ರಮುಖ ಅಂಗಗಳಾಗಿವೆ.

★★★★

ಭಾಗ ೭

ಶಿಕ್ಷಣಕ್ಕೆ ಜೈವಿಕ ಬುನಾದಿ

ಜೀವಶಾಸ್ತ್ರಕ್ಕೂ ಮನಶ್ಶಾಸ್ತ್ರಕ್ಕೂ ನಿಕಟಸಂಬಂಧವಿದೆ. ಭ್ರೂಣದ ಬೆಳವಣಿಗೆಯಲ್ಲೂ ಉಳಿದ ಪ್ರಾಣಿಜೀವಿಗಳಿಗೂ ಮಾನವ ಜೀವಿಗಳಿಗೂ ನಿಕಟ ಸಾಮ್ಯವಿದೆ. ಭ್ರೂಣದ ರಚನೆ ಮತ್ತು ಬೆಳವಣಿಗೆಯ ಹಂತಗಳು ಮಾನವನನ್ನು ಒಳಗೊಂಡು ಎಲ್ಲ ಪ್ರಾಣಿಗಳಲ್ಲೂ ಒಂದೇ ಆಗಿರುವಂತಹುದಾಗಿದೆ. ಉಳಿದ ಪ್ರಾಣಿಗಳಂತೆಯೇ ಮಾನವ ಜೀವಿಯೂ ಸಹ ಅತ್ಯಂತ ಸೂಕ್ಷ್ಮಾಣುವಿನಿಂದ ಪ್ರಾರಂಭವಾಗುತ್ತದೆ. ಅನುವಂಶೀಯ ವಾಹಕವು ಹೆಣ್ಣು ಗಂಡುಗಳ ಶರೀರ, ಬುದ್ಧಿ ಮತ್ತು ಭಾವಗಳ ವಿದ್ಯುದಾಲಿಂಗನ ಕ್ರಿಯೆಯಲ್ಲಿ ಆಗುವ ಒಂದು ವಿದ್ಯುನ್ಮಯ ಕಾರ್ಯ. ದಂಪತಿಗಳ ರತಿಕ್ರಿಯೆಯಲ್ಲಿ ಜೀವದ್ರವ್ಯ protoplasm ಉತ್ಪತ್ತಿಯಾಗುತ್ತದೆ. ಈ ಜೀವದ್ರವ್ಯದಲ್ಲಿ ಗಂಡಸಿನ ಜೀವಾಣು ಹೆಂಗಸಿನ ಅಂಡಾಣುವಿನೊಂದಿಗೆ ಸೇರಿ ಪಿಂಡೋತ್ಪತ್ತಿಯಾಗುತ್ತದೆ. ಈ ಪಿಂಡ ಸ್ತ್ರೀ ಪುರುಷರಲ್ಲಿರುವ ಪುನರುತ್ಪತ್ತಿಶಕ್ತಿಯುಳ್ಳ ಜೀವಾಣುಗಳ ಐಕ್ಯತೆಯಿಂದಾಗಿ ಆಗುತ್ತದೆ. ಇದಕ್ಕೆ ಯುಗ್ಮಜೀವಕಣ ಎಂದು ಹೆಸರು. ಈ ಯುಗ್ಮಜೀವಕಣವೇ ಅನುವಂಶೀಯತೆಯನ್ನು ನಿರ್ಧರಿಸುವಂತಹುದಾಗಿದೆ. ಭ್ರೂಣಾವಸ್ಥೆಯ ಬೆಳವಣಿಗೆಯಲ್ಲಿ ಮಾನವ ಜೀವಿಯೂ ಪ್ರಾಣಿಜೀವಿಯೊಂದಿಗೆ ಸಮಹಾದಿಯಲ್ಲಿ ನಡೆದು ನಂತರದಲ್ಲಿ ಅದರಿಂದ ಬೇರ್ಪಡೆಯನ್ನು ಹೊಂದುವಂತಹುದಾಗಿದೆ.

ಮಾನವ ಜೀವಿ ಅತ್ಯುನ್ನತ ಹೊಂದಾಣಿಕೆ ಉಳ್ಳದ್ದು :

ಶಾರೀರಿಕವಾಗಿ ಮಾನವ ಜೀವಿಗೂ ಉಳಿದ ಪ್ರಾಣಿಗಳ ಜೀವನಕ್ಕೂ ಅಷ್ಟೇನೂ ಅತ್ಯಂತ ಹೆಚ್ಚಿನದಾದ ವ್ಯತ್ಯಾಸವಿಲ್ಲ, ಕೆಲವು ವಿಶಿಷ್ಟವಾದ ಭೌತಿಕ ಲಕ್ಷಣಗಳು ಪ್ರತಿಯೊಂದು ಜೀವಿಗೂ ಇರುವ ವೈಚಿತ್ರ್ಯವನ್ನು ನಾವು ನೋಡಬಹುದು. ಇವುಗಳಲ್ಲಿ ಅತ್ಯಂತ ಗಣನೀಯವಾದವುಗಳೆಂದರೆ ಮನುಷ್ಯನ ಅತ್ಯುನ್ನತ ಸ್ಥಾನ, ಅವನ ವಿಶಿಷ್ಟ ರೀತಿಯ ಕೈಗಳು ಮತ್ತು ಮಾತನಾಡುವ ಸಾಧನ ಸಾಮಗ್ರಿಗಳು ಮತ್ತು ಅತ್ಯುನ್ನತ

ರೀತಿಯಲ್ಲಿ ಬೆಳವಣಿಗೆ ಹೊಂದಿರುವ ನರಮಂಡಲ ವ್ಯವಸ್ಥೆ - ಈ ರೀತಿಯ ವ್ಯವಸ್ಥೆಯಲ್ಲಿ ಕೈನ ಚಟುವಟಿಕೆಗಳು, ಧ್ವನಿಮುದ್ರಿಕೆಗಳು, ಜ್ಞಾನೇಂದ್ರಿಯಗಳು ಮತ್ತು ಶರೀರದ ಕೆಲವು ಇನ್ನಿತರ ಭಾಗಗಳು ವಿಶಿಷ್ಟವಾಗಿದ್ದು ಅವು ಸ್ವಯಂ ನಿರ್ದೇಶನ ಮತ್ತು ಹತೋಟಿಗೊಳಪಟ್ಟವುಗಳಾಗಿವೆ. ಮಾನವ ಜೀವಿ ತನ್ನದೇ ಆದ ಅತ್ಯುನ್ನತ ಸ್ಥಾನಗಳನ್ನು ಸಾಮರ್ಥ್ಯಗಳನ್ನು ಹೊಂದಿದ್ದು ಅದು ಅತ್ಯಂತ ಉಚ್ಚಮಟ್ಟದ ಹೊಂದಾಣಿಕೆಯನ್ನು ಉಳ್ಳದಾಗಿದೆ. ಪ್ರಜ್ಞಾಪೂರ್ವಕವಾಗಿ ತನ್ನ ಜ್ಞಾನೇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಳ್ಳಬಹುದಾದ ಅತ್ಯುನ್ನತವಾದ ನರಮಂಡಲ ವ್ಯವಸ್ಥೆಯಿಂದ ಕೂಡಿರುವ ಮಾನವ ಶರೀರಿಯು ಉಳಿದ ಪ್ರಾಣಿಗಳಿಗಿಂತ ಭಿನ್ನವಾಗಿರುವುದು ಆಶ್ಚರ್ಯವೇನಲ್ಲ. ಆದಕಾರಣವೇ ಮಾನವ ಪ್ರಾಣಿ ಉಳಿದೆಲ್ಲ ಪ್ರಾಣಿಗಳಿಗಿಂತ ಅತ್ಯುನ್ನತವಾದದ್ದು ಎನಿಸಿಕೊಂಡಿರುವುದು. ಈ ರೀತಿ ಶಾರೀರಿಕವಾಗಿ ಉನ್ನತಗುಣಗಳನ್ನು ಉಳ್ಳ ಮಾನವ ಶರೀರಿಯು ಶಿಕ್ಷಣದಲ್ಲಿ ಅತ್ಯುನ್ನತ ಹೊಂದಾಣಿಕೆ ಪಡೆಯಲು ವಿಶಿಷ್ಟವಾದ ಗುಣಲಕ್ಷಣಗಳನ್ನುಳ್ಳದ್ದಾಗಿದೆ. ಈ ರೀತಿಯ ವಿಶೇಷ ಗುಣಲಕ್ಷಣ ಈ ಕೆಳಕಂಡಂತೆ ಪಟ್ಟಿ ಮಾಡಬಹುದಾಗಿದೆ :

೧. ಕೈಯಿನ ಸ್ವಾತಂತ್ರ್ಯ

೨. ಸ್ಫುಟೋಚ್ಚರಿತ ಸಾಧನವಾಗಿರುವ ಧ್ವನ್ಯೋಪಕರಣಗಳು

೩. ಅತ್ಯುನ್ನತ ಬೆಳವಣಿಗೆ ಪಡೆದಿರುವ ಮಾನವನ ಮೆದುಳು

೪. ದೀರ್ಘಾವಧಿಯ ಶೈಶವಾವಸ್ಥೆ

ಈಗ ಇವುಗಳನ್ನು ಒಂದೊಂದನ್ನಾಗಿ ಪರಿಶೀಲಿಸುವ.

೧. ಕೈಯಿನ ಸ್ವಾತಂತ್ರ್ಯ

ಮನುಷ್ಯ ಪ್ರಾಣಿಗಿರುವ ಕೈನ ಸ್ವಾತಂತ್ರ್ಯ ಉಳಿದ ಪ್ರಾಣಿಗಳಿಗಿಲ್ಲ. ಮಾನವನಿಗಿರುವ ಕೈಯಿನ ಸ್ವಾತಂತ್ರ್ಯ ಅದ್ವಿತೀಯವಾದದ್ದು. ಈ ಕೈಗಳು ಕಣ್ಣಿನ ಮೇಲ್ವಿಚಾರಣೆ ಮತ್ತು ಬುದ್ಧಿಯ ನಿರ್ದೇಶನಕ್ಕೊಳಪಟ್ಟು ತನ್ನೊಂದು ವಾತಾವರಣವನ್ನು ತನಗನುಕೂಲವಾಗಿರುವಂತಹ ಸ್ಥಿತಿಯಲ್ಲಿ ಬಳಸಿಕೊಂಡು ಅತ್ಯುನ್ನತ ರೀತಿಯ ಹೊಂದಾಣಿಕೆಯನ್ನು ಪಡೆಯುವುದಾಗಿದೆ. ಕೈಯಿನ ಮಾಟ ಅತ್ಯಂತ ಉಪಯುಕ್ತವಾದ ರೀತಿಯಲ್ಲಿ ರೂಪುಗೊಂಡಿದ್ದು ಅದರ ಬೆರಳುಗಳು ಯಾವ ರೀತಿ ಬೇಕಾದರೂ ಬಾಗಬಲ್ಲವು. ಅದರ ಹೆಬ್ಬೆರಳು ಒಂದು ವಿಧವಾದ ಧ್ಯೇಯ ಸೂಚಕ ; ಶಕ್ತಿ ಸೂಚಕ ; ಮತ್ತು ಎದುರಾಳಿಗೆ ಮುಷ್ಟಿ ಸೂಚಕ. ಈ ರೀತಿ ಕೈನಲ್ಲಿರುವ ಐದೂ ಬೆರಳುಗಳೂ ವ್ಯಷ್ಟಿಯಾಗಿಯೂ ಸಮಷ್ಟಿಯಾಗಿಯೂ ಕೆಲಸ ಮಾಡಬಲ್ಲವುಗಳಾಗಿವೆ. ಕೈಯಿಂದ

ಸ್ಪರ್ಶಿಸಬಹುದು, ಭಾವಿಸಬಹುದು, ವಸ್ತುಗಳನ್ನು ಎತ್ತಿ ಹಿಡಿದುಕೊಳ್ಳಬಹುದು, ವಸ್ತುಗಳನ್ನು ಕರಾರುವಕ್ಕಾಗಿ ಚಲಿಸುವಂತೆ ಮಾಡಬಹುದು ಮತ್ತು ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳಬಹುದು. ಉದ್ಭವಿಸುವ ಯಾವುದೇ ಅವಶ್ಯಕತೆಯನ್ನು ಅಥವಾ ಆಯಾಸ್ಥಿತಿಗೆ ತಕ್ಕಂತೆ ತನ್ನ ಪ್ರತಿಕ್ರಿಯೆಯನ್ನು ವ್ಯಕ್ತ ಪಡಿಸಲು ಕೈ ಸಿದ್ಧವಾಗಿರುತ್ತದೆ. ಕಣ್ಣಿಲ್ಲದವರಿಗೆ ಕೈ ಕಣ್ಣಾಗಿ ಸಹಾಯ ಮಾಡುತ್ತದೆ. ಕಿವುಡರಿಗೆ ಧ್ವನ್ಯೋಪಕರಣದಂತೆ ಕಾರ್ಯವೆಸಗುತ್ತದೆ. ಸಂದರ್ಭೋಚಿತವಾಗಿ ವಸ್ತುಗಳನ್ನು ಅದಲು ಬದಲು ಮಾಡುವ ಮತ್ತು ರೂಪಾಂತರಗೊಳಿಸುವ ಶಕ್ತಿಯೂ ಅದಕ್ಕಿದೆ. ಅತ್ಯಂತ ಸೂಕ್ಷ್ಮಾತಿಸೂಕ್ಷ್ಮ ವಸ್ತುಗಳನ್ನು ಅತ್ಯಂತ ನವುರಾಗಿ ಬಳಸುವ ಶಕ್ತಿ ಅದಕ್ಕಿದೆ. ಉದಾ : ಪಿಯಾನೋ ವಾದ್ಯದ ಉಪಕರಣದ ಜೋಡಣೆ ಮತ್ತು ವೈದ್ಯ ಶಸ್ತ್ರಕ್ರಿಯೆಯಲ್ಲಿ ಬಳಸುವ ಅತ್ಯಂತ ಸೂಕ್ಷ್ಮ ಉಪಕರಣಗಳನ್ನು ಬಳಸುವಲ್ಲಿ ಕೈನ ನೈಪುಣ್ಯತೆ ಅತ್ಯಮೋಘವಾದದ್ದು. ಇಂದಿನ ಮಾನವ ಏನೆಲ್ಲ ಸಾಧನೆಯ ಸಿದ್ಧಿಯ ಸುಖವನ್ನನು ಭವಿಸುತ್ತಿದ್ದಾನೆ ಅಂದರೆ ಅವನ ಸಂಸ್ಕೃತಿ ಮತ್ತು ನಾಗರಿಕತೆಗಳ ಪ್ರತೀಕವಾಗಿರುವ ಕಲೆ, ಸಂಗೀತ, ಸಾಹಿತ್ಯ, ಕೃಷಿ, ವಾಣಿಜ್ಯಸಾಧನ ಸಲಕರಣೆಗಳು, ಯಂತ್ರೋಪಕರಣಗಳು, ಲಿಪಿ ಇತ್ಯಾದಿ ಗಣನೆಗೆಟುಕದ ಕೋಟ್ಯಾನುಕೋಟಿ ವಸ್ತುಗಳ ಸೃಷ್ಟಿ ಮತ್ತು ಬಳಕೆ ಅತ್ಯಂತ ಉಪಯುಕ್ತವಾದ ಅಂಗವೇ ಕೈ ! ಈ ಮೇಲಿನ ಎಲ್ಲ ವಸ್ತುಗಳನ್ನು ಸೃಷ್ಟಿ ಮಾಡಿದವನೆಂದರೆ ಬುದ್ಧಿ ಬ್ರಹ್ಮ ! ಬುದ್ಧಿ ಬ್ರಹ್ಮ ಸೃಷ್ಟಿಸುವ ಮತ್ತು ಬಳಸುವ ಎಲ್ಲ ಸಾಧನೋಪಕರಣಗಳ ಬೃಹತ್ ಯೋಜನೆಯನ್ನು ಕಾರ್ಯರೂಪಕ್ಕಿಳಿಸಿ ಅವುಗಳಿಗೊಂದು ಕೃತಾರ್ಥ ಸ್ವರೂಪವನ್ನು ಮತ್ತು ಒಂದು ವಿಧವಾದ ಸ್ಥಿತಿ ಸ್ವರೂಪವನ್ನು ಒದಗಿಸಿಕೊಡಬಲ್ಲ ಏಕೈಕ ಸಾಧನವೇ ಕೈ ! ಮಾನವನ ಬುದ್ಧಿಯ ಬೆಳವಣಿಗೆಗೂ ಈ ಕೈ ತನ್ನ ಸಹಾಯ ಸಹಕಾರಗಳ ಶ್ರೀಹಸ್ತವನ್ನು ನೀಡಿರುವಂತಹುದಾಗಿದೆ. ಮಾನವನ ಪ್ರಗತಿಯಲ್ಲಿ ಕೈಗಳಿಗಿರುವ ಸ್ವಾತಂತ್ರ್ಯ ಒಂದು ಅಪೂರ್ವಸಿದ್ಧಿ; ಅದು ಭಗವಂತನ ವಿಶಿಷ್ಟ ಕೊಡುಗೆ !!

೨. ಸ್ಫುಟೋಚ್ಚರಿತ ಸಾಧನವಾಗಿರುವ ಧ್ವನ್ಯೋಪಕರಣಗಳು :

ಸ್ಫುಟೋಚ್ಚರಿತ ಸಾಧನವಾಗಿರುವ ಧ್ವನ್ಯೋಪಕರಣಗಳಲ್ಲಿ ಶ್ವಾಸಕೋಶಗಳು ಧ್ವನಿತಂತುಗಳಲ್ಲಿರುವ ಗಂಟಲ ಕುಹರ ಅಥವಾ ಧ್ವನಿಪೆಟ್ಟಿಗೆ, ಮೃದುವಾದ ಅಂಗಳ ಅಥವಾ ತಾಲು, ನಾಲಿಗೆ, ಹಲ್ಲು ಮತ್ತು ತುಟಿಗಳೂ ಸೇರಿದವುಗಳಾಗಿವೆ. ಈ ಧ್ವನ್ಯಂಗಗಳು ರಚನೆಗೊಂಡು ಒಂದರೊಡನೊಂದು ಸುಸಂಬದ್ಧವಾಗಿ ಒಂದು ರೀತಿಯಲ್ಲಿ ಮಹತ್ತರವಾದ ಅಪರಿಮಿತ ರೀತಿಯಲ್ಲಿ ಆದಾಗ್ಯೂ ಪ್ರತ್ಯೇಕಿಸಬಲ್ಲಂತಹ ಶಬ್ದಗಳನ್ನು ಉತ್ಪತ್ತಿ ಮಾಡಬಲ್ಲವುಗಳಾಗಿವೆ. ಸಸ್ತನಿ ಪ್ರಾಣಿಗಳಲ್ಲಿ ಧ್ವನಿಪೆಟ್ಟಿಗೆಯು ಧ್ವನಿ

ಕಾರ್ಯಗಳನ್ನು ಹೊಂದಿರುವಂತಹುದಾಗಿದೆ. ಪಕ್ಷಿಗಳಲ್ಲಿ ಉಂಟಾಗುವ ಧ್ವನಿಗೆ ಧ್ವನಿಪೆಟ್ಟಿಗೆಯೇ ಕಾರಣವಾದುದಾಗಿದೆ. ಶಬ್ದದ ಅಲೆಗಳು ಗಾಳಿಯಲ್ಲಿನ ಒತ್ತುಸಿರಿನಿಂದ ಉತ್ಪತ್ತಿಯಾಗಿ ಶ್ವಾಸಕೋಶಗಳಿಂದ ಹೊರಬೀಳುತ್ತದೆ. ಹಾಗೆ ಹೊರ ಬೀಳುವ ಈ ಶಬ್ದ ತರಂಗಗಳು ಬಾಯಿ ಮತ್ತು ಮೂಗಿನ ಮೂಲಕ ಹೊರಬೀಳುತ್ತವೆ. ಮನುಷ್ಯನನ್ನುಳಿದು ಉಳಿದ ಬೆನ್ನುಮೂಳೆ ಇರುವೆಲ್ಲ ಪ್ರಾಣಿಗಳು ಆಹಾರ ತಿನ್ನಲು ತಮ್ಮ ಬಾಯಿಯನ್ನು ಮತ್ತು ಸದ್ದು ಮಾಡಲು ಹಾಗೂ ಯುದ್ಧ ಮಾಡಲು ಬಳಸುವಂತಾಗಿದೆ. ಹಲ್ಲುಗಳನ್ನು ಆಯುಧಗಳನ್ನಾಗಿ ಬಳಸುತ್ತವೆ.

ಈ ರೀತಿಯಲ್ಲಿ ಪ್ರಾಣಿಗಳಲ್ಲಿನ ವಿಶೇಷತೆಯು ಪ್ರಾಣಿಗಳು ಉಚ್ಚರಿಸಬಹುದಾದ ಶಬ್ದದ ವ್ಯಾಪ್ತಿಯನ್ನು ಸೀಮಿತಗೊಳಿಸುತ್ತದೆ. ಕೆಲವು ಪ್ರಾಣಿಗಳ ಕೂಗನ್ನು ಗುರುತಿಸಿ ವಿವರಿಸಬಹುದು. ಉದಾ : ನಾಯಿ ಬೊಗಳುವಿಕೆ, ಕುದುರೆ ಕೆನೆಯುವಿಕೆ ಇತ್ಯಾದಿ ಇತ್ಯಾದಿ. ಈ ಎಲ್ಲ ಪ್ರಾಣಿಗಳ ಶಬ್ದ ಕೇಳಲು ಕರ್ಕಶ. ಮನುಷ್ಯನನ್ನುಳಿದು ಇತರ ಸುಧಾರಿಸಿದ ಪ್ರಾಣಿಗಳ ಶಬ್ದವೆಂದರೆ ಪಕ್ಷಿಗಳ ಇಂಚರ. ಕೋಗಿಲೆಯ ಇಂಚರ ಅಭಿವೃದ್ಧಿಗೊಂಡು ಸುಧಾರಿಸಿದ್ದು, ಸುಸ್ವರವಾಗಿ ಕೇಳಲು ಮಧುರವಾದುದಾಗಿದೆ. ಇದೆಲ್ಲಕ್ಕಿಂತಲೂ ಸುಧಾರಿಸಿದ ಧ್ವನಿ ಎಂದರೆ ಮನುಷ್ಯನ ಧ್ವನಿ. ಮನುಷ್ಯನ ಮೆದುಳಿನ ಹತೋಟಿ ಮತ್ತು ಮಾರ್ಗದರ್ಶನ, ಕೈಗಳ ಸಹಾಯ ಮತ್ತು ಸಹಜಶಕ್ತಿಯಿಂದ ಅಭಿವೃದ್ಧಿ ಹೊಂದಿರುವ ಸ್ಫುಟೋಚ್ಚರಿತ ಅಂಗಗಳಿಂದ ಮಾನವನ ಈ ಸುಸ್ವರ ಸಾಧ್ಯವಾದುದಾಗಿದೆ. ಮಾನವನ ಬಾಯಿ ಉಳಿದ ಪ್ರಾಣಿಗಳಂತೆ ಆಹಾರ ಗಳಿಸುವಿಕೆ ಮತ್ತು ತನ್ನನ್ನು ತಾನು ರಕ್ಷಿಸಿಕೊಳ್ಳುವ ತಂತ್ರಕ್ಕಾಗಿ ಬಳಸುವಂತಹುದಾಗಿಲ್ಲ. ತನ್ನನ್ನು ತಾನು ರಕ್ಷಿಸಿಕೊಳ್ಳುವ ಮತ್ತು ಆಹಾರವನ್ನು ಪಡೆದುಕೊಳ್ಳುವ ಕಾರ್ಯಕ್ಕೆ ಕೈಗಳಿವೆ. ಆದ್ದರಿಂದ ಬಾಯಿ ಸ್ಫುಟೋಚ್ಚರಿತ ಕಾರ್ಯನಿರ್ವಹಣೆಯಲ್ಲಿ ಸ್ವತಂತ್ರವನ್ನು ವಹಿಸಿರುವಂತಹುದಾಗಿದೆ. ಮಾನವನ ಹಲ್ಲು, ನಾಲಿಗೆ, ತುಟಿ ಮತ್ತು ಇಡೀ ಬಾಯಿಯ ರಚನೆಯೇ ಪರಿಣಾಮಕಾರಿಯಾದ ಧ್ವನ್ಯೋಪಕರಣಗಳಾಗಿ ರೂಪುಗೊಂಡಿವೆ. ಧ್ವನ್ಯಂಗಗಳ ಸುಸಂಘಟನೆಯಿಂದ ಮನುಷ್ಯನು ವಿಶಿಷ್ಟ ರೀತಿಯಲ್ಲಿ ಶಬ್ದಗಳನ್ನು ಮಾಡಬಲ್ಲವನಾಗಿದ್ದಾನೆ. ಮತ್ತು ಈ ರೀತಿ ಉತ್ಪತ್ತಿ ಮಾಡಿದ ಶಬ್ದಗಳನ್ನು ಸಂಕೀರ್ಣ ರೀತಿಯಲ್ಲಿ ಸಂಮಿಶ್ರಗೊಳಿಸಲು ಕಲಿತು ವಿಶಿಷ್ಟ ಮಾತುಗಾರಿಕೆ, ಹಾಡುಗಾರಿಕೆ ಮತ್ತು ಸಿಳ್ಳೆ ಹಾಕುವಿಕೆ ಇತ್ಯಾದಿಗಳನ್ನು ರೂಢಿಸಿಕೊಂಡಿದ್ದಾನೆ.

ಕೈಗಳ ಸಹಾಯದಿಂದ ಮಾನವನು ಆದಿಮಾನವನ ಹಾಗೆ ಸಂಜ್ಞೆಗಳನ್ನು ಪ್ರದರ್ಶನಗಳನ್ನು ಮಾಡಬಲ್ಲ ಮತ್ತು ತನ್ಮೂಲಕ ನಿರ್ದಿಷ್ಟ ಗುರಿಗಳನ್ನು, ಭಾವನೆಗಳನ್ನು ಅಭಿವ್ಯಕ್ತ ಪಡಿಸಬಲ್ಲ. ಬಾಹ್ಯಸನ್ನಿವೇಶದಲ್ಲಿ ಈ ರೀತಿಯ ಸಂಜ್ಞೆಗಳು, ಭಾವನೆಗಳು ಪರಿಣಾಮಕಾರಿಯಾದ ಬದಲೀ ವ್ಯವಸ್ಥೆಗಳೆನಿಸುತ್ತಿದ್ದವು. ನಂತರದಲ್ಲಿ ಮನುಷ್ಯನು

ತನ್ನ ಭಾವನೆಗಳನ್ನು ಮತ್ತು ಅನುಭವಗಳನ್ನು ಅಭಿವ್ಯಕ್ತಗೊಳಿಸಲು ಧ್ವನ್ಯಂಗಗಳು ಸಹಾಯಕವಾಗಿವೆ. ಭಾಷೆಯು ಭಾವನೆಗಳನ್ನು ಹೊರುವ ವಾಹನ. ಈ ವಾಹನದ ಯಾಂತ್ರಿಕ ರಚನೆಗೆ ಅನುಗುಣವಾಗಿ ಧ್ವನಿಪೆಟ್ಟಿಗೆಯ ರಚನೆಯಾಗಿದೆ. ಈ ರೀತಿಯ ಧ್ವನಿಪೆಟ್ಟಿಗೆಯು ತನ್ನ ಆಲೋಚನೆಗಳನ್ನು, ಭಾವನೆಗಳನ್ನು ಸರಿಯಾದ ರೀತಿಯಲ್ಲಿ ಮಾತಿನ ಮೂಲಕ ಮತ್ತು ಬರವಣಿಗೆಯ ಮೂಲಕ ಅಭಿವ್ಯಕ್ತಗೊಳಿಸುವಂತಹುದು. ಇಲ್ಲಿ ಪುನಃ ಕೈ ಮಾನವನ ಆಲೋಚನೆಗಳನ್ನು ಅವನ ಭಾವನೆಗಳನ್ನು ಅಭಿವ್ಯಕ್ತ ಗೊಳಿಸಬಲ್ಲ ಲಿಖಿತ ಸಾಧನವಾಗಿ ಕಾರ್ಯವೆಸಗುತ್ತದೆ. ಅಭಿವ್ಯಕ್ತಿ ಶಕ್ತಿ ಮಿತಿ ಇಲ್ಲದಿರು ವಂಥದ್ದು. ಒಬ್ಬ ವ್ಯಕ್ತಿ ಒಂದು ದಿನಕ್ಕೆ ಎಷ್ಟು ಮಾತನಾಡುತ್ತಾನೋ ಅಳತೆ ಮಾಡಬಲ್ಲವರಾರು ! ಅಂತಹ ಮಾತಿನ ಶಕ್ತಿಗೆ ಇತಿಮಿತಿ ಇಲ್ಲ. ಒಂದೊಂದು ಭಾಷೆಯಲ್ಲಿ ಎಣಿಸಲಾರದಷ್ಟು ಶಬ್ದ ಸಂಪತ್ತಿದೆ. ಆಯಾ ಭಾಷೆಗಳನ್ನಾಡುವವನು ದಿನವೊಂದರಲ್ಲಿ ತನ್ನ ದೈನಂದಿನ ವ್ಯವಹಾರಗಳಲ್ಲಿ ಬದುಕಿನಲ್ಲಿ ಲೆಕ್ಕವಿಲ್ಲದಷ್ಟು ಶಬ್ದೋಚ್ಚಾರ ಮಾಡುತ್ತಾನೆ. ಈ ಎಲ್ಲಕ್ಕೂ ಮಾನವನ ಧ್ವನ್ಯೋಪಕರಣಗಳೇ ಅವನೆಲ್ಲ ಸಾಧನೆಯ ಏಣಿ ಎನಿಸಿರುವಂತಹುದಾಗಿದೆ. ಮನುಷ್ಯನು ತನ್ನೊಂದು ವಾತಾವರಣಕ್ಕೆ ಹೊಂದಿಕೊಂಡು ಸನ್ನಿವೇಶಕ್ಕೆ ತಕ್ಕಂತೆ ಜೈವಿಕವಾಗಿ ಉಚ್ಛ್ರಾಯ ಸ್ಥಿತಿಯನ್ನು ಪಡೆದು ಮಾತನಾಡುವ ಮತ್ತು ಆಲೋಚಿಸುವ ಶಕ್ತಿಯನ್ನು ಹೊಂದಿದವನಾಗಿದ್ದಾನೆ.

೩. ಅತ್ಯುನ್ನತ ಬೆಳವಣಿಗೆಯನ್ನು ಪಡೆದಿರುವ ಮಾನವನ ಮೆದುಳು :

ಮಾನವನ ಮೆದುಳು ಅತ್ಯಂತ ಉಚ್ಚತಮವಾದುದಕ್ಕೆ ಕಾರಣವೆಂದರೆ ಅಂತರ್ ಸಂಬಂಧದ ನರತಂತುಗಳಿಂದ ಪರಿಪೂರ್ಣವಾಗಿ ರೂಪುಗೊಂಡಿರುವ ಪ್ರಧಾನ ಮಸ್ತಿಷ್ಕ. ಪ್ರಧಾನ ಮಸ್ತಿಷ್ಕದ ಹೊರಭಾಗವು ಬೂದುದ್ರವ್ಯದ ಒಂದೇ ತೆರನಾದ ಪದರದಿಂದ ಕೂಡಿದ್ದು ಅದನ್ನು ಮೆದುಳಿನ ಬೂದುವರ್ಣ ಪದಾರ್ಥದ ಹೊರ ಆವರಣವೆಂದು ಕರೆಯಲಾಗಿದೆ. ಈ ಬೂದುದ್ರವ್ಯ ವಸ್ತುವು ನರಕಣಗಳ ಬೂದುಬಣ್ಣದಿಂದ ಕೂಡಿದ ಕೋಶಶರೀರಿಗಳಾಗಿವೆ. ಮನುಷ್ಯನಲ್ಲಿನ ಬೂದುವರ್ಣ ಪದಾರ್ಥದ ಹೊರ ಆವರಣವು ಒಂದಂಗುಲದ ೧/೮ ಭಾಗದಷ್ಟು ದಪ್ಪವಿರುತ್ತದೆ. ಪ್ರಧಾನ ಮಸ್ತಿಷ್ಕದ ಒಳಭಾಗವು ಬಿಳಿಯ ದ್ರವ್ಯದಿಂದ ಕೂಡಿದ್ದು ಬಿಳಿನರತಂತು ಸಹಾಯದಿಂದ ನಾನಾ ವಿಧವಾದ ಹೊರ ಆವರಣದ ಜೀವಕೋಶಗಳೊಂದಿಗೆ ಅಂತರ್ ಸಂಬಂಧವನ್ನು ಉಂಟುಮಾಡುತ್ತದೆ ಮತ್ತು ಅವುಗಳೇ ಶರೀರದ ವಿವಿಧ ಭಾಗಗಳೊಂದಿಗಿನ ನರತಂತುಗಳೊಂದಿಗೆ ಸಂಬಂಧವನ್ನುಂಟು ಮಾಡುತ್ತವೆ. ಅತಿ ದೊಡ್ಡದಾದ ಮನುಷ್ಯನ ಪ್ರಧಾನ ಮಸ್ತಿಷ್ಕವು ಅದರ ಉಬ್ಬುತಗ್ಗುಗಳಲ್ಲಿರುವ ಆಳ ಮತ್ತು ಸಂಖ್ಯೆಗೆ ಹೆಸರುವಾಸಿ ಆಗಿದ್ದು ಅದರ ಪದರ ಅಥವಾ ಸುರಳಿಗಳನ್ನು

ಬೇರ್ಪಡಿಸಿ ಮತ್ತು ಅದರ ಮುಂಭಾಗದ ಬೆಳವಣಿಗೆಗೆ ಸಹಕಾರಿಯಾಗಿದೆ. ಚಿಂಪಾಂಜಿಯ ಮೆದುಳು, ಮನುಷ್ಯನ ಮೆದುಳಿನೊಂದಿಗೆ ತನ್ನ ಪದರ ಅಥವಾ ಸುರುಳಿ ಆಕಾರದ ಸ್ವರೂಪದ ಅತ್ಯಂತ ನಿಕಟವಾದ ಹೋಲಿಕೆ ಉಳ್ಳುದಾಗಿದೆ; ಆದರೆ ಈ ಹೋಲಿಕೆಯಲ್ಲಿನ ಸಂಬಂಧದಲ್ಲಿ ಇಳಿಕೆಯು ಅತ್ಯಂತ ಮಾಂದ್ಯ ಉಳ್ಳದ್ದು. ಅಂದರೆ ಹೆಚ್ಚಿನ ವ್ಯತ್ಯಾಸವಿಲ್ಲದೆ ಇರುವಂತಹುದು. ಪ್ರಧಾನ ಮಸ್ತಿಷ್ಕದ ಉಬ್ಬು ತಗ್ಗುಗಳಲ್ಲಿನ ಆಳ ಮತ್ತು ಸಂಖ್ಯೆಗಳಲ್ಲಿ ಹೆಚ್ಚಿನವು ಮೆದುಳಿನ ಆವರಣ cerebral Cartexದ ವ್ಯಾಪ್ತಿಯನ್ನು ಉನ್ನತವಾಗಿ ವೃದ್ಧಿಗೊಳಿಸುತ್ತದೆ ಮತ್ತು ನರತಂತುಗಳ (neuron) ಶಕ್ತಿಯನ್ನು ವಿಕಾಸಗೊಳಿಸುತ್ತದೆ. ಲೆಕ್ಕಾಚಾರದ ಅಂದಾಜಿನ ಪ್ರಕಾರ ಮಾನವನ ಮಿದುಳಿನ ಆವರಣವು ಅಥವಾ ತೊಗಟೆಯು ೯,೨೮,೦೦,೦೦,೦೦೦ (ಒಂಬೈನೂರ ಇಪ್ಪತ್ತೆಂಟು ಕೋಟಿ) ನರತಂತುಗಳನ್ನು ಹೊಂದಿರುವುದಾಗಿ ತಿಳಿದು ಬಂದಿದೆ. ಮೆದುಳಿನಲ್ಲಿನ ಅಸಂಖ್ಯಾತ ಮಾರ್ಗಗಳಲ್ಲಿ ಸೀಮಾತೀತವಾದ ರೀತಿಯಲ್ಲಿ ನರಗಳ ತುಡಿತ ಉಂಟಾಗಬಹುದು. ಸಾಧ್ಯವಾಗಬಹುದಾದ ಅಂತರ್ ಸಂಬಂಧವನ್ನುಂಟು ಮಾಡಬಲ್ಲಂಥ ಒಂಭತ್ತು ಶತಕೋಟಿ ನರತಂತುಗಳು ಸಂಗ್ರಹ ಪರಿಮಿತಿಯ ವ್ಯಾಪ್ತಿಯನ್ನು ಮೀರಿದವುಗಳಾಗಿವೆ. ಇದೀಗ ಇಲ್ಲಿಯೆ ಅಂದರೆ ಪ್ರಧಾನ ಮಸ್ತಿಷ್ಕದಲ್ಲಿಯೇ ಅತ್ಯಂತ ಸಂಕೀರ್ಣವಾದ ಮತ್ತು ವಿವೇಚನಾಯುಕ್ತವಾದ ಹೊಂದಾಣಿಕೆಗಳು ನಡೆದು ಪ್ರಜ್ಞೆ ಅಥವಾ ಎಚ್ಚರಿಕೆಯ ಸ್ಥಾನ ನಿಗದಿಗೊಳಿಸಲ್ಪಡುವುದು. ಪ್ರಧಾನ ಮಸ್ತಿಷ್ಕವು ಮಿದುಳಿನ ಎಲ್ಲ ಶಕ್ತಿಯ ಕೇಂದ್ರ ಮತ್ತು ನಿತ್ಯನಿರಂತರವಾಗಿ ಬದಲಾವಣೆ ಹೊಂದುತ್ತಿರುವ ಸಂಕೀರ್ಣ ಸನ್ನಿವೇಶಕ್ಕನುಗುಣವಾಗಿ ಅತ್ಯುನ್ನತ ಹೊಂದಾಣಿಕೆ ಉಳ್ಳ ರೀತಿಯಲ್ಲಿ ಶರೀರದ ಅಂಗಾಂಗಗಳನ್ನು ಹತೋಟಿ ಮತ್ತು ನಿರ್ದೇಶನಕ್ಕೊಳಪಡಿಸುವ ಬುದ್ಧಿವಂತಿಕೆಯ ಕೇಂದ್ರವೂ ಸಹ ಇದೇ ಆಗಿದೆ.

೪. ದೀರ್ಘಾವಧಿಯ ಶೈಶವಾವಸ್ಥೆ :

ಶಿಕ್ಷಣದಲ್ಲಿ ಅತ್ಯಂತ ಪ್ರಾಮುಖ್ಯತೆಯನ್ನು ಪಡೆದ ಮತ್ತೊಂದು ಜೈವಿಕ ಲಕ್ಷಣವೆಂದರೆ ಸುದೀರ್ಘಕಾಲದವರೆಗಿನ ಶೈಶವಾವಸ್ಥೆ. ಪ್ರತಿಯೊಂದು ಪ್ರಾಣಿಯ ಜೀವನದ ಅಸ್ತಿತ್ವವು fertilized egg ಗರ್ಭಕೋಶದಿಂದ ಬಂದಿರುವಂತಹುದಾಗಿದೆ. ಕೆಲವು ಪ್ರಾಣಿಗಳು ತಮ್ಮ ಮರಿಗಳಿಗೆ ಕೊಂಚ ಕಾಲ ರಕ್ಷಣೆ, ಆಹಾರ ಮತ್ತು ಬೆಚ್ಚಗಿನ ತಾಣವನ್ನು ಒದಗಿಸಿಕೊಡುತ್ತವೆ. ಆದರೆ ಈ ರೀತಿಯ ರಕ್ಷಣೆಯ ಕಾಲ ಅತ್ಯಲ್ಪ. ಎಳೆಯ ಜೀವಿಗಳು ಬಹು ಬೇಗ ತಮ್ಮ ಕಾಲ ಮೇಲೆ ತಾವು ನಿಂತು ಸ್ವತಂತ್ರ ಜೀವನ ನಡೆಸಲು ಶಕ್ತಿ ಉಳ್ಳವುಗಳಾಗಿವೆ. ಮತ್ತೆ ಕೆಲವು ಹುಟ್ಟಿದ ತಕ್ಷಣವೇ ಸ್ವತಂತ್ರ ಜೀವಿಗಳಾಗುತ್ತವೆ.

ಸಸ್ತನಿ ಪ್ರಾಣಿಗಳಲ್ಲಿ ಭ್ರೂಣವು ಹೆಣ್ಣು ಶರೀರದ ಗರ್ಭಕೋಶದಲ್ಲಿಯೆ

ಬೆಳವಣಿಗೆ ಹೊಂದಿ ಜನ್ಮ ತಾಳಿದ ನಂತರದಲ್ಲಿ ಸ್ವಲ್ಪಕಾಲದವರೆಗೆ ತಾಯಿ ಮೊಲೆಯೂಡಿ ಹಾಲುಣಿಸುತ್ತವೆ. ಸಸ್ತನಿ ಪ್ರಾಣಿಗಳಲ್ಲಿ ಗರ್ಭಧಾರಣ ಮಾಡಿದ ಕಾಲದಿಂದ ಪ್ರಸವವಾಗುವರೆಗಿನ ಕಾಲದಲ್ಲಿಯೂ ವ್ಯತ್ಯಾಸವಿರುವುದು ಕಂಡು ಬರುತ್ತದೆ. ಒಂದೇ ತಿಂಗಳಿನಲ್ಲಿ ಅಳಿಲಿಲಿ (Dormouse) 'ಇಲಿಗೂ ಅಳಿಲಿಗೂ ಮಧ್ಯಸ್ಥವಾಗಿರುವ ಹೇಮಂತ ಋತುವಿನಲ್ಲಿ ಸತತವಾಗಿ ನಿದ್ದೆ ಹೋಗುವ ಪದಾರ್ಥಗಳನ್ನು ಅಗಿದು ಪುಡಿಪುಡಿ ಮಾಡುವ ಹಲ್ಲುಗಳುಳ್ಳ ಒಂದು ಸಣ್ಣ ಪ್ರಾಣಿ ಅಳಿಲಿಲಿ' ಜನ್ಮ ತಾಳುತ್ತವೆ. ಆನೆ ಗರ್ಭಧಾರಣ ಕಾಲ ೧೮ ತಿಂಗಳು. ಆನೆ, ಕುದುರೆ, ತಿಮಿಂಗಿಲಗಳ ಗರ್ಭಧಾರಣ ಕಾಲ ಮಾನವ ಕುಲದ ಸಾಮಾನ್ಯವಾದ ೯ ತಿಂಗಳುಗಳಿಗಿಂತಲೂ ಹೆಚ್ಚಿನದಾದದ್ದು. ಮಾನವ ಜೀವಿ ಹುಟ್ಟಿದ ನಂತರವೂ ಬಹಳ ಕಾಲದವರೆಗೆ ತಂದೆತಾಯಿಗಳ ಪಾಲನೆ ಪೋಷಣೆ ಮತ್ತು ರಕ್ಷಣೆಯಲ್ಲಿರಬೇಕಾಗಿದೆ. ಆದರೆ ಸಸ್ತನಿ ಪ್ರಾಣಿಗಳಲ್ಲಿ ಈ ರೀತಿ ತಮ್ಮ ಶಿಶುಗಳ ಪಾಲನೆ ಪೋಷಣೆಗಳ ಕಾಲದಲ್ಲಿಯೂ ವ್ಯತ್ಯಾಸವಿದೆ. ಕೆಲವು ಪ್ರಾಣಿಗಳು ಹುಟ್ಟಿದಂದಿನಿಂದ ಒಂದು ವರ್ಷದವರೆಗೆ ಮತ್ತು ಕೆಲವು ಕೆಲವು ಪ್ರಾಣಿಗಳು ಎರಡು ವರ್ಷದವರೆಗಿನ ಕಾಲವನ್ನು ತಮ್ಮ ಪಾಲನೆ ಪೋಷಣೆಗೆ ತೆಗೆದುಕೊಂಡು ನಂತರದಲ್ಲಿ ಸ್ವತಂತ್ರ ಜೀವನ ನಡೆಸಲು ಸಮರ್ಥಶಾಲಿಗಳಾಗುತ್ತವೆ. ಆದರೆ ಮನುಷ್ಯ ಜೀವಿತ ದೀರ್ಘಕಾಲದ ಶೈಶವಾವಸ್ಥೆ ಇರುವುದು ಪ್ರಾಣಿಪ್ರಪಂಚದಲ್ಲಿ ಒಂದು ವಿಶಿಷ್ಟ ಲಕ್ಷಣವಾದುದಾಗಿದೆ. ಅಂದರೆ ೧ ರಿಂದ ೧೨, ೧೪ ವರ್ಷದವರೆಗಿನ ಶೈಶವಾವಸ್ಥೆ.

ದೀರ್ಘಕಾಲದ ಶೈಶವಾವಸ್ಥೆಯ ಪ್ರಾಮುಖ್ಯತೆ :

ಗರ್ಭಕಾಲದಿಂದ ಹಿಡಿದು ಹುಟ್ಟುವವರೆಗೆ ಮತ್ತು ಹುಟ್ಟಿದಂದಿನಿಂದ ಬೆಳವಣಿಗೆ ಹೊಂದುವವರೆಗೆ ನಿರಂತರವಾದ ಮುಂದುವರಿಕೆ ಕಂಡುಬರುತ್ತದೆ. ಜನನವೇ ಜೀವನದ ಪ್ರಾರಂಭಿಕೆಯ ಗುರುತಲ್ಲ. ಆದರೆ ಅದು ಜೀವಿಯ ಅಸ್ತಿತ್ವದ ವಿವಿಧ ಹಂತಗಳಲ್ಲಿ ಒಂದು. ವ್ಯಕ್ತಿಯೊಬ್ಬನ ಬೆಳವಣಿಗೆಯು ತನ್ನ ಹುಟ್ಟಿನ ಜಾಯಮಾನದೊಂದಿಗೆ ಯಾವ ಅಡೆತಡೆಯೂ ಇಲ್ಲದಂತೆ ಬೆಳವಣಿಗೆಯ ವಿಧಾನವನ್ನು ಪಡೆದುದು ಒಂದು ವಿಶೇಷ ಘಟನೆಯಾಗಿದೆ.

(ಗರ್ಭ)	ಜನನ	ಜನನಾನಂತರದ ಕಾಲ
ಜನ್ಮಕಾಲ parental	birth	post natal
ನಿರಂತರವಾದ ಬೆಳವಣಿಗೆ		

ಮನುಷ್ಯ ಜಾತಿಯ ಆರೋಹಣವು ಪ್ರಾಣಿಪ್ರಪಂಚದಲ್ಲಿ ತನ್ನ ಶೈಶವಾವಸ್ಥೆಯ ಕಾಲವನ್ನು ಸುದೀರ್ಘವಾದುದನ್ನಾಗಿ ಮಾಡಿದೆ. ಮಾನವನು ತನ್ನ ಹುಟ್ಟಿನಲ್ಲಿ ತನ್ನೊಂದು ಪರಿಪೂರ್ಣತೆ ಮತ್ತು ಅಸಹಾಯಕತೆ ಅವನ ಸುದೀರ್ಘಕಾಲದ ಶೈಶವಾವಸ್ಥೆ ಮತ್ತು ಇತರರೊಂದಿಗೆ ಹೋಲಿಸಲಾಗದೆ ಇರುವಂಥ ಅವನ ಸಾಧನೆ - ಈ ಎಲ್ಲವೂ ಪರಸ್ಪರ ಸಂಬಂಧ ಉಳ್ಳವುಗಳಾಗಿವೆ.

ಸುದೀರ್ಘ ಕಾಲದ ಶೈಶವಾವಸ್ಥೆಯಲ್ಲಿ ಅಡಗಿರುವ ಶೈಕ್ಷಣಿಕ ಪ್ರಾಮುಖ್ಯತೆ ಎಂದರೆ ವಯಸ್ಕ ಸನ್ನಿವೇಶಕ್ಕೆ ಅತ್ಯವಶ್ಯಕವಾದಂತಹ ಹೊಂದಾಣಿಕೆಯುಳ್ಳದೆಲ್ಲವನ್ನು ಆ ಒಂದು ವಿಸ್ತೃತ ಕಾಲ ಒದಗಿಸಿಕೊಡುವಂತಹುದಾಗಿದೆ. ಅಂದರೆ ಶೈಶವಾವಸ್ಥೆಯು ಜೇನುಮೇಣದಂತಹ ಮೃದುಸ್ವಭಾವದ ಕಾಲ. ಆ ಕಾಲದಲ್ಲಿ ಮೇಣವನ್ನು ಯಾವುದೇ ಆಕಾರಕ್ಕೆ ಬಾಗಿಸಿ ಅದಕ್ಕೊಂದು ಸ್ವರೂಪವನ್ನು ಒಂದು ಸುಂದರಾಕಾರವನ್ನು ಒದಗಿಸಿಕೊಡಬಹುದಾಗಿದೆ. ಆ ರೀತಿಯ ಒಂದು ಸುಂದರಾಕೃತಿಯನ್ನು ರೂಪಿಸುವ ಪರ್ವಕಾಲವೇ ದೀರ್ಘಾವಧಿಯ ಶೈಶವಾವಸ್ಥೆಯಲ್ಲಿ ಹುದುಗಿರುವ ಶೈಕ್ಷಣಿಕ ಪ್ರಾಮುಖ್ಯತೆಯಾಗಿದೆ. ಮಾನವನ ಶೈಶವಾವಸ್ಥೆಯಲ್ಲಿನ ವಿಸ್ತೃತ ಸ್ನಾಯುವಿನ ಅಶಕ್ತತೆಯು ತನ್ನನ್ನು ತಾನೇ ರಕ್ಷಿಸಿಕೊಳ್ಳಲಾರದಂತಹುದಾಗಿದ್ದು ಅದು ನಿರಂತರವಾಗಿ ಅನ್ಯರ ಪಾಲನೆ ಮತ್ತು ಪೋಷಣೆಗೆ ದೀರ್ಘಕಾಲದವರೆಗೆ ಒಳಗಾಗಿದ್ದು ಆ ಕಾಲದುದ್ದಕ್ಕೂ ಅದು ಕಲಿವನ್ನು ಸಾಧಿಸಲು ನಿಗದಿಗೊಳಿಸಿರುವಂತಹುದಾಗಿದೆ. ಅದೃಷ್ಟವಶಾತ್ ಮಗುವು ತನ್ನ ದೀರ್ಘಕಾಲದ ಶೈಶವಾವಸ್ಥೆಯಲ್ಲಿನ ಲಾಭ ಪಡೆಯುವಂತಾಗಲು ಅಗತ್ಯವಾದ ಶಕ್ತಿಯನ್ನು ಪ್ರಕೃತಿಯೇ ಒದಗಿಸಿಕೊಟ್ಟಿರುವಂತಹುದಾಗಿದೆ. ಜೀವನದಲ್ಲಿ ಮತ್ತಾವುದೇ ಕಾಲ ಕಲಿಯುವಿಕೆಗೆ ಶೈಶವಾವಸ್ಥೆಯಲ್ಲಿನ ಸುದೀರ್ಘಕಾಲದಷ್ಟು ಪರಿಣಾಮಕಾರಿ ಎನಿಸುವಂತಹುದಾಗಿಲ್ಲ. ಅದು ಅತ್ಯಂತ ಮೃದುತ್ವದ ಕಾಲ. ನಳನಳಿಸಿ ಬೆಳವಣಿಗೆಯನ್ನು ಹೊಂದುವ ಕಾಲ. ಯೌವನವು ಸುಲಭವಾದ ಮಾರ್ಗದರ್ಶನದ ಕಾಲ. ಅತ್ಯಂತ ನಮ್ರಭಾವದ ಕಾಲ ಮತ್ತು ಯಾವುದೇ ರೀತಿಯ ಪ್ರಭಾವಕ್ಕೆ ಒಳಗಾಗುವಂತೆ ಮಾಡುವ ಕಾಲ. ಈ ಕಾಲದಲ್ಲಿ ಶಾರೀರಿಕ ರಚನೆಯಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಮಾತ್ರವಲ್ಲ ನರಮಂಡಲ ವ್ಯವಸ್ಥೆಯಲ್ಲಿಯೂ ಸಹ ನೂತನ ಸನ್ನಿವೇಶವನ್ನು ಎದುರಿಸಿ ಹೊಂದಿಸಿಕೊಳ್ಳಬಲ್ಲಂತಹ ಬೆಳವಣಿಗೆಯಾಗಿರುತ್ತದೆ. ಪ್ರಧಾನ ಮಸ್ತಿಷ್ಕದ ಹೊರ ಆವರಣದಲ್ಲಿ ಒಂಭತ್ತು ಶತಕೋಟಿಗಿಂತ ಹೆಚ್ಚಿನ ಜೀವಕೋಶಗಳು ಜನನಕಾಲದಲ್ಲಿ ಹಾಜರಿರುತ್ತವೆ. ಆದಾಗ್ಯೂ ಅವು ತಮ್ಮದೇ ಆದ ವಿಶಿಷ್ಟವಾದ ಮತ್ತು ಪ್ರತ್ಯೇಕವಾದ ಕಾರ್ಯಕ್ರಮವನ್ನು ಹೊಂದಿದವುಗಳಾಗಿರುವುದಿಲ್ಲ. ಇವುಗಳಲ್ಲನೇಕವುಗಳು ವಯಸ್ಸು ಮತ್ತು ಸನ್ನಿವೇಶದ ಪ್ರಚೋದನೆಯಿಂದಾಗಿ ಬೆಳೆಯಬಹುದಾಗಿದೆ. ಯೌವನವು ಶಾರೀರಿಕವಾಗಿ

ವ್ಯಕ್ತಿಯೊಬ್ಬನಿಗೆ ಒಂದು ತಲೆಮಾರಿನವರೆಗೆ ಬೋಧಿಸುವ ಕಾಲದ ಅನುಕೂಲತೆಯನ್ನು ಮಾಡಿಕೊಡುವಂತಹುದಾಗಿದೆ. ಆದರೆ ಅದು ತಲತಲಾಂತರದವರೆಗೆ ಯುಗಾಂತರಗಳಲ್ಲೂ ಜನಾಂಗಕ್ಕೆ ಮೃದುಸ್ವಭಾವವನ್ನು ಒದಗಿಸಿಕೊಡುತ್ತದೆ, ಪುನರುಜ್ಜೀವನಗೊಳಿಸುತ್ತದೆ ಮತ್ತು ಬದಲಾದ ಸನ್ನಿವೇಶಕ್ಕೆ ಹೊಂದಿಕೊಳ್ಳಬಲ್ಲ ರೀತಿಯಲ್ಲಿ ಅದನ್ನುಳಿಸಿಕೊಳ್ಳುತ್ತದೆ. ದೀರ್ಘಾವಧಿಯ ಕಾಲದ ಶೈಶವಾವಸ್ಥೆಯಲ್ಲಿ ಶೈಕ್ಷಣಿಕ ಬೆಳವಣಿಗೆಗೆ ಅನುಕೂಲಕರವಾದ ಸ್ಥಿತಿಗತಿಗಳನ್ನು ಗುರುತಿಸಬಹುದಾಗಿದೆ. ಶೈಕ್ಷಣಿಕ ಬೆಳವಣಿಗೆಯಲ್ಲಿ ಜೈವಿಕವಾದ ಒಂದು ಸದವಕಾಶವನ್ನು ಉಪೇಕ್ಷೈದದ್ದೇ ಆದರೆ ಬಾಲ್ಯವೆಲ್ಲವೂ ವ್ಯರ್ಥವಾದಂತೆ ಮತ್ತು ಆ ರೀತಿ ಆಗಬಹುದಾದ ಅನ್ಯಾಯಕ್ಕೆ ನಂತರದಲ್ಲಿನ ಯಾವುದೇ ಪರಿಹಾರ ಆದ ನಷ್ಟವನ್ನು ತುಂಬಿಕೊಡಲು ಶಕ್ಯವಾಗುವುದಿಲ್ಲ.

ತಾರುಣ್ಯ - ಗಂಡಸರಿಗೆ ೧೪ ರಿಂದ ೨೪ ವರ್ಷ. ಹೆಂಗಸರಲ್ಲಿ ೧೨ ರಿಂದ ೨೧ ವರ್ಷಗಳವರೆಗಿನ ಮಧ್ಯಂತರದ ಕಾಲವೇ ತಾರುಣ್ಯದ ಕಾಲ. ಯೌವನೋದಯ ಮುಂಗೋಳಿ ಕೂಗುವ ಕಾಲ. ಹೊಸಹೊಸ ಭಾವನೆಗಳು ಹೊಸ ಹೊಸ ಕಾಮನೆಗಳು ಪ್ರಾದುರ್ಭಾವಗೊಳ್ಳುವ ಕಾಲ. ಪ್ರಾಯ ಉಕ್ಕುವ ಕಾಲ. ಪ್ರಾಯವೆನ್ನುವುದು ಶಾರೀರಿಕ ಪಕ್ವತೆ. ಆ ಕಾಲವು ವ್ಯಕ್ತಿಗೆ ಸಂತಾನೋತ್ಪತ್ತಿ ಶಕ್ತಿ ಒಡಮೂಡವ ಕಾಲವಾಗಿದ್ದು ಅದು ಪುರುಷರಲ್ಲಿ ೧೪ನೇ ವರ್ಷದಿಂದಲೂ ಸ್ತ್ರೀಯರಲ್ಲಿ ೧೨ನೇ ವರ್ಷದಿಂದಲೂ ಪ್ರಾರಂಭವಾಗುತ್ತದೆ. ಪಕ್ವತೆ ಎನ್ನುವುದು ವ್ಯಕ್ತಿಯ ಪೂರ್ಣವಾದ ಜೈವಿಕ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಕುರಿತುದಾಗಿದ್ದು ಅದು ಸ್ತ್ರೀಯರಿಗೆ ೨೧ನೇ ವರ್ಷಕ್ಕೂ ಪುರುಷರಲ್ಲಿ ೨೫ನೇ ವರ್ಷಕ್ಕೂ ಪೂರ್ಣಗೊಳ್ಳುವಂತಹುದಾಗಿದೆ. ಸ್ತ್ರೀ ಪುರುಷರಿಬ್ಬರಲ್ಲೂ ಮೇಲಿನ ವಯಸ್ಸುಗಳಲ್ಲಿ ವ್ಯಕ್ತಿವ್ಯಕ್ತಿಗೂ ಬೇಕಾದಷ್ಟು ವ್ಯತ್ಯಾಸಗಳಿರುತ್ತವೆ. ಕಾರಣವೇನೆಂದರೆ ಒಬ್ಬೊಬ್ಬ ವ್ಯಕ್ತಿಯೂ ಬೆಳೆಯುವ ವಿಧಾನದಲ್ಲಿ ವ್ಯತ್ಯಾಸವಿರುತ್ತದೆ. ಬಾಲ್ಯಾವಸ್ಥೆಯಿಂದ ತಾರುಣ್ಯಾವಸ್ಥೆಗೇರುವಲ್ಲಿ ಆಯಾ ವ್ಯಕ್ತಿ ತೆಗೆದುಕೊಳ್ಳುವ ಆಹಾರ, ಬೆಳೆಯುವ ವಾತಾವರಣ, ವಾಯುಗುಣ, ಆರೋಗ್ಯ, ಜನಾಂಗ ಮತ್ತು ಇತರೆ ಅಸ್ಪಷ್ಟವಾದ, ಅಗೋಚರವಾಗಿರುವ ಅಂಶಗಳು ಗಣನೀಯವಾದವುಗಳಾಗಿವೆ.

ಯೌವನವನ್ನು ಕುರಿತಾದ ಈ ಮೊದಲಿನ ನಂಬಿಕೆಗಳೆಲ್ಲವೂ ತಪ್ಪು ಅರ್ಥದಿಂದ ಕೂಡಿದವುಗಳಾಗಿದ್ದು ಮತ್ತು ಬರೀ ಭ್ರಾಂತಿಯಿಂದ ಕೂಡಿದ ವಿಲಕ್ಷಣ ಸಂಗತಿಗಳಾಗಿದ್ದವು. ಈಗಲೀಗ ವಾಸ್ತವ ಸಂಗತಿಗಳ ಗ್ರಹಿಕೆಯಾಗುತ್ತ ಬಂದು ವೈಜ್ಞಾನಿಕ ಅಧ್ಯಯನ ತಳಹದಿಯ ಮೇಲೆ ನಿಂತ ವಿಚಾರವಂತಿಕೆಯಿಂದ ಯೌವನದ ಬಗೆಗಿನ ಮೊದಲಿನ ಭ್ರಾಂತಿ ಮತ್ತು ತಪ್ಪುಕಲ್ಪನೆಗಳು ದೂರವಾಗತೊಡಗಿವೆ.

ಶಿಕ್ಷಣವೇತ್ತರು ಮತ್ತು ಮನಶ್ಶಾಸ್ತ್ರಜ್ಞರು ಜೀವನದ ಗಂಭೀರ ಸ್ಥಿತಿಯಲ್ಲಿ ಇನ್ನೂ ಬಹಳ ಕಾಲದವರೆಗೆ ಇದ್ದಕ್ಕಿದ್ದ ಹಾಗೆ ಅತ್ಯಂತ ಜರೂರಾಗಿ ಯೌವನದ ಮೆಲ್ವಾಯುವಿಕೆಯನ್ನು ಮತ್ತು ಅದರ ರಭಸದ ಆಗಮನವನ್ನು ಗಣನೆಗೆ ತೆಗೆದುಕೊಳ್ಳುವಂತಿಲ್ಲ; ಆದರೆ ಅದಕ್ಕೆ ಬದಲಾಗಿ ಅದು ಅನಿರ್ದಿಷ್ಟಕಾಲದವರೆಗೂ ಆದ ಒಂದು ನಿರಂತರ ಪರಿವರ್ತನೆ. ಈ ರೀತಿಯ ಒಂದು ನಿರಂತರ ಪರಿವರ್ತನೆಯ ಫಲವಾಗಿಯೆ ವ್ಯಕ್ತಿ ನಿಧಾನವಾಗಿ ಜೈವಿಕ ಲಕ್ಷಣಗಳಲ್ಲಿ ವಯಸ್ಕ ಜೀವನಕ್ಕೇರುವವನಾಗಿದ್ದಾನೆ.

'ಮೊಲೆ ಮೂಡಿ ಬಂದರೆ ಹೆಣ್ಣೆಂಬರು

ಗಡ್ಡ ಮೀಸೆ ಬಂದರೆ ಗಂಡೆಂಬರು' - ಎಂಬ ಶರಣರ ಸೂಳ್ನುಡಿಯ ಯಥಾರ್ಥವಾದ ಚಿತ್ರವೇ ಯೌವನೋದಯದ ಮುಂಗೋಳಿ ಕೂಗಿನ ಮುನ್ಸೂಚನೆಯಾದುದಾಗಿದೆ. ಈ ಕಾಲದಲ್ಲಿಯೇ ವ್ಯಕ್ತಿಯ ಮೃದುವಾದ ಅಸ್ಥಿಪಂಜರ ವಿಕಾಸ ಹೊಂದುತ್ತದೆ. ಶರೀರದ ಸ್ವರೂಪವು ವಯಸ್ಕತೆಯ ಲಕ್ಷಣಗಳನ್ನು ಅಂದರೆ ಅಂಗಾಂಗಗಳು ಸೌಷ್ಟವತೆಯನ್ನು ಪಡೆಯುತ್ತವೆ. ಶ್ವಾಸಕೋಶಗಳ ಶಕ್ತಿ ಹೆಚ್ಚುತ್ತದೆ. ರಕ್ತದ ಚಲನೆಯಲ್ಲಿ ಉದ್ವಿಗ್ನತೆಯುಂಟಾಗುತ್ತದೆ. ರಕ್ತ ಮತ್ತು ಮೂಳೆಗಳ ಸಂಯುಕ್ತ ಜೋಡಣೆಯಲ್ಲಿ ರಾಸಾಯನಿಕ ಬದಲಾವಣೆ ಕಾಣಿಸಿಕೊಳ್ಳುತ್ತದೆ. ರಸಗ್ರಂಥಿಗಳಲ್ಲಿ ವ್ಯತ್ಯಾಸ ತೋರಿ ಬರುತ್ತದೆ. ಕಾಮವಾಂಛೆಯ ಸಹಜ ಶಕ್ತಿಯು ಪಕ್ವತೆಗೇರುತ್ತದೆ. ಈ ಎಲ್ಲ ಪರಿವರ್ತನೆಗಳ ಫಲವಾಗಿ ವ್ಯಕ್ತಿ ಭಾವನಾಮಗ್ನನಾಗುತ್ತಾನೆ. ತನ್ನದೇ ಆದ ಭಾವನಾ ಲೋಕದಲ್ಲಿ ಗರಿಗೆದರಿ ಪಕ್ಷಿಯಂತೆ ಹಾರಲೆಳಸುತ್ತಾನೆ. ಯೌವನವು ಜೈವಿಕವಾಗಿ ಎಲ್ಲಾ ವಿಧವಾದ ಪಕ್ವತೆಯನ್ನುಂಟು ಮಾಡಿ ಸಾಮಾಜಿಕ ಜೀವನ ಮತ್ತು ನಾಗರಿಕ ಜೀವನದ ಪ್ರಚೋದನೆಗಳನ್ನು ಮತ್ತು ಕಾಮನೆಗಳನ್ನು, ಭೌತಿಕವಾಗಿ, ಬೌದ್ಧಿಕವಾಗಿ ಮತ್ತು ಭಾವುಕವಾಗಿ ತನ್ನಂತರಂಗದಲ್ಲಿ ಗರ್ಭೀಕರಿಸಿಕೊಳ್ಳುತ್ತಾ, ನೈತಿಕ ಹೊಂದಾಣಿಕೆಯ ಸಮಸ್ಯೆಗಳಲ್ಲಿ ಮುಗ್ಗರಿಸುತ್ತ ವಿಶೇಷ ರೀತಿಯ ಕಷ್ಟ ಕಾರ್ಪಣ್ಯಗಳಿಗೆ ತುತ್ತಾಗುತ್ತ ಇದ್ದು, ಇವೆಲ್ಲವನ್ನು ಅರ್ಥೈಸಿಕೊಳ್ಳಲು ಎಲ್ಲರ ಕಾರುಣ್ಯವನ್ನು ಅಪೇಕ್ಷಿಸುವಂತಹುದಾಗಿದೆ. ಏರುಜವ್ವನದಲ್ಲಿ ಖಿನ್ನಮನಸ್ಕತೆ, ಅಸ್ಥಿರವಾದ ಭಾವುಕತೆ, ತನಗೆ ಸರಿಯಾದ ರಕ್ಷಣೆ ಇಲ್ಲವೆಂಬ ಭಾವನೆ, ಉದ್ವಿಗ್ನತೆ, ನಾನಾ ವಿಧವಾದ ಭ್ರಾಂತಿ, ಅಜೇಯತಾವಾದ ತರ್ಕಬುದ್ಧಿ ಮತ್ತು ಸಂದೇಹಗಳನ್ನು ಮೊದಲೇ ಊಹಿಸಿ ತದನುಗುಣವಾದ ಶೈಕ್ಷಣಿಕ ಯೋಜನೆಯನ್ನು ರೂಪಿಸಬೇಕು. ಯೌವ್ವನೋದಯ ಕಾಲ ಶೈಕ್ಷಣಿಕ ಪುರೋಭಿವೃದ್ಧಿಗೆ ಒಳ್ಳೆಯ ಪಕ್ವವಾದ ಕಾಲ. ಅದು ಕಾರಣವೇ ಅತ್ಯಂತ ಪ್ರಾಚೀನ ಕಾಲದಲ್ಲಿಯೇ ಏರುಜೌವ್ವನದ ಕಾಲವನ್ನು ಅತ್ಯಂತ ಶೈಕ್ಷಣಿಕ ಪ್ರಾಮುಖ್ಯತೆಯ ಕಾಲವೆಂದು ಪರಿಗಣಿಸಲಾಗಿದ್ದಿತು. ಅದರ ಪರಿಗಣನೆ ಇಂದಿನ

ಅತ್ಯಾಧುನಿಕ ಯುಗದಲ್ಲಿ ಇನ್ನೂ ಮಹತ್ವಪೂರ್ಣವಾದುದಾಗಿದೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾದ ಅಗತ್ಯವಿಲ್ಲ.

ನಿರ್ನಾಳ ಗ್ರಂಥಿಗಳು :

ನಿರ್ನಾಳ ಗ್ರಂಥಿಗಳ ಕಾರ್ಯಕ್ರಮವೇನೆಂಬುದು ಇನ್ನೂ ಬಹುತೇಕ ಸ್ಪಷ್ಟವಾಗಿ ಗೊತ್ತಿಲ್ಲದಿದ್ದರೂ, ವ್ಯಕ್ತಿಯ ಶರೀರ, ಅವನ ಭಾವೋದ್ವೇಗಗಳು, ವ್ಯಕ್ತಿತ್ವ, ಭೌತಿಕ ಮತ್ತು ಬೌದ್ಧಿಕ ದಕ್ಷತೆ, ಆರೋಗ್ಯ ಮತ್ತು ಸಾಮಾನ್ಯ ವರ್ತನೆ ಇತ್ಯಾದಿಗಳನ್ನು ನಿರ್ಧರಿಸುವಲ್ಲಿ ಮತ್ತು ಪ್ರಭಾವ ಬೀರುವಲ್ಲಿ, ಈ ನಿರ್ನಾಳ ಗ್ರಂಥಿಗಳ ಪ್ರಾಮುಖ್ಯತೆಯನ್ನು ಗಮನಕ್ಕೆ ತೆಗೆದುಕೊಳ್ಳದೆ ಇರಲಾಗದು. ಈ ನಿರ್ನಾಳ ಗ್ರಂಥಿಗಳು ರಕ್ತಕ್ಕೆ ಒಂದು ವಿಧವಾದ ಹಾರ್ಮೋನ್‌ಗಳನ್ನು ಸ್ರವಿಸಿಕೊಟ್ಟು ಈ ಹಾರ್ಮೋನ್‌ಗಳು ಶರೀರದ ನಿರ್ದಿಷ್ಟವಾದ ಅಂಗಕ್ಕೆ ಅಥವಾ ಅಂಗಾಂಗಗಳಿಗೆ ಪ್ರಚೋದನ ಪರಿಣಾಮವನ್ನುಂಟು ಮಾಡತಕ್ಕವುಗಳಾಗಿವೆ. ಮೂತ್ರಜನಕಾಂಗಗಳ ಮೇಲ್ಗಡೆ ಅಂಟಿಕೊಂಡಿರುವ ನಿರ್ನಾಳ ಗ್ರಂಥಿಗಳ ಅತ್ಯಂತ ಭಾವೋದ್ವೇಗಗಳಾದ ಭಯ, ಕೋಪೋದ್ರೇಕ, ನೋವು ಇತ್ಯಾದಿಗಳಿಗೂ ಅತ್ಯಂತ ನಿಕಟ ಸಂಬಂಧವಿರುವುದಾಗಿದೆ. ಅಡ್ರಿನಲ್ ಗ್ಲಾಂಡ್ಸ್‌ಗಳಿಗೂ ಸ್ನಾಯುಗಳ ಕೆಲಸ ಮಾಡುವ ಸಾಮರ್ಥ್ಯಕ್ಕೂ ಅತ್ಯಂತ ನಿಕಟ ಸಂಬಂಧವಿದೆ.

ಮೂಳೆಗಳ ರಚನೆ ಮತ್ತು ಸ್ನಾಯುಗಳ ಬೆಳವಣಿಗೆಯಲ್ಲಿ ಪಿಟ್ಯೂಟರಿ - ಶರೀರದ ಬೆಳವಣಿಗೆಯ ಮೇಲೆ ಮುಖ್ಯ ಪ್ರಭಾವ ಉಳ್ಳದ್ದೆಂದು ನಂಬಿಕೆಯುಳ್ಳ, ಮೆದುಳಿನ ಬುಡದಲ್ಲಿಯ ಒಂದು ಸಣ್ಣ ನಿರ್ನಾಳ ಗ್ರಂಥಿ - ಈ ಗ್ರಂಥಿಯು ತನ್ನದೇ ಆದ ಗಣನೀಯ ಪ್ರಮಾಣವನ್ನು ಉಳ್ಳದ್ದಾಗಿದೆ. ಈ ಗ್ರಂಥಿಯಿಂದ ಸಾಧ್ಯವಾಗ ಬಹುದಾದ ಪ್ರಾಮುಖ್ಯತೆಯನ್ನು ರೋಜರ್ಸ್ ಈ ಕೆಳಕಂಡಂತೆ ವಿವರಿಸಿದ್ದಾನೆ :

''ಮೆದುಳಿನ ಬುಡದಲ್ಲಿಯ ಒಂದು ಸಣ್ಣ ನಿರ್ನಾಳ ಗ್ರಂಥಿಯು ಬುದ್ಧಿಮತ್ತತೆಯ ಗ್ರಂಥಿಯೂ ಆಗಿದೆ. ಮೆದುಳಿನ ಮುಂಚಾಚಿದ ಭಾಗಕ್ಕೆ ಇದು ಪೌಷ್ಟಿಕಾಂಶವಾಗಿದ್ದು ಅದರ ಚಟುವಟಿಕೆಗಳಲ್ಲಿ ಕೌತುಕತೆಯನ್ನುಂಟುಮಾಡುತ್ತದೆ ಮತ್ತು ತೀರ್ಮಾನಗಳಲ್ಲಿ ನಿಖರತೆಯನ್ನುಂಟು ಮಾಡುತ್ತದೆ. ಮಿದುಳಿನ ಕಣಗಳನ್ನು ಚುರುಕುಗೊಳಿಸಿ ಬೌದ್ಧಿಕ ಬೆಳವಣಿಗೆಯನ್ನುಂಟುಮಾಡುತ್ತದೆ. ಜ್ಞಾಪಕ ಶಕ್ತಿಯನ್ನುಳಿಸಿಕೊಳ್ಳುವಲ್ಲಿ ಅದು ಅತ್ಯವಶ್ಯಕವಾದುದಾಗಿದೆ. ಅಗತ್ಯವಾದುದಕ್ಕಿಂತ ಕಡಿಮೆ ಪ್ರಮಾಣದಲ್ಲಿ ಉತ್ಪತ್ತಿಯಾಗುವ ಪಿಟ್ಯೂಟರಿ ಬುದ್ಧಿಮಾಂದ್ಯರಿಗೆ ಸಂಬಂಧಿಸಿರುವುದಾಗಿ ತೋರುತ್ತದೆ.''

ರಚನಾತ್ಮಕವಾದ ಕಲ್ಪನೆ ಎಂದು ನಾವು ಸಾಮಾನ್ಯವಾಗಿ ಯಾವುದನ್ನು

ಮಾತನಾಡಿಕೊಳ್ಳುತ್ತವೋ ಅದು ಪಿಟ್ಯೂಟರಿ ಗ್ರಂಥಿಯ ಎರಡು ಭಾಗದಷ್ಟು ಸಮತೋಲನ ಚಟುವಟಿಕೆಯಿಂದ ಆಗಿರುವಂತಹುದಾಗಿದೆ.

ದೇಹದ ಉಪಯೋಗಕ್ಕಾಗಿ ಒಸರಿಸಿದ ಸ್ರಾವವು ಮೂಲ ನರಗ್ರಂಥಿಯ ಮೇಲೆ ಕಾರ್ಯವೆಸಗುತ್ತದೆ. ಅವು ಭಾವೋದ್ವೇಗಗಳ ಹತೋಟಿಯ ಕೇಂದ್ರ ಮತ್ತು ಧಾರ್ಮಿಕ ಭಾವನೆ, ಕಾರುಣ್ಯ, ಹೃದಯಕೋಮಲತೆ, ಸಾಮಾಜಿಕ ಮತ್ತು ಸೃಜನಾತ್ಮಕ ಮೂಲ ಪ್ರವೃತ್ತಿಗಳನ್ನು ವಿದಾಯಕಗೊಳಿಸುವಂಥವುಗಳಾಗಿವೆ. ಅದು ಯಾವಾಗ ಅತಿಯಾಗಿ ಕಾರ್ಯವೆಸಗುತ್ತದೋ ಆಗ ಅದು ಭಯ, ಕುತೂಹಲ, ಅನುಮಾನ, ಮನೋವಿಕಲ್ಪ ಅಥವಾ ಭ್ರಾಂತಿ, ಮೋಸಹೋಗುವಿಕೆ ಮತ್ತು ನರದೌರ್ಬಲ್ಯಗಳಿಗೆ ಎಡೆ ಮಾಡಿಕೊಡುತ್ತದೆ.

ಗೋಜರ್ಸ್ ಹೇಳುವಂತೆ 'ಥೈರಾಯಿಡ್' ಇಲ್ಲದೆ ಯಾವ ಆಲೋಚನೆಯೂ ಇಲ್ಲ, ಯಾವ ಬೆಳವಣಿಗೆಯೂ ಇಲ್ಲ, ವಿಶಿಷ್ಟವಾದ ಮಾನವಲಕ್ಷಣಗಳಾಗಲಿ ಅಥವಾ ಪ್ರಾಣಿಲಕ್ಷಣಗಳಾಗಲೀ ಇಲ್ಲ.... ಥೈರಾಯಿಡ್ ಇಲ್ಲದೆ ಯಾವುದೇ ವಿಧವಾದ ಸಂಕೀರ್ಣವಾದ ಆಲೋಚನೆಯೂ ಇಲ್ಲ, ಕಲಿಕೆಯೂ ಇಲ್ಲ, ಶಿಕ್ಷಣವೂ ಇಲ್ಲ, ಯಾವ ಅಭ್ಯಾಸಗಳೂ ರೂಪುಗೊಳ್ಳುವುದಿಲ್ಲ, ಸನ್ನಿವೇಶಕ್ಕನುಗುಣವಾದ ಪ್ರತಿಕ್ರಿಯಾ ಶಕ್ತಿಯೂ ಇಲ್ಲ, ಅವುಗಳ ಜತೆಗೆ ಪ್ರದರ್ಶಿಸುವಂತಹ ಯಾವುದೇ ವಿಧವಾದ ಭೌತಿಕ ಪ್ರದರ್ಶನ ಮತ್ತು ಕಾರ್ಯಕ್ರಮಗಳಿಲ್ಲ ; ಮತ್ತು ಪುನರುತ್ಪತ್ತಿ ಶಕ್ತಿಯೂ ಇಲ್ಲ, ಇದರೊಂದಿಗೆ ನಿರೀಕ್ಷಿಸಿದ ವಯಸ್ಸಿಗೆ ತಕ್ಕಂತಹ ಯಾವುದೇ ವಿಧವಾದ ಯೌವನದ ಚಿಹ್ನೆಗಳೂ ಇಲ್ಲ, ಅದರಿಂದಾಗಿ ಯಾವುದೇ ರೀತಿಯ ಕಾಮಪ್ರವೃತ್ತಿಯ ಪ್ರದರ್ಶನವೂ ಇಲ್ಲ. Roger says that "without thyroid, no thought, no growth, no distinctive humanity or animality is possible...without thyroid there can be no complexity of thought, no learning, no education, no habit formation, no responsive energy for situations, as well as no physical unfolding of faculty and function and no reproduction of kind, with no sign of adolesence at the expected age and no exhibition of sex tendencies thereafter".

ಬೌದ್ಧಿಕ ಜೀವನ : Mental life

ಮಿದುಳಿಗೆ ಸಂಬಂಧಿಸಿದ ಮಾನಸಿಕ ಚಟುವಟಿಕೆಯನ್ನೇ ಬೌದ್ಧಿಕ ಜೀವನ ಎಂದೆನ್ನಬಹುದು. ಬೌದ್ಧಿಕ ಜೀವನವೆನ್ನುವುದರ ಅರ್ಥವೇನು ಎಂಬುದು ಇನ್ನೂ

ಬಗೆಹರಿಯದ ಒಂದು ವಿವಾದಾತ್ಮಕ ವಿಷಯ. ಮೆದುಳಿನ ಅಥವಾ ಬೌದ್ಧಿಕ ವಸ್ತು ವಿನ್ಯಾಸವನ್ನು ಕುರಿತು ಮೊಟ್ಟಮೊದಲ ಬಾರಿಗೆ ಅಧ್ಯಯನ ನಡೆಸಿ Roger ತನ್ನ De Amima ಎಂಬ ಗ್ರಂಥದಲ್ಲಿ ಚರ್ಚಿಸಿದ್ದಾನೆ ಮತ್ತು ಅವನ ಈ ಕೃತಿಗಳಲ್ಲಿ ಕಂಡುಬರುವ ಅಂಶವೆಂದರೆ ಮನೋವೈಜ್ಞಾನಿಕ ವಿಷಯಗಳು ಜೈವಿಕ ಶಾಸ್ತ್ರದೊಂದಿಗೆ ಬೆರೆತುಹೋಗಿರುವುದು. ಈ ರೀತಿ ಇವುಗಳು ಒಂದರೊಡನೊಂದಿಗೆ ಬೆರೆತು ಹೋಗಿರುವ ಕಲ್ಪನೆ ಕ್ರಿ.ಪೂ. ೪ನೇ ಶತಮಾನದಿಂದ ಹಿಡಿದು ೧೭ನೇ ಶತಮಾನದವರೆಗೆ ಅಂದರೆ ಸರಿಸುಮಾರು ೨೦,೦೦೦ ವರ್ಷಗಳವರೆಗೆ ಹೇಗೆ ಉಳಿದುಕೊಂಡು ಬಂದಿತ್ತು. ಆದರೆ ೧೭ನೇ ಶತಮಾನದಲ್ಲಿ ಫ್ರಾನ್ಸಿ ತತ್ವಜ್ಞಾನಿ ರೀನೆ ಡಿಕಾರ್ಟೆಸ್ ಹೊಸ ಸಿದ್ಧಾಂತವೊಂದನ್ನು ಅಂದರೆ ಬುದ್ಧಿ ಮತ್ತು ವಸ್ತು (mind and matter)ಗಳಲ್ಲಿ ಅತ್ಯಂತ ಸೂಕ್ಷ್ಮವಾದ ವ್ಯತ್ಯಾಸವಿದೆ ಎಂಬ ಸಿದ್ಧಾಂತವನ್ನು ಪ್ರತಿಪಾದಿಸಿದ. ಈ ಪ್ರತಿಪಾದನೆಯು ಸುಮಾರು ಮೂರು ಶತಮಾನಗಳವರೆಗೆ ಮನಶ್ಶಾಸ್ತ್ರವನ್ನು ಜೀವಶಾಸ್ತ್ರದಿಂದ ಸೂಕ್ಷ್ಮತಮವಾಗಿ ಬೇರ್ಪಡಿಸಿತ್ತು. ಆದರೆ ೨೦ನೇ ಶತಮಾನದ ಪ್ರಾರಂಭದಿಂದ ಪ್ರತ್ಯೇಕವಾದ ಬೌದ್ಧಿಕ ವಸ್ತುವಿನ ಕಲ್ಪನೆ ದೂರವಾಗಿ ಮನಶ್ಶಾಸ್ತ್ರಜ್ಞರು ಪುನಃ ಬೌದ್ಧಿಕ, ಶಾರೀರಿಕ, ಮತ್ತು ನರಮಂಡಲ ವ್ಯವಸ್ಥೆಗಳಿಗಿರುವ ಅಂತರ್‌ಸಂಬಂಧವನ್ನು ಮನಗಾಣತೊಡಗಿದರು.

ಮನಶ್ಶಾಸ್ತ್ರವು ಬೌದ್ಧಿಕ ಮತ್ತು ಮಾನಸಿಕ ಚಟುವಟಿಕೆಗಳನ್ನು ಕುರಿತದ್ದು. ಬೌದ್ಧಿಕ ಜೀವನ ಎನ್ನುವುದು ಸಾಮಾನ್ಯವಾಗಿ ಮಾನಸಿಕವಾದ ವರ್ತನೆ ಮತ್ತು ಪ್ರಕ್ರಿಯೆಗೆ ಸಂಬಂಧಿಸಿದ್ದು. ಜೀವಿಯ ಶಾರೀರಿಕ ರಚನೆ ಮತ್ತು ಅದರ ಜೈವಿಕ ವಿಚಾರಗಳಿಗಾಗಿ ಸಂಬಂಧಿಸಿದ್ದು. ಆದ್ದರಿಂದ ಜೀವಶಾಸ್ತ್ರ ಮನಶ್ಶಾಸ್ತ್ರದ ವಿಸ್ತೃತ ಭಾಗದ ಒಂದು ಅಂಗಮಾತ್ರವಲ್ಲ, ಅದು ಅದರ ಬೌದ್ಧಿಕಜೀವನದ ಅಧ್ಯಯನಕ್ಕಾಗಿ ಜೀವಶಾಸ್ತ್ರವನ್ನು ಆಧರಿಸಬೇಕಾಗಿದೆ.

ಶೈಕ್ಷಣಿಕ ವಿಧಾನಗಳನ್ನು ಸ್ಥಗಿತಗೊಳಿಸುವ ಜೈವಿಕಾಂಶಗಳು :

ಜೈವಿಕ ಬುನಾದಿ ಶಿಕ್ಷಣಕ್ಕೆ ಅತ್ಯಗತ್ಯವೆಂಬುದನ್ನು ಮೇಲಿನ ವಿಷಯ ವಿಶ್ಲೇಷಣೆಯ ಬೆಳಕಿನಲ್ಲಿ ಮನಗಂಡೆವು. ಈ ಶಿಕ್ಷಣಕ್ಕೆ ಭದ್ರಬುನಾದಿಯಾಗಿ ಆಧಾರಸ್ತಂಭಗಳಾಗಿ ನಿಂತಿರುವ ಜೈವಿಕಾಂಶಗಳಲ್ಲಿ ಯಾವ ಅಂಶವಾದರೂ ಊನವಾಗಿದ್ದಲ್ಲಿ ಅಷ್ಟರ ಮಟ್ಟಿಗೆ ಶಿಕ್ಷಣವೂ ಊನವಾಗುತ್ತದೆ ಎಂಬಂಶವನ್ನು ಕೊಂಚ ಮಟ್ಟಿಗೆ ತಿಳಿದುಕೊಳ್ಳುವುದು ಒಳಿತು.

ಮಾನವನ ಬುದ್ಧಿಭಾವಗಳ ಸರ್ವಾಂಗೀಣ ಬೆಳವಣಿಗೆಗೆ ಮತ್ತು ಅವನನ್ನು

ಜ್ಞಾನದ ಮೇರುವನ್ನಾಗಿಸಿ, ಆ ಜ್ಞಾನ ಹಿಮಾಲಯದ ಧವಳಗಿರಿ ಶಿಖರದೆತ್ತರಕ್ಕೆ ಕೊಂಡೊಯ್ದು ಅಲ್ಲಿ ಧ್ಯಾನಾಸಕ್ತನಾಗಿ ಯೋಗಮುದ್ರೆಯಲ್ಲಿ ತೊಡಗಿರುವ ಆ ಜ್ಞಾನಮಹರ್ಷಿಯನ್ನು ಸಂದರ್ಶಿಸುವಂತಾಗಲು ಅತ್ಯುತ್ತಮವಾದ ಜೈವಿಕಾಂಶಗಳೇ ಕಾರಣೀಭೂತವಾದವುಗಳೆನಿಸುತ್ತವೆ. ಆದ್ದರಿಂದಲೇ ಈ ಹೇಳಿಕೆ 'A sound mind in a sound body' ಎಂಬ ಸಿದ್ಧಾಂತ ಬಂದದ್ದು. ಇದರಂತೆ ಅತ್ಯುನ್ನತ ಬೆಳವಣಿಗೆಯನ್ನು ಹೊಂದಿದ ಮಾನವನ ಮೆದುಳು ಇದ್ದು ಅದು ತನ್ಮೂಲಕ ಸೃಜನಾತ್ಮಕ ಕಾರ್ಯದಲ್ಲಿ ತೊಡಗಿ ಸೃಷ್ಟಿಗೆ ಪ್ರತಿಸೃಷ್ಟಿಯನ್ನು ಮಾಡಿ ''ಬುದ್ಧಿ ಬ್ರಹ್ಮ''ನೆನಿಸಿಕೊಳ್ಳುತ್ತದೆ - ಎಂಬ ವಾಸ್ತವತತ್ವ ಅಡಗಿದೆ.

ಮನುಷ್ಯನಿಗೆ ಇರಬೇಕಾದ ಎಲ್ಲ ರೀತಿಯ ಜೈವಿಕಾಂಶಗಳಿದ್ದಲ್ಲಿ ಅವನನ್ನು ಸರ್ವಾಂಗೀಣ ಸುಂದರವಾದ ವ್ಯಕ್ತಿ ಎಂದು ಕರೆಯುತ್ತೇವೆ. ಅದಿಲ್ಲದೆ ಇರುವವರನ್ನು ಅಂಗವಿಕಲರು, ದಡ್ಡರು ಮತ್ತು ರೋಗಿಷ್ಠರು ಎಂದು ಹೆಸರಿಸುತ್ತೇವೆ. ಈ ಮೂರೂ ವರ್ಗಗಳವರಲ್ಲಿ ಜೈವಿಕಾಂಶಗಳ ಕೊರತೆ ಇದ್ದು ಇವು ಶೈಕ್ಷಣಿಕ ಬೆಳವಣಿಗೆಯನ್ನು ಸ್ಥಗಿತಗೊಳಿಸುತ್ತವೆ. ಇವುಗಳನ್ನೀಗ ಒಂದೊಂದಾಗಿ ಚರ್ಚಿಸೋಣ.

೧. ಅಂಗವಿಕಲತೆ :

ಅಂಗವಿಕಲತೆ ವ್ಯಕ್ತಿಯ ಶೈಕ್ಷಣಿಕ ಬೆಳವಣಿಗೆಗೆ ಅಪಾರವಾದ ಹಾನಿಯನ್ನುಂಟು ಮಾಡುವುದಾಗಿದೆ. ಶೈಕ್ಷಣಿಕ ಬೆಳವಣಿಗೆಯಲ್ಲಿ ಮಾನವ ಶರೀರಿಯ ಕೈ, ಕಾಲು, ಕಣ್ಣು ಕಿವಿ, ನಾಲಗೆ, ಚರ್ಮ, ಮೂಗು ಇತ್ಯಾದಿ ಅವಯವಗಳು ಬಹುಮುಖ್ಯ ಪಾತ್ರವನ್ನು ವಹಿಸತಕ್ಕವುಗಳಾಗಿದ್ದೂ ಅವುಗಳಲ್ಲಿ ಯಾವುದೊಂದು ಅಂಗ ಊನವಾದರೂ ಶೈಕ್ಷಣಿಕ ಬೆಳವಣಿಗೆ ಕುಂಠಿತಗೊಳ್ಳುತ್ತದೆ. ಜ್ಞಾನಸಂಪಾದನೆಗೆ 'ದೇಶ ನೋಡಬೇಕು, ಕೋಶ ಓದಬೇಕು' ಎಂಬ ಗಾದೆ ಮಾತಿದೆ. ಅಂಗವಿಕಲತೆಯಲ್ಲಿ ಕುರುಡೂ ಒಂದು. ಕುರುಡನಾದವನು ಹೇಗೆ ದೇಶ ನೋಡಿಯಾನು ? ಕೋಶ ಓದಿಯಾನು ? ಜೈವಿಕಾಂಶದ ಲೋಪದೋಷಗಳಲ್ಲಿ ಕುರುಡುತನವೂ ಒಂದು. ಈ ಒಂದು ನ್ಯೂನತೆ ಶೈಕ್ಷಣಿಕ ಬೆಳವಣಿಗೆಯಲ್ಲಿ ಒಂದು ದೊಡ್ಡ ಅಪಘಾತ. ಅಂತೆಯೇ ಕಿವುಡು. ಮನುಷ್ಯ ಕೇಳಿ ತಿಳಿಯಬೇಕಾದ್ದು ಮಹತ್ತರವಾಗಿದೆ. ಕಿವುಡುತನ ಒಂದು ಜೈವಿಕ ನ್ಯೂನತೆಯಾಗಿದ್ದು ಕೇಳಿ ಪಡೆಯಬಹುದಾದ ಜ್ಞಾನೈಶ್ವರ್ಯ ಅದರಿಂದ ಅಲಭ್ಯ. ಆದ್ದರಿಂದ ಶೈಕ್ಷಣಿಕ ಬೆಳವಣಿಗೆಯ ಹಾದಿಯಲ್ಲಿ ಅದೂ ಒಂದು ಕೊರತೆ. ಹಾಗೆಯೆ ಮೂಗು, ಕೈ, ನಾಲಿಗೆಗಳಿಲ್ಲದವರು ಅನುಕ್ರಮವಾಗಿ ಘ್ರಾಣಿಸಲಾರರು, ಬರೆಯಲಾರರು, ಮಾತನಾಡಲಾರರು. ಇವೆಲ್ಲ ವ್ಯಕ್ತಿಯಲ್ಲಿ ಆಗಬಹುದಾದ ಜೈವಿಕಾಂಶಗಳ ಕೊರತೆಯಾಗಿದ್ದು ಅವು ಅಷ್ಟರ ಮಟ್ಟಿಗೆ ಶೈಕ್ಷಣಿಕ ಬೆಳವಣಿಗೆಯಲ್ಲಿ ಅಡ್ಡಿ ಆತಂಕ ಉಂಟುಮಾಡತಕ್ಕವುಗಳಾಗಿವೆ.

ಹಾಗಾದರೆ ಅಂಗವಿಕಲರಾದವರು ಯಾರೂ ಶಿಕ್ಷಣ ಪಡೆದುಕೊಂಡಿಲ್ಲವೆ ? ಎಂಬ ಪ್ರಶ್ನೆ ಏಳುವುದು ಸಹಜ. ಆದರೆ ಅವರು ಪಡೆದಿರುವ ಶಿಕ್ಷಣ ಸೀಮಿತವಾದದ್ದು. ಕೃತಕ ಸಾಧನೋಪಕರಣಗಳ ಮೂಲಕ ಅಂಗವಿಕಲರು ಶಿಕ್ಷಣ ಪಡೆದಿದ್ದಾರೆ ! ನಿಜ ! ಆದರೆ ಅವರ ಶಿಕ್ಷಣ ಸರ್ವಾಂಗೀಣ ಸುಂದರವಾದದ್ದು ಎಂದು ಹೇಳಲು ಬರುವುದಿಲ್ಲ. ಅಷ್ಟರ ಮಟ್ಟಿಗೆ ವ್ಯಕ್ತಿಯಲ್ಲಿನ ಜೈವಿಕಾಂಶಗಳ ಕೊರತೆ ಶೈಕ್ಷಣಿಕ ಕೊರತೆಗೆ ಕಾರಣವಾಗುತ್ತವೆಂಬುದು ನಿರ್ವಿವಾದ.

೨. ಬಲಿಯದೇ ಇರುವ ಮೆದುಳು ಅಥವಾ ಮನಸ್ಸು :

ವ್ಯಕ್ತಿಯ ಮೆದುಳು ಬಲಿತಿದ್ದಲ್ಲಿ ಅದು ಪಕ್ವತೆಯ ಮಟ್ಟಕ್ಕೇರಿ ಶಿಕ್ಷಣವನ್ನು ಸುಲಭವಾಗಿ ತನ್ನಲ್ಲಿ ಗರ್ಭೀಕರಿಸಿಕೊಳ್ಳುತಕ್ಕದಾಗಿದೆ. ಅಂದರೆ ಮನಸ್ಸಿನ ಪಕ್ವತೆ ಶಿಕ್ಷಣದ ಪಕ್ವತೆಯೂ ಆಗುತ್ತದೆ. ಯಾರಲ್ಲಿ ಬುದ್ಧಿಯ ಚಂಚಲತೆ ಇರುತ್ತದೆ ಅಥವಾ ಚಂಚಲ ಮನಸ್ಸಿರುತ್ತದೆ ಅವರು ಸರಿಯಾದ ಶಿಕ್ಷಣವನ್ನು ಪಡೆಯಲಾರರು. ಅವರ ಚಂಚಲ ಬುದ್ಧಿ ಮತ್ತು ಅಸ್ಥಿರ ಮನಸ್ಕತೆಗೆ ಕಾರಣ ಅವರಿಗೆ ಬಲಿಯದೇ ಇರುವ ಮೆದುಳಿರುವುದೇ ಆಗಿದೆ. ಹೊರನೋಟಕ್ಕೆ ವ್ಯಕ್ತಿ ಸುಂದರನಾಗಿ ಕಂಡರೂ ಬಲಿಯದೇ ಇರುವ ಮಿದುಳಿನ ಜೈವಿಕ ನ್ಯೂನತೆಯಿಂದಾಗಿ ಅವರು ಮಂಕುಬುದ್ಧಿ ಯವರೆನ್ನಿಸುತ್ತಾರೆ. ಅಂಥ ಮಂದಬುದ್ಧಿಯವರನ್ನೇ ನಾವು ದಡ್ಡರು ಎಂದು ಕರೆಯುವುದು. ಇವರು ದಡ್ಡರಾಗಿರುವುದಕ್ಕೆ ಕಾರಣ ಅವರ ಶರೀರದಲ್ಲಿ ಜೈವಿಕಾಂಶ ವಾಗಿ ಕರ್ಮವೆಸಗಬೇಕಾಗಿರುವ ಬಲಿಯದೇ ಇರುವ ಮೆದುಳು ಪಕ್ವಜ್ಞಾನವನ್ನು ಸ್ವೀಕರಿಸಲಾರದು !

ಎಸೆದ ಶಿಕ್ಷಣದ ಬೀಜ, ಮೊಳಕೆಯೊಡೆದು ಸಸ್ಯವಾಗಿ, ಮರವಾಗಿ ಬೆಳೆದು ಲೋಕ ಬಯಸಿದ ಜ್ಞಾನದ ಫಲ ನೀಡಬೇಕಾದರೆ ಅದು ಜೈವಿಕವಾಗಿ ಬಲಿತು ಪಕ್ವತೆಗೆ ಅರ್ಹವಾದ ಮೆದುಳು ಭೂಮಿಕೆಯನ್ನು ಹೊಂದಿರಬೇಕಾದುದು ಅತ್ಯಗತ್ಯ ! ! ಆಗಲೇ ಬುದ್ಧಿ ಜ್ಞಾನೈಶ್ವರ್ಯದ ತವರಾಗುವುದು ! ! ಬಯಸಿದ ರುಚಿಕಟ್ಟಾದ ಕದಳಿ ಫಲ ನೀಡುವ ನಗುವ ನಂದನವಾಗುವುದು ! ! ಅಂತಾಗದೇ ಇರುವುದಕ್ಕೆ ಇರುವ ಜೈವಿಕ ಲೋಪದೋಷವೇ ಕಾರಣ ಎಂಬುದು ನಿರ್ವಿವಾದ.

೩. ರೋಗ ರುಜಿನಗಳು :

ಆರೋಗ್ಯಕರವಾದ ಶರೀರವಿರುವಲ್ಲಿ ಆರೋಗ್ಯಕರವಾದ ಮನಸ್ಸಿರುತ್ತದೆ. ಇವೆರಡೂ ಇರುವಲ್ಲಿ ಶಿಕ್ಷಣದ ಬೆಳೆಯು ಹುಲುಸಾಗಿ ಬೆಳೆಯುತ್ತದೆ.

ವ್ಯಕ್ತಿಗೆ ಗರ ಬಡಿದರೆ ಶಿಕ್ಷಣಕ್ಕೂ ಗರ ಬಡಿದಂತೆ. ರೋಗರುಜಿನಗಳು ಜೈವಿಕಾಂಶಗಳ ಮೂಲಸತ್ವದ ಬೇರನ್ನೇ ತಿಂದು ತೇಗಿ ನುಂಗಿ ನೊಣೆದುಬಿಡುತ್ತವೆ. ಕ್ಷಯ, ಕಾಲರ, ಲಕ್ವ, ಕ್ಯಾನ್ಸರ್ ಮುಂತಾದ ರೋಗರುಜಿನಗಳು ವ್ಯಕ್ತಿಯನ್ನು ಒಮ್ಮೆಗೆ ಪರಂಧಾಮವನ್ನೈದಿಸುತ್ತವೆ. ಇಲ್ಲವೆ ಬದುಕಿಯೂ ಸತ್ತಂತಹ ಜೀವನಕ್ಕೆ ಎಡೆ ಮಾಡುತ್ತವೆ. ಇಂತಹ ಭಯಂಕರ ರೋಗಗಳಿಗೆ ತುತ್ತಾದವರು ಶಿಕ್ಷಣವನ್ನು ಪಡೆಯಲಾರರು ಮತ್ತು ಶಿಕ್ಷಣದ ಬೆಳಸನ್ನು ಬೆಳೆಯಲಾರರು. ಕಾರಣ ಜೈವಿಕಾಂಶಗಳಿಗೆ ಹಿಡಿದ ಬಂದಳಿಕೆ ರೋಗ ಜೀವಸತ್ವವನ್ನೂ ತನ್ಮೂಲಕ ಶೈಕ್ಷಣಿಕ ಸತ್ವವನ್ನು ಹೀರಿ ವ್ಯಕ್ತಿಯನ್ನು ಶಿಕ್ಷಣ ಪಡೆಯಲು ಅಶಕ್ತನನ್ನಾಗಿಸಿಬಿಡುತ್ತದೆ.

ಸಾಮಾನ್ಯವಾದ ಒಂದು ಸಣ್ಣ ತಲೆನೋವು, ಹೊಟ್ಟೆನೋವು ಕಾಣಿಸಿಕೊಂಡರೂ ಅದು ಮಾನವ ಶರೀರಿಯ ಜೈವಿಕಾಂಶಗಳ ಮೇಲೆ ರೋಗರುಜಿನಗಳೆಂಬ ಶತ್ರುಗಳ ದಾಳಿಯಾಗಿರುವುದರ ದ್ಯೋತಕ ಅಂಶವಾಗಿದೆ ! ಆದ್ದರಿಂದ ವ್ಯಕ್ತಿ ತನ್ನ ಜೈವಿಕಾಂಶಗಳ ರಕ್ಷಣೆಯಲ್ಲಿ ಮುಂಜಾಗ್ರತೆ ಕ್ರಮ ಕೈಗೊಂಡು ತನ್ನ ಶರೀರದ ಮೇಲೆ ರೋಗರುಜಿನಗಳೆಂಬ ಶತ್ರುಗಳ ದಾಳಿಯಾಗದಂತೆ ನೋಡಿಕೊಳ್ಳಬೇಕು. ಒಂದು ವೇಳೆ ಆದರೆ ಅದನ್ನು ಸಶಕ್ತವಾಗಿ ಎದುರಿಸಿ ಶತ್ರುಸೈನ್ಯವನ್ನು ಮೂಲೋತ್ಪಾಟನಗೊಳಿಸಬೇಕು. ಆಗಲೇ ವ್ಯಕ್ತಿ ಶಕ್ತಿವಂತನಾಗಿ, ಆರೋಗ್ಯವುಳ್ಳ ಜೈವಿಕ ಜೀವಿಯಾಗಿ ಶಿಕ್ಷಣ ಪರಂಜ್ಯೋತಿಯನ್ನು ತನ್ನಂತರಂಗದಲ್ಲಿ ಬೆಳಗಿಸಬಲ್ಲ ಧೀಶಕ್ತಿಯನ್ನು ಪಡೆಯತಕ್ಕವನಾಗುತ್ತಾನೆ. ಅವಿಲ್ಲದಿದ್ದಲ್ಲಿ ರೋಗರುಜಿನಗಳು ವ್ಯಕ್ತಿಯ ಜೈವಿಕಾಂಶಗಳನ್ನು ನಾಶ ಮಾಡಿ ಅವನನ್ನು ಶಿಕ್ಷಣ ಪಡೆಯಲು ಅನರ್ಹನನ್ನಾಗಿಸುತ್ತವೆ.

ನೆನಪಿನಲ್ಲಿಡಬೇಕಾದ ಅಂಶಗಳು :

೧. ಮಗುವೊಂದು ಜೀವಂತ ಜ್ವಲಂತ ಜೀವಿ

(A child as a living and growing organism)

ಜೀವನದ ಶ್ರೇಣಿಯಲ್ಲಿ ಅತ್ಯುನ್ನತ ರೀತಿಯಲ್ಲಿನ ಮಹೋನ್ನತ ಸ್ಥಾನವನ್ನು ಪಡೆದಿರುವ ಜೀವಿ ಎಂದರೆ ಮಾನವ ಶಿಶು ಎಂಬುದನ್ನು ಜೀವಶಾಸ್ತ್ರಜ್ಞರು ಕಂಡು ಹಿಡಿದಿದ್ದಾರೆ ಅಥವಾ ಗುರುತಿಸಿದ್ದಾರೆ.

ಮನಶ್ಶಾಸ್ತ್ರಜ್ಞರು ಮಾನವ ಜೀವನವನ್ನು ಶೈಶವ, ಕೌಮಾರ್ಯ, ಯೌವ್ವನ ಮತ್ತು ವಯಸ್ಕ ಎಂಬ ಹಂತಗಳಾಗಿ ವಿಂಗಡಿಸಿ ಆಯಾ ಜೀವನದ ಹಂತಗಳಲ್ಲಿನ ಲಕ್ಷಣಗಳನ್ನು ವಿವರಿಸಿದ್ದಾರೆ.

ಶಿಕ್ಷಣವೇತ್ತರು ಜೈವಿಕ ಮತ್ತು ಮನೋವೈಜ್ಞಾನಿಕ ವಿಚಾರಗರ್ಭದಿಂದಾ ವಿರ್ಭವಿಸಿದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಶೈಕ್ಷಣಿಕ ಕಾರ್ಯಕ್ರಮಗಳನ್ನು ರೂಪಿಸಿದ್ದಾರೆ. ಮತ್ತು ವಿವಿಧ ಹಂತಗಳಲ್ಲಿ ವಿದ್ಯಾರ್ಥಿಸಮುದಾಯಕ್ಕೆ ಅನುಗುಣ ವಾಗಿ ಪಠ್ಯಕ್ರಮ, ಬೋಧನಾವಿಧಾನ, ತಂತ್ರಜ್ಞತೆ ಮತ್ತು ಕೌಶಲ್ಯಗಳನ್ನು ಅಳವಡಿಸಲು ಪ್ರಯತ್ನಿಸಿದ್ದಾರೆ ಮತ್ತು ಮುಂದೆ ಎಂದೆಂದಿಗೂ ಪ್ರಯತ್ನಿಸುತ್ತಿರುತ್ತಾರೆ.

ಶಿಕ್ಷಣಕ್ಕೆ ಜೀವಶಾಸ್ತ್ರದ ಅಂಶಗಳು ಹೆಚ್ಚಿನ ಜ್ಞಾನದ ಬೆಳಕನ್ನು ನೀಡಿ ಶೈಕ್ಷಣಿಕ ಸಿದ್ಧಾಂತ ಮತ್ತು ಪ್ರಯೋಗಗಳನ್ನು ಶ್ರೀಮಂತಗೊಳಿಸಿದವುಗಳಾಗಿವೆ.

೨. ಶಿಕ್ಷಣದ ವಿಧಿವಿಧಾನಗಳಿಗೆ ಸಹಾಯಕವಾಗುವ ಜೈವಿಕಾಂಶಗಳು:

(Biological factors that help the process of education)

ಜೀವ ಮತ್ತು ಜೀವಶಾಸ್ತ್ರ ವೈಜ್ಞಾನಿಕ ಪ್ರಪಂಚಕ್ಕೆ ಬಹು ಹತ್ತಿರವಾದದ್ದು. ಮನುಷ್ಯನ ಜೈವಿಕ ರಚನೆಗೂ ಈ ಜೈವಿಕಾಂಶ ಕಾರಣವೆಂಬುದನ್ನು ವಿಜ್ಞಾನ ಪ್ರಪಂಚ ಎರಡನೇ ಮಾತಿಲ್ಲದಂತೆ ಮಾನ್ಯ ಮಾಡಿದೆ. ಜೈವಿಕ ರಚನೆಯ ಪ್ರತಿಯೊಂದು ಅಂಶವೂ ಸಿದ್ಧಾಂತಗಳಿಗೆ ತಮ್ಮ ಪ್ರಭಾವ ಮುದ್ರೆಯನ್ನೊತ್ತಿವೆ ಮತ್ತು ಶೈಕ್ಷಣಿಕ ಸಿದ್ಧಾಂತ ಪ್ರಯೋಗಗಳಲ್ಲಿ ಕೆಲವು ಬದಲಾವಣೆಗಳನ್ನುಂಟು ಮಾಡಿವೆ. ಅವುಗಳೆಂದರೆ ಮನುಷ್ಯನು ಸಮಾಜಜೀವಿ, ಉಳಿದಿರುವ ಸಾಕುಪ್ರಾಣಿಗಳಂತೆಯೇ, ಮನುಷ್ಯನು ಸಮಾಜದಲ್ಲಿಯೇ ಬಾಳಿ ಬದುಕುತ್ತಾನೆ. ಆದರೆ ಉಳಿದ ಪ್ರಾಣಿಗಳಿಗಿಂತ ಇವ ಭಿನ್ನ. ಇದಕ್ಕೆ ಕಾರಣವೇನೆಂದರೆ ಇವನಲ್ಲಿರುವ ಅತ್ಯುನ್ನತ ಹೊಂದಾಣಿಕೆ ಮಾಡಿಕೊಳ್ಳಲು ಇರುವ ಸಾಮರ್ಥ್ಯ. ಜೈವಿಕ ರಚನೆಯಲ್ಲಿ ಉಳಿದ ಪ್ರಾಣಿಗಳಿಗೂ ಇವನಿಗೂ ಹೆಚ್ಚೇನು ವ್ಯತ್ಯಾಸವಿಲ್ಲ. ಅಂದರೆ ಜೈವಿಕಾಂಶಗಳಲ್ಲಿ ಮಾನವ ಶರೀರದ ರಚನೆಗೂ ಉಳಿದ ಪ್ರಾಣಿಗಳ ಶರೀರದ ರಚನೆಗೂ ಬಹುತೇಕ ಅಂಶಗಳಲ್ಲಿ ಹೊಂದಾಣಿಕೆ ಇದ್ದರೂ, ಮಾನವ ಜೀವಿ ತನ್ನ ಬೌದ್ಧಿಕ ಸಾಮರ್ಥ್ಯದಲ್ಲಿ ಅತ್ಯುನ್ನತ ಸ್ಥಾನ ಪಡೆದಿದ್ದು ತನ್ಮೂಲಕ ಅತಿಶೀಘ್ರವಾಗಿ ಮತ್ತು ಸಾಮಾಜಿಕವಾಗಿ ತನಗಿರುವ ಸನ್ನಿವೇಶಕ್ಕೆ ಅಪೇಕ್ಷಿಸುವ ರೀತಿಯಲ್ಲಿ ಹೊಂದಾಣಿಕೆ ಮಾಡಿಕೊಳ್ಳಬಲ್ಲವನಾಗಿದ್ದಾನೆ.

ಪ್ರಾಣಿಗಳೊಂದಿಗೆ ಶಾರೀರಿಕವಾಗಿ ಮತ್ತು ಮಾನಸಿಕವಾಗಿ ಅನೇಕ ಸಮಾನಲಕ್ಷಣಗಳನ್ನು ಮಾನವನು ಹೊಂದಿದ್ದಾನೆ. ಆದ ಕಾರಣ ಪ್ರಾಣಿಗಳ ಮೇಲೆ ನಡೆಸಿದ ಪ್ರಯೋಗಗಳಿಂದಾವಿರ್ಭೂತವಾದ ಫಲಿತಾಂಶಗಳನ್ನು ಮಾನವನಿಗೂ ಅನ್ವಯಿಸಿಕೊಳ್ಳಲಾಗಿದೆ.

೩. ಮಾನವನು ವಿವೇಚನಾಯುಕ್ತ ಪ್ರಾಣಿ :

(Man as rational animal)

ಮಾನವನಿಗೆ ಅತ್ಯಂತ ಅಭಿವೃದ್ಧಿ ಹೊಂದಿದ ಮೆದುಳು ಮತ್ತು ನರಮಂಡಲ ವ್ಯವಸ್ಥೆಯಿದೆ. ಇದು ಅವನಿಗೆ ಅತ್ಯುನ್ನತ ಮಟ್ಟದ ಬುದ್ಧಿವಂತಿಕೆಯನ್ನು ಮತ್ತು ವಿವೇಚನಾಯುಕ್ತ ಸಾಮರ್ಥ್ಯವನ್ನು ಒದಗಿಸಿಕೊಟ್ಟಿದೆ.

ಮಾನವನು ಸ್ವಾಭಾವಿಕವಾಗಿಯೇ ಮೇಲ್ಮಟ್ಟದ ಪ್ರಾಣಿ :

(Man is a naturally superior animal)

ಮಾನವನು ಎಲ್ಲಾ ಪ್ರಾಣಿಗಳಿಗಿಂತ ಮೇಲ್ಮಟ್ಟದ ಪ್ರಾಣಿ ಎನಿಸಿಕೊಂಡುದ್ದಕ್ಕೆ ಅವನ ಶಾರೀರಿಕ ರಚನೆ ವಿಶಿಷ್ಟ ರೀತಿಯಲ್ಲಿ ರಚನೆಗೊಂಡಿರುವುದು. ಆ ರೀತಿಯ ವಿಶಿಷ್ಟ ಲಕ್ಷಣಗಳೆಂದರೆ -

೧. ತನ್ನ ಕಾಲ ಮೇಲೆಯೇ ತನ್ನ ಶರೀರವನ್ನು ನಿಲ್ಲಿಸುವ ಸಾಮರ್ಥ್ಯ. ಈ ಒಂದು ಉನ್ನತವಾದ ಸಾಮರ್ಥ್ಯದಿಂದ ಉಳಿದ ಅಂಗಾಂಗಗಳ ರಚನೆ, ಬೆಳವಣಿಗೆ ಮತ್ತು ಅವುಗಳಿಂದಾಗುವ ಅನುಕೂಲತೆಗಳಿಗೆ ಸಹಾಯಕವಾಗಿದೆ. ಅವುಗಳೆಂದರೆ,

೨. ಇಕ್ಕಣ್ಣ ದೃಷ್ಟಿ (ಎರಡೂ ಕಣ್ಣುಗಳಿಗಿರುವ ದರ್ಶಕ ದೃಷ್ಟಿ)

೩. ಮಾತಿನ ಸಾಮರ್ಥ್ಯ (ಸ್ಫುಟೋಚ್ಚರಿತ ಸಾಧನವಾಗಿರುವ ಧ್ವನ್ಯಂಗಗಳು)

೪. ಅತ್ಯುನ್ನತ ಬೆಳವಣಿಗೆ ಹೊಂದಿದ ಮಾನವನ ಮೆದುಳು

೫. ಕೈಯಿನ ಸ್ವಾತಂತ್ರ್ಯ ಮತ್ತು ಮುಷ್ಟಿಸೂಚಕವಾಗಿರುವ ಹೆಬ್ಬೆರಳು

೬. ಸುದೀರ್ಘ ಕಾಲದ ಶೈಶವಾವಸ್ಥೆ

ಮಾನವನು ಜ್ಞಾನವನ್ನು ಗಳಿಸಲು ಇರುವ ಶೈಕ್ಷಣಿಕ ಸಾಮರ್ಥ್ಯ :

(The knowledge of educability of man)

ಉಳಿದ ಯಾವುದೇ ಪ್ರಾಣಿಗಳಿಗಿಂತ ಮಾನವಪ್ರಾಣಿಗೆ ದೀರ್ಘಕಾಲದ ಶೈಶವಾವಸ್ಥೆ ಇದ್ದು ಇದು ಅವನು ಗಳಿಸುವ ಜ್ಞಾನ ಮತ್ತು ಪಡೆಯುವ ಶಿಕ್ಷಣಕ್ಕೆ ಅತ್ಯಂತ ಸಹಾಯಕವಾದುದಾಗಿದೆ. ಅದು ಅತ್ಯಂತ ಮೃದುತ್ವದ ಕಾಲ ಮತ್ತು ನಿಧಾನವಾಗಿ ಬೆಳೆಯುವ ಕಾಲ. ಈ ಮೃದುತ್ವ ಸ್ವಭಾವವು ನೂತನ ಬದಲಾವಣೆಗೆ ಹೊಂದಿಕೊಳ್ಳಲು ಸಹಾಯ ಮಾಡುತ್ತದೆ ಈ ಶೈಕ್ಷಣಿಕ ಕಾಲ. ಈ ಕಾಲ ಅವನು ಕಲಿಯಬಹುದಾದುದೆಲ್ಲವನ್ನೂ ಕಲಿಯಲು ಮತ್ತು ಕಲಿಸಲು ಅವಕಾಶವಿರುವ ಅತ್ಯಂತ ಶ್ರೇಷ್ಠವಾದ

ಕಾಲ. ಶಾರೀರಿಕ ಮತ್ತು ಮಾನಸಿಕ ಬದಲಾವಣೆಗಳು ಬೆಳವಣಿಗೆಯ ಈ ಕಾಲದಲ್ಲಿ ನಾನಾ ವಿಧವಾಗಿ ಕಾಣಿಸಿಕೊಳ್ಳುವಂತಹುಗಳಾಗಿವೆ. ಈ ಕಾಲದಲ್ಲಿ ಶೀಘ್ರವಾಗಿ ಸಿಟ್ಟಿಗೇಳುವುದು, ನಗುವುದು, ತನ್ನ ಮಾನಸಿಕ ಸ್ಥಿತಿಯನ್ನು ತಾನೇ ಸರಿಪಡಿಸಿಕೊಳ್ಳುವ ಸ್ಥಿತಿಯಲ್ಲಿನ ಬುದ್ಧಿ ಇತ್ಯಾದಿ ನಾನಾ ರೀತಿಯ ಅನುಭವವುಳ್ಳವನಾಗುತ್ತಾನೆ ವ್ಯಕ್ತಿ. ಉದಾ : ಶೀಘ್ರ ರೀತಿಯಲ್ಲಿ ಕೋಪಕ್ಕೊಳಗಾಗುವಿಕೆಯು ತಾನು ಅನುಸರಿಸುತ್ತಿರುವ ಮಾರ್ಗದಲ್ಲಿ ಬದಲಾವಣೆಯನ್ನು ಸೂಚಿಸುತ್ತದೆ ; ನಗುವು ತೃಪ್ತ ಮನೋಭಾವವನ್ನು ಸೂಚಿಸುತ್ತದೆ; ತನ್ನನ್ನು ತಾನು ತಿದ್ದಿಕೊಳ್ಳುವ ಮಾನಸಿಕ ಸ್ಥಿತಿಯು ಸರಿಯಾದ ಪ್ರತಿಕ್ರಿಯೆಯನ್ನು ಅಭಿವ್ಯಕ್ತಗೊಳಿಸುವ ಅತ್ಯುನ್ನತ ಹೊಂದಾಣಿಕೆಯನ್ನು ಮಾಡಿಕೊಳ್ಳಲು ಅವಕಾಶ ಮಾಡಿಕೊಡುವಂತಹುದಾಗಿದೆ. ಈ ಕೆಲವು ರಚನಾತ್ಮಕ ಹೊಂದಾಣಿಕೆಗಳು ಮಾನವನನ್ನು ಉಳಿದ ಪ್ರಾಣಿಗಳಿಗಿಂತ ಉನ್ನತವಾದ ಪ್ರಾಣಿಯನ್ನಾಗಿಸಿರುವಂತಹುದಾಗಿದೆ. ಮಾನವನು ಶಿಕ್ಷಕನಾಗಬಲ್ಲನಾಗಿರುವುದಕ್ಕೆ ಅವನು ತನ್ನ ಪ್ರತಿಕ್ರಿಯೆಗಳನ್ನು ತಿದ್ದಿಕೊಳ್ಳಲು ಇರುವ ಸಾಮರ್ಥ್ಯ.

ಅನುವಂಶೀಯತೆಯು ತತ್ತ್ವ ಮತ್ತು ವಿಕಾಸವಾದ ಸಿದ್ಧಾಂತಗಳ ಜ್ಞಾನವು ಉಪಾಧ್ಯಾಯರಿಗೆ ಸಹಾಯಕವಾಗುತ್ತದೆ. ಏಕೆಂದರೆ ಜೈವಿಕವಾಗಿ ಅನುವಂಶಿಕ ಸಾಧನ ಸಲಕರಣೆಗಳೊಂದಿಗೆ ಶಾಲೆಗೆ ಬರುವ ಪ್ರತಿಯೊಂದು ಮಗುವೂ ಬರುವಂತಹುದಾಗಿದೆ. ಅದು ಅಪೇಕ್ಷಿತ ರೀತಿಯಲ್ಲಿ ಅಭಿವೃದ್ಧಿಗೊಂಡು ಬೆಳವಣಿಗೆಯನ್ನು ಹೊಂದುವಂತಹ ಸಾಮಾಜಿಕ ವಾತಾವರಣವನ್ನು ಒದಗಿಸಿಕೊಡಬೇಕಾದದ್ದು ಅಧ್ಯಾಪಕನ ಕರ್ತವ್ಯವಾಗಿದೆ.

ಆದ್ದರಿಂದ ಅನುವಂಶೀಯತೆ ಮತ್ತು ಸನ್ನಿವೇಶಗಳನ್ನು ಮಕ್ಕಳ ಪಾಲನೆ ಮತ್ತು ಪೋಷಣೆಗಳಲ್ಲಿ ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕಾದದ್ದು ಅತ್ಯವಶ್ಯಕವಾಗಿ ಆಗಲೇಬೇಕಾದ ಅಂಶ.

ಜೀವಶಾಸ್ತ್ರವು ಶಿಕ್ಷಣಕ್ಷೇತ್ರಕ್ಕೆ ಒದಗಿಸಿರುವ ಈ ಮೇಲಿನ ಅಂಶಗಳನ್ನು ಅಧ್ಯಾಪಕರು ಗಮನದಲ್ಲಿಟ್ಟುಕೊಂಡು ಮಕ್ಕಳ ಬೆಳವಣಿಗೆಗೆ ಅವರ ಸರ್ವಾಂಗೀಣ ವ್ಯಕ್ತಿತ್ವದ ಅಭಿವೃದ್ಧಿಗೆ ಶ್ರಮಿಸಬೇಕಾಗಿದೆ.

ಶಿಕ್ಷಣದ ವಿಧಿವಿಧಾನಗಳನ್ನು ಸ್ಥಗಿತಗೊಳಿಸುವ ಜೈವಿಕಾಂಶಗಳು

★ ಅಂಗವಿಕಲತೆ

★ ಬಲಿಯದೆ ಇರುವ ಮನಸ್ಸು ಮತ್ತು ಬುದ್ಧಿ

★ ರೋಗ ರುಜಿನಗಳು - ಇವು ವ್ಯಕ್ತಿಯೊಬ್ಬನು ಶಿಕ್ಷಣವನ್ನು ಸರಿಯಾದ ರೀತಿಯಲ್ಲಿ ಕಲಿಯಲು ಸಾಧ್ಯವಾಗದೆ ಇರುವ ಜೈವಿಕ ಅಂಶಗಳೆನಿಸಿವೆ.

★★★★

ಭಾಗ ೮

ಮಾನಸಿಕ ಆರೋಗ್ಯ : (Mental Health)

ಬುದ್ಧಿ ಅಥವಾ ಮನಸ್ಸು ಶರೀರದ ಬಹುಮುಖ್ಯ ಭಾಗ. ಅದರ ಸಹಾಯವಿಲ್ಲದೆ ನಾವು ಏನನ್ನೂ ಮಾಡಲಾರೆವು. ನಾವು ಮಾಡುವ ಕೆಲಸವೆಲ್ಲವನ್ನು ನಮ್ಮ ಮನಸ್ಸು ಹತೋಟಿಯಲ್ಲಿಡುತ್ತದೆ. ನಮ್ಮೆಲ್ಲ ಚಟುವಟಿಕೆಗಳು ಅಂದರೆ ತಿನ್ನುವುದು, ಕುಡಿಯುವುದು, ಕುಳಿತುಕೊಳ್ಳುವುದು, ಓದುವುದು, ಬರೆಯುವುದು ಇತ್ಯಾದಿ ಎಲ್ಲವನ್ನೂ ಆಳುವ ಶಕ್ತಿಯೇ ಮನಸ್ಸು. ಆರೋಗ್ಯಕರವಾದ ಮನಸ್ಸಿಲ್ಲದೆ ನಾವು ಸುಖಶಾಂತಿಗಳನ್ನು ಪಡೆಯಲಾರೆವು. ಕಷ್ಟದ ಕೆಲಸ ಬಂದಾಗ ಕೆಲವರು ಅತಿ ಶೀಘ್ರವಾಗಿ ವ್ಯಾಕುಲಕ್ಕೊಳಗಾಗುತ್ತಾರೆ ಮತ್ತು ಸಮತೋಲನಶಕ್ತಿಯನ್ನು ಕಳೆದು ಕೊಳ್ಳುತ್ತಾರೆ. ಅವರು ಅಷ್ಟು ಸುಲಭವಾಗಿ ತೊಂದರೆಗೊಳಗಾಗುವುದಕ್ಕೆ ಕಾರಣ ಅವರ ಮನಸ್ಸಿನ ದುರ್ಬಲತೆ ಮತ್ತು ಸಮತೋಲನವಿಲ್ಲದ ವ್ಯಕ್ತಿತ್ವವೇ ಆಗಿರುತ್ತದೆ. ಅಂತಹ ವ್ಯಕ್ತಿಗಳು ತೊಂದರೆ ಅಥವಾ ನಾನಾ ವಿಧವಾದ ಕೋಟಲೆಗಳಿಗೆ ತುತ್ತಾಗುತ್ತಾರೆ. ಆದ್ದರಿಂದ ಅಂತಹ ವ್ಯಕ್ತಿಗಳಿಗೆ ವ್ಯಕ್ತಿತ್ವದ ಸಮತೋಲನ ಶಕ್ತಿಯನ್ನುಂಟು ಮಾಡಲಿಕ್ಕಾಗಿ ಮತ್ತು ಸಮಗ್ರ ವ್ಯಕ್ತಿತ್ವವನ್ನುಂಟು ಮಾಡಲಿಕ್ಕಾಗಿ ಮಾನಸಿಕ ಆರೋಗ್ಯವೆಂಬ ಮನೋವಿಜ್ಞಾನವನ್ನು ಅರಿಯುವುದು ಅಗತ್ಯ. ಇದು ಚಿತ್ತಸ್ವಾಸ್ಥ್ಯವನ್ನು ಕಾಪಾಡಿಕೊಳ್ಳುವ ಬಗೆಯನ್ನು ತಿಳಿಸುವಂತಹುದಾಗಿದೆ.

ಕ್ರೊ ಅಂಡ್ ಕ್ರೋ (crow & crow) ಹೇಳುವಂತೆ ''ಮಾನವ ಸಂಬಂಧದ ಎಲ್ಲ ಕ್ಷೇತ್ರವನ್ನು ಆವರಿಸಿ ಮಾನವನ ಸುಖಸಂಪತ್ತಿನೊಂದಿಗೆ ವ್ಯವಹರಿಸು ವಂತಹುದೇ ಮಾನಸಿಕ ಆರೋಗ್ಯವೆನಿಸಿದೆ.'' ಹ್ಯಾಡ್‌ಫಿಲ್ಡ್‌ನ ಮಾತಿನಲ್ಲಿ ಹೇಳುವುದಾದರೆ 'ಮೆಂಟಲ್‌ಹೈಜೀನ್' ಎನ್ನುವುದು 'ಮೆಂಟಲ್ ಹೆಲ್ತ್'ನ್ನು ಕಾಪಾಡಿ ಕೊಂಡು ಬರಲು ಸಂಬಂಧಿಸಿದ್ದು, ಬೌದ್ಧಿಕ ಅಥವಾ ಮಾನಸಿಕ ಅಸ್ತವ್ಯಸ್ತತೆಯನ್ನು ತಡೆಗಟ್ಟುವಂಥದ್ದೇ ಆಗಿದೆ''. ಹ್ಯಾಡ್‌ಫೀಲ್ಡ್‌ನು ಮಾತನ್ನು ಮುಂದುವರಿಸಿ ಹೇಳುತ್ತ ಮಾನವ ವ್ಯಕ್ತಿತ್ವದ ಎಲ್ಲ ಅಂಗಾಂಗಗಳೂ ಸುಸಂಬದ್ಧವಾಗಿ ಕೆಲಸ ಮಾಡುವಂತೆ ಮಾಡುವುದೇ ಮಾನಸಿಕ ಆರೋಗ್ಯದ ಲಕ್ಷಣ ಎನ್ನುವಂತಹುದು.

ಮಾನಸಿಕ ಆರೋಗ್ಯದ ಗುರಿಗಳು :

೧. ಸಾಧ್ಯವಿದ್ದಷ್ಟು ಮಟ್ಟಿನಲ್ಲಿ ವ್ಯಕ್ತಿತ್ವದ ಬೆಳವಣಿಗೆಗೆ ಅವಕಾಶ ಮಾಡಿಕೊಡುವುದು

೨. ಸಮಗ್ರರೂಪದ ಪರಿಣಾಮಕಾರಿ ಅಂತರ್‌ವೈಯಕ್ತಿಕ ಸಂಬಂಧವನ್ನುಂಟು ಮಾಡುವುದು

೩. ವ್ಯಕ್ತಿಯನ್ನು ಅಶಾಂತಿ, ಅತೃಪ್ತಿ, ಜಿಗುಪ್ಸೆ, ತಾತ್ಕಾಲಿಕ ಸೋಲು ಮುಂತಾದವುಗಳಿಂದ ಮೇಲೇರುವಂತೆ ಮಾಡಲು ನೆರವಾಗುವುದು.

ಜೀವನದ ನಾನಾ ವಿಧವಾದ ಸನ್ನಿವೇಶಗಳಲ್ಲಿ ಉಂಟಾಗಬಹುದಾದ ಜಿಗುಪ್ಸೆ ಮತ್ತು ಆಯಾಸಗಳಿಂದ ಮೇಲೆತ್ತಿ, ಸರಿಯಾದ ಹೊಂದಾಣಿಕೆ ಉಳ್ಳ ವ್ಯಕ್ತಿತ್ವವನ್ನುಂಟು ಮಾಡಲು ಇರುವ ಮಾರ್ಗವಿಧಾನಗಳ ಸೂಚಿಯೇ ಮೆಂಟಲ್ ಹೆಲ್ತ್ ಎನ್ನುವುದಾಗಿದೆ.

ಮಾನಸಿಕ ಆರೋಗ್ಯದ ವಿಧಾನಗಳು :

೧. ತಡೆಹಿಡಿಯುವುದು ೨. ವಾಸಿ ಮಾಡುವುದು

ಈ ಎಲ್ಲಾ ವಿಧಾನಗಳೂ ವ್ಯಕ್ತಿತ್ವ ಮತ್ತು ಮನಸ್ಸಿನಲ್ಲಿ ಉಂಟಾಗುವ ಅಸಮತೋಲನಕ್ಕೆ ಕಾರಣಗಳನ್ನು ಕಂಡುಹಿಡಿಯಲು ಸಹಾಯಕವಾಗುತ್ತದೆ. ಖಾಯಿಲೆ ಬರುವ ಮುನ್ನವೇ ಎಚ್ಚರಿಕೆಯ ಕ್ರಮಗಳನ್ನು ತೆಗೆದುಕೊಳ್ಳುವಿಕೆಯೇ ತಡೆಹಿಡಿ (prevent) ಎನ್ನುವಂತಹುದಾಗಿದೆ. ಈ ವಿಧಾನದಲ್ಲಿ ಅವಲೋಕನ ಪ್ರಶ್ನಾವಳಿಗಳು, ರೇಟಿಂಗ್ ಸ್ಕೇಲ್, ಸಾಧನೆಯ ಪರೀಕ್ಷೆ ಮತ್ತು ಹಿಸ್ಟ್ರಿಮೆಥೆಡ್ ಇತ್ಯಾದಿಗಳನ್ನು ಬಳಸಲಾಗುತ್ತದೆ.

2. ಚಿಕಿತ್ಸಕ ವಿಧಾನ :

ಈ ವಿಧಾನದಲ್ಲಿ ಮಾನಸಿಕ ಆರೋಗ್ಯದ ಸಂಬಂಧವಿದೆ. ಮನೋವಿಶ್ಲೇಷಣೆ, ಪುನರ್ ಶಿಕ್ಷಣ, ನಿದ್ರೆ, ವಿಶ್ರಾಂತಿ, ಷಾಕ್ ಥೆರಪಿ ಇತ್ಯಾದಿ ರೀತಿಯ ಚಿಕಿತ್ಸಕ ವಿಧಾನಗಳಿಂದ ಹೊಂದಾಣಿಕೆ ಇಲ್ಲದಿರುವ ಮನಸ್ವಾಸ್ಥ್ಯವನ್ನು ಸರಿಪಡಿಸಲಾಗಿದೆ.

ಮೆಂಟಲ್ ಹೆಲ್ತ್ ಮತ್ತು ಕುಟುಂಬ :

ಮನುಷ್ಯ ಸಾಮಾಜಿಕ ಪ್ರಾಣಿ. ಸಮಾಜದಿಂದ ಹೊರಗಿದ್ದಲ್ಲಿ ಅವನ ವ್ಯಕ್ತಿತ್ವ

ಅಭಿವೃದ್ಧಿ ಹೊಂದುವುದಿಲ್ಲ. ತಂದೆತಾಯಿಗಳ ಪಾಲನೆ ಪೋಷಣೆಗಳಿಲ್ಲದೆ, ಅಕ್ಕರೆಯ ಹಾರೈಕೆಗಳಿಲ್ಲದೆ ಬೆಳೆಯುವ ಮಕ್ಕಳು ಸಮತೋಲನ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವ ಅವಕಾಶವನ್ನು ಕಳೆದುಕೊಳ್ಳುತ್ತಾರೆ. ಮಗು ಹುಟ್ಟಿದಾಗ ಬೆತ್ತಲೆಯಾಗಿ ಹುಟ್ಟಿ, ಅಶಕ್ತವೂ ಅಸಹಾಯಕವೂ ಆಗಿರುತ್ತದೆ. ಅಂತಹ ಮಗುವನ್ನು ಪೋಷಕರು ಮತ್ತು ಕುಟುಂಬದ ಇತರೆ ಸದಸ್ಯರು ಆ ಮಗುವಿನ ಅಪೇಕ್ಷೆ ಬೇಡಿಕೆಗಳನ್ನೆಲ್ಲ ಪೂರೈಸಿ ಅದನ್ನು ಬೆಳೆಸುತ್ತಾರೆ.

ಬಾಲ್ಯದಲ್ಲಿ ಮಗು ಸಂಪೂರ್ಣವಾಗಿ ಅದರ ಪೋಷಕರನ್ನು ಅವಲಂಬಿಸಿರುತ್ತದೆ. ಅಭ್ಯಾಸಗಳನ್ನು ರೂಢಿಸಿಕೊಳ್ಳುವಲ್ಲಿ ಮಕ್ಕಳು ತಂದೆತಾಯಿಗಳನ್ನೇ ಅನುಸರಿಸುತ್ತಾರೆ. ಮಗುವಿನಲ್ಲಿ ರೂಢಿಸಿಕೊಂಡ ಅಭ್ಯಾಸಗಳೇ ಭವಿಷ್ಯ ಜೀವನದ ತಳಹದಿಯಾಗುತ್ತದೆ. ಮಗು ಬೆಳೆದಂತೆಲ್ಲ ಅದರ ಸಂಬಂಧ ಕುಟುಂಬದ ಇತರೆ ಸದಸ್ಯರೊಂದಿಗೆ ಹೆಚ್ಚುತ್ತಾ ಹೋಗಿ ಅವರ ಎಲ್ಲಾ ಅಭ್ಯಾಸಗಳನ್ನು ಇವರು ಕಾಪಿ ಮಾಡುತ್ತಾರೆ. ಆದ್ದರಿಂದ ಮಗುವಿನ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಕುಟುಂಬ ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ. ಆದ್ದರಿಂದ ಉತ್ತಮ ಕುಟುಂಬವು ಅಪೇಕ್ಷಿತ ಮಾರ್ಗದಲ್ಲಿ ಮಕ್ಕಳ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಕೊಂಡೊಯ್ಯುವುದು ಅತ್ಯವಶ್ಯಕ.

ಕುಟುಂಬದೊಂದಿಗೆ ಬೆಳೆಯುವ ಮಗು ಕುಟುಂಬದ ಎಲ್ಲ ಸದಸ್ಯರ ಪ್ರೀತಿ ಪಾತ್ರಗಳಿಗೆ ಪಕ್ಕಾಗುವಂತೆ ನೋಡಿಕೊಳ್ಳಬೇಕು. ಮನೋವೈಜ್ಞಾನಿಕ ರೀತಿಯಲ್ಲಿ ತಂದೆತಾಯಿಗಳು ಮಗು ಬೆಳೆದಂತೆ ಮಗುವಿನ ಬೇಕುಬೇಡಗಳೇನು ಎಂಬುದನ್ನು ಗಣನೆಗೆ ತೆಗೆದುಕೊಂಡು ಅವುಗಳನ್ನು ಪೂರೈಸಿ ತದನುಗುಣವಾದ ಶಿಕ್ಷಣವನ್ನು ಮಗುವಿಗಾಗಿ ಅಣಿಗೊಳಿಸಬೇಕು. ಮಗುವಿನ ಅಭಿರುಚಿಗೆ ತಕ್ಕ ಕೆಲಸ ಮಾಡಲು ಪ್ರೋತ್ಸಾಹಿಸಬೇಕು. ಮಕ್ಕಳಲ್ಲಿ ಸ್ವಯಂ ನಿರ್ದೇಶಕ ಬೆಳೆಸುವುದು ಅತ್ಯಾವಶ್ಯಕ. ಈ ರೀತಿಯ ಲಕ್ಷಣಗಳನ್ನು ಬೆಳೆಸುವುದು, ಅಂತಹ ಸದವಕಾಶವನ್ನೊದಗಿಸಿಕೊಡುವುದು ಪೋಷಕರ ಕರ್ತವ್ಯ. ಈ ಒಂದು ಗುಣಲಕ್ಷಣ ಮಗುವಿನಲ್ಲಿ ಬೆಳೆಯದೇ ಹೋದ ಪಕ್ಷದಲ್ಲಿ ಅದರ ಭವಿಷ್ಯದ ಬಾಳು ಕತ್ತಲಾಗುತ್ತದೆ. ಆಗ ಅಂತಹ ಮಕ್ಕಳು ಯಾವಾಗಲೂ ಇನ್ನೊಬ್ಬರನ್ನು ಆಶ್ರಯಿಸಬೇಕಾಗುತ್ತದೆ. ಆದ್ದರಿಂದ ಜೀವನದ ನಾನಾ ಮುಖಗಳಲ್ಲಿ ಅಂತಹ ಸುವರ್ಣಾವಕಾಶವನ್ನೊದಗಿಸಿಕೊಡುವುದು ಅತ್ಯಾವಶ್ಯಕ.

ಮಕ್ಕಳ ಬೆಳವಣಿಗೆಯಲ್ಲಿ ಪೋಷಕರ ಜವಾಬ್ದಾರಿ ಮಹತ್ವವಾದುದು. ಆದ್ದರಿಂದ ಅವರು ತಮ್ಮ ವರ್ತನೆಯಲ್ಲಿ ಬಹಳ ಜಾಗರೂಕತೆಯಿಂದಿರಬೇಕು. ಅವರು ಅವರ ವರ್ತನೆಯನ್ನು ಹತೋಟಿಯಲ್ಲಿಟ್ಟುಕೊಂಡಿರಬೇಕು. ಮಕ್ಕಳನ್ನು ಯಾವಾಗಲೂ ಟೀಕಿಸುವುದು ಸರಿಯಲ್ಲ. ಅವನ ತಪ್ಪುಗಳನ್ನು ಮನೋವೈಜ್ಞಾನಿಕ ಮಾರ್ಗದಲ್ಲಿ ವಿವರಿಸಬೇಕು. ಪೋಷಕರು ಯಾವಾಗಲೂ ಎಚ್ಚರಿಕೆಯಿಂದ ಮಕ್ಕಳ

ಬೌದ್ಧಿಕ ಮತ್ತು ಮಾನಸಿಕ ಆರೋಗ್ಯದ ಕಡೆಗೆ ಗಮನ ಕೊಡಬೇಕು. ಮಗುವಿನಲ್ಲಿ ಬೆಳೆಯಬಹುದಾದ 'ನಾನು ಅಶಕ್ತ' ಎಂಬ ಕಲ್ಪನೆ ಬೆಳೆಯದಂತೆ ತುಂಬು ಎಚ್ಚರಿಕೆ ವಹಿಸಬೇಕು. ಮಕ್ಕಳ ಅಪೇಕ್ಷೆಗಳನ್ನು ಪೂರೈಸುವುದು ಪೋಷಕರ ಪ್ರಮುಖ ಕರ್ತವ್ಯ. ಅವು ಪೂರೈಸದೆ ಇದ್ದಲ್ಲಿ ಅವು ಮಕ್ಕಳ ಮೇಲೆ ಪ್ರತಿಕೂಲ ಪರಿಣಾಮವನ್ನುಂಟು ಮಾಡಿ, ಹೇಡಿತನ ಮತ್ತು ಕದಿಯುವಿಕೆ ಮುಂತಾದ ದುಷ್ಟ ಚಟಗಳಲ್ಲಿ ತೊಡಗುವಂತೆ ಮಾಡುತ್ತದೆ.

ಮಕ್ಕಳು ಸಾಮಾಜಿಕ ಕಾರ್ಯದಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸಬೇಕು. ಈ ರೀತಿ ಮಾಡುವುದರಿಂದ ಯಾವುದೇ ಸನ್ನಿವೇಶವನ್ನು ಜಯಪ್ರದವಾಗಿ ಎದುರಿಸುವ ಶಕ್ತಿ, ಸಾಮರ್ಥ್ಯ ಜವಾಬ್ದಾರಿ ಮತ್ತು ಆತ್ಮನಂಬಿಕೆಗಳನ್ನು ತಂದುಕೊಡುತ್ತದೆ. ಈ ಎಲ್ಲಾ ಚಟುವಟಿಕೆಗಳನ್ನು ತುಂಬು ಎಚ್ಚರಿಕೆಯಿಂದ ಗಮನಿಸಿ ಅವರ ಕೆಲಸಗಳು ಒಳ್ಳೆಯ ವಾಗಿದ್ದಲ್ಲಿ ಪ್ರೋತ್ಸಾಹಕೊಟ್ಟು, ಕೆಟ್ಟವಾಗಿದ್ದಲ್ಲಿ ಅವುಗಳನ್ನು ದೂರ ಮಾಡುವಂತೆ ಮಾಡಬೇಕು. ಇಲ್ಲವಾದಲ್ಲಿ ಒಳ್ಳೆಯ ವ್ಯಕ್ತಿತ್ವವನ್ನು ಬೆಳೆಸುವ ಬದಲಾಗಿ ಅನಾರೋಗ್ಯಕರವಾದ ಕೆಟ್ಟ ವ್ಯಕ್ತಿತ್ವವನ್ನು ಸೃಷ್ಟಿಸಿಕೊಂಡಂತಾಗುತ್ತದೆ. ಸು ಅಭ್ಯಾಸಗಳು ತಾಳ್ಮೆ, ಶ್ರಮ ಮತ್ತು ಆಸಕ್ತಿಗಳಿಂದ ಮಾತ್ರ ಸಾಧಿಸಲು ಸಾಧ್ಯ. ಕೆಟ್ಟ ಅಭ್ಯಾಸಗಳು ಯಾವ ಆಯಾಸವೂ ಇಲ್ಲದ ರೀತಿಯಲ್ಲಿ ಮಕ್ಕಳಲ್ಲಿ ಬೆಳವಣಿಗೆ ಹೊಂದುತ್ತವೆ. ಆದ್ದರಿಂದ ಮಾನಸಿಕ ಬೆಳವಣಿಗೆಗೆ ಬೇಕಾದದ್ದನ್ನು ಬೋಧಿಸಿ ಮಾನಸಿಕ ಬೆಳವಣಿಗೆಯ ಮೇಲೆ ದುಷ್ಪರಿಣಾಮ ಉಂಟಾಗುವುದನ್ನು ದೂರವಿಡಬೇಕು. ಮಕ್ಕಳ ಬೆಳವಣಿಗೆಯ ಬಗ್ಗೆ ತುಂಬು ಜವಾಬ್ದಾರಿ ವಹಿಸುವ ಪೋಷಕರು ಮಕ್ಕಳನ್ನು ಅನೇಕ ಕೆಟ್ಟ ಚಟಗಳಿಂದ ರಕ್ಷಿಸಿ ಆರೋಗ್ಯಕರವಾದ ಶರೀರದಲ್ಲಿ ಆರೋಗ್ಯಕರವಾದ ಮನಸ್ಸಿರುವಂತೆ ಮಾಡುತ್ತಾರೆ. ಹಾಗೆ ಮಾಡುವುದರಿಂದ ಮಾನಸಿಕ ಆರೋಗ್ಯದ ಗುರಿಯನ್ನು ನೇರವಾಗಿ ಸಾಧಿಸಿದಂತಾಗುತ್ತದೆ.

ಮಾನಸಿಕ ಆರೋಗ್ಯ ಮತ್ತು ಶಾಲೆ :

ಮಕ್ಕಳ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಮಹತ್ವ ಪಾತ್ರ ವಹಿಸುವುದು ಶಾಲೆ. ಮೊದಲಿನಿಂದಲೂ ಮಗುವಿನ ಮೇಲೆ ಪ್ರಭಾವ ಬೀರುವುದು ಕುಟುಂಬ. ಮಾನವನ ಪ್ರಗತಿಗೆ ಶಿಕ್ಷಣವು ತಳಹದಿಯಾದುದರಿಂದ ಮಕ್ಕಳನ್ನು ಅವರ ೫-೬ನೇ ವರ್ಷಕ್ಕಿಂತ ಮುಂಚಿನ ವರ್ಷಗಳಲ್ಲಿಯೇ ಶಾಲೆಗೆ ಸೇರಿಸಲಾಗುತ್ತದೆ. ಶಾಲೆಗೆ ಬಂದ ಮಗು ಕುಟುಂಬಕ್ಕಿಂತ ಭಿನ್ನವಾದ ಸನ್ನಿವೇಶವನ್ನು ಮನಗಾಣುತ್ತದೆ. ಶಾಲೆಯಲ್ಲಿ ಮಗು ದಿನದಲ್ಲಿ ೬-೭ ಗಂಟೆಗಳ ಕಾಲ ಕಳೆಯುತ್ತದೆ. ಕ್ರಮೇಣವಾಗಿ ಮಗು ಶಾಲೆಯ ಹೊಸ ವಾತಾವರಣಕ್ಕೆ ಹೊಂದಿಕೊಳ್ಳುತ್ತದೆ ಮತ್ತು ಇಲ್ಲಿ ವ್ಯಕ್ತಿತ್ವಕ್ಕೆ ಇರಬೇಕಾದ ಎಲ್ಲ

ಲಕ್ಷಣಗಳೂ ಅಥವಾ ಗುಣಗಳು ಅಂದರೆ ಸದ್ಗುಣ, ಅಭ್ಯಾಸ, ಒಳ್ಳೆಯ ಅಭಿರುಚಿ, ಶಿಸ್ತು ಇತ್ಯಾದಿಗಳ ಬೆಳವಣಿಗೆಗೆ ಸಹಾಯಕವಾಗುತ್ತದೆ ಶಾಲೆ.

ಮಗು ಶಾಲೆಗೆ ಸೇರಿದ ತಕ್ಷಣ ಅನೇಕ ಹೊಸ ಸಮಸ್ಯೆಗಳನ್ನು ಎದುರಿಸ ಬೇಕಾಗುತ್ತದೆ. ಅಂತೆಯೆ ಶಾಲೆಯ ಉಪಾಧ್ಯಾಯನಿಗೆ ಮಕ್ಕಳು ಎದುರಿಸಬೇಕಾದ ಹೊಸ ಸಮಸ್ಯೆಗಳನ್ನು ಪರಿಹರಿಸುವ ಗುರುತರ ಜವಾಬ್ದಾರಿಯೂ ಇದೆ. ಆದ್ದರಿಂದ ಶಾಲೆಯ ಬೋಧನೆಯು ಕುತೂಹಲಕಾರಿಯೂ ಮತ್ತು ಸ್ನೇಹಮಯವಾಗಿಯೂ ಕೂಡಿರಬೇಕು. ಅಂದರೆ ಶಾಲೆಯ ಉಪಾಧ್ಯಾಯರು ಕೊಡುವ ಬೋಧನೆಯು ಮನೆಯಲ್ಲಿ ಪೋಷಕರು ಕೊಡುವಂತಹ ರೀತಿಯಲ್ಲಿರಬೇಕು. ಶಾಲೆಯ ವಾತಾವರಣವು ಮಕ್ಕಳ ಮನೋಮಯಕೋಶದ ಮೇಲೆ ಯಾವುದೇ ರೀತಿಯ ಆಘಾತವನ್ನುಂಟು ಮಾಡಬಾರದು. ಬದಲಾಗಿ ಪ್ರೀತಿವಾತ್ಸಲ್ಯಗಳಿಂದ, ಮಮತೆ ಅಕ್ಕರೆಗಳಿಂದ ಕೂಡಿರುವಂತಹುದಾಗಿರಬೇಕು. ಈ ಹಂತದಲ್ಲಿ ಕೊಡುವ ಬೋಧನೆಯು ಅತ್ಯಂತ ಸೂಕ್ಷ್ಮವಾಗಿದ್ದು ಅದು ಪ್ರೀತಿಯ ನೆಲೆಗಟ್ಟಿನ ಮೇಲೆ ನಿಲ್ಲುವಂತಹುದಾಗಿರಬೇಕು.

ಶಾಲೆಗೆ ಬಂದ ಮಕ್ಕಳು ಹೊಸದಾಗಿ ಶಾಲೆಗೆ ಬಂದ ತರುವಾಯದಲ್ಲಿ ಅಧ್ಯಾಪಕರೊಂದಿಗೆ ಮತ್ತು ಇತರ ವಿದ್ಯಾರ್ಥಿಗಳೊಂದಿಗೆ ಹೊಂದಿಕೊಳ್ಳಬೇಕಾಗುತ್ತದೆ. ಇಲ್ಲಿಯೂ ಸಹ ಉಪಾಧ್ಯಾಯರ ಸಹಕಾರ ಅತ್ಯಗತ್ಯ. ಉಪಾಧ್ಯಾಯನು ಹೊಸದಾಗಿ ಶಾಲೆಗೆ ಬಂದ ಮಗುವಿನೊಂದಿಗೆ ಪ್ರೀತಿ ವಾತ್ಸಲ್ಯಗಳಿಂದ ವರ್ತಿಸಿ ಆ ಮಕ್ಕಳಲ್ಲಿ ಪ್ರೀತಿವಾತ್ಸಲ್ಯ ಬೆಳೆಸಬೇಕು. ಆತ್ಮನಂಬಿಕೆ ಬರುವಂತಾಗಬೇಕು. ಹೀಗೆ ಮಾಡುವುದರಿಂದ ಮಗು ತನ್ನ ಭಯವನ್ನು ಕಳೆದುಕೊಂಡು ತಾನು ಕೀಳೆಂಬ ಭಾವನೆಯನ್ನು ಬೆಳೆಸಿಕೊಳ್ಳದೆ ಉಳಿದ ವಿದ್ಯಾರ್ಥಿಗಳೊಂದಿಗೆ ಸಹಕರಿಸಿ ನಡೆದುಕೊಳ್ಳುತ್ತದೆ.

ಶಾಲೆಯ ನಿಯಮಗಳು ಮನೆಯಲ್ಲಿ ಮಗು ಅದುವರೆಗೆ ಅನುಸರಿಸಿದ ರೀತಿನೀತಿಗಳಿಗೆ ನಿಯಮಗಳಿಗೆ ಭಿನ್ನವಾಗಿದ್ದು, ಶಾಲೆಯ ನಿಯಮಗಳಿಗನುಸಾರವಾಗಿ ಅವು ನಡೆದುಕೊಳ್ಳದೇ ಹೋದ ಪಕ್ಷದಲ್ಲಿ ಶಾಲೆಯನ್ನು ಬಿಟ್ಟು ಹೋಗುತ್ತದೆ. ಆಗ ಮಗು ಕದಿಯುವುದು, ಸುಳ್ಳು ಹೇಳುವುದು ಮತ್ತು ಶಾಲೆಯನ್ನು ದ್ವೇಷಿಸುವುದು ಇತ್ಯಾದಿಗಳನ್ನು ಪ್ರಾರಂಭಿಸುತ್ತದೆ. ಆದ್ದರಿಂದ ಉಪಾಧ್ಯಾಯರು ಯಾವುದೇ ಅಡೆತಡೆಗಳನ್ನು ಬಲಾತ್ಕಾರವಾಗಿ ಹೇರಬಾರದು. ಒಂದು ವೇಳೆ ಹೇರಲೇಬೇಕಾಗಿ ಬಂದಾಗ ಅವುಗಳನ್ನು ಅವರ ಒಂದು ಹಿತಾಸಕ್ತಿಯ ದೃಷ್ಟಿಯಿಂದಲೇ ಆ ನಿರ್ಬಂಧಗಳನ್ನು ಹೇರಿದೆವೆಂಬ ಭಾವನೆ ಮಕ್ಕಳಲ್ಲಿ ಉಂಟಾಗುವಂತೆ ಮಾಡಬೇಕು.

ಶಾಲೆಯಲ್ಲಿ ಸಮಾಜದ ವಿವಿಧ ವರ್ಗದ ವಿದ್ಯಾರ್ಥಿಗಳು ಇರುತ್ತಾರೆ. ಮಕ್ಕಳಲ್ಲಿ ಬೌದ್ಧಿಕ, ಭೌತಿಕ, ಭಾವನಾತ್ಮಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ವ್ಯತ್ಯಾಸಗಳಿರುತ್ತವೆ. ಯಾವುದೇ ಎರಡು ಮಕ್ಕಳಲ್ಲಿ ಸಮಾನವಾದ ಲಕ್ಷಣಗಳಿರುವುದಿಲ್ಲ. ಈ ಭಿನ್ನತೆಗಳೇ ಮಕ್ಕಳಲ್ಲಿ ಬೆಳೆಯುವ ತಾನು ಮೇಲು, ತಾನು ಕೀಳು ಎಂಬ ಭಾವನೆಗಳಿಗೆ ಕಾರಣವಾಗಿರುವುದು ಕಂಡುಬಂದಿದೆ. ಆದ್ದರಿಂದ ಉಪಾಧ್ಯಾಯರು ಮಕ್ಕಳ ಆತ್ಮಗೌರವವನ್ನು ಕಾಪಾಡಿಕೊಳ್ಳಲು ಸಹಾಯ ಮಾಡಬೇಕು. ಉಪಾಧ್ಯಾಯರು ಈ ಕೆಲಸ ಮಾಡದೇ ಹೋದ ಪಕ್ಷದಲ್ಲಿ ಮಕ್ಕಳಲ್ಲಿ ಕೃತಕವಾದ ಆತ್ಮಗೌರವ ಮತ್ತು ತಾನು ಕೀಳೆಂಬ ಭಾವನೆಗಳು ಉಂಟಾಗುತ್ತವೆ. ತತ್ಫಲವಾಗಿ ಮಕ್ಕಳಲ್ಲಿ ಬೆಳೆಯಬೇಕಾದ ಮಾನಸಿಕ ಆರೋಗ್ಯ ಹಿಂದೆ ಬೀಳುತ್ತದೆ. ಆದ್ದರಿಂದ ಉಪಾಧ್ಯಾಯರು ಮಕ್ಕಳಲ್ಲಿರುವ ವೈಯಕ್ತಿಕ ಭಿನ್ನತೆಗಳನ್ನು ಗಣನೆಗೆ ತೆಗೆದುಕೊಂಡು ಪ್ರತಿಯೊಂದು ಮಕ್ಕಳನ್ನು ಅವರವರ ಇಚ್ಛೆಗನುಗುಣವಾಗಿ ಬೆಳೆಯಲು ಅವಕಾಶ ಮಾಡಿಕೊಡಬೇಕು.

ಈ ರೀತಿ ಮಾಡುವುದರಿಂದ ಮಕ್ಕಳ ಮಾನಸಿಕ ಆರೋಗ್ಯದ ಬೆಳವಣಿಗೆಗೆ ಉಪಾಧ್ಯಾಯರು ಸಹಾಯ ಮಾಡಿದಂತಾಗುತ್ತದೆ.

ಕೊನೆಯದಾಗಿ ಮಕ್ಕಳ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಉಪಾಧ್ಯಾಯನ ಪಾತ್ರ ಮಹತ್ತರವಾದುದಾಗಿದೆ. ಆದ್ದರಿಂದ ಉಪಾಧ್ಯಾಯರು ಮಕ್ಕಳ ಸ್ವಭಾವ ವರ್ತನೆಗಳನ್ನು ಕರುಣೆ ಮತ್ತು ಪ್ರೀತಿಗಳಿಂದ ನೋಡಬೇಕು. ಮಕ್ಕಳ ತಪ್ಪುಗಳನ್ನು ಮನೋವೈಜ್ಞಾನಿಕವಾಗಿ ವಿಶ್ಲೇಷಿಸಿ ಪರಿಹಾರ ಕಂಡುಹಿಡಿಯಬೇಕು.

ಶಾಲೆ ಪಠ್ಯವಸ್ತುವು ಮಕ್ಕಳ ಅಭಿರುಚಿ, ಆಸಕ್ತಿ ಮತ್ತು ಸಾಮರ್ಥ್ಯಕ್ಕೆ ಅನುಗುಣವಾಗಿ ಆಯಾ ಹಂತಕ್ಕೆ ತಕ್ಕಂತೆ ಅಳವಡಿಸಲ್ಪಟ್ಟಿರಬೇಕು. ಇದರ ಜತೆಗೆ ಮಕ್ಕಳ ಆರೋಗ್ಯದ ಕಡೆ ಗಮನ ಕೊಟ್ಟು ಅವರು ಆರೋಗ್ಯವಂತರಾಗಿರಲು ವ್ಯವಸ್ಥೆ ಏರ್ಪಡಿಸಿ ಮತ್ತು ಉಳಿದ ಆರೋಗ್ಯವಂತಿಕೆಯ ಲಕ್ಷಣಗಳನ್ನು ಬೆಳೆಸಿಕೊಳ್ಳಲು ಸಹಾಯಮಾಡಬೇಕು.

೧೩ ಮತ್ತು ೨೧ ವರ್ಷದ ನಡುವಿನ ಕಾಲವನ್ನು ಸಾಮಾನ್ಯವಾಗಿ ಯೌವನಾವಸ್ಥೆಯ ಕಾಲವೆನ್ನುತ್ತಾರೆ. ಈ ಯೌವನಾವಸ್ಥೆಯು ಕೆಲವರ ವಿಷಯದಲ್ಲಿ ಯಾವಾಗ ಕೊನೆಗೊಳ್ಳುತ್ತದೆ ಎಂದು ಹೇಳುವುದು ಕಷ್ಟ. ಒಟ್ಟಿನಲ್ಲಿ ೧೩ ರಿಂದ ೨೧ರ ಒಳಗೆ ಇರುವಂಥದ್ದಾಗಿದೆ. ಈ ಕಾಲವು ಉದ್ವಿಗ್ನತೆಯ ಕಾಲ. ಯೌವನೋದಯದ ಕಾಲವು ಪ್ರಕೃತಿಯ ವಸಂತ ಕಾಲದಂತೆ ಅನೇಕ ನೂತನ ಆವಿಷ್ಕಾರಗಳಿಗೆ ಅದು ನೆಲೆಮನೆ. ಮಕ್ಕಳ ಶಾರೀರಿಕ, ಬೌದ್ಧಿಕ, ಭಾವನಾತ್ಮಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಅಭಿಪ್ರಾಯಗಳಲ್ಲಿ ಕ್ರಾಂತಿಕಾರಕ ಬದಲಾವಣೆಯಾಗುವ ಕಾಲ. ಆದ್ದರಿಂದ ಈ ಕಾಲ ಒಬ್ಬನ ಜೀವನದಲ್ಲಿ ಬಹಳ ಪ್ರಮುಖವಾದದ್ದು.

ಮಕ್ಕಳ ಭವಿಷ್ಯವನ್ನು ರೂಪಿಸುವ ಕಾಲ ಇದು. ಹೊಸ ಅಭಿಪ್ರಾಯಗಳು, ಪ್ರವೃತ್ತಿಗಳು ಉಗಮವಾಗುವ ಕಾಲ. ಈ ಕಾಲದಲ್ಲಿ ವ್ಯಕ್ತಿತ್ವದ ಸಮಗ್ರ ಬೆಳವಣಿಗೆ ಯಾಗುವಂತಹದ್ದಾಗಿದೆ. ಈ ಕಾಲದಲ್ಲಿ ಮಕ್ಕಳ ಬೆಳವಣಿಗೆಯು ಸ್ಥಗಿತಗೊಂಡಲ್ಲಿ ಮುಂದೆ ಅದು ಬೆಳವಣಿಗೆಯಾಗುವಂತಹದು ಬಹಳ ಅತ್ಯಂತ ಕಡಿಮೆ ಪ್ರಮಾಣ ದ್ದಾಗಿರುತ್ತದೆ. ಈ ವಯಸ್ಸಿನ ವಿದ್ಯಾರ್ಥಿಗಳ ಬಗ್ಗೆ ಪೋಷಕರು ಉಪಾಧ್ಯಾಯರು ಬಹಳ ಎಚ್ಚರಿಕೆಯಿಂದಿದ್ದು ಬಹಳ ಕರುಣಾವಂತರಾಗಿರಬೇಕು. ಈ ಕಾಲದಲ್ಲಿ ಎಲ್ಲಾ ಬಂಧನಗಳನ್ನು ಕಡಿದೊಗೆಯಬೇಕೆಂದು ಅಪೇಕ್ಷೆ ಇರುತ್ತದೆ. ಆದ್ದರಿಂದ ಪೋಷಕರು ಈ ಯೌವನದ ಕಾಲದಲ್ಲಿ ಅವರ ಜೀವನದ ಮಾರ್ಗಗಳನ್ನು ಕಂಡುಕೊಳ್ಳಲು ಅವರಿಗೆ ಆದಷ್ಟು ಸ್ವಾತಂತ್ರ್ಯ ಕೊಡಬೇಕು.

ಕೆಲವು ಪೋಷಕರು ಮಕ್ಕಳನ್ನು ಬಿಗಿಮುಷ್ಠಿಯ ಹಿಡಿತದಲ್ಲಿಡಲು ಅಪೇಕ್ಷಿಸುತ್ತಾರೆ. ಹಾಗೆ ಮಾಡಿದಾಗ ಮಕ್ಕಳು ಸ್ವಾತಂತ್ರ್ಯವನ್ನು ಕಳೆದುಕೊಂಡು ಆರೋಗ್ಯಕರವಲ್ಲದ ವಿಧೇಯತೆಯನ್ನು ಪ್ರದರ್ಶಿಸುತ್ತಾರೆ. ಅವರು ಯಾವಾಗಲೂ ಇನ್ನೊಬ್ಬರ ಆಶ್ರಯವನ್ನೇ ಬಯಸುತ್ತಾರೆ. ಅಂತಹ ಮಕ್ಕಳು ಸಮಾಜದ ಮುಂದಾಳು ಗಳಾಗಿ ಸಮಾಜದ ಅತ್ಯುನ್ನತ ಗೌರವ ಮರ್ಯಾದೆಗಳನ್ನು ಅನುಭವಿಸಲಾರರು. ಅವರು ಯಾವಾಗಲೂ ಹಿಂಬಾಲಕರಾಗಿ ಉಳಿಯುತ್ತಾರೆ. ಇದಕ್ಕೆ ವಿರುದ್ಧವಾಗಿ ಸ್ವತಂತ್ರವಾಗಿ ಬೆಳೆದ ಮಕ್ಕಳು ಸೃಜನಾತ್ಮಕ ಶಕ್ತಿಯನ್ನು ಬೆಳೆಸಿಕೊಂಡು ಹೊಸಹೊಸ ಅಭಿಪ್ರಾಯಗಳನ್ನು ರೂಪಿಸಿಕೊಂಡು ಸಮಾಜದ ಸಾಮಾಜಿಕ ಕಾರ್ಯಗಳನ್ನು ಮಾಡಲು ಮುನ್ನುಗ್ಗಿ ಬರುತ್ತಾರೆ. ಸಮಾಜದ ಹೊಗಳಿಕೆಗೆ ಪಾತ್ರರಾಗಲು ಅಪೇಕ್ಷಿಸು ತ್ತಾರೆ. ಆಗ ಸಮಾಜ ಅವರ ಅಪೇಕ್ಷೆಗೆ ತಕ್ಕ ಪುರಸ್ಕಾರ ಮತ್ತು ಪ್ರೀತಿ ವಿಶ್ವಾಸ ತೋರಿಸಿದಲ್ಲಿ ಅವರು ಸಮಾಜದ ಶ್ರೇಷ್ಠ ವ್ಯಕ್ತಿಗಳಾಗುತ್ತಾರೆ.

ಯೌವನಾವಸ್ಥೆಯ ಇನ್ನೊಂದು ಪ್ರಮುಖ ಸಮಸ್ಯೆಯೆಂದರೆ ಲೈಂಗಿಕಾಸಕ್ತಿ. ಲೈಂಗಿಕ ವಿಚಾರಗಳನ್ನು ಮಕ್ಕಳು ತಮ್ಮ ಪೋಷಕರಿಗೆ ತಿಳಿಸಲು ಹಿಂಜರಿಯುತ್ತಾರೆ. ಆದ್ದರಿಂದ ಪೋಷಕರಾದವರು ಈ ವಿಚಾರದಲ್ಲಿ ಅಗತ್ಯವಿದ್ದ ಕಡೆಗಳಲ್ಲೆಲ್ಲ ಅವಶ್ಯಕವಾಗಿ ಬೆಳಕು ಚೆಲ್ಲಬೇಕು.

ಈ ಕಾಲದ ಇನ್ನೊಂದು ಸಮಸ್ಯೆ ಎಂದರೆ ವ್ಯಕ್ತಿಯನ್ನು ಆಯ್ಕೆ ಮಾಡಿಕೊಳ್ಳು ವುದು. ಯುವಕರಿಗೆ ಯಾವ ವ್ಯಕ್ತಿಯ ಗುಂಪಿಗೆ ಸೇರಬೇಕೆಂಬ ಅಪೇಕ್ಷೆ ಇರುತ್ತದೋ ಆ ವ್ಯಕ್ತಿಗೆ ಸೇರುವ ಸ್ವಾತಂತ್ರ್ಯ ಕೊಡಬೇಕು. ತಾವೇ ಆಗಿ ಇಚ್ಛೆಪಟ್ಟು ಪಡೆದದ್ದು ಜಯಪ್ರದವೆನಿಸುತ್ತದೆ. ಅದಿಲ್ಲದೆ ಬಲೋದ್ಬಂಧನದಿಂದ ಪಡೆದದ್ದು ನೋವು ಮತ್ತು ಅಪಜಯವನ್ನು ತರುತ್ತದೆ. ಆದ್ದರಿಂದ ಬಲವುಳ್ಳ ನಾಯಕನನ್ನು ಆಯ್ಕೆ ಮಾಡುವ ಸ್ವಾತಂತ್ರ್ಯವನ್ನು ಯುವಕರಿಗೆ ಕೊಡಬೇಕು. ಅದನ್ನು ಪ್ರೋತ್ಸಾಹಿಸಬೇಕು.

ಹಾಗೆ ಮಾಡದೇ ಹೋದಲ್ಲಿ ಅವರು ಕೆಟ್ಟಚಟಗಳನ್ನು ಬೆಳಸಿಕೊಳ್ಳುತ್ತಾರೆ. ತತ್ಫಲವಾಗಿ ಜೀವನದ ಸುಖಸಂತೋಷಗಳೆಲ್ಲವೂ ಅವರ ಪಾಲಿಗೆ ಮಸುಕುಮಸುಕಾಗಿ ತೋರುತ್ತದೆ. ಆದ್ದರಿಂದ ಅದೊಂದು ತೀವ್ರವಾಗಿ ಪರಿಗಣಿಸಬೇಕಾದ ಸಮಸ್ಯೆ. ಉಪಾಧ್ಯಾಯರು ಗಮನಕೊಟ್ಟು ಮಕ್ಕಳಿಗೆ ಸರಿಯಾದ ಮಾರ್ಗದರ್ಶನ ವೀಯಬೇಕು.

ಇಲ್ಲಿ ಇನ್ನೊಂದು ಸಮಸ್ಯೆ ಎಂದರೆ ಧರ್ಮ ಮತ್ತು ಸಾಂಸ್ಕೃತಿಕ ಸಮಸ್ಯೆ. ಈ ಅಂಶದಲ್ಲಿ ಯುವಕರಿಗೆ ಪೋಷಕರ ಮತ್ತು ಬೋಧಕರ ಮಾರ್ಗದರ್ಶನ ಅತ್ಯವಶ್ಯಕ. ಬರಿಯ ಕೇವಲ ಮಾರ್ಗದರ್ಶನಕ್ಕಿಂತ ಉಪಾಧ್ಯಾಯರು ಮತ್ತು ಪೋಷಕರು ತಮ್ಮ ಆದರ್ಶ ನಡವಳಿಕೆಗಳನ್ನು ಅನುಸರಿಸುವಂತೆ ಮಾಡುವುದು ಅತ್ಯವಶ್ಯಕ.

ಈ ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಪೋಷಕ ಬೋಧಕ ವರ್ಗದವರು ಮಕ್ಕಳ ಸರ್ವತೋಮುಖವಾದ ಬೆಳವಣಿಗೆಗೆ ಶ್ರಮಿಸಿದಲ್ಲಿ, ಅವರು ಪರ್ಯಾಯವಾಗಿ ಮಕ್ಕಳ ಮಾನಸಿಕ ಆರೋಗ್ಯದ ಬೆಳವಣಿಗೆಗೆ ಸಹಾಯ ಮಾಡಿದಂತಾಗುತ್ತದೆ. ತನ್ಮೂಲಕ ಮಕ್ಕಳ ಆರೋಗ್ಯಕರವಾದ ವ್ಯಕ್ತಿತ್ವದ ಬೆಳವಣಿಗೆಗೂ ಕಾರಣವಾಗುತ್ತದೆ.

ಮಾನಸಿಕ ಆರೋಗ್ಯವೆಂಬುದು ಜೀವನದ ಯಾವುದೇ ಒಂದು ಕಾಲಕ್ಕೆ ಸೀಮಿತವಾದುದಲ್ಲ. ಅದು ಬಾಲ್ಯ, ಕೌಮಾರ್ಯ, ಯೌವನ, ವಯಸ್ಕ, ವೃದ್ಧಾಪ್ಯ ಈ ಎಲ್ಲ ಹಂತಗಳಲ್ಲೂ ಜೀವನದೊಂದಿಗೆ ಬೆಳೆದು ಬರುವಂಥದ್ದಾಗಿದೆ. ವಯಸ್ಕ ಮತ್ತು ವೃದ್ಧಾಪ್ಯ ಜೀವನದಲ್ಲಿ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ವ್ಯಕ್ತಿ ಸಾಮಾಜಿಕ ಕೆಲಸಗಳಲ್ಲಿ ಭಾಗವಹಿಸುವುದು ಮತ್ತು ಸಮಸ್ಯೆಗಳನ್ನು ವೈಜ್ಞಾನಿಕ ರೀತಿಯ ಅಧ್ಯಯನಕ್ಕೆ ಒಳಪಡಿಸುವುದರಿಂದ ಮನಸ್ವಾಸ್ಥ್ಯವನ್ನು ಕಾಪಾಡಿಕೊಂಡು ಹೋಗಬಹುದಾಗಿದೆ. ಈಗ ಮಾನಸಿಕ ಆರೋಗ್ಯ ಎನ್ನುವುದು ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲೂ ಅತ್ಯಂತ ಪ್ರಮುಖವಾದದ್ದು. ಅದು ಜೀವನದ ಸುಖ, ಶಾಂತಿ, ನೆಮ್ಮದಿಯ ಬಾಳಿಗೆ ಅತ್ಯಂತ ಅವಶ್ಯಕ ಎಂಬುದು ನಿರ್ವಿವಾದ.

Hadfield says, "Mental health may be defined as full and free expression of all natives and acquired potentialities in harmony with one another by being directed towards common ends of personality as a whole". - ಹ್ಯಾಡ್ ಫೀಲ್ಡ್ ಹೇಳುವಂತೆ ''ವ್ಯಕ್ತಿಯ ಸಮಗ್ರ ವ್ಯಕ್ತಿತ್ವಚಾಲನೆಗೆ ನಿರ್ದೇಶನವೀಯುವ ಹುಟ್ಟಿನೊಂದಿಗೆ ಬಂದ ಸಾಮರ್ಥ್ಯಗಳು ಮತ್ತು ಕಲಿವಿನೊಂದಿಗೆ ಬಂದ ಸಾಮರ್ಥ್ಯಗಳು ಪರಸ್ಪರ ಮೇಳೈಸಿ ಸಂಪೂರ್ಣವೂ

ಮತ್ತು ಸ್ವತಂತ್ರವೂ ಆದ ಅಭಿವ್ಯಕ್ತಿಗೆ ಅವಕಾಶ ಕಲ್ಪಿಸುವುದೇ ಮಾನಸಿಕ ಆರೋಗ್ಯದ ಲಕ್ಷಣವೆಂದು ವ್ಯಾಖ್ಯಾನಿಸಬಹುದಾಗಿದೆ.''

White Head says, "two things (i) zest (ii) peace. zest means some sort of enthusiasm, participation for everything"

ಮಾನಸಿಕ ಆರೋಗ್ಯವು ವೈಟ್‌ಹೆಡ್‌ನ ಪ್ರಕಾರ - ''ಎರಡು ಅಂಶಗಳಿಂದ ಕೂಡಿದ್ದು ೧. ಅಭಿರುಚಿ - zest ೨. ಶಾಂತಿ peace. ಅಭಿರುಚಿ ಎಂದರೆ ಒಂದು ವಿಧವಾದ ಉತ್ಸಾಹ ಮತ್ತು ಉತ್ಸುಕತೆ, ಎಲ್ಲದರಲ್ಲಿಯೂ ಪಾಲ್ಗೊಳ್ಳುವಿಕೆ. ಶಾಂತಿ ಎಂದರೆ ಒಂದು ವಿಧವಾದ ಚಿತ್ತಸ್ವಾಸ್ಥ್ಯದ ಸಮಸ್ಥಿತಿ, ಸಮೃದ್ಧ ಮನಸ್ಥಿತಿ.''

****

ಭಾಗ ೯

ಅನುವಂಶೀಯತೆ ಮತ್ತು ಸನ್ನಿವೇಶ (Heredity and Environment):

"Every bud that blossoms ;
Every plant that grows ;
And every newly born child
has got a freshness in it" - Prof. M. Yamunacharya

''ಅರಳುವ ಪ್ರತಿಯೊಂದು ಮೊಗ್ಗು ;
ಬೆಳೆಯುವ ಪ್ರತಿಯೊಂದು ಸಸ್ಯ ;
ಮತ್ತು ಆಗ ತಾನೇ ಜನಿಸಿದ ಪ್ರತಿಯೊಂದು ಶಿಶು,
- ಇವೆಲ್ಲಕ್ಕೂ ಒಂದು ಹೊಸತನವಿರುತ್ತದೆ.''

ಅಂದಮೇಲೆ ಈ ಮೇಲಿನ ಒಂದೊಂದಕ್ಕೂ ಹೊಸತನ ಎಲ್ಲಿಂದ ಬಂತು ಎಂಬ ಪ್ರಶ್ನೆ ಏಳುತ್ತದೆ. ಇದಕ್ಕೆ ಉತ್ತರವೆಂದರೆ ಅನುವಂಶೀಯತೆ ಎಂಬ ಬೀಜವು ಸನ್ನಿವೇಶವೆಂಬ ಭೂಮಿಯಲ್ಲಿ ಮೊಳಕೆಯೊಡೆದಾಗ ಎಲ್ಲಕ್ಕೂ ಹೊಸತನ ಸಂಪ್ರಾಪ್ತವಾಗುತ್ತದೆಂಬ ಮಾತು ನಿರ್ವಿವಾದ.

ಈ ಜಗತ್ತಿನಲ್ಲಿ ಯಾವೊಂದು ಜೀವಿಯೂ ಅನುವಂಶೀಯತೆಯಿಂದ ದೂರ ವಿರಲು ಸಾಧ್ಯವಿಲ್ಲ. ಈ ಮಾತು ಸಸ್ಯಗಳಿಗೂ ಮತ್ತು ಪ್ರಾಣಿಗಳಿಗೂ ಸಹ ಅನ್ವಯ. ಏಕೆಂದರೆ ಮಲ್ಲಿಗೆಯ ಗಿಡದಲ್ಲಿ ಸಂಪಿಗೆಯ ಹೂ ಬಿಡುವುದಿಲ್ಲ. ಹಲಸಿನ ಮರದಲ್ಲಿ ಮಾವಿನಕಾಯಿ ಬಿಡುವುದಿಲ್ಲ. ಅಂತೆಯೇ ಗಿಳಿಯ ಮರಿ ಕೋಗಿಲೆಯ ಮರಿ ಆಗಲಿಕ್ಕೆ ಶಕ್ಯವಿಲ್ಲ. ಆದ್ದರಿಂದ ಆಯಾ ಜಾತಿಯ ಗಿಡದಲ್ಲಿ ಆಯಾ ಜಾತಿಯ ಪುಷ್ಪಗಳೇ ಅರಳಬೇಕು. ಆಯಾ ಜಾತಿಯ ಪ್ರಾಣಿಗಳು ತಮ್ಮಂಥವಕ್ಕೇ ಜನ್ಮವೀಯಬೇಕು. ಮತ್ತು ಅವುಗಳು ಅವುಗಳನ್ನೇ ಅಲ್ಪಸ್ವಲ್ಪ ವ್ಯತ್ಯಾಸಗಳೊಂದಿಗೆ ಹೋಲುತ್ತವೆ. ಆದ್ದರಿಂದ ಈ ಅನುವಂಶೀಯತೆ ಎನ್ನುವುದು ಅನೂಚಾನವಾಗಿ ಕಾಲವಾಹಿನಿಯೊಂದಿಗೆ

ನಿತ್ಯನಿರಂತರವಾಗಿ ಹರಿದುಬರುತ್ತಿರುವ ಒಂದು ದಿವ್ಯ ಸಲಿಲ ವಾಹಿನಿ ಎನ್ನಬಹುದು. ಹೀಗೆ ಹರಿದು ಬಂದ ಅನುವಂಶೀಯತೆಯ ವಾಹಿನಿ ಆದರದರದೇ ಆದ ಸನ್ನಿವೇಶದ ಸುಳಿಯಲ್ಲಿ ಸಿಕ್ಕಿಕೊಳ್ಳುತ್ತದೆ.

ಉತ್ತಮ ಸನ್ನಿವೇಶವೆಂಬ ಭೂಮಿಕೆಯನ್ನು ಪಡೆದ ಸಸ್ಯಗಳು, ಗಿಡಮರ ಬಳ್ಳಿಗಳು ಮತ್ತು ಪ್ರಾಣಿಗಳು ಉತ್ತಮಿಕೆಯನ್ನು ಪಡೆಯುತ್ತವೆ. ಅದಿಲ್ಲದವು ಹಾಗೆಯೇ ಕ್ಷೀಣಿಸುತ್ತವೆ. ಆದ್ದರಿಂದ ಜೀವಿಯೊಂದು ಅದು ಸಸ್ಯವಾಗಲಿ ಪ್ರಾಣಿಯಾಗಲೀ ಪ್ರಬುದ್ಧಮಾನಕ್ಕೆ ಬರಬೇಕಾದರೆ ಅವುಗಳಿಗೆ ಅನುವಂಶೀಯತೆ ಮತ್ತು ಸನ್ನಿವೇಶ ಗಳೆರಡರ ಬಲವೂ ಅತ್ಯಗತ್ಯ. ಅವು ಒಂದನುಳಿದೊಂದಿರುವಂತಿಲ್ಲ. ಅವರೆಡೂ ಪರಸ್ಪರ ಪೂರಕ ಮತ್ತು ಪೋಷಕಗಳೆಂಬುದು ನಿರ್ವಿವಾದ.

ಅನುವಂಶೀಯತೆ : (Heredity)

''ಪರಂಪರೆಯೆ ಬೀಜ ;ಪರಿಸ್ಥಿತಿಯೇ ಭೂಮಿ''

- ಹೆಚ್. ಜೆ. ರಾಮಯ್ಯಂಗಾರ್

ಅನುವಂಶೀಯತೆ ಮತ್ತು ಪರಿಸ್ಥಿತಿಗಳನ್ನು ಕುರಿತು ಮೇಲಿನ ಹೇಳಿಕೆ ವಾಸ್ತವಾಂಶ ದಿಂದ ಕೂಡಿದುದಾಗಿದೆ. ಈಗ ಅನುವಂಶೀಯತೆಯನ್ನು ಕುರಿತು ಸ್ವಲ್ಪಮಟ್ಟಿಗೆ ಚರ್ಚಿಸೋಣ. ಇದನ್ನು ಚರ್ಚಿಸುವಾಗ ಅನುವಂಶೀಯತೆ ಎಂದರೇನು ಎಂಬ ಪ್ರಶ್ನೆ ತಾನಾಗಿಯೇ ಏಳುತ್ತದೆ. ಇದಕ್ಕೆ ಉತ್ತರವೆಂದರೆ ''ನೂತನ ಜನ್ಮದ ಪ್ರಯಾಣಕ್ಕಾಗಿ ತನ್ನೊಡನೆ ಮಗುವು ತರುವ ತಂದೆತಾಯಿಗಳ ಶಾರೀರಿಕ ಮತ್ತು ಮಾನಸಿಕ ಸಾಮ್ಯತೆಯ ಪರಂಪರೆ'' ಎನಿಸಿಕೊಳ್ಳುತ್ತದೆ. ಅನುವಂಶೀಯತೆ ಎಂಬ ಪದಕ್ಕೆ ಇನ್ನೊಂದು ಪರ್ಯಾಯಶಬ್ದವೆಂದರೆ ಪರಂಪರೆ ಎಂಬುದು. ಆದ ಕಾರಣವೇ ''ವಂಶಪಾರಂಪರ್ಯವಾಗಿ'' ಎಂಬ ಮಾತು ಬಹಳ ಹಳೆಯ ಮತ್ತು ಶ್ರೀಸಾಮಾನ್ಯ ನಿಗೂ ಸಹ ಈ ಮಾತಿನ ಅರ್ಥ ಗೊತ್ತಿರುವಂತಹುದಾಗಿದೆ. ತಂದೆಯಿಂದ ಮಗನಿಗೆ, ಮಗನಿಂದ ಮೊಮ್ಮಗನಿಗೆ, ಮೊಮ್ಮಗನಿಂದ ಮರಿಮಗನಿಗೆ ಹೀಗೆ ಹರಿದು ಬರುವ ಭೌತಿಕ, ಬೌದ್ಧಿಕ, ಮತ್ತು ಭಾವನಾತ್ಮಕ ಜೀವವಾಹಕ ಕಣಗಳ ಗುಣಲಕ್ಷಣಗಳನ್ನೇ ಅನುವಂಶೀಯತೆ ಎಂದಿರುವುದು.

ಇಲ್ಲಿ ಒಂದು ಪ್ರಶ್ನೆ "How do instincts originate ?" ಇದನ್ನು ನಾವು ಕೇಳಿದಾಗ ನಮಗೆ ಮುಖಾಮುಖಿಯಾಗಿ ಎದುರಾಗುವ ಸಮಸ್ಯೆ ಎಂದರೆ ವಿಕಾಸವಾದ ಮತ್ತು ಅನುವಂಶೀಯತೆ. ನಾವು ನೋಡುವ ಹಾಗೆ ಸಹಜ ಪ್ರವೃತ್ತಿಗಳು ಸ್ವಭಾವಸಿದ್ಧವಾಗಿ (Innate) ಅಥವಾ ಹುಟ್ಟಿನಿಂದ (Heredity) ಬಂದವುಗಳು.

ಅಲ್ಲದೆ ಜನಾಂಗ ಬೆಳೆದಂತೆ, ಸಾಧ್ಯವಾದ ಎಲ್ಲಾ ರೀತಿಯ ಬೆಳವಣಿಗೆಯೂ ಆಗಿದೆ. ಅದೆಲ್ಲವೂ ವಿಕಾಸವಾದದ ಪರಿಣಾಮ.

ಅನುವಂಶೀಯತೆಗೂ, ವಿಕಾಸವಾದಕ್ಕೂ ಸಂಬಂಧವಿರುವುದಾದರೂ ಸ್ವಲ್ಪ ಮಟ್ಟಿನ ವ್ಯತ್ಯಾಸವೂ ತೋರಿಬರುವಂತಹುದಾಗಿದೆ.

ಅನುವಂಶೀಯತೆಯು ಪರಂಪರೆಯ ವಾಹಕತ್ವವನ್ನು ಸೂಚಿಸಿದರೆ, ವಿಕಾಸವಾದವು ಪರಂಪರೆಯ ವಾಹಕತ್ವದಲ್ಲಿ ಉಂಟಾದ ಮಾರ್ಪಾಡನ್ನು ಸೂಚಿಸುತ್ತದೆ ; ಅನೇಕ ಪ್ರಾಣಿಗಳು ಅವು ಇದ್ದಂತೆಯೂ ಇಲ್ಲ. ಅವು ತಮ್ಮ ಆಂತರಿಕ ಪ್ರೇರಣೆ ಸನ್ನಿವೇಶಗಳಿಗನುಗುಣವಾಗಿ ಮಾರ್ಪಾಟು ಹೊಂದುತ್ತಾ ಬಂದಿರುವುದನ್ನು ವಿಕಾಸವಾದ ಶೃತಪಡಿಸುತ್ತದೆ. ಉದಾ : ನಾಲ್ಕು ಅಡಿ ಎತ್ತರದ ಕುದುರೆಯಂತಹ ಪ್ರಾಣಿ, ಜಿರಾಫೆಯು ಆಹಾರ ಸಿಗದೇ ಹೋದಂತಹ ಸನ್ನಿವೇಶದಲ್ಲಿ ತಾನೂ ಸಹ ಬಾಳಿ ಬದುಕಬೇಕೆಂಬ ಆಂತರಿಕ ಪ್ರೇರಣೆಗೊಳಗಾಗಿ ಎತ್ತರದ ಎಲೆಗಳನ್ನು ಎಟುಕಿಸಿಕೊಂಡು ತಿನ್ನಲೋಸುಗ ಎತ್ತರವಾದ ಕುತ್ತಿಗೆಯನ್ನು ಪಡೆಯಬೇಕಾಯಿತು. ಅಂದರೆ ಅನುವಂಶೀಯ ಗುಣದಲ್ಲಿ ಈ ಪ್ರಾಣಿ ಸನ್ನಿವೇಶಕ್ಕನುಗುಣವಾಗಿ ಸ್ವಲ್ಪ ಮಾರ್ಪಾಟನ್ನು ಮಾಡಿಕೊಂಡಿರುವಂತಹುದಾಗಿದೆ. ಹೀಗೆ ಸನ್ನಿವೇಶದ ಪ್ರಭಾವವು ಅನುವಂಶೀಯತೆಯ ಲಕ್ಷಣಗಳಲ್ಲಿ ಕೆಲವು ರೀತಿಯ ಮಾರ್ಪಾಟಿಗೆ ಕಾರಣವಾಗಿರುವುದು ತೋರಿಬರುವಂತಹುದಾಗಿದೆ. ಈ ಪ್ರಾಣಿ ತನ್ನ ಆಕಾಂಕ್ಷೆಯನ್ನು ಪೂರೈಸಿಕೊಳ್ಳಬೇಕೆಂಬ ಆಂತರಿಕ ಪ್ರೇರಣೆ ಮತ್ತು ಸನ್ನಿವೇಶಗಳ ಒತ್ತಡದಿಂದಾಗಿ ಅದು ತನ್ನ ಸ್ವಾಭಾವಿಕ ಅಭ್ಯಾಸಗಳನ್ನು ಬದಲಾಯಿಸಿಕೊಳ್ಳುತ್ತದೆ ಮತ್ತು ಶಾರೀರಿಕ ರಚನೆಯಲ್ಲೂ ಬದಲಾವಣೆಗಳನ್ನು ಪಡೆಯುತ್ತದೆ ಎಂಬ ಈ ಸಿದ್ಧಾಂತವನ್ನು ಪ್ರತಿಪಾದಿಸಿದವರಲ್ಲಿ ಫ್ರಾನ್ಸಿನ ಲಮಾರ್ಕ್ (೧೭೭೪-೧೮೨೯) ಪ್ರಸಿದ್ಧನಾದವನು. ಈ ರೀತಿ ಸನ್ನಿವೇಶದ ಒತ್ತಡ ಮತ್ತು ಆಂತರಿಕ ಪ್ರೇರಣೆಗಳಿಂದ ಜೀವಿಯಲ್ಲಿ ಉಂಟಾಗುವ ಬೌದ್ಧಿಕ ಮತ್ತು ಭಾವನಾತ್ಮಕ ಮಾರ್ಪಾಡುಗಳು ಅವುಗಳಿಂದ ಹುಟ್ಟುವ ಶಿಶುಗಳಲ್ಲಿಯೂ ಕಾಣಿಸಿಕೊಳ್ಳುತ್ತದೆ ಅಂದರೆ ವರ್ಗಾಯಿಸಲ್ಪಡುತ್ತದೆ. ಅಂದ ಮೇಲೆ ಇದರಿಂದ ಒಂದು ಹೊಸ ಪೀಳಿಗೆಯೇ ಪ್ರಾರಂಭವಾಯ್ತು. ಹಳೆಯದರಿಂದ ನಿಧಾನವಾಗಿ ಬರಬರುತ್ತಾ ಒಂದು ಹೊಸ ಜೀವಾಣು ಉತ್ಪತ್ತಿಯಾದಂತಾಯಿತು.

ವಿಕಾಸವಾದದ ಸಿದ್ಧಾಂತಿ ಯಾರು, ಅಲ್ಲದವರ್ಯಾರು ಎಂಬುದನ್ನು ಕುರಿತು ಬರ್ನಾರ್ಡ್ ಷಾ ಅವರ ಮಾತೊಂದನ್ನು ಇಲ್ಲಿ ಉಲ್ಲೇಖಿಸಬಹುದು :-

''ವಸ್ತುಸ್ಥಿತಿಯ ಪ್ರಾರಂಭದಲ್ಲಿ, ಈಡನ್ ಗಾರ್ಡನ್‌ನೊಳಗಿರುವ ನಾಯಿಗಳು, ಬೆಕ್ಕುಗಳು, ಹಾವುಗಳು, ಪಕ್ಷಿಗಳು, ಜೀರುಂಡೆಗಳು, ವ್ಯಾದ್ವಂಗಿಗಳು ಮತ್ತು

ತಿಮಿಂಗಿಲಗಳು, ಗಂಡಸರು, ಹೆಂಗಸರು ಈ ರೀತಿ ಎಲ್ಲ ಜೀವಿಗಳನ್ನೂ ಪ್ರತ್ಯೇಕವಾಗಿ ರೂಪಿಸಿ ಪಡಿಯಚ್ಚು ಮಾಡಿ ಅವುಗಳು ಹೆಸರು ಕೊಟ್ಟವುಗಳೆಂದೂ, ಮತ್ತು ಅವುಗಳಲ್ಲಿರುವ ಪುನರುತ್ಪತ್ತಿ ಶಕ್ತಿಯೇ ಅವುಗಳು ಉಳಿದಿರಲು ಕಾರಣವೆಂದೂ ನೀನು ನಂಬಿದ್ದೇ ಆದರೆ ನೀನು ವಿಕಾಸವಾದದ ಸಿದ್ಧಾಂತಿಯಲ್ಲ, ಇದಕ್ಕೆ ವಿರುದ್ಧವಾಗಿ ಒಂದು ಪುರಾತನ ಬುಡಕಟ್ಟಿನಿಂದ ಅಥವಾ ಕೆಲವು ಪುರಾತನ ಬುಡಕಟ್ಟುಗಳಿಂದ ಈ ಎಲ್ಲಾ ಬೇರೆಬೇರೆ ಜಾತಿ ಜೀವಿಗಳು ಮಾರ್ಪಾಟು ಹೊಂದಿ ವ್ಯತ್ಯಾಸಗೊಂಡು ಮತ್ತು ಅಂತ್ಯವಾಗಿ ಪರಿಷ್ಕರಣಕ್ಕೊಳಗಾದವುಗಳಾಗಿ ಬಂದುವುಗಳೆಂದು ನೀನು ನಂಬಿದ್ದೇ ಆದರೆ ಆಗ ನೀನು ವಿಕಾಸವಾದದ ಸಿದ್ಧಾಂತಿ''.

ಮೇಲಿನ ವಿಕಾಸವಾದದ ಸಿದ್ಧಾಂತದಲ್ಲಿ ಅನುವಂಶೀಯತೆಯ ಜೀವಾಣುಗಳು ಉಳಿದುಬರುತ್ತವೆ ಎಂಬುದನ್ನು ಗುರುತಿಸಬಹುದು. ''ಒಂದು ಪುರಾತನ ಬುಡಕಟ್ಟಿನಿಂದ ಅಥವಾ ಕೆಲವು ಪುರಾತನ ಬುಡಕಟ್ಟುಗಳಿಂದ ಈ ಎಲ್ಲಾ ಬೇರೆ ಜಾತಿ ಜೀವಿಗಳು ಮಾರ್ಪಾಡು ಹೊಂದಿ, ವ್ಯತ್ಯಾಸಗೊಂಡು ಮತ್ತು ಅತ್ಯಂತವಾಗಿ ಪರಿಷ್ಕರಣಕ್ಕೊಳಗಾದವುಗಳಾಗಿ ಬಂದವುಗಳೆಂದು ನೀನು ನಂಬಿದ್ದೇ ಆದರೆ ಆದರೆ ಆಗ ನೀನು ವಿಕಾಸವಾದದ ಸಿದ್ಧಾಂತಿ'' ಎಂಬ ಅಭಿಪ್ರಾಯದಲ್ಲಿ ಅನುವಂಶೀಯತೆಯ ವಾಹಕತ್ವವನ್ನು ಕಾಣಬಹುದು. ಜೀವಿಯ ಮಾರ್ಪಾಟಿನಂತೆ ಅನುವಂಶೀಯತೆಯಲ್ಲಿಯೇ ಮಾರ್ಪಾಟನ್ನು ಗುರುತಿಸಬಹುದಾಗಿದೆ.

ಅನುವಂಶೀಯತೆಯ ತಾಂತ್ರಿಕ ಸಂಯೋಜನೆ : (Mechanism of Heredity)

ಅನುವಂಶೀಯತೆಯ ತಾಂತ್ರಿಕ ಸಂಯೋಜನೆಯು ಬಹು ತೊಡಕಿನ ಮತ್ತು ಕೌಶಲ್ಯಪೂರ್ಣವೂ ಹಾಗೂ ಕೌತುಕಪೂರ್ಣವೂ ಆದದ್ದು. ಇದು ಹೆಚ್ಚಾಗಿ ಜೀವಶಾಸ್ತ್ರಕ್ಕೆ ಸಂಬಂಧಿಸಿದ್ದು. ಆದ ಕಾರಣ ಮನಶ್ಶಾಸ್ತ್ರಕ್ಕೆ ಜೀವಶಾಸ್ತ್ರದಿಂದ ಲಭ್ಯವಾಗಿರುವ ಕೊಡುಗೈ ಕಾಣಿಕೆಯನ್ನು ಕಡೆಗಣಿಸುವಂತಿಲ್ಲ.

ಅನುವಂಶೀಯ ವಾಹಕವು ಗಂಡು ಹೆಣ್ಣುಗಳ ಶರೀರ, ಬುದ್ಧಿ ಮತ್ತು ಭಾವಗಳ ವಿದ್ಯುದಾಲಿಂಗನ ಕ್ರಿಯೆಯಲ್ಲಿ ಆಗುವ ಒಂದು ವಿದ್ಯುನ್ಮಯ ಕಾರ್ಯ. ದಂಪತಿಯ ಸಂಭೋಗ ಕ್ರಿಯೆಯಲ್ಲಿ ಗಂಡಸಿನ ಶುಕ್ಲಾಣು ಅಥವಾ ಜೀವಾಣು (sperm), ಹೆಂಗಸಿನ ಅಂಡಾಣು (ovum)ವಿನೊಂದಿಗೆ, ಸೇರಿ ಪಿಂಡೋತ್ಪತ್ತಿಯಾಗುವ ಕ್ರಿಯೆಗೆ ಗರ್ಭಧಾರಣೆ ಎನ್ನಲಾಗಿದೆ. ಈ ರೀತಿಯ ಗರ್ಭಧಾರಣ ಕ್ರಿಯೆಯಲ್ಲಿ ತಂದೆತಾಯಿಗಳಲ್ಲಿರುವ ಪುನರುತ್ಪತ್ತಿ ಶಕ್ತಿಯುಳ್ಳ ಜೀವಾಣುಗಳ ಐಕ್ಯತೆಗೆ ''ಯುಗ್ಮಜೀವಕಣ'' (zygote) ಎಂದು ಹೆಸರು. ಈ ''ಯುಗ್ಮಜೀವಕಣ''ವೇ ಅನುವಂಶೀಯತೆಯನ್ನು ನಿರ್ಧರಿಸುವಂತಹುದಾಗಿದೆ.

ಅನುವಂಶೀಯತೆಯ ನಿರ್ಧಾರಗಳಾದ ಈ ಜೀವಾಣುಗಳನ್ನು ಬಲ ಸೂಕ್ಷ್ಮದರ್ಶಕ ಯಂತ್ರದಡಿ ನೋಡಿದಾಗ ಉದ್ದುದ್ದನೆಯ ಎಳೆಎಳೆಯಾಗಿ ನಾನಾ ರೀತಿಯ ಬಿಡಿಬಿಡಿ ಆಕಾರದ ರಚನೆಗಳು ತೋರಿಬರುತ್ತವೆ. ಜೀವಾಣುಗಳಲ್ಲಿರುವ ಈ ರೀತಿಯ ಅಂಗಾಂಶಗಳಿಗೆ (tissues) ವರ್ಣತಂತುಗಳು (chromosomes) ಗಳೆಂದು ಕರೆಯಲಾಗಿದೆ. ಈ ರೀತಿಯ ವರ್ಣತಂತುಗಳು ಪುರುಷನ ಶುಕ್ಲಾಣುವಿನಲ್ಲಿ ೨೩ ಜೊತೆ ಮತ್ತು ಸ್ತ್ರೀಯ ಅಂಡಾಣುವಿನಲ್ಲಿ ೨೩ ಇದ್ದು ಅವೆರಡೂ ಒಟ್ಟುಗೂಡಿದಾಗ ೪೬ ಜೊತೆ ಆಗುತ್ತದೆ. ಆದರೆ ಈ ೪೬ ಜೊತೆ ವರ್ಣತಂತುಗಳು ಸ್ವಾಭಾವಿಕ ವಿಭಜನೆಯ ವಿಧಾನಕ್ಕೆ ಒಳಗಾಗಿ ೨೩ ಜೊತೆ ಉಳಿಯುತ್ತವಂತೆ ! ಇನ್ನುಳಿದ ೨೩ ಜೊತೆ ನಶಿಸುತ್ತವಂತೆ ! ಹೀಗೆ ಅಳಿದುಳಿದ ೨೩ ಜೊತೆ ವರ್ಣತಂತುಗಳಿಂದ ಜೀವಿಯು ಬೆಳೆಯತೊಡಗುತ್ತಾನೆ. ಈ ಪ್ರತಿಯೊಂದು ವರ್ಣತಂತುವೂ ಸಹ ಅತ್ಯಂತ ಸೂಕ್ಷ್ಮ ರಚನೆಗಳಿಂದ ಕೂಡಿರುವುದು (Minute like bodies) ಕಂಡುಬರುತ್ತದೆ. ಅವುಗಳನ್ನೇ ಜೀನ್ಸ್ (Genes) ಅಥವಾ ಅನುವಂಶೀಯ ವಾಹಕಗಳೆಂದು ಕರೆದಿರುವಂತಹುದಾಗಿದೆ. ಮಾನವ ಶರೀರದಲ್ಲಿಯ ವರ್ಣತಂತುಗಳಲ್ಲಿರುವ ಜೀನ್ಸ್‌ಗಳು ಇಂತಿಷ್ಟೆ ಎಂದು ತಿಳಿದು ಬಂದಿಲ್ಲ. ಆದಾಗ್ಯೂ ಅವು ಒಂದೆರಡು ಸಾವಿರದಿಂದ ಐದು ಸಾವಿರದವರೆಗೆ ಇರುತ್ತವೆಂದು ಹೇಳಲಾಗಿದೆ. ಈ ಜೀನ್ಸ್‌ಗಳೇ ಅನುವಂಶೀಯತೆಯ ವಾಹಕಗಳಾಗಿದ್ದು ತಂದೆತಾಯಿಗಳ ಎಲ್ಲ ಲಕ್ಷಣಗಳನ್ನು ನಿರ್ಧರಿಸುವ ಅಂಶಗಳೂ ಸಹ ಅವೇ ಆಗಿವೆ. ಈ ಅನುವಂಶೀಯ ವಾಹಕಗಳಲ್ಲಿ ಒಂದು ವಿಚಿತ್ರ ಶಕ್ತಿ ಇದೆ. ಅದೆಂದರೆ ಸಂಕರಸಂತಾನಗಳಲ್ಲಿ ಮೊದಲನೆಯ ತಲೆಮಾರಿನಲ್ಲಿ ಕಾಣಿಸಿಕೊಳ್ಳುವ, ತಾಯಿಯ ಕಡೆಯಿಂದ ಅಥವ ತಂದೆಯ ಕಡೆಯಿಂದ ಮಾತ್ರ ಆರ್ಜಿತವಾದ ಪ್ರಧಾನ ಗುಣವುಳ್ಳದ್ದಾಗಿರಬಹುದು. ಅಥವಾ ಸಂಕರಸಂತಾನಗಳಲ್ಲಿ ಮೂಲ ತಂದೆತಾಯಿಗಳಲ್ಲೊಬ್ಬರಿಂದ ಬಂದು ಮೊದಲನೆಯ ತಲೆಮಾರಿನಲ್ಲಿ ಕಾಣಿಸಿಕೊಳ್ಳದೆ ಅಡಗಿದ್ದು ಎರಡನೆಯ ಅಥವಾ ಮುಂದಿನ ತಲೆಮಾರುಗಳಲ್ಲಿ ಕಾಣಿಸಿಕೊಳ್ಳುವ ಗುಣಗಳಿರುತ್ತವೆ. ಮೊದಲನೆಯ ತಲೆಮಾರಿನಲ್ಲಿ ಕಾಣಿಸಿಕೊಳ್ಳುವ ಜೀನ್ಸ್‌ಗಳು ಮಕ್ಕಳ ಭೌತಿಕ, ಭೌದ್ಧಿಕ ಮತ್ತು ಭಾವನಾತ್ಮಕ ಲಕ್ಷಣಗಳ ಮೇಲೆ ಹೆಚ್ಚಿನ ಪ್ರಭಾವವುಳ್ಳವುಗಳಾಗಿರುತ್ತವೆ ಮತ್ತು ಅವು ಅನುವಂಶೀಯ ಲಕ್ಷಣಗಳನ್ನು ಹೊತ್ತು ತರುತ್ತವೆ. ಅವು ತಂದೆಯವುಗಳಾಗಿರಬಹುದು ಅಥವಾ ತಾಯಿಯವುಗಳಾಗಿರಬಹುದು.

ಇಲ್ಲಿ ಇನ್ನೊಂದು ಗಮನಿಸಬೇಕಾಗಿರುವ ಅಂಶವೆಂದರೆ ಹುಟ್ಟಿದ ಮಗು ಹಲವು ಸಂದರ್ಭದಲ್ಲಿ ತಮ್ಮ ಅಜ್ಜ ಅಜ್ಜಿಯರನ್ನು ಅಥವಾ ಮತ್ತಾರೋ ದೂರದ ಸಂಬಂಧಿಗಳನ್ನು ಹೋಲಬಹುದು. ಇದಕ್ಕೆ ಅನುವಂಶೀಯ ವಾಹಕ ಜೀವಾಣುಗಳೇ ಕಾರಣ.

ಮಗು, ಮಗುವಿನ ತಂದೆ, ತಂದೆಯ ತಂದೆ, ಅಜ್ಜ, ಅಜ್ಜನ ತಂದೆ, ಮುತ್ತಜ್ಜ - ಹೀಗೆ ತಂದೆಯಿಂದ ಮಗನಿಗೆ ಮಗನಿಂದ ಮೊಮ್ಮಗನಿಗೆ ಜೀನ್ಸ್‌ಗಳು ಪರಂಪರಾನುಗತವಾಗಿ ಹರಿದು ಬರುವ ಜೀನ್ಸ್‌ಗಳನ್ನು ಕ್ರಮವಾಗಿ ಹೀಗೆ ತೋರಿಸಲಾಗಿದೆ. ೧/೨ ತಂದೆತಾಯಿಗಳಿಂದ + ೧/೪ ತಾತಅಜ್ಜಿಯರಿಂದ + ೧/೮ ದೊಡ್ಡಜ್ಜ ದೊಡ್ಡಜ್ಜಿಯರಿಂದ + ೧/೧೬ ಮುತ್ತಜ್ಜ ಮುತ್ತಜ್ಜಿಯರಿಂದ ಇತ್ಯಾದಿಯಾಗಿ ಅನುವಂಶೀಯತೆಯು ವಂಶಪಾರಂಪರ್ಯವಾಗಿ ಹರಿದುಬರುವಂತಹದಾಗಿದ್ದು ಅಸ್ತಿತ್ವದಲ್ಲಿರುವ ಜನಾಂಗದಲ್ಲಿ ಅದು ಕಾಣಿಸಿಕೊಳ್ಳುವಂತಹದಾಗಿರುತ್ತದೆ.

ಅನುವಂಶೀಯ ವಾಹಕಗಳು ತಂದೆತಾಯಿಗಳಿಂದ ಮಗನಿಗೆ, ಮಗನಿಂದ ಮೊಮ್ಮಗನಿಗೆ ವಂಶಪಾರಂಪರ್ಯವಾಗಿ ಹರಿದುಬರುವಂಥದು ಎಂಬ ವಿಷಯ ತಿಳಿದುಕೊಂಡೆವು. ಆದರೆ ಇವು ತಂದೆಯಿಂದ ಮಗನಿಗೆ ಮಗನಿಂದ ಮೊಮ್ಮಗನಿಗೆ ವರ್ಗಾಯಿಸುವ ಆಸ್ತಿಯಂತಲ್ಲ. ಗಳಿಸುವ ಅಂಶಗಳಿಗೂ ವಂಶಾನುಗತವಾಗಿ ಬರುವ ಅಂಶಗಳಿಗೂ ವ್ಯತ್ಯಾಸವಿದ್ದು, ಗಳಿಸಿದ ಗುಣಲಕ್ಷಣಗಳು ಮಕ್ಕಳಲ್ಲಿ ಕಾಣಿಸಲೂ ಬಹುದು, ಕಾಣಿಸದೇ ಹೋದರೂ ಹೋಗಬಹುದು. ಉಪಾಧ್ಯಾಯನ ಮಗ ಶುದ್ಧ ಶುಂಠಿಯೇ ಆಗಬಹುದು. ರೈತನ ಮಗ ಡಾಕ್ಟರ್ ಆಗಬಹುದು ; ಮಂತ್ರಿಯಾಗಬಹುದು ; ಮಂತ್ರಿಯ ಮಗ ಕಂತ್ರಿಯಾಗಬಹುದು ! ಕುತಂತ್ರಿಯೂ ಆಗಬಹುದು ! ಆದ್ದರಿಂದ ಗಳಿಸುವ ವಿದ್ಯೆಗೂ ಅನುವಂಶೀಯತೆಗೂ ಸಂಬಂಧವಿಲ್ಲ, ಸದ್ಗುಣಿಗಳ ಮಕ್ಕಳು ದುರ್ಗುಣಿಗಳಾಗಬಹುದು ; ದುರ್ಗುಣಿಗಳ ಮಕ್ಕಳು ಸದ್ಗುಣಿಗಳಾಗಬಹುದು. ಆದ್ದರಿಂದ ಅನುವಂಶೀಯತೆಗೂ ತನ್ನದೇ ಆದ ಇತಿಮಿತಿಗಳಿವೆ ಎಂಬುದನ್ನು ಇಲ್ಲಿ ನೆನಪಿನಲ್ಲಿಡಬೇಕು.

ಅನುವಂಶೀಯತೆಯು ತನ್ನದೇ ಆದ ಎರಡು ಪ್ರಮೇಯ (propositions) ಅಥವಾ ನಿಯಮ (laws) ಗಳನ್ನು ಹೊಂದಿರುವಂತಹುದಾಗಿದೆ. ಅವುಗಳೆಂದರೆ

೧. ಬಿಂಬ ಪ್ರತಿಬಿಂಬವನ್ನು ಪಡೆಯುವಂತಹುದಾಗಿದೆ

೨. ಬಿಂಬ ಪ್ರತಿಬಿಂಬವನ್ನು ಪಡೆದಾಗ್ಯೂ ಅವುಗಳಲ್ಲಿ ಯಾವಾಗಲೂ ವ್ಯತ್ಯಾಸಗಳಿದ್ದೇ ಇರುತ್ತವೆ.

ಈ ಎರಡು ನಿಯಮಗಳೂ ಥಾಮ್ಸನ್ ಮತ್ತು ಗೆಡ್ಡೆಸ್ (Thomson and Geddes) ರವರ ''ವಿಕಾಸವಾದ'' ಎಂಬ ಗ್ರಂಥದಲ್ಲಿ ಪ್ರಕಟವಾಗಿದೆ.

ಅನುವಂಶೀಯತೆಯ ಶಬ್ದವನ್ನು ಅದರೊಂದಿಗಿನ ಅನೇಕವಿಧವಾದ ಅಂಶಗಳನ್ನು ಕ್ರೋಢೀಕರಿಸಿ ''ಬಿಂಬ ಪ್ರತಿಬಿಂಬವನ್ನು ಪಡೆಯುವಂತಹುದಾಗಿದೆ'' ಎಂದು ಹೇಳಿರುವುದರ ಅರ್ಥವೇನೆಂದರೆ ತಂದೆತಾಯಿಗಳ ಪಡಿಯಚ್ಚು ಮಕ್ಕಳಲ್ಲಿ

ಬಹುತೇಕವಾಗಿ ಕಾಣುವಂತಹುದಾಗಿರುತ್ತದೆ. ತಂದೆತಾಯಿಗಳ ಎತ್ತರ, ಆಕಾರ, ಗಾತ್ರ, ಮೈಕಟ್ಟು, ಚರ್ಮ, ಕೂದಲು, ಕಣ್ಣು ಮೂಗು, ಇತ್ಯಾದಿಗಳೆಲ್ಲವೂ ಆಯಾ ಮಕ್ಕಳು ತಮ್ಮ ತಂದೆತಾಯಿಗಳ ಬಿಂಬವನ್ನೇ ಪ್ರತಿಬಿಂಬಿಸುತ್ತವೆ. ಆದ್ದರಿಂದ ಅನುವಂಶೀಯ ತೆಯು ದೈಹಿಕ ಬೆಳವಣಿಗೆಯಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತದೆ ಎಂಬುದು ನಿರ್ವಿವಾದ. ಆದಾಗ್ಯೂ ಅನುವಂಶೀಯ ದ್ವಿತೀಯ ನಿಯಮವನ್ನು ಕಡೆಗಣಿಸು ವಂತಿಲ್ಲ. ತಂದೆತಾಯಿಗಳ ಪಡಿಯಚ್ಚು ಮಕ್ಕಳಲ್ಲಿ ತೋರಿಬಂದಾಗ್ಯೂ ಅವು ಗಳಲ್ಲಿಯೂ ಅನೇಕ ವ್ಯತ್ಯಾಸಗಳಿರುವುದನ್ನು ಮರೆಯುವಂತಿಲ್ಲ. ಆದ ಕಾರಣವೇ ಒಬ್ಬರೇ ತಂದೆತಾಯಿಗಳಲ್ಲಿ ಹುಟ್ಟಿದ ಮಕ್ಕಳಲ್ಲೂ ಭಿನ್ನತೆಗಳು ತೋರಿಬರುತ್ತವೆ. ಜಗತ್ತಿನಲ್ಲಿ ಯಾರೊಬ್ಬರೂ ಒಂದೇ ತೆರನಾಗಿರಲು ಶಕ್ಯವಿಲ್ಲ. ದೈಹಿಕ ರಚನೆ ಯಲ್ಲಿಯೂ ವ್ಯತ್ಯಾಸಗಳಿರುತ್ತವೆ. ಬೌದ್ಧಿಕ ಹಾಗೂ ಭಾವನಾತ್ಮಕ ವಿಷಯಗಳಲ್ಲಂತೂ ವಿಪರೀತ ವೈಪರೀತ್ಯಗಳಿರುವುದು ಅನೇಕ ದೃಷ್ಟಾಂತಗಳಿಂದ ಗುರುತಿಸಬಹುದಾಗಿದೆ. ಹುಟ್ಟುವ ಶಿಶುವಿನ ಭವಿಷ್ಯ ನಿರ್ಧಾರವಾಗುವುದು ಒಂದೇ ಸಲವೆಂಬ ಅಭಿಪ್ರಾಯವಿದೆ. ''ಯಾವ ಕ್ಷಣದಲ್ಲಿ ಒಂದು ಅಂಡಾಣುವಿನಂತೆ ಒಂದು ಶುಕ್ಲಾಣುವು ಬೆರೆಯುತ್ತದೋ, ಆ ಕ್ಷಣದಲ್ಲೇ ಭವಿಷ್ಯಕ್ತಿ ವ್ಯಕ್ತಿಯ ಜನ್ಮವಾಗಿ ಬಿಟ್ಟಿರುತ್ತದಲ್ಲದೆ, ಮುಂದೆ ಅವನಲ್ಲಿ ಕಂಡುಬರುವ ದೈಹಿಕ, ಮಾನಸಿಕ, ಗುಣಲಕ್ಷಣಗಳೆಲ್ಲವೂ ಆ ಕ್ಷಣದಲ್ಲೇ ಆ ಒಂದು ಶುಕ್ಲಾಣು ಅಂಡಾಣುಗಳಿಂದಲೇ ನಿರ್ಧರಿಸಲ್ಪಟ್ಟಿರುತ್ತದೆ''[೧] ಅಂದ ಮೇಲೆ ಯುಗ್ಮಜೀವಕಣ (zygote) ದಿಂದ ಉತ್ಪತ್ತಿಯಾದ ಶಿಶು ತನ್ನ ತಂದೆ ತಾಯಿಗಳ ಸ್ಥಿತಿ ಸ್ವರೂಪವನ್ನು, ಗುಣಲಕ್ಷಣಗಳನ್ನು ಮತ್ತು ಸಾಮರ್ಥ್ಯಗಳನ್ನು ಹುಟ್ಟಿ ನೊಂದಿಗೇ ಪಡೆದುಕೊಂಡು ಬರುವಂತಹುದಾಗಿದೆ. ಅದನ್ನೇ ಅನುವಂಶೀಯತೆ ಎಂದು ಕರೆದಿರುವುದು. ಹುಟ್ಟಿದ ಶಿಶು ತಂದೆತಾಯಿಗಳ ಎಲ್ಲ ಗುಣಲಕ್ಷಣಗಳನ್ನು ಹೊತ್ತು ತರದಿದ್ದರೂ ಕೆಲವು ಶಾರೀರಿಕ ಲಕ್ಷಣಗಳನ್ನು ಬೌದ್ಧಿಕ ಹಾಗೂ ಮಾನಸಿಕ ಲಕ್ಷಣಗಳನ್ನು ಪಡೆದುಕೊಂಡು ಬರುತ್ತದೆ. ಅನುವಂಶೀಯ ಬೀಜ ಚೆನ್ನಾಗಿ ಮೊಳಕೆಯೊಡೆಯುವದು ಸನ್ನಿವೇಶದ ಭ್ರಮಿಕೆಯಲ್ಲಿ ಮಾತ್ರ. ಆಹಾರ, ಗಾಳಿ, ನೀರು, ವಾಸಸ್ಥಳ ಇತ್ಯಾದಿ ಸನ್ನಿವೇಶಗಳು ಅನುವಂಶೀಯತೆಯು ಪ್ರಕಾಶಕ್ಕೆ ಬರಲು ಸರ್ವವಿಧದಲ್ಲೂ ಸಹಾಯ ನೀಡತಕ್ಕವುಗಳಾಗಿವೆ. ಅವುಗಳ ಸಹಾಯವಿಲ್ಲದೆ ಅನುವಂಶೀಯವಾಗಿ ಬಂದುದು ಪ್ರಕಾಶಕ್ಕೆ ಬರಲಾರದು.

ಅನುವಂಶೀಯತೆ ಮತ್ತು ಸನ್ನಿವೇಶಗಳು ಪರಸ್ಪರ ಪೂರಕ ಮತ್ತು ಪೋಷಕ ಗಳೆಂದೆವು. ಅಂದ ಮೇಲೆ ಅವುಗಳು ಒಂದನ್ನುಳಿದು ಒಂದು ಇರುವಂತೆಯೇ ಇಲ್ಲ.

೧. ಬಿ.ಜಿ. ಮರಿಯಪ್ಪ, ಆರ್. ರಾಮಸ್ವಾಮಿ ಅಯ್ಯಂಗಾರ್ - ಮನಶ್ಶಾಸ್ತ್ರ, ವಿದ್ಯಾರಣ್ಯ ಪ್ರಕಾಶನ, ಮೈಸೂರು - ಪು. ೩೦೨

ಆದ್ದರಿಂದ ಈಗ ಸನ್ನಿವೇಶದ ವಿಚಾರವನ್ನು ಕುರಿತು ಚರ್ಚಿಸೋಣ.


ಸನ್ನಿವೇಶ : (Environment)

''ಸನ್ನಿವೇಶದಿಂದ ಮಹಾತ್ಮನು ದುರಾತ್ಮನಾಗಬಲ್ಲ
ದುರಾತ್ಮನು ಮಹಾತ್ಮನಾಗಬಲ್ಲ'' - ಕುವೆಂಪು.

ಸನ್ನಿವೇಶದ ಪ್ರಚಂಡ ಪ್ರಭಾವ ಮುದ್ರೆಗಳಿಗೊಳಗಾದ ಜೀವಿಗಳು ಯಾವ ಎತ್ತರಕ್ಕೆ ಬೇಕಾದರೂ ಏರಬಹುದು ; ಯಾವ ಪ್ರಪಾತಕ್ಕೆ ಬೇಕಾದರೂ ಬೀಳಬಹುದು - ಎಂಬುದೇ ಮೇಲಿನ ಕವಿವಾಣಿಯ ದಿವ್ಯಸಂದೇಶ.

ಸನ್ನಿವೇಶವೆಂಬುದು ಕಾಲವಾಹಿನಿಯೊಂದಿಗೆ ನಿತ್ಯ ನಿರಂತರವಾಗಿ ಎಡೆಬಿಡದೆ ಹೊಂದಿಕೊಂಡು ಬರುವಂತಹುದಾಗಿದೆ. ಅದು ಇಲ್ಲದ ತಾಣವಿಲ್ಲ, ಅದರ ಪ್ರಭಾವ ಮುದ್ರೆಯಿಂದ ತಪ್ಪಿಸಿಕೊಂಡ ಜೀವರಾಶಿಗಳೂ ಸಹ ಯಾವುವೂ ಇದ್ದಂತಿಲ್ಲ! ಸನ್ನಿವೇಶವೆಂಬುದು ಒಂದು ರೀತಿಯದ್ದಲ್ಲ, ಒಂದು ತೆರನಾದ್ದಲ್ಲ, ಅದು ನಾನಾ ರೀತಿಯಲ್ಲಿ ಕಾಣಿಸಿಕೊಳ್ಳುವಂತಹುದು. ಪ್ರಕೃತಿ ಸಮಾಜ ಮತ್ತು ಕುಟುಂಬಗಳು ನಿರ್ಮಿಸಿದ ಸನ್ನಿವೇಶದ ವರ್ತುಲದಲ್ಲಿ ಪ್ರತಿಯೊಂದು ಜೀವಿಯೂ ತನ್ನ ಜೀವನ ಯಾತ್ರೆಯನ್ನು ಕೈಗೊಳ್ಳುತ್ತದೆ. ಯಾತ್ರೆ ಮುಗಿಯುವವರೆಗೂ ಆ ವರ್ತುಲದಿಂದ ಜೀವಿ ತಪ್ಪಿಸಿಕೊಳ್ಳುವಂತೆಯೇ ಇಲ್ಲ! ಈ ಮಾತು ತಾತ್ವಿಕವಾಗಿಯೂ ಸತ್ಯ, ಮನೋವೈಜ್ಞಾನಿಕ ವಾಗಿಯೂ ಸತ್ಯ !

ಸನ್ನಿವೇಶದ ವರ್ತುಲವನ್ನು ಕೆಳಕಂಡಂತೆ ತೋರಿಸಲಾಗಿದೆ.



ಮೇಲೆ ತೋರಿಸಿದ ಸನ್ನಿವೇಶದ ಚಿತ್ರದಲ್ಲಿ ಸನ್ನಿವೇಶದ ವರ್ತುಲವನ್ನು ನೋಡಿದರೆ ಜೀವಿಯು ಆ ಚಕ್ರವ್ಯೂಹವನ್ನು ಬೇಧಿಸಿಕೊಂಡು ಹೊರಬರುವಂತೆಯೇ

ಇಲ್ಲ. ಉತ್ತಮ ಸನ್ನಿವೇಶದಲ್ಲಿ ಸಿಕ್ಕಿದ್ದು ಚೆನ್ನಾಗಿ ಬದುಕಿ ಬಾಳಿ ಪ್ರಬುದ್ಧಮಾನಕ್ಕೆ ಬರುತ್ತದೆ. ಅಧಮ ಸನ್ನಿವೇಶಕ್ಕೆ ಸಿಕ್ಕಿದ್ದು ಕಿಮುಳ್ಚಿ ಗುಜ್ಜಾಗಿ ಸಾಯುತ್ತದೆ ಎಂಬುದು ಕೆಲವು ಮನಶ್ಶಾಸ್ತ್ರಜ್ಞರ ವಾದ. ಈ ವಾದವನ್ನು ವಿರೋಧಿಸುವವರೂ ಇಲ್ಲದಿಲ್ಲ. ಅದು ಏನೇ ಇರಲಿ, ಸನ್ನಿವೇಶ ಜೀವಿಯ ಮೇಲೆ ತನ್ನದೇ ಆದ ಅಗಣಿತ ಪ್ರಭಾವವನ್ನು ಹೊಂದಿದೆ ಎಂಬುದು ನಿರ್ವಿವಾದ.

'A criminal is made not born' ಎಂಬುದು ಆಂಗ್ಲಭಾಷೆಯ ಒಂದು ವಾಕ್ಯೋಕ್ತಿ. ಅಂದರೆ ಅಪರಾಧಿಯು ಅಪರಾಧಿಯಾಗಿ ಮಾಡಲ್ಪಟ್ಟವನೇ ವಿನಃ ಹುಟ್ಟಿನಿಂದಾದವನಲ್ಲ ಎಂಬುದು ಮೇಲಿನ ಆಂಗ್ಲ ವಾಕ್ಯೋಕ್ತಿಯ ಅರ್ಥ. ''ಸನ್ನಿವೇಶ ದಿಂದ ಮಹಾತ್ಮನು ದುರಾತ್ಮನಾಗಬಲ್ಲ, ದುರಾತ್ಮನು ಮಹಾತ್ಮನಾಗಬಲ್ಲ'' ಎಂಬ ಕುವೆಂಪುರವರ ಹೇಳಿಕೆಗೂ ಮೇಲಿನ ಆಂಗ್ಲಭಾಷಾ ವಾಕ್ಯಾರ್ಥಕ್ಕೂ ಸಾಮ್ಯವಿರುವು ದನ್ನು ಇಲ್ಲಿ ಗಮನಿಸಬೇಕು.

ಹುಟ್ಟಿನಲ್ಲಿ ಬೆಳವಣಿಗೆಯಲ್ಲಿ ಸದ್ಗುಣಿಯಾಗಿದ್ದು ಒಳ್ಳೆಯವನೆನಿಸಿಕೊಂಡು ಬಾಳಿದ ವ್ಯಕ್ತಿ, ಕರಾಳ ಸನ್ನಿವೇಶದ ಸುಳಿಗೆ ಸಿಕ್ಕಿ, ದುಷ್ಟನೂ ದುರ್ಗುಣಿಯೂ ಆಗಿರುವುದಕ್ಕೆ ಅನೇಕ ನಿದರ್ಶನಗಳನ್ನು ಕೊಡಬಹುದು. ಅಂತೆಯೆ ಕೆಟ್ಟವಂಶ ದಲ್ಲಿಯೇ ಹುಟ್ಟಿ ದುಷ್ಟನಾಗಿಯೇ ಬೆಳೆದ ವ್ಯಕ್ತಿ ಸುಂದರ ಸನ್ನಿವೇಶದ ಪ್ರಭಾವದ ಸುಳಿಗೆ ಸಿಕ್ಕಿ ಶ್ರೇಷ್ಠನಾದ ವ್ಯಕ್ತಿ ಆಗಿರುವುದಕ್ಕೂ ಅನೇಕ ನಿದರ್ಶನಗಳನ್ನು ಕೊಡಬಹುದು.

ಮೊದಲು ಹುಟ್ಟಿನಲ್ಲಿ, ಬಾಳಿನಲ್ಲಿ, ಸದ್ಗುಣಿಯಾಗಿದ್ದು ಕರಾಳ ಸನ್ನಿವೇಶದ ಸುಳಿಗೆ ಸಿಕ್ಕಿ ದುಷ್ಟನೂ ದುರ್ಗುಣಿಯೂ ಆಗಿರುವುದಕ್ಕೆ ಒಂದೆರಡು ನಿದರ್ಶನಗಳನ್ನು ಕೊಡೋಣ.

ರಾಮಾಯಣದ ಕೈಕೆ ಸತ್ಕುಲ ಪ್ರಸೂತೆ. ರಾಜಮನೆತನದಲ್ಲಿ ಹುಟ್ಟಿ ರಾಜೋಚಿತ ಸನ್ನಿವೇಶದಲ್ಲಿ ಬೆಳೆದು ಪ್ರಾಪ್ತ ವಯಸ್ಕಳಾದಾಗ ದಶರಥ ಮಹಾರಾಜನ ಕೈಹಿಡಿದು ಭರತನೆಂಬ ಸುಪುತ್ರನಿಗೆ ಜನ್ಮವಿತ್ತ ತಾಯಿ. ತನ್ನ ಮಗ ಭರತನಂತೆಯೇ, ಅದಕ್ಕಿಂತಲೂ ಒಂದು ಗುಲಗಂಜಿ ತೂಕದಷ್ಟು ಹೆಚ್ಚಾಗಿಯೇ ಶ್ರೀರಾಮಚಂದ್ರನಲ್ಲಿ ಪ್ರೀತಿ, ವಾತ್ಸಲ್ಯ, ಮಮತೆಗಳನ್ನಿಟ್ಟುಕೊಂಡಿದ್ದವಳು. ಒಂದು ದಿನ ಸುಪ್ರಭಾತದ ಸಮಯದಲ್ಲಿ ಶ್ರೀರಾಮಪಟ್ಟಾಭಿಷೇಕದ ವಾರ್ತೆಯನ್ನು ಮಂಥರೆ ಹೊತ್ತು ತಂದಾಗ ಆ ಸಿಹಿವಾರ್ತೆಯನ್ನು ಕೇಳಿದ ತಕ್ಷಣವೇ ಕೈಕೆಯ ಪ್ರತಿಕ್ರಿಯೆ ಎಂತಹುದು ? ಲೋಕದ ಜನ ಮೆಚ್ಚುವಂಥದ್ದು. ಆ ಸುವಾರ್ತೆಯನ್ನು ತಂದ ಮಂಥರೆಗೆ ಅತ್ಯಂತ ಬೆಲೆಬಾಳುವ ಮುತ್ತಿನಹಾರವನ್ನು ತೆಗೆದುಕೊಟ್ಟಿದ್ದು ನಿಜಕ್ಕೂ ಮನೋಜ್ಞವಾದ ದೃಶ್ಯ. ಆದರೆ ಆದದ್ದೇನು, ಮಂಥರೆಯಿಂದ ಮುತ್ತಿನ ಹಾರದ ನಿರಾಕರಣೆ ! ಮಂಥರೆ ಸೃಷ್ಟಿಸಿದ

ಕರಾಳ ಸನ್ನಿವೇಶದ ಉಸುಬಿನಲ್ಲಿ ಸಿಕ್ಕಿದ ಕೈಕೆಯ ವಿಚಾರವಂತಿಕೆ (reasoning) ಹೂತು ಹೋಯಿತು. ಸತ್ಕುಲ ಪ್ರಸೂತಳೂ, ಸನ್ನಡತೆಯ ಸಾಧ್ವೀಶಿರೋಮಣಿಯೂ, ವಾತ್ಸಲ್ಯಮಯಿಯೂ ಆದ ಕೈಕೆ ಮಂಥರೆಯ ಸೃಷ್ಟಿ ಸನ್ನಿವೇಶಕ್ಕೆ ಸಿಕ್ಕಿ ಸರ್ಪಿಣಿಯಾಗುತ್ತಾಳೆ. ಆದ್ದರಿಂದ ಕೈಕೆಗಾದ ಲಾಭವೇನು ?... ವೈಧವ್ಯತೆ, ಕಣ್ಣೀರು, ಕೋಪ ಮತ್ತು ದುಃಖ. ಸೀತಾರಾಮಲಕ್ಷ್ಮಣರ ವನವಾಸ, ಇದೆಲ್ಲಕ್ಕೂ ಕಾರಣೀಭೂತವಾದದ್ದೇನು? ಮಂಥರೆಯ ಸೃಷ್ಟಿ - ಸನ್ನಿವೇಶ. ಸನ್ನಿವೇಶದಿಂದ ಸಾಧ್ವಿಶಿರೋಮಣಿಯಾದ ಕೈಕೆ ಕಣ್ಣೀರಿನಲ್ಲಿ ಕೈ ತೊಳೆಯುವಂತಾದುದಲ್ಲದೆ ಲೋಕದ ಕಣ್ಣಿನಲ್ಲಿ ಅವಳು ದುರಾತ್ಮಳಾಗಿ, ಚರಿತ್ರಹೀನಳಾಗಿ ತೋರುವಂತಾದಳು.

A criminal is made not born ಎನ್ನುವುದಕ್ಕೆ ಮೇಲಿನ ಒಂದು ನಿದರ್ಶನವಾಯಿತು.

ಪಾತಕಿಗಳ ಮಧ್ಯದಲ್ಲಿರುವವನು ಪಾತಕಿಯಾಗುತ್ತಾನೆ. ಅಯೋಗ್ಯರ ಮಧ್ಯದಲ್ಲಿರುವವನು ಅಯೋಗ್ಯನಾಗುತ್ತಾನೆ. ಚಂಡಾಲರ ಮಧ್ಯದಲ್ಲಿರುವವನು ಚಂಡಾಲನಾಗುತ್ತಾನೆ ; ವ್ಯಭಿಚಾರಿಗಳ ಮಧ್ಯದಲ್ಲಿರುವವನು ವ್ಯಭಿಚಾರಿಯಾಗುತ್ತಾನೆ. ಹೀಗೆ ಆಯಾ ಸನ್ನಿವೇಶದ ಮಧ್ಯದಲ್ಲಿರುವವರು ಆಯಾ ಸನ್ನಿವೇಶದ ಒತ್ತಡಕ್ಕನುಗುಣವಾಗಿ ವರ್ತಿಸುತ್ತಾರೆ ಎಂಬುದೇ ಇದರ ಅರ್ಥ. ಹಾಗಾದರೆ ಆ ಮಾತು ಸಂಪೂರ್ಣ ಸತ್ಯವೇ ಎಂದರೆ ''ಇಲ್ಲ'' ಎಂಬುದೇ ಉತ್ತರ. ಅಂತಹ ಸನ್ನಿವೇಶಗಳಲ್ಲಿ ಸಿಕ್ಕಿದಾಗ್ಯೂ ಅದರಿಂದ ತಪ್ಪಿಸಿಕೊಂಡು ಬಂದವರೂ ಸಹ ಇಲ್ಲದಿಲ್ಲ. ಆ ಮೇಲಿನ ಸನ್ನಿವೇಶಗಳಲ್ಲಿಯೇ ಇದೂ ಸಹ ಅವುಗಳಿಗೆ ತುತ್ತಾಗದೇ ನಿರ್ಲಿಪ್ತರಾಗಿರುವವರೂ ಇದ್ದಾರೆ. ಆದರೆ ಅಂಥವರ ಸಂಖ್ಯೆ ವಿರಳ.

ಸನ್ನಿವೇಶದ ಬಗ್ಗೆ ಇಷ್ಟೆಲ್ಲ ತಿಳಿದುಕೊಂಡ ನಂತರ 'ಸನ್ನಿವೇಶ' ಎಂದರೇನು ? ಎಂಬುದನ್ನು ತಿಳಿಯಬೇಕು. ಉತ್ತರವೆಂದರೆ ''ಜೀವಿಯು ಗರ್ಭಧಾರಣಕಾಲದಿಂದ ಹಿಡಿದು ಜನ್ಮತಾಳುವವರೆಗೆ ಮತ್ತು ಜನ್ಮತಾಳಿದಂದಿನಿಂದ ಹಿಡಿದು ಸಾಯುವವರೆಗೆ , ಜೀವಿಯ ಮೇಲೆ ಉಂಟಾಗಬಹುದಾದ ಎಲ್ಲ ರೀತಿಯ ಪ್ರಭಾವಕ್ಕೆ ಸನ್ನಿವೇಶ''ವೆಂದು ಹೆಸರು. ಗರ್ಭಕಾಲದಿಂದ ಹಿಡಿದು ಜೀವಿ ಹೊರಬರುವರೆಗಿನ ಕಾಲವನ್ನು 'ಪೇರೆಂಟಲ್' ಸನ್ನಿವೇಶ ಅಥವಾ ಶಿಶುಜನ್ಮದ ಸನ್ನಿವೇಶವೆಂತಲೂ, ಮರುಹುಟ್ಟಿನ ನಂತರ ಸನ್ನಿವೇಶವನ್ನು ಶಿಶು ಜನನಾನಂತರದ ಸನ್ನಿವೇಶವೆಂತಲೂ ಕರೆಯುತ್ತಾರೆ. ಆನಂತರದಲ್ಲಿ ವರ್ತನ ಸಮೀಕರಣ ಸನ್ನಿವೇಶಕ್ಕೆ ಜೀವಿ ಒಳಗಾಗುತ್ತಾನೆ. ಆಗ ಸಾಮಾಜಿಕ ಸನ್ನಿವೇಶದ ಪ್ರಚಂಡ ಪ್ರಭಾವಕ್ಕೆ ಜೀವಿ ಸಿಲುಕುತ್ತಾನೆ. ಅದರ ಜತೆಯಲ್ಲಿಯೇ ಇತರ ಸ್ವಾಭಾವಿಕ ಸನ್ನಿವೇಶಗಳಿಗೂ ಮತ್ತು ಮನೋವೈಜ್ಞಾನಿಕ ಸನ್ನಿವೇಶಗಳಿಗೂ ಜೀವಿ ಒಳಗಾಗುತ್ತಾನೆ. ಈ ಮೇಲಿನ ಎಲ್ಲಾ ಸನ್ನಿವೇಶಗಳೂ

ಉತ್ತಮವಾಗಿದ್ದಲ್ಲಿ ಜೀವಿ ಶುಕ್ಲಪಕ್ಷದ ಚಂದ್ರನಂತೆ ಬೆಳೆಯುತ್ತಾನೆ. ಅದಿಲ್ಲವಾದಲ್ಲಿ ಸಾಯಲಾರದ ಬದುಕಲಾರದ ಸನ್ನಿವೇಶದಲ್ಲಿ ತೊಳಲಾಡುವಂತಾಗುತ್ತಾನೆ.

ಅನುವಂಶೀಯತೆಯು ಮಗುವಿನ ಬೆಳವಣಿಗೆಯ ನಿರ್ಧಾರಕ ಶಕ್ತಿಯಾಗಿದ್ದು ಆ ಬೆಳವಣಿಗೆಗೆ ಪೋಷಕ ಶಕ್ತಿಯಾಗಿ ನಿಲ್ಲುತ್ತದೆ ಸನ್ನಿವೇಶ. ಮೊದಲೇ ಚರ್ಚಿಸಿದಂತೆ ಅನುವಂಶೀಯತೆ ಮತ್ತು ಸನ್ನಿವೇಶಗಳೆರಡೂ ಒಂದಕ್ಕೊಂದು ಪೂರಕ ಮತ್ತು ಪೋಷಕಗಳು.

ಸಸ್ಯವೊಂದರ ಅನುವಂಶೀಯತೆ ಅದರ ಬೀಜದಲ್ಲಿಯೇ ಅಡಗಿರುತ್ತದೆ. ಆ ಬೀಜ ಮೊಳಕೆಯೊಡೆದು ಉತ್ತಮ ಸಸ್ಯವೆನಿಸಬೇಕಾದರೆ, ಉತ್ಕೃಷ್ಟವಾದ ಭೂಮಿ, ಉತ್ತಮವಾದ ಹವಾ ಮತ್ತು ಅಗತ್ಯವಾದಷ್ಟು ಸೂರ್ಯನ ಶಾಖ, ನೀರು ಮತ್ತು ಗೊಬ್ಬರಗಳು, ಹಾಗೂ ರಕ್ಷಣೆ ಇವೆಲ್ಲವೂ ಆ ಸಸ್ಯಕ್ಕೆ ಬೇಕಾದ ಸನ್ನಿವೇಶಗಳೆನಿಸುತ್ತವೆ.

ಅನುವಂಶೀಯತೆ ಮುಖ್ಯವೋ ಅಥವಾ ಸನ್ನಿವೇಶ ಮುಖ್ಯವೋ ಎಂದು ವಾದ ವಿವಾದಕ್ಕೆ ತೊಡಗುವವರಿದ್ದಾರೆ. ಮೋಟಾರ್‌ಕಾರ್ ಓಡಲು ಎಂಜಿನ್ ಮುಖ್ಯವೋ ಪೆಟ್ರೋಲ್ ಮುಖ್ಯವೋ ಎಂದು ಕೇಳಿದರೆ ಯಾವ ಉತ್ತರ ಲಭ್ಯವಾಗಬಹುದೋ ಅದೇ ಉತ್ತರ ಮೇಲಿನ ವಾದ ವಿವಾದಕ್ಕೂ ಸರಿ ಎನಿಸುವಂತಹುದಾಗಿದೆ. ಅಂತೆಯೆ ಬೀಜವಿಲ್ಲದೆ ಸಸ್ಯದ ಪ್ರಶ್ನೆಯೇ ಇಲ್ಲ, ಬೀಜವಿದ್ದು ಭೂಮಿಯೇ ಇಲ್ಲದಿದ್ದಲ್ಲಿ ಮೊಳಕೆಯೊಡೆಯುವ ಪ್ರಶ್ನೆಯೇ ಇಲ್ಲ, ಆದ ಕಾರಣವೇ ಅವೆರಡೂ ಒಂದರೊಡನೊಂದು ಜತೆಗೂಡಿ ಸಾಗುವಂಥವುಗಳಾಗಿವೇ ಎಂದದ್ದು.

ಎರಡು ವಾದಗಳು :

'ತಾಯಿಯಂತೆ ಮಗಳು, ನೂಲಿನಂತೆ ಸೀರೆ' - ಎಂಬ ನಾಣ್ಣುಡಿಯೊಂದಿದೆ. ಇದು ಅನುವಂಶೀಯತೆಯ ತತ್ವವನ್ನು ಎತ್ತಿಹಿಡಿಯುವಂತಹುದಾಗಿದೆ. ''ಅನುವಂಶೀಯವಾಗಿ ಬರುವ ಮೂಲ ಸ್ವಭಾವವೇ ವ್ಯಕ್ತಿಯ ಮಾನಸಿಕ, ದೈಹಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಕಾರಣವೆಂದು'' ಕೆಲವರು ವಾದಿಸುವರು. ಅವರ ಪ್ರಕಾರ ''ಮಗುವಿನ ಇಡೀ ಭವಿಷ್ಯವನ್ನು ನಿರ್ಧರಿಸತಕ್ಕದ್ದು ಅನುವಂಶೀಯತೆ'' ಎಂದು ಸಾಧಿಸಲು ಯತ್ನಿಸುವರು. ಕೆಲವರು ಇದನ್ನು ಒಪ್ಪದೆ ''ವಂಶಗತ ಬಂದಿರುವ ಮೂಲ ಸ್ವಭಾವಗಳು ಹೇಗೇ ಇರಲಿ, ಅವರ ಶಿಕ್ಷಣಾಭಿವೃದ್ಧಿ, ವ್ಯಕ್ತಿತ್ವ, ಭವಿಷ್ಯ ಜೀವನದ ಸ್ವರೂಪ - ಇವೆಲ್ಲವನ್ನು ರೂಪಿಸತಕ್ಕದ್ದು ಅವರು ವಾಸಿಸುವ ಸನ್ನಿವೇಶ ಮತ್ತು ಪಡೆಯುವ ಶಿಕ್ಷಣ ಸ್ವರೂಪ'' ಎಂದು ವಾದಿಸುವರು.[1]

---

1. ಡಾ. ಎನ್. ಎಸ್. ವೀರಪ್ಪ - ಶಿಕ್ಷಣದಲ್ಲಿ ಮನೋವಿಜ್ಞಾನ. ಪ್ರಕಾಶಕರು : ಬಿ. ಕೆ. ಮೂರ್ತಿ, ಮೈಸೂರು - ಪು. ೫೨

ಮೊದಲಿನವರ ಅಂದರೆ ಅನುವಂಶೀಯತೆಯೆ ಎಲ್ಲಕ್ಕೂ ಮೂಲ ಕಾರಣ ಎಂಬುದನ್ನು ಸಮರ್ಥಿಸಲು ಕೆಲವರು ಪ್ರಯತ್ನಿಸಿ ಕೆಲವು ಪ್ರಯೋಗಗಳನ್ನು ನಡೆಸಿ ಕೆಲವು ಐತಿಹಾಸಿಕ ದಾಖಲೆಗಳನ್ನೂ ಒದಗಿಸಿದ್ದಾರೆ. ಈ ರೀತಿಯ ಅಧ್ಯಯನ ನಡೆಸಿದವರಲ್ಲಿ ಪ್ರಸಿದ್ಧರಾದವರೆಂದರೆ 'ಫ್ರಾನ್ಸಿಸ್‌ಗಾಲ್ಟನ್' ಮತ್ತು 'ಪಿಯರ್ಸನ್' ಅವರು ಪ್ರಮುಖರಾದವರು. ಇವರುಗಳು ಅಮೆರಿಕಾ ಮತ್ತು ಇಂಗ್ಲೆಂಡ್‌ಗಳಲ್ಲಿ ಕೆಲವು ಕುಟುಂಬಗಳ ಪೂರ್ವೇತಿಹಾಸವನ್ನು ಅಧ್ಯಯನ ಮಾಡಿ ಅನುವಂಶೀಯತೆಯು ವ್ಯಕ್ತಿಯ ಜೀವನದಲ್ಲಿ ಮಹತ್ತರ ಪಾತ್ರವನ್ನು ವಹಿಸುವುದೆಂಬುದನ್ನು ಶೃತಪಡಿಸಲು ಪ್ರಯತ್ನಪಟ್ಟಿದ್ದಾರೆ. 'ಚಾರ್ಲ್ಸ್ ಡಾರ್ವಿನ್' ಇಂಗ್ಲೆಂಡಿನ ಪ್ರತಿಭಾವಂತ ನಿಸರ್ಗ ವಿಜ್ಞಾನಿ. ಅವನ ಪೂರ್ವಿಕರೆಲ್ಲ ಪ್ರತಿಭಾವಂತರೆನಿಸಿ, ಸಮಾಜದಲ್ಲಿ ಗಣ್ಯಸ್ಥಾನವನ್ನು ಗಳಿಸಿ ಹೆಸರು ಪಡೆದಿದ್ದರು. ಅಮೆರಿಕದಲ್ಲಿ ನ್ಯೂಯಾರ್ಕ್‌ನ ಜ್ಯೂಕ್ ಎಂಬ ಒಂದು ಪೀಳಿಗೆಯಲ್ಲಿ ಹುಟ್ಟಿದ ೧೨೦೦ ಮಂದಿಯಲ್ಲಿ ಮೂಲಪುರುಷನಾದ ಮ್ಯಾಕ್ಸ್ ಜೂಕನಂತೆಯೇ ಅಧಮರೇ ಆಗಿದ್ದರು. ಹೀಗೆಯೇ, ಇನ್ನೂ ಅನೇಕ ಕುಟುಂಬಗಳ ಇತಿಹಾಸವನ್ನು ಪರಿಶೀಲಿಸಿ ಮಹಾಪುರುಷರೆನಿಸಲು ನೆರವಾಗುವ ಪ್ರತಿಭೆಯೂ ಉನ್ನತ ಮನೋಗುಣಗಳು ಕಾರಣವೆಂದೂ, ಅಂತೆಯೇ ಅಧಮರೆನಿಸಲು ಕಾರಣವಾಗುವ ಪ್ರತಿಭಾಹೀನತೆಯೂ ನೀಚ ಮನೋಪ್ರವೃತ್ತಿಗಳೂ ವಂಶಗತವಾಗಿ ಬರುವುದೆಂದು ನಿರ್ಧರಿಸಿರುವರು.[1]

ಈ ಮೇಲಿನವರ ವಾದವನ್ನು ನೋಡಿದರೆ ಅನುವಂಶೀಯತೆಯೇ ಮಕ್ಕಳ ಬುದ್ಧಿಭಾವ ಪ್ರತಿಭೆಗಳ ಪ್ರಕಾಶಕ್ಕೆ ಕಾರಣೀಭೂತವೆಂಬುದು ನಿಜವೇನೋ ಎಂದೆನಿಸುತ್ತದೆ. ಎಂತಹ ಸುಂದರ ಸನ್ನಿವೇಶದಲ್ಲೇ ಬೆಳೆಯಲಿ, ಎಂತಹ ಅತ್ಯುನ್ನತ ಶಿಕ್ಷಣವೇ ಪಡೆಯಲಿ ಅನುವಂಶೀಯತೆಯ ಸಹಾಯವಿಲ್ಲದೆ ಪ್ರತಿಭಾವಂತರಾಗಲು ಸಾಧ್ಯವಿಲ್ಲವೆಂಬುದು ಮೇಲಿನವರ ವಾದದ ಧ್ವನಿತಾರ್ಥ. ಆದರೆ ಈ ವಾದ ಸಂಪೂರ್ಣ ಸತ್ಯವಲ್ಲವೆಂಬುದಕ್ಕೆ ಅನೇಕ ನಿದರ್ಶನಗಳಿವೆ. ಆದ ಕಾರಣವೆ ಈ ವಾದವನ್ನು ಪ್ರಬಲವಾಗಿ ವಿರೋಧಿಸಿದವರೂ ಇದ್ದು ಇವರೂ ತಮ್ಮ ಸನ್ನಿವೇಶದ ವಾದವನ್ನು ಎತ್ತಿ ಹಿಡಿದಿದ್ದಾರೆ. ಸನ್ನಿವೇಶವೇ ಪ್ರಾಮುಖ್ಯ ಎನ್ನುವ ತತ್ವಪಂಥದ ಪ್ರಮುಖ ಪುರಸ್ಕೃತರುಗಳೆಂದರೆ - ೧. ವಾಟ್ಸನ್ ೨. ವುಡ್‌ವರ್ತ್ ೩. ಲಮಾರ್ಕ್ ಮೊದಲಾದವರುಗಳು. ಇವರು ಅನುವಂಶೀಯತೆ ಗೌಣಸ್ಥಾನವನ್ನು ಸನ್ನಿವೇಶಕ್ಕೆ ಪ್ರಧಾನಸ್ಥಾನವನ್ನು ಕೊಟ್ಟಿರುವವರುಗಳಾಗಿದ್ದಾರೆ.

ವಾಟ್ಸನ್ ಸನ್ನಿವೇಶಕ್ಕೆ ಅತ್ಯಂತ ಹೆಚ್ಚಿನ ಮಹತ್ವವನ್ನು ಕೊಡುತ್ತ ತಮ್ಮ ವಾದವನ್ನು

---

1. ಅದೇ - ಪುಟ ೫೩

ಹೀಗೆ ಸಮರ್ಥಿಸುತ್ತಾರೆ : ''ನನ್ನದೇ ಆದ ವಿಶಿಷ್ಟ ಪ್ರಪಂಚದಲ್ಲಿ ಮೇಲೆ ತರಲು ಚೆನ್ನಾಗಿ ಹುಟ್ಟಿದ ಆರೋಗ್ಯಕರವಾದ ಹನ್ನೆರಡು ಮಕ್ಕಳನ್ನು ನನಗೆ ಕೊಡಿ. ನಾನು ಅವುಗಳಲ್ಲಿ ಗೊತ್ತುಗುರಿ ಇಲ್ಲದಂತೆ ಯಾರಾದರೊಬ್ಬರನ್ನು ಆರಿಸಿಕೊಂಡು ಅವನ ಮೇಧಾಶಕ್ತಿ ಯನ್ನಾಗಲೀ, ಒಲವುಗಳನ್ನಾಗಲೀ, ಪ್ರವೃತ್ತಿಗಳನ್ನಾಗಲೀ, ಸಾಮರ್ಥ್ಯಗಳನ್ನಾಗಲೀ, ಅಂತಃಪ್ರೇರಣೆಗಳನ್ನಾಗಲೀ ಮತ್ತು ಅವನ ವಂಶದ ಪೂರ್ವಜರನ್ನಾಗಲೀ ಗಣನೆಗೆ ತೆಗೆದುಕೊಳ್ಳದೆ, ನಾವು ಆಯ್ಕೆ ಮಾಡಬಹುದಾದ ಯಾವುದೇ ವಿಶಿಷ್ಟ ತರಬೇತಿ ಕೊಟ್ಟು ಅವನನ್ನು ಡಾಕ್ಟರ್, ಲಾಯರ್, ಆರ್ಟಿಸ್ಟ್, ಮರ್ಚೆಂಟ್ ಥೀಫ್, ಮತ್ತು ಹೌದು ಭಿಕ್ಷುಕನನ್ನಾಗಿಯಾದರೂ ಮತ್ತು ಕಳ್ಳನನ್ನಾಗಿಯಾದರೂ ಮಾಡುತ್ತೇನೆಂಬ ಭರವಸೆಯನ್ನು ಕೊಡುತ್ತೇನೆ.''

ಅಂದರೆ ನಿಯಂತ್ರಿತ ಸನ್ನಿವೇಶದಲ್ಲಿ ಅಥವಾ ಸನ್ನಿವೇಶದ ನಿಯಂತ್ರಣಕ್ಕೆ ಸಿಕ್ಕಿಸಿ ಯಾರನ್ನು ಏನು ಬೇಕಾದರೂ ಮಾಡಲು ಶಕ್ಯ ಎಂಬುದು ಮೇಲಿನ ವಾಟ್ಸನ್ನರ ವಾದದ ತಿರುಳು. ಅನುವಂಶೀಯತೆಯನ್ನು ಗಣನೆಗೆ ತೆಗೆದುಕೊಳ್ಳುವ ಅಗತ್ಯವಿಲ್ಲವೆಂಬುದು ಅವರ ವಾದ. ಆದಾಗ್ಯೂ ಅವರ ಮಾತಿನಲ್ಲಿಯೇ ಒಂದು ಧ್ವನಿ ಇದೆ. ಅದೆಂದರೆ ''ಆರೋಗ್ಯಕರವಾಗಿ ಬೆಳೆದ ಸಲ್ಲಕ್ಷಣಗಳಿಂದ ಕೂಡಿದ ಮಕ್ಕಳನ್ನು ಕೊಡಿ'' ಎಂಬ ಮಾತುಗಳಲ್ಲಿಯೇ ಒಳ್ಳೆಯ ಹುಟ್ಟು ಪಡೆದ ಮಕ್ಕಳನ್ನು ಕೊಡಿ ಎಂಬರ್ಥವಿದೆ. ಅಂದರೆ ಅನುವಂಶೀಯತೆಯೆನ್ನದಿದ್ದರೂ ಉತ್ತಮವಾದ ಬೀಜ ಬೇಕೆಂಬುದನ್ನು ಅದು ಸೂಚಿಸುವಂಥದ್ದಾಗಿದೆ. ಉತ್ತಮವಾದ ತಳಿಯಿಂದ ಉತ್ತಮ ಬೀಜ ದೊರೆಯುತ್ತ ದೆಂಬುದು ವೈಜ್ಞಾನಿಕ ಸತ್ಯ. ಪ್ರತ್ಯಕ್ಷವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ಅನುವಂಶೀಯ ತೆಯ ಒಂದು ಎಳೆ ಅವರ ಮಾತಿನಲ್ಲಿಯೂ ಇರುವುದನ್ನು ಇಲ್ಲಿ ಅತ್ಯಂತ ಜಾಣ್ಮೆಯಿಂದ ಗುರುತಿಸಬೇಕಾಗಿದೆ.

ವುಡ್‌ವರ್ತನ ಅಭಿಪ್ರಾಯದಲ್ಲಿಯೂ ಸನ್ನವೇಶವೇ ಮುಖ್ಯ ಎಂಬ ಅರ್ಥ ಧ್ವನಿಸುವುದನ್ನು ಈ ಕೆಳಗಿನ ಮಾತಿನಿಂದ ಗುರುತಿಸಬಹುದು :

''ಮಗುವೊಂದನ್ನು ಮತ್ತು ಅನುಕೂಲಕರ ಸನ್ನಿವೇಶವನ್ನು ಕೊಡಿ, ನಾನು ಅವನನ್ನು ಇಂಜಿನಿಯರನ್ನಾಗಿ, ಡಾಕ್ಟರನ್ನಾಗಿ, ವಕೀಲನನ್ನಾಗಿ ಅಥವಾ ವಾಣಿಜ್ಯೋದ್ಯಮಿಯಾಗಿ, ಅಂದರೆ ಅವನು ಏನಾಗಬೇಕೆಂದು ಅಪೇಕ್ಷಿಸುವನೋ ಅದಾಗಿ ಮಾಡುತ್ತೇನೆ.''

ಮೇಲಿನ ಈ ವಾದಗಳಿಂದ ಪರಿಸರಪಂಥದವರಿಗೆ ಸನ್ನಿವೇಶವೇ ಅನುವಂಶೀಯತೆಗಿಂತಲೂ ಬಹಳ ಮುಖ್ಯವೆಂಬುದು ಅಭಿವ್ಯಕ್ತಗೊಂಡಿರು ವಂತಹುದಾಗಿದೆ.

ಅನುವಂಶೀಯತೆ ಮತ್ತು ಸನ್ನಿವೇಶಗಳು ಬೇರ್ಪಡಿಸಲಾರದಂಥವುಗಳು :

ಮೇಲಿನ ಅನುವಂಶೀಯತೆ ಪಂಥ ಮತ್ತು ಸನ್ನಿವೇಶ ಪಂಥಗಳವರ ವಾದವಿವಾದಗಳನ್ನು ವಿಮರ್ಶಿಸಿ ನೋಡಿದರೆ ಅವೆರಡೂ ಜೀವನರಥದ ಎರಡು ಚಕ್ರಗಳು ಎಂಬ ಅರಿವು ಮೂಡುತ್ತದೆ. ಅನುವಂಶೀಯತೆಯು ಇಲ್ಲವಾದಲ್ಲಿ ಸನ್ನಿವೇಶ ಎಷ್ಟು ಉತ್ತಮವಾಗಿದ್ದಾಗ್ಯೂ ಅದರಿಂದ ಆಗುವ ಉಪಯುಕ್ತತೆ ಅಷ್ಟರಲ್ಲಿಯೇ ಇದೆ. ಅದರಂತೆ ಅನುವಂಶೀಯತೆಯು ತನ್ನ ವಂಶೀಯತೆಯನ್ನು ಶೂನ್ಯದಲ್ಲಿ ಬಿಡುವಂತಿಲ್ಲ. ಅದಕ್ಕೆ ಅದರದೇ ಆದ ಸನ್ನಿವೇಶ ಅತ್ಯಗತ್ಯ. ಇಲ್ಲಿ ಸಣ್ಣ ನಿದರ್ಶನವೊಂದನ್ನು ಕೊಡಬಹುದು. ಎರಡು ಸಣ್ಣ ಕುಂಡಗಳಲ್ಲಿ ಒಣಗಿದ ಮಣ್ಣನ್ನು ತುಂಬಿ, ಒಣಗಿದ ಮಣ್ಣಿರುವ ಒಂದು ಕುಂಡದಲ್ಲಿ ಯಾವುದಾದರೊಂದು ಬೀಜವನ್ನು ಹೂತಿಡಿ. ಅದು ಮೊಳಕೆಯೊಡೆಯದೆ ಹಾಗೆಯೇ ಇರುತ್ತದೆ, ಇಲ್ಲವೆ ಗೆದ್ದಲು ತಿಂದು ಹಾಳಾಗುತ್ತದೆ. ಇನ್ನೊಂದು ಕುಂಡದಲ್ಲಿರುವ ಮಣ್ಣಿನಲ್ಲಿ ಬೀಜವನ್ನು ಹಾಕಿಟ್ಟು ನೀರು ಕೊಟ್ಟು ಬಿಸಿಲಿಗಿಡಿ. ಅದು ಚೆನ್ನಾಗಿ ಮೊಳಕೆಯೊಡೆಯುತ್ತದೆ. ಆದ್ದರಿಂದ ಉತ್ತಮ ಸನ್ನಿವೇಶವಿಲ್ಲದಿದ್ದಲ್ಲಿ ಅನುವಂಶೀಯತೆಯ ಆಟ ನಡೆಯುವಂತಿಲ್ಲ. ಅಂತೆಯೇ ಅನುವಂಶೀಯತೆ ಇಲ್ಲದೆ ಬರಿಯ ಸನ್ನಿವೇಶದಿಂದಲೂ ಉಪಯೋಗವಿಲ್ಲವೆಂಬುದೂ ನಿರ್ವಿವಾದ. ಉತ್ತಮ ಸನ್ನಿವೇಶಕ್ಕೆ ಸಿಕ್ಕಿದ ಬೀಜ ತನಗೆ ಒದಗಿದ ಆಹಾರ ನೀರುಗಳುಣಿಸಿನಿಂದಾಗಿ ಅದು ತನ್ನಲ್ಲಿ ಅಡಕವಾಗಿರುವಷ್ಟು ಶಕ್ತಿಗೆ ತಕ್ಕಂತೆ ವಿಕಾಸವಾಗಿ ಬೆಳೆಯತೊಡಗಿತು. ಅದಿಲ್ಲದ್ದು ಹಾಗೆಯೇ ಉಳಿಯಿತು, ಇಲ್ಲವೇ ನಶಿಸಿಹೋಯ್ತು.

ಆದ ಕಾರಣ, ಸನ್ನಿವೇಶ ಅನುವಂಶೀಯತೆಯ ಬೆಳವಣಿಗೆಗೆ ಅತ್ಯಾವಶ್ಯಕ. ಅನುವಂಶೀಯತೆಯಿಂದ ನಿರ್ಧರಿಸಲ್ಪಟ್ಟಿರುವ ಬೆಳವಣಿಗೆಗೆ ಸನ್ನಿವೇಶದ ಆಶ್ರಯ ಬೇಕೇ ಬೇಕು. ಆದ್ದರಿಂದ ಅನುವಂಶೀಯತೆ ಮತ್ತು ಸನ್ನಿವೇಶಗಳು ಪರಸ್ಪರಾವಲಂಬಿಗಳು. ಮಾನವನ ವರ್ತನೆಯು ಅನುವಂಶೀಯತೆ ಮತ್ತು ಸನ್ನಿವೇಶಗಳ ಪ್ರತಿಕ್ರಿಯೆಯಿಂದಾದ ಒಂದು ವಸ್ತು. ಮಗುವಿನ ಬೆಳವಣಿಗೆ ಮತ್ತು ಹೊಂದಾಣಿಕೆಗಳು ಅನುವಂಶೀಯತೆಗೆ ತಕ್ಕ ಸನ್ನಿವೇಶದ ಅಗತ್ಯತೆಯನ್ನವಲಂಬಿಸಿದೆ. ಸನ್ನಿವೇಶವು ಅನುವಂಶೀಯತೆಯಲ್ಲಿ ಇಲ್ಲದೆ ಇರುವುದನ್ನು ಹೊರಗಿನಿಂದ ತಂದು ತುಂಬಲಾರದು. ಅದು ಇರುವ ಶಕ್ತಿ ಸಾಮರ್ಥ್ಯಗಳಿಗೆ ತಕ್ಕ ಅನುಕೂಲತೆಗಳನ್ನು ಒದಗಿಸಿಕೊಟ್ಟು ಅದು ತನ್ನ ಶಕ್ತಿ ಇದ್ದಷ್ಟು ಪ್ರಬುದ್ಧಮಾನಕ್ಕೆ ಬರಲು ಅವಕಾಶ ಮಾಡಿಕೊಡುತ್ತದೆ.

ಅನುವಂಶೀಯತೆ ಮತ್ತು ಸನ್ನಿವೇಶಗಳನ್ನು ಬಳಸಿಕೊಳ್ಳುವಲ್ಲಿ ಶಾಲೆಗಳ ಪಾತ್ರ :

ಎಲ್ಲರಿಗೂ ತಿಳಿದಿರುವಂತೆ ಇಂದು ಮಗು ಕೇಂದ್ರ ಶಿಕ್ಷಣ ಅಸ್ತಿತ್ವದಲ್ಲಿದೆ. ಶಾಲೆಯೆಂಬುದೊಂದು ಮಕ್ಕಳ ಹೂದೋಟ ! ಮಕ್ಕಳೇ ಆ ತೋಟದಲ್ಲಿ ಅರಳಲಿ

ರುವ ಪುಷ್ಪಗಳು !! ಆದ್ದರಿಂದ ಉಪಾಧ್ಯಾಯನ ಪ್ರಾಥಮಿಕ ಕರ್ತವ್ಯವೇನೆಂದರೆ ಮಕ್ಕಳನ್ನು ಅನುವಂಶೀಯ ಸಾಮರ್ಥ್ಯ ಶಕ್ತಿಗಳಿಗನುಗುಣವಾಗಿ ವರ್ಗೀಕರಿಸುವುದು ಮತ್ತು ಹಾಗೆ ವರ್ಗೀಕರಿಸಲ್ಪಟ್ಟು ಮತ್ತು ಬೇರೆಬೇರೆ ಸಣ್ಣಸಣ್ಣ ಗುಂಪುಗಳನ್ನಾಗಿ ವಿಂಗಡಿಸಿದ ನಂತರ ಆಯಾ ಗುಂಪಿನ ವಿದ್ಯಾರ್ಥಿಗಳ ಅಭಿರುಚಿ, ಆಸಕ್ತಿಗಳಿಗನುಗುಣವಾದ ಜ್ಞಾನವನ್ನು ಒದಗಿಸಿಕೊಡಬೇಕು. ಮಕ್ಕಳ ಮನಸ್ಸು ಕೋಮಲವಾದದ್ದು. ಅವರ ಕೋಮಲವಾದ ಮನಸ್ಸಿಗೆ ಯಾವುದೇ ವಿಧವಾದ ಆಘಾತ ತಟ್ಟಬಾರದು. ಆದ್ದರಿಂದ ಮಕ್ಕಳು ಸ್ವಚ್ಛಂದ ಸ್ವತಂತ್ರ ವಾತಾವರಣದಲ್ಲಿ ಬೆಳೆಯುವಂತಹ ವಾತಾವರಣವನ್ನು ಕಲ್ಪಿಸಿಕೊಡಬೇಕು. ಶಾಲೆಯಲ್ಲಿ ಮಕ್ಕಳಿಗೆ ಸರಿಯಾಗಿ ಕುಳಿತುಕೊಳ್ಳಲು ಆಸನಗಳು, ಕಲಿಕೆಯ ಸಾಧನಗಳು, ಆಟಪಾಠಗಳಿಗೆ ಉತ್ತಮ ಅನುಕೂಲತೆಗಳು ಲಭ್ಯವಾಗುವಂತೆ ನೋಡಿಕೊಳ್ಳಬೇಕು.

ಶಾಲೆ ಎಂಬುದು ಮಕ್ಕಳ ಬುದ್ಧಿಭಾವ ಮತ್ತು ಶರೀರಗಳು ಕೂಡಿ ಹರಿಯುವ ಒಂದು ತ್ರಿವೇಣಿ ಸಂಗಮ ಕ್ಷೇತ್ರ ! ಅಲ್ಲಿ ಮಕ್ಕಳ ಶಾರೀರಿಕ ವಿಕಾಸಕ್ಕಾಗಿ ಆಟಗಳನ್ನು ವ್ಯಾಯಾಮಗಳನ್ನು ಉಚಿತ ರೀತಿಯಲ್ಲಿ ಏರ್ಪಡಿಸಬೇಕು. ಅಂತೆಯೇ ಬೋಧಕ ಬೆಳವಣಿಗೆಗೆ ಬೇಕಾದ ಗ್ರಂಥಭಂಡಾರಗಳು, ದಿನಪತ್ರಿಕೆಗಳು, ವಾರಪತ್ರಿಕೆಗಳು, ಮಾಸ ಪತ್ರಿಕೆಗಳು, ತ್ರೈಮಾಸಿಕಗಳು, ವಾರ್ಷಿಕ, ದ್ವೈವಾರ್ಷಿಕ ಪತ್ರಿಕೆಗಳು ಇವೆಲ್ಲವನ್ನೂ ಒದಗಿಸಿಕೊಡಬೇಕು. ಇವುಗಳ ಜತೆಗೆ ಮನರಂಜನೆಯ ಮತ್ತು ಜ್ಞಾನ ಸಂವರ್ಧನೆಗಳಿಗೆ ರೇಡಿಯೋ, ಟಿಲಿವಿಷನ್‌ಗಳನ್ನು ಒದಗಿಸಿಕೊಡಬೇಕು. ಕಾರ್ಯಕ್ರಮಾನ್ವಯ ಬೋಧನೆಗೆ ಅವಕಾಶ ಕಲ್ಪಿಸಿ ಕೊಡಬೇಕು. ಮಕ್ಕಳ ಪ್ರತಿಭಾಶಕ್ತಿಯ ವಿಕಾಸಕ್ಕಾಗಿ ಮತ್ತು ಸೃಜನಾತ್ಮಕ ಶಕ್ತಿಯ ಉದ್ದೀಪನಕ್ಕಾಗಿ ಚರ್ಚಾಕೂಟಗಳು, ನಾಟಕಗಳು, ವಿವಿಧ ವೇಷಧಾರಣೆಗಳು ಇತ್ಯಾದಿಗಳೆಲ್ಲವನ್ನೂ ಏರ್ಪಡಿಸಬೇಕು. ಈ ರೀತಿಯ ಕಾರ್ಯಕ್ರಮಗಳೇರ್ಪಡಿಸುವುದರಿಂದ ಪ್ರತಿಯೊಂದು ಮಗುವೂ ತನ್ನ ಅನುವಂಶೀಯುತೆಯ ಶಕ್ತಿ ಸಾಮರ್ಥ್ಯಗಳಿಗನುಗುಣವಾಗಿ ಕಲಿಯಲವಕಾಶವಾಗುತ್ತದೆ.

ಇನ್ನು ಮಕ್ಕಳ ಕಲ್ಪನೆ ಮತ್ತು ಭಾವನೆಗಳ ವಿಕಾಸಕ್ಕಾಗಿ ಮತ್ತು ಸಾಮಾಜಿಕ ಸನ್ನಿವೇಶಗಳಲ್ಲಿ ಹೊಂದಾಣಿಕೆಯ ಜೀವನ ನಡೆಸಲಿಕ್ಕಾಗಿ ಗುಂಪಿನ ಚಟುವಟಿಕೆಯ ಕಾರ್ಯಕ್ರಮಗಳನ್ನು ರೂಪಿಸಬೇಕು. ನಾಟಕಗಳು, ಗುಂಪಿನ ಹಾಡುಗಾರಿಕೆ, ಪ್ರವಾಸ, ನೃತ್ಯ, ಯೋಜನಾಪದ್ಧತಿ - ಇತ್ಯಾದಿ ಕಾರ್ಯಕ್ರಮಗಳನ್ನೇರ್ಪಡಿಸಬೇಕು. ಪ್ರತಿಯೊಂದು ಕಾರ್ಯಕ್ರಮದಲ್ಲೂ ಉಪಾಧ್ಯಾಯ ಸೂಕ್ಷ್ಮಮತಿಯಾಗಿ ಆಯಾ ಮಕ್ಕಳ ಇಂಗಿತವನ್ನರಿಯುವ ಇಂಗಿತಜ್ಞನಾಗಿ ಕಾರ್ಯವೆಸಗಬೇಕು. ಆಯಾ ಮಕ್ಕಳು ಬೆಳೆದು ಬಂದಿರುವ ಸನ್ನಿವೇಶ ಮತ್ತು ಅವರ ಅನುವಂಶೀಯತೆಗಳನ್ನು ಗಣನೆಗೆ ತೆಗೆದು

ಕೊಂಡು ಅವರ ಸಾಮರ್ಥ್ಯಗಳಿಗನುಗುಣವಾಗಿ ಶಿಕ್ಷಣದ ಕಾರ್ಯಕ್ರಮ ಗಳನ್ನೇರ್ಪಡಿಸಬೇಕು.

ಮಕ್ಕಳ ಸರ್ವತೋಮುಖವಾದ ಬೆಳವಣಿಗೆಗೆ ಶಾಲೆ ಒಂದು ಸುಂದರ ಸನ್ನಿವೇಶವನ್ನು ಕಲ್ಪಿಸಿಕೊಡಬೇಕು. ಮಗುವಿನ ವ್ಯಕ್ತಿತ್ವದ ವಿಕಾಸಕ್ಕೆ ಶಾಲೆಯು ವಿಶಿಷ್ಟ ಮಾಧ್ಯಮವಾಗಬೇಕು. ಸ್ವಾಭಾವಿಕವಾಗಿಯೇ ಮಕ್ಕಳ ಬೌದ್ಧಿಕ, ಶಾರೀರಿಕ ಮತ್ತು ಭಾವನಾತ್ಮಕ ವಿಕಾಸಕ್ಕೆ ತಕ್ಕಂತಹ ಸುಂದರ ವಾತಾವರಣಗಳನ್ನೂ ಶಾಲೆಗಳು ಏರ್ಪಡಿಸಿಕೊಡಬೇಕು.


ಅನುವಂಶೀಯತೆಯ ನಿಯಮಗಳ ಜ್ಞಾನ ಅಧ್ಯಾಪಕನಿಗಿದ್ದಲ್ಲಿ ಶಾಲಾಮಕ್ಕಳಲ್ಲಿ ಕಾಣಿಸಿಕೊಳ್ಳುವ ಅನೇಕ ಅಶಿಸ್ತಿನ ಸಮಸ್ಯೆಗಳನ್ನು ಮತ್ತು ಅವನ ಸಮಸ್ಯೆಗಳನ್ನು ಅಧ್ಯಾಪಕ ಬಿಡಿಸಲು ಸಮರ್ಥಶಾಲಿಯಾಗುತ್ತಾನೆ. ಇಡೀ ಮಾರ್ಗದರ್ಶನ ಕಾರ್ಯಕ್ರಮವೆಲ್ಲವೂ ಅನುವಂಶೀಯತೆ ಮತ್ತು ಸನ್ನಿವೇಶಗಳನ್ನು ಅರಿತುಕೊಂಡು ಮಾಡತಕ್ಕವುಗಳೇ ಆಗಿವೆ. ಆದ್ದರಿಂದ ಮಕ್ಕಳ ಪುರೋಭಿವೃದ್ಧಿಗೆ ಶಿಕ್ಷಕ ಬಹುತೇಕ ವಾಗಿ ಕಾರಣನಾಗುತ್ತಾನೆ. ಶಿಕ್ಷಕನ ಮಾರ್ಗದರ್ಶನಕ್ಕಾಗಿ ಮಕ್ಕಳು ಅತ್ತಕಡೆ ದೃಷ್ಟಿ ಇಟ್ಟು ಕೊಂಡಾಗ, ಇಂಗಿತಜ್ಞನಾದ ಶಿಕ್ಷಕನು ಅದನ್ನರಿತು ಅದಕ್ಕೆ ತಕ್ಕಂತಹ ಶಿಕ್ಷಣವನ್ನೀಯಲು ಸಹಾಯಕನಾಗುತ್ತಾನೆ. ಆದ ಕಾರಣ ಅನುವಂಶೀಯತೆ ಮತ್ತು ಸನ್ನಿವೇಶಗಳ ಜ್ಞಾನ ಅಂತೆಯೇ ಅನುವಂಶೀಯತೆಯ ನಿಯಮಗಳ ಜ್ಞಾನ ಶಿಕ್ಷಕನಿಗೆ ಚೆನ್ನಾಗಿ ಗೊತ್ತಿರಬೇಕಾಗುತ್ತದೆ.

****

ಕನ್ನಡ ಸಂಸ್ಕೃತಿಯ ವಿಕಾಸ ಪ್ರಕ್ರಿಯೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕಳೆದ ತೊಂಬತ್ತು ವರ್ಷಗಳಿಂದ ತೊಡಗಿ ಕೊಂಡಿರುವ ರೀತಿ ಅನನ್ಯ. ಹತ್ತು ಹಲವಾರು ದಿಕ್ಕುಗಳಲ್ಲಿ ಹರಡಿರುವ ಪರಿಷತ್ತಿನ ಒಂದು ಮುಖ್ಯ ಕ್ರಿಯಾ ಯೋಜನೆ : ಪುಸ್ತಕ ಪ್ರಕಟನೆ.

ಪರಿಷತ್ತು ಹಮ್ಮಿಕೊಳ್ಳುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಇಡೀ ಕನ್ನಡ ಕುಲಕೋಟಿಯ ಪಾಲಿಗೆ ಒಂದು ಸಾಂಸ್ಕೃತಿಕ ಹಬ್ಬವೇ. ವರ್ಷದುದ್ದಕ್ಕೂ ನಾವೆಲ್ಲ ಮೆಲುಕು ಹಾಕುವ ಸಂದರ್ಭವಿದು.

ಬೀದರಿನಲ್ಲಿ ನಡೆಯಲಿರುವ ಅಖಿಲ ಭಾರತ ೮೧ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸವಿನೆನಪಿಗೆಂದು ಪರಿಷತ್ತು ಹೊರತಂದಿರುವ ೮೧ ಪುಸ್ತಕಗಳು, ಮುಖ್ಯವಾಗಿ ಸೃಜನೇತರ ವಲಯದ ವೈವಿಧ್ಯಮಯ ವಿಷಯಗಳನ್ನು ಒಳಗೊಂಡಿದ್ದು, ಕನ್ನಡ ಸಾಹಿತ್ಯ ಭಂಡಾರಕ್ಕೆ ಅಮೂಲ್ಯ ಸೇರ್ಪಡೆಗಳಾಗಿವೆ.



ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦೦೧೮